ಬುಧವಾರ, ನವೆಂಬರ್ 1, 2023 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕರ್ನಾಟಕ ರಾಜ್ಯೋತ್ಸವದ ಶುಭಾಶಯಗಳು

ಮದರಂಗಿ
ಹರಿಯಾಣದ ಗುರುಗ್ರಾಮದಲ್ಲಿ 'ಕರ್ವಾ ಚೌತ್' ಹಬ್ಬದ ಅಂಗವಾಗಿ ಮದರಂಗಿ ಪ್ರದರ್ಶಿಸಿದ ಮಹಿಳೆ



ರುದ್ರಗೌಡ ಪಾಟೀಲ ಹುಡುಕಿಕೊಂಡು ಮಹಾರಾಷ್ಟ್ರ, ಬೆಂಗಳೂರಿಗೆ ತೆರಳಿದ ಪೊಲೀಸ್ ಅಧಿಕಾರಿಗಳ ತಂಡಗಳು

ಬ್ಲೂಟೂತ್ ಕಿಂಗ್‌ಪಿನ್ ಇನ್ನೂ ನಾಪತ್ತೆ

ಪ್ರಜಾವಾಣಿ ವಾರ್ತೆ


ರುದ್ರಗೌಡ

ಕಲಬುರಗಿ: ಕೆಇಎ ನೇಮಕಾತಿ ಪರೀಕ್ಷೆ ಬರೆಯಲು ಹಣ ಪಡೆದು ಬ್ಲೂಟೂತ್ ಪೂರೈಸಿದ್ದ ಪ್ರಮುಖ ಆರೋಪಿ ರುದ್ರಗೌಡ ಡಿ. ಪಾಟೀಲ ನಾಪತ್ತೆಯಾಗಿದ್ದು, ಅಕ್ರಮ ಬಯಲಿಗೆ ಬಂದು ನಾಲ್ಕು ದಿನ ಕಳೆದರೂ ಆತನ ಸುಳಿವಿಲ್ಲ.

ಆರೋಪಿಯ ಪತ್ತೆಗಾಗಿ ಎರಡು ತಂಡಗಳು ಮಹಾರಾಷ್ಟ್ರ ಮತ್ತು ಬೆಂಗಳೂರಿಗೆ ತೆರಳಿವೆ. ವಿಚಾರಣೆಗೆ ಹಾಜರಾಗುವಂತೆ ಪೊಲೀಸರು ಅಕ್ಕಮಹಾದೇವಿ ಕಾಲೊನಿಯಲ್ಲಿರುವ ಪಾಟೀಲ ನಿವಾಸಕ್ಕೆ ತೆರಳಿ ನೋಟಿಸ್ ನೀಡಿದ್ದಾರೆ. ಈ ಬಗ್ಗೆ ಕುಟುಂಬಸ್ಥರನ್ನು ವಿಚಾರಿಸಿದಾಗ, 'ಅ.24ರಂದು ಮನೆಯಿಂದ ಹೋದವರು ವಾಪಸ್ ಬಂದಿಲ್ಲ. ಫೋನ್ ನಂಬರ್ ಕೂಡ ಸ್ವಿಚ್ಡ್ ಆಫ್ ಆಗಿದೆ' ಎಂದಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪಿಎಸ್‌ಐ ಅಕ್ರಮ ನೇಮಕಾತಿ ಹಗರಣದ ಸಂಬಂಧ ಈ ಹಿಂದೆ ಹೈಕೋರ್ಟ್‌ನ ಕಲಬುರಗಿ ಪೀಠದಿಂದ ಷರತ್ತುಬದ್ಧ ಜಾಮೀನು ಪಡೆದಿದ್ದ ಪಾಟೀಲ, ಬಿಡುಗಡೆಯಾದ ದಿನದಿಂದಲೇ ನಾಪತ್ತೆಯಾಗಿದ್ದ. ಸಿಐಡಿ ಪೊಲೀಸರು ಹಲವು ನೋಟಿಸ್ ಜಾರಿಗೊಳಿಸಿದ್ದರೂ ಹಾಜರಾಗಿರಲಿಲ್ಲ. ಕೆಲ ದಿನಗಳ ಬಳಿಕ ಹಾಜರಾಗಿದ್ದ. ಕೆಇಎ ಹಗರಣದಲ್ಲೂ ಅದೇ ಹಾದಿ ತುಳಿದಿದ್ದಾನೆ.

ಅಫಜಲಪುರದಲ್ಲಿ ಅಭ್ಯರ್ಥಿಯಿಂದ ಬ್ಲೂಟೂತ್ ಡಿವೈಸ್ ಪಡೆದು ಪರಾರಿಯಾದ ಆಸೀಫ್‌ಗೂ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ಜಾರಿಗೊಳಿಸಲಾಗಿದೆ. ಅಫಜಲಪುರ, ಅಶೋಕನಗರ ಹಾಗೂ ವಿಶ್ವವಿದ್ಯಾಲಯ ಠಾಣೆ ವ್ಯಾಪ್ತಿಯ ಬಂಧಿತ ಆರೋಪಿಗಳು ಸದ್ಯ ನ್ಯಾಯಾಂಗ ಬಂಧನದಲ್ಲಿ ಇದ್ದಾರೆ.

ಆರ್‌.ಡಿ. ಪಾಟೀಲ ಕಳೆದ 8 ವರ್ಷಗಳಿಂದ ಕೆಪಿಎಸ್‌ಸಿ, ಪಿಎಸ್‌ಐ, ಪೊಲೀಸ್, ಪಿಡಬ್ಲ್ಯುಡಿ, ಅರಣ್ಯ, ಎಂಜಿನಿಯರ್ ನೇಮಕಾತಿ ಪರೀಕ್ಷೆಯ ಅಕ್ರಮದಲ್ಲಿ ಪಳಗಿದ್ದಾನೆ. ಅಕ್ರಮವಾಗಿ ಪರೀಕ್ಷೆ ಬರೆಯಲು ಇಚ್ಛಿಸುವ ಅಭ್ಯರ್ಥಿಗಳನ್ನು ತಾನೇ ಖುದ್ದಾಗಿ ಸಂಪರ್ಕಿಸಿ, ಅವರೊಂದಿಗೆ ಹಣದ ಒಪ್ಪಂದ ಮಾಡಿಕೊಳ್ಳುತ್ತಾನೆ. ತನ್ನ ಅಕ್ರಮ ಜಾಲದ ಮೂಲಕ ಪರೀಕ್ಷೆ ದಿನ ಬ್ಲೂಟೂತ್ ಸರಬರಾಜು ಮತ್ತು ಉತ್ತರ ಹೇಳುವರ, ಪ್ರಶ್ನೆ ಪತ್ರಿಕೆ ಸೋರಿಕೆ, ಒಎಂಆರ್ ಶೀಟ್ ತಿದ್ದುವ ವ್ಯವಸ್ಥೆ ಮಾಡುತ್ತಾನೆ. ಪರೀಕ್ಷೆ ನಡೆಯುವ ಹಿಂದಿನ ದಿನ ಅಥವಾ ಕೆಲವು ದಿನಗಳ ಮುಂಚಿತವಾಗಿ ಜಿಲ್ಲೆಯಿಂದ ಪಲಾಯನ ಮಾಡುತ್ತಾನೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಸರ್ಕಾರಿ ನೌಕರಿ ಸೊನ್ನ ಸಾಹುಕಾರನ ಕಿಸೆದಾಗ ಐತಿ' ಎಂಬ ಜನರೂಢಿಯ ಮಾತು ಆರ್‌.ಡಿ. ಪಾಟೀಲನ ಸ್ವಗ್ರಾಮದಲ್ಲಿದೆ. ಈಚೆಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಸಮಾಜವಾದಿ ಪಕ್ಷದಿಂದ ಸ್ಪರ್ಧಿಸಿದ್ದ ಪಾಟೀಲ, ಹಳ್ಳಿ ಹಳ್ಳಿಗೆ ಪ್ರಚಾರಕ್ಕೆ ಹೋದಾಗ, 'ಡಿ.ಸಿ, ಎ.ಸಿ ಬಿಟ್ಟು ಉಳಿದ ಎಲ್ಲ ನೌಕರಿ ಕೊಡಿಸುವೆ' ಎಂದು ಭರವಸೆ ಕೊಟ್ಟಿದ್ದ ಎಂಬ ಮಾತುಗಳು ಕೇಳಿಬರುತ್ತಿವೆ.

19ಕ್ಕೂ ಹೆಚ್ಚು ಪ್ರಕರಣ ದಾಖಲು: ಪಿಎಸ್‌ಐ ಹಗರಣ, ಕೆಇಎ ಬ್ಲೂಟೂತ್ ಅಕ್ರಮ, ಕೌಟುಂಬಿಕ ಪ್ರಕರಣ ಸೇರಿ ರುದ್ರಗೌಡ ಪಾಟೀಲನ ವಿರುದ್ಧ 19 ಪ್ರಕರಣಗಳು ರಾಜ್ಯದ ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿವೆ.

ಬೆಂಗಳೂರು, ತುಮಕೂರು, ಧಾರವಾಡ, ಕಲಬುರಗಿ, ಯಾದಗಿರಿಯ ವಿವಿಧ ಠಾಣೆಗಳಲ್ಲಿ ಪ್ರಕರಣಗಳಿವೆ. ಈ ಪೈಕಿ ಪಿಎಸ್‌ಐ ಹಗರಣ ಸಂಬಂಧ 11 ತಿಂಗಳು ಜೈಲಿನಲ್ಲಿ ಇದ್ದು ಸಿಐಡಿ ವಿಚಾರಣೆ ಎದುರಿಸಿ ಹೊರಬಂದಿದ್ದ.

ಗುಪ್ತಚರ ವಿಭಾಗದ ವೈಫಲ್ಯ?

ಸಿಐಡಿ ತಂಡದ ತನಿಖೆಯಲ್ಲಿ ಪಿಎಸ್‌ಐ ಅಕ್ರಮ ಸೇರಿದಂತೆ ಇತರೆ ನೇಮಕಾತಿ ಪರೀಕ್ಷೆಯಲ್ಲಿ ರುದ್ರಗೌಡ ಡಿ. ಪಾಟೀಲ ಅಕ್ರಮ ಎಸಗಿದ್ದರ ಮಾಹಿತಿ ಕಲೆಹಾಕಿದ್ದರು. ಜೈಲಿಗೆ ಹೋಗಿ ಹೊರಬಂದಿದ್ದು, ಪರೀಕ್ಷೆ ನಡುಯುವ ಮುನ್ನ ಪಾಟೀಲನ ಮೇಲೆ ಗುಪ್ತಚರ ವಿಭಾಗದವರು ನಿಗಾ ಇರಿಸಿರಲಿಲ್ಲವೇ ಎಂಬ ಪ್ರಶ್ನೆ ಸಾರ್ವಜನಿಕ ವಲಯದಲ್ಲಿ ಮೂಡುತ್ತಿದೆ.

8 ವರ್ಷಗಳಿಂದ ನಡೆದ ವಿವಿಧ ನೇಮಕಾತಿ ಅಕ್ರಮದ ಕೇಂದ್ರ ಬಿಂದು ಕಲಬುರಗಿಯಾಗಿದೆ. ಅದರಲ್ಲಿ ಪಾಟೀಲನ ತವರು ಅಫಜಲಪುರ ಹಾಟ್ ಸ್ಪಾಟ್ ಆಗಿತ್ತು. ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಈ ನೇಮಕಾತಿ ಪರೀಕ್ಷೆ ನಡೆಸುವ ಮುನ್ನ ಅಕ್ರಮದ ಸಾಧ್ಯತೆ ಬಗ್ಗೆ ಶಂಕೆ ಬರಲಿಲವೇ? ಅನ್ಯ ಇಲಾಖೆಗಳ, ಈ ಹಿಂದಿನ ತನಿಖಾ ತಂಡವನ್ನು ಸಂಪರ್ಕಿಸಿರಲಿಲ್ಲವೇ ಎಂಬ ಪ್ರಶ್ನೆಗಳು ಕೇಳಿಬರುತ್ತಿವೆ.

'ಸಚಿವ ಪ್ರಿಯಾಂಕ್ ಖರ್ಗೆ ಮೌನ ಮುರಿಯಲಿ'

'ಕೆಇಎ ನೇಮಕಾತಿ ಅಕ್ರಮದ ಕುರಿತು ಪ್ರಿಯಾಂಕ್ ಖರ್ಗೆಯವರು ಮೌನ ಮುರಿಯಬೇಕು' ಎಂದು ಒತ್ತಾಯಿಸಿರುವ ಬಿಜೆಪಿ ರಾಜ್ಯ ವಕ್ತಾರ ರಾಜಕುಮಾರ್ ಪಾಟೀಲ ತೇಲ್ಕೂರ, 'ಅದರಲ್ಲಿ ಯಾರ್‍ಯಾರಿಗೆ ಕಿಕ್ ಬ್ಯಾಕ್ ತಲುಪಿದೆ? ಯಾಕೆ ಸರ್ಕಾರ ಮೌನ ವಹಿಸಿದೆ' ಎಂದು ಪ್ರಶ್ನಿಸಿದರು.

'ಬ್ಲೂಟೂತ್ ಬಳಸಿದ ನಾಲ್ವರನ್ನು ಒಳಗೆ ಹಾಕಿ ತನಿಖೆಯ ಹಾದಿ ತಪ್ಪಿಸುವ ಕೆಲಸ ಮಾಡಬೇಡಿ. ಕಿಂಗ್‌ಪಿನ್‌ಗಳನ್ನು ಬಂಧಿಸಿ, ಅವರನ್ನು ಮಂಪರು ಪರೀಕ್ಷೆಗೆ ಒಳಪಡಿಸಿ. ಯಾರಿಗೆ ಇದರಲ್ಲಿ ಪಾಲು ಹೋಗಿದೆ ಎಂಬುದು ತಿಳಿಯಬೇಕು' ಎಂದು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.


'ಕಾಂಗ್ರೆಸ್ ಗ್ಯಾರಂಟಿಯಲ್ಲಿ ಪರೀಕ್ಷಾ ಹಗರಣವೂ ಸೇರಿದೆ. ಪರೀಕ್ಷೆ ಸರಿಯಾಗಿ ನಡೆದು ಕೆಲಸ ಸಿಕ್ಕರೆ ಅವರಿಗೆ ಸಂಬಳ ಕೊಡಲಿಕ್ಕೆ ಸರ್ಕಾರದ ಬಳಿ ದುಡ್ಡಿಲ್ಲ. ಹೀಗಾಗಿ ಏನಾದರೂ ಮಾಡಿ ದಾರಿ ತಪ್ಪಿಸಬೇಕು ಎಂದು ಸರ್ಕಾರ ಯೋಜನೆ ರೂಪಿಸಿದೆಯಾ' ಎಂದು ಪ್ರಶ್ನಿಸಿದರು.

ಪ್ರಜಾವಾಣಿ ದೀಪಾವಳಿ ವಿಶೇಷಾಂಕ 2023

ಸಂಪತ್ ಸಿರಿಮನೆಗೆ ಕಥಾ, ಲಕ್ಷ್ಮಣಗೆ ಕವನ ಪ್ರಶಸ್ತಿ

ಪ್ರಜಾವಾಣಿ ವಾರ್ತೆ


ಸಂಪತ್ ಸಿರಿಮನೆ


ಡಾ.ಲಕ್ಷ್ಮಣ ವಿ.ಎ.


ಮೆಹಬೂಬ ಮುಲ್ತಾನಿ


ಬಸವಣ್ಣೆಪ್ಪ ಕಂಬಾರ


ಹೇಮಾ


ಸಿದ್ದು ಸತ್ಯಣ್ಣವರ

ಬೆಂಗಳೂರು: 2023ನೇ ಸಾಲಿನ ಪ್ರತಿಷ್ಠಿತ 'ಪ್ರಜಾವಾಣಿ ದೀಪಾವಳಿ ಕಥಾಸ್ಪರ್ಧೆ' ಮತ್ತು 'ಪ್ರಜಾವಾಣಿ ದೀಪಾವಳಿ ಕವನ ಸ್ಪರ್ಧೆ'ಗಳ ಫಲಿತಾಂಶ ಪ್ರಕಟವಾಗಿದೆ. ಸಂಪತ್ ಸಿರಿಮನೆ ಅವರ ಕಥೆ 'ಪತನ' ಹಾಗೂ ಡಾ.ಲಕ್ಷ್ಮಣ ವಿ.ಎ. ಅವರ ಕವನ 'ಬಾಲೆ, ಬೆತ್ತಲೆ ಬೊಂಬೆ ಮತ್ತು ಕಡಲು' ಆಯಾ ಸ್ಪರ್ಧೆಯಲ್ಲಿ ಮೊದಲ ಬಹುಮಾನವನ್ನು ಪಡೆದುಕೊಂಡಿವೆ.

ಕಥಾಸ್ಪರ್ಧೆಯಲ್ಲಿ ಸಿದ್ದು ಸತ್ಯಣ್ಣವರ ಅವರ 'ಒಂದು ತೇಗದ ಖುರ್ಚಿ' ಹಾಗೂ ಬಸವಣ್ಣೆಪ್ಪ ಕಂಬಾರ ಅವರ 'ಚಂದ್ರಾಮ ಕನ್ನಡಿ ಹರಳ' ಕಥೆಗಳು ಕ್ರಮವಾಗಿ ಎರಡು ಮತ್ತು ಮೂರನೇ ಬಹುಮಾನಕ್ಕೆ ಭಾಜನವಾಗಿವೆ. ಪೂರ್ಣಿಮಾ ಮಾಳಗಿಮನಿ ಅವರ 'ಹಸಿದ ಹೊಟ್ಟೆ ಮತ್ತು ಶಿಷ್ಟಾಚಾರ', ದೀಪಾ ಹಿರೇಗುತ್ತಿ ಅವರ 'ತುಳಸಿ', ಎನ್.ಸಿ.ಮಹೇಶ್ ಅವರ 'ಸಂವಿಧಾನ ಅಂದದ್ದೇ ಕಾರಣವಾಗಿ...', ಅರ್ಪಣ ಎಚ್‌.ಎಸ್‌. ಅವರ 'ಚಾವಡಿ ಮತ್ತು ನಡುಮನೆಯ ಮಧ್ಯದಲ್ಲೊಂದು ಆಳ ಕಣಿವೆ' ಹಾಗೂ ಪಿ.ಚಂದ್ರಿಕಾ ಅವರ 'ಆಕಾಶ ಮತ್ತು ಪಕ್ಷಿ' ಕಥೆಗಳು ತೀರ್ಪುಗಾರರ ಮೆಚ್ಚುಗೆ ಪಡೆದಿವೆ.

ಕವನ ಸ್ಪರ್ಧೆಯಲ್ಲಿ ಮೆಹಬೂಬ ಮುಲ್ತಾನಿ ಅವರ 'ಮತ್ತೊಂದು ನರಕ' ಮತ್ತು ಹೇಮಾ ಅವರ 'ಬೆಟ್ಟದೂರು ಮತ್ತು ನಾನು' ಕವನಗಳು ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದಿವೆ. ಭಾಗ್ಯ ಕೆ.ಯು. ಅವರ 'ಕಣ್ಣಬೀದಿಯಲ್ಲಿ ಹನಿದೇರು', ಎನ್‌.ಸಿ.ಮಹೇಶ್ ಅವರ 'ಮೈತುಂಬ ಯೋನಿಗಳುಳ್ಳ ಶಾಪಗ್ರಸ್ತಳ ಅಳಲು', ಕಾತ್ಯಾಯಿನಿ ಕುಂಜಿಬೆಟ್ಟು ಅವರ 'ಅದು', ಶ್ರುತಿ ಬಿ.ಆರ್. ಅವರ 'ತಾಯಿಯಾಗಿದ್ದೇನೆ' ಹಾಗೂ ಶೇಖರ ಎಂ.ಬಿ. ಅವರ 'ಆತ್ಮಸಿಲುಬೆಯಲ್ಲಿ ಏಸು ಜನನವಾದರೆ' ಕವಿತೆಗಳು ತೀರ್ಪುಗಾರರ ಮೆಚ್ಚುಗೆ ಗಳಿಸಿವೆ.

ಕಾದಂಬರಿಕಾರ ಹಾಗೂ ಕಥೆಗಾರ ಶ್ರೀಧರ ಬಳಗಾರ ಹಾಗೂ ಕಥೆಗಾರ್ತಿ ಬಿ.ಟಿ. ಜಾಹ್ನವಿ ಅವರು ಕಥಾಸ್ಪರ್ಧೆಯ ತೀರ್ಪುಗಾರರಾಗಿದ್ದರು. ಕವಿ–ಸಂಶೋಧಕ ಲಕ್ಷ್ಮೀಪತಿ ಕೋಲಾರ ಹಾಗೂ ಕವಯಿತ್ರಿ ಲಲಿತಾ ಸಿದ್ಧಬಸವಯ್ಯ ಅವರು ಕವನ ಸ್ಪರ್ಧೆಯ ತೀರ್ಪುಗಾರರಾಗಿದ್ದರು.

ಸಿ.ಡಿ ಪ್ರಕರಣ ಸಿಬಿಐಗೆ ಒಪ್ಪಿಸಲು ಮನವಿ

ಸಿದ್ದರಾಮಯ್ಯ ಒಳ್ಳೆ ಮನುಷ್ಯ, ಡಿ.ಕೆ.ಶಿವಕುಮಾರ್ ಅವರದ್ದು ಕೆಟ್ಟ ಸಂಸ್ಕೃತಿ: ರಮೇಶ ಜಾರಕಿಹೊಳಿ

ಪ್ರಜಾವಾಣಿ ವಾರ್ತೆ


ರಮೇಶ ಜಾರಕಿಹೊಳಿ

ಬೆಳಗಾವಿ: 'ನನ್ನ ಸಿ.ಡಿ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಲು ಕೋರಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಇ–ಮೇಲ್ ಮಾಡಿದ್ದೇನೆ. ಶೀಘ್ರವೇ ಭೇಟಿಯಾಗಿ ಮನವಿಪತ್ರ ಸಲ್ಲಿಸುವೆ' ಎಂದು ಶಾಸಕ ರಮೇಶ ಜಾರಕಿಹೊಳಿ ಹೇಳಿದರು.

'2021ರ ಮಾರ್ಚ್ 13ರಂದು ಬೆಂಗಳೂರಿನ ಮತ್ತಿಕೇರಿಯಲ್ಲಿ ವಿಡಿಯೊ ಡೌನ್‌ಲೋಡ್ ಮಾಡಿ ಸರ್ವರ್ ಮೂಲಕ ರಷ್ಯಾ, ದುಬೈ, ಇಂಗ್ಲೆಂಡ್‌ನಲ್ಲಿ ಅಂತರ್ಜಾಲದಲ್ಲಿ ಬಿಡುಗಡೆ ಮಾಡಲಾಗಿದೆ. ಇದರ ಹಿಂದೆ ಪ್ರಭಾವಿ ನಾಯಕನ ಕೈವಾಡವಿದ್ದು, ಅದನ್ನು ಸಿಬಿಐನಿಂದ ಮಾತ್ರ ಪತ್ತೆ ಮಾಡಲು ಸಾಧ್ಯ' ಎಂದು ಅವರು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

'ಡಿ.ಕೆ.ಶಿವಕುಮಾರ್ 'ಹನಿ ಟ್ರ್ಯಾಪ್' ಮೂಲಕ ನನ್ನ ಸಿ.ಡಿ ಮಾಡಿಸಿದ್ದಾರೆ ಎಂಬುದಕ್ಕೆ ನನ್ನ ಬಳಿ ದಾಖಲೆಗಳಿವೆ. ಅವುಗಳನ್ನು ಸಿಬಿಐ ಅಧಿಕಾರಿಗಳಿಗೆ ನೀಡುತ್ತೇನೆ. ಇದು 'ಗಾಳಿಮಾತು' ಎಂದು ಕಾಂಗ್ರೆಸ್‌ನವರು ಹೇಳಿದ್ದಾರೆ. ಒಂದು ವೇಳೆ ನನ್ನ ಬಳಿ ದಾಖಲೆ ಇಲ್ಲದಿದ್ದರೆ ನನ್ನ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ, ರಾಜಕೀಯದಿಂದಲೂ ದೂರವಾಗುವೆ. ಬಹಿರಂಗವಾಗಿ ಶಿವಕುಮಾರ್ ಬಳಿ ಕ್ಷಮೆ ಕೇಳುವೆ' ಎಂದರು.

'ಈ ಹಿಂದೆ ಇದ್ದ ಬಿಜೆಪಿ ಸರ್ಕಾರ ಏಕೆ ಈ ಪ್ರಕರಣ ಸಿಬಿಐಗೆ ವಹಿಸಲಿಲ್ಲ' ಎಂದು ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಅಲ್ಲೇ ಇರುವುದು ಕ್ಲೈಮ್ಯಾಕ್ಸ್' ಎಂದರು.

> **ಜಿ. ಪರಮೇಶ್ವರ ಅವರಿಗೆ 'ಧೈರ್ಯ'ವಿದ್ದರೆ ಸಿ.ಡಿ ಪ್ರಕರಣ ಸಿಬಿಐಗೆ ವಹಿಸಲಿ. ರಾಜ್ಯ ಸರ್ಕಾರದ ಮೇಲೆ ನನಗೆ ನಂಬಿಕೆ ಇಲ್ಲ. ಇವರು ಸಿಬಿಐಗೆ ವಹಿಸದಿದ್ದರೆ ಹೈಕೋರ್ಟ್, ಸುಪ್ರೀಂಕೋರ್ಟ್‌ಗೆ ಹೋಗುವೆ**
> **ರಮೇಶ ಜಾರಕಿಹೊಳಿ,** ಶಾಸಕ

ಜೀವಕ್ಕೆ ಅಪಾಯವಿದೆ: 'ಬೆಂಗಳೂರಿನ ನನ್ನ ಮನೆಯ ಮುಂದೆ ಅಶ್ಲೀಲ ಪದ ಬಳಕೆಯ ಪೋಸ್ಟರ್ ಅಂಟಿಸಿದ್ದು ಕಾಂಗ್ರೆಸ್ ಕಾರ್ಯಕರ್ತರಲ್ಲ. ಅವರು ಡಿ.ಕೆ.ಶಿವಕುಮಾರ್ ಸಾಕಿದ ಗೂಂಡಾಗಳು. ಈ ಬಗ್ಗೆ ತನಿಖೆ ಮಾಡಿ ಕ್ರಮ ಜರುಗಿಸಬೇಕೆಂದು ಗೋಕಾಕ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದೇನೆ' ಎಂದರು.

'ಇದು ಕೆಟ್ಟ ಸಂಸ್ಕೃತಿ ಉತ್ತರ ಕರ್ನಾಟಕದಲ್ಲಿ ಇಲ್ಲ. ಪೋಸ್ಟರ್ ಅಂಟಿಸಿ ಹೀಯಾಳಿಸಿದ್ದಕ್ಕೆ ನಾನು ಹೆಚ್ಚು ತಲೆ ಕೆಡಿಸಿಕೊಳ್ಳಲ್ಲ. ರಾಜಕೀಯದಲ್ಲಿ ಇಂಥವು ಬಹಳ ನೋಡಿದ್ದೇನೆ. ಆದರೆ, ಶಿವಕುಮಾರ್ ಇಷ್ಟು ಕೀಳುಮಟ್ಟಕ್ಕೆ ಇಳಿದಿದ್ದು ಜನರಿಗೆ ಗೊತ್ತಾಯಿತು' ಎಂದು ಹೇಳಿದರು.

'ನಾನು ಎಲ್ಲಿ ಬೇಕಾದರೂ ಒಬ್ಬನೇ ತಿರುಗುತ್ತೇನೆ. ಕೊತ್ವಾಲ್ ರಾಮಚಂದ್ರನ ಶಿಷ್ಯ ಶಿವಕುಮಾರ್ ಬೆಂಗಳೂರಿನಲ್ಲಿ ಎಂಥೆಂಥ ಗೂಂಡಾ ಸಾಕಿದ್ದಾರೋ ಗೊತ್ತಿಲ್ಲ. ಯಾರನ್ನಾದರೂ ಬಿಟ್ಟು ನನ್ನನ್ನು ಕೊಲೆ ಮಾಡಲೂ ಹೇಸುವುದಿಲ್ಲ. ನಾನು ಧೈರ್ಯವಂತ. ಆದರೆ, ನನ್ನ ಜೀವಕ್ಕೆ ಅಪಾಯವಿದೆ. ಈ ಬಗ್ಗೆ ಕೇಂದ್ರ ಗೃಹಸಚಿವ ಅಮಿತ್ ಶಾ ಅವರನ್ನು ಭೇಟಿಯಾಗಿ, ಮನವರಿಕೆ ಮಾಡಿಕೊಡುವೆ' ಎಂದರು.

ಭಯೋತ್ಪಾದಕರಿಂದ ಬೆದರಿಕೆ: 'ದುಬೈ, ಅಸ್ಸಾಂನಿಂದ ಭಯೋತ್ಪಾದಕರ ಮೂಲಕವೂ ಶಿವಕುಮಾರ್ ನನಗೆ ಕರೆ ಮಾಡಿಸಿ ಬೆದರಿಕೆ ಹಾಕಿಸಿದ್ದಾರೆ. ಎಷ್ಟೋ ದಿನ ತಡರಾತ್ರಿ 2ರ ಸುಮಾರಿಗೆ ಭಯೋತ್ಪಾದಕರು ಫೋನ್ ಮಾಡಿದ್ದಾರೆ. ನಾನು ಗಟ್ಟಿ ಮನುಷ್ಯನಾಗಿದ್ದಕ್ಕೆ ಬದುಕಿದ್ದೇನೆ. ಮತ್ತ್ಯಾರೋ ಆಗಿದ್ದರೆ ಇಷ್ಟೊತ್ತಿಗೆ ಎದೆ ಒಡೆದುಕೊಂಡು ಸಾಯುತ್ತಿದ್ದರು' ಎಂದರು.

'ಶಿವಕುಮಾರ್ ಅಂತ್ಯ ಎಷ್ಟು ಬೇಗ ಆಗುವುದೋ, ಅಷ್ಟು ರಾಜ್ಯಕ್ಕೆ ಒಳ್ಳೆಯದು. ಇಲ್ಲದಿದ್ದರೆ ಅಪಾಯ ಕಾದಿದೆ. ನೂರು ರಮೇಶ ಜಾರಕಿಹೊಳಿಗಳು ಬಂದರೂ ಶಿವಕುಮಾರ್ ಅವರನ್ನು ಏನೂ ಮಾಡಲು ಆಗಲ್ಲ ಎಂದು ಕೆಲವರು ಹೇಳಿದ್ದಾರೆ. ಅವರನ್ನು ಮುಗಿಸಲು ನಾನೊಬ್ಬನೇ ಸಾಕು' ಎಂದರು.

'ಸೋನಿಯಾ ಗಾಂಧಿಗೂ ಬ್ಲ್ಯಾಕ್‌ಮೇಲ್'

'ತಿಹಾರ್ ಜೈಲಿಗೆ ಭೇಟಿಯಾಗಲು ಹೋದ ಸೋನಿಯಾ ಗಾಂಧಿ ಅವರಿಗೂ ಶಿವಕುಮಾರ್ 'ಬ್ಲ್ಯಾಕ್‌ಮೇಲ್' ಮಾಡಿದ್ದ. ಕೆಪಿಸಿಸಿ ಅಧ್ಯಕ್ಷರನ್ನಾಗಿ ಮಾಡದಿದ್ದರೆ ತಮ್ಮ ಹಗರಣಗಳನ್ನೂ ಜಾರಿ ನಿರ್ದೇಶನಾಲಯದ (ಇ.ಡಿ) ಎದುರು ಬಯಲು ಮಾಡುವುದಾಗಿ ಹೆದರಿಸಿದ್ದರು' ಎಂದೂ ರಮೇಶ ಜಾರಕಿಹೊಳಿ ಆರೋಪಿಸಿದರು.

'ಸಿ.ಡಿಗಳ ಫ್ಯಾಕ್ಟರಿ ನಡೆಸುವ ಶಿವಕುಮಾರ್ ಅವರ ಜೇಬಿನಲ್ಲಿ ಪ್ರತಿ ತಿಂಗಳು ಒಂದಿಲ್ಲೊಂದು ಸಿ.ಡಿ ಇರುತ್ತದೆ. 'ವಿಷಕನ್ಯೆ' ಕೂಡ ಈ ಪ್ರಕರಣದಲ್ಲಿದ್ದಾರೆ' ಎಂದರು.

'ಶಾಸಕ ವಿಶ್ವಾಸ ವೈದ್ಯ, ಬಾಬಾಸಾಹೇಬ ಪಾಟೀಲ ಅವರಂಥ ಹಲವರು ನನ್ನ ಬಳಿ ಬಂದು ಅನುದಾನವೇ ಸಿಕ್ಕಿಲ್ಲ ಎಂದು ಹೇಳಿಕೊಳ್ಳುತ್ತಾರೆ. ಆಗ ಕಾಂಗ್ರೆಸ್ ಬಿಟ್ಟು ನಮ್ಮೊಂದಿಗೆ ಬನ್ನಿ ಎಂದು ಸಹಜ ಮಾತನಾಡಿದ್ದೆ. ಅದನ್ನೇ ಆಪರೇಷನ್ ಕಮಲ ಎಂದು ಬಿಂಬಿಸುವುದು ಸರಿಯಲ್ಲ. ಮಹಾರಾಷ್ಟ್ರ ಮಾದರಿಯಲ್ಲಿ ಸಿದ್ದರಾಮಯ್ಯ, ಡಿಕೆಶಿ ಅಥವಾ ಇನ್ಯಾರೋ ತಂಡ ತೆಗೆದುಕೊಂಡು ಹೋದರೆ ಮಾತ್ರ ಸರ್ಕಾರ ಬೀಳುತ್ತದೆ' ಎಂದೂ ಹೇಳಿದರು.

'ಸಿದ್ದರಾಮಯ್ಯ ಒಳ್ಳೆಯ ಮನುಷ್ಯ. ಅವರು ಮುಖ್ಯಮಂತ್ರಿ ಆಗಿದ್ದಕ್ಕೆ ನಾನು ಸುಮ್ಮನಿದ್ದೇನೆ. ಶಿವಕುಮಾರ್ ಆಗಿದ್ದರೆ, ಆವಾಗಲೇ ಸರ್ಕಾರ ಕೆಡುವುತ್ತಿದ್ದೆ' ಎಂದರು.

'ಸಿ.ಡಿ ಪ್ರಕರಣ ಬಗೆಹರಿಸುವಂತೆ ನಾನು ಕಾಲಿಗೆ ಬಿದ್ದಿರುವುದಾಗಿ ಶಿವಕುಮಾರ್ ಹೇಳಿಕೊಂಡಿದ್ದಾರೆ. ಆದರೆ, ಮಲ್ಲಿಕಾರ್ಜುನ ಖರ್ಗೆ ಅವರನ್ನು ತಂದೆಯಂತೆ ಭಾವಿಸಿ ಒಮ್ಮೆ ಅವರ ಕಾಲಿಗೆ ಬಿದ್ದಿದ್ದೇನೆ. ಬೇರೆ ಯಾರ ಕಾಲಿಗೂ ಎಂದೂ ಬಿದ್ದಿಲ್ಲ' ಎಂದರು.

ಸರ್ಕಾರ ಕೆಡವಿದರೆ ನಾಶವಾಗುತ್ತೀರಿ: ಎಚ್‌.ಕೆ. ಪಾಟೀಲ



ವಿಜಯಪುರ: 'ಮಹಾರಾಷ್ಟ್ರ ಮಾದರಿಯಲ್ಲೇ ಕರ್ನಾಟಕದಲ್ಲೂ ಸರ್ಕಾರ ಉರುಳಿಸುವ ಪ್ರಯತ್ನ ನಡೆದಿದೆ' ಎಂಬ ಶಾಸಕ ರಮೇಶ ಜಾರಕಿಹೊಳಿ ಹೇಳಿಕೆಗೆ ಕಾನೂನು ಸಚಿವ ಎಚ್‌.ಕೆ.ಪಾಟೀಲ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಈ ಹಿಂದೆ 17 ಶಾಸಕರನ್ನು ಖರೀದಿಸಿದಾಗಲೇ, ಇಡೀ ದೇಶದಲ್ಲಿ ಬಿಜೆಪಿ ಪ್ರಭಾವ ಹೋಯಿತು. ಮತ್ತೆ ಅದೇ ರೀತಿ ಮಾಡಿದರೆ ನೀವು ನಾಶವಾಗಿ ಹೋಗುತ್ತೀರಿ' ಎಂದು ಅವರು ಕಿಡಿಕಾರಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ರಾಜಕಾರಣ ಎಂದರೆ ಸರ್ಕಾರ ಕೆಡುವುದು, ಮತ್ತೆ ಕಟ್ಟುವುದು, ಸುಭದ್ರ ಸರ್ಕಾರ ಬೀಳಿಸುವುದೇ ಅಂದುಕೊಂಡಿದ್ದೀರಾ? ಇದು ಜನರಿಗೆ ಮತ್ತು ಪ್ರಜಾಪ್ರಭುತ್ವಕ್ಕೆ ಮಾಡುವ ಅವಮಾನ. ಈ ರೀತಿ ಮಾಡುವುದರಲ್ಲಿ ಯಾವುದೇ ಅರ್ಥವಿಲ್ಲ' ಎಂದರು.

ಸಚಿವ ಎಂ.ಬಿ. ಪಾಟೀಲ ಮಾತನಾಡಿ, 'ರಮೇಶ ಜಾರಕಿಹೊಳಿ ಅವರನ್ನೇ ಮಹಾರಾಷ್ಟ್ರಕ್ಕೆ ಕಳುಹಿಸಿಬಿಡಿ' ಎಂದರು.

'ಬಿಜೆಪಿ ಬೆಳವಣಿಗೆಗೆ 10ರವರೆಗೆ ಕಾಯಿರಿ'

ಕಾನಹೊಸಹಳ್ಳಿ (ವಿಜಯನಗರ ಜಿಲ್ಲೆ): 'ರಾಜ್ಯ ಬಿಜೆಪಿಯಲ್ಲಿ ಏನಾಗಲಿದೆ ಎಂಬುದಕ್ಕೆ ನವೆಂಬರ್ 10ರವರೆಗೆ ಕಾದು ನೋಡಿ' ಎಂದು ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ತಿಳಿಸಿದರು.

'ಬಿಜೆಪಿಯವರು ಏನೇ ತಿಪ್ಪರಲಾಗ ಹಾಕಿದರೂ ಕಾಂಗ್ರೆಸ್ ಸರ್ಕಾರಕ್ಕೆ ಏನೂ ಆಗದು. ರಮೇಶ್ ಜಾರಕಿಹೊಳಿ ಅವರು ಮೊದಲು ಬಿಜೆಪಿ ಶಾಸಕರನ್ನು ಹಿಡಿದು ಇಟ್ಟುಕೊಳ್ಳಲಿ. ಕಾಂಗ್ರೆಸ್‌ನ ಒಬ್ಬ ಶಾಸಕ ಸಹ ಹೋಗಲ್ಲ' ಎಂದು ಹೇಳಿದರು.



ಕನ್ನಡದ 'ಪಟ' ಕರ್ನಾಟಕ ರಾಜ್ಯೋತ್ಸವದ ಪ್ರಯುಕ್ತ ಕಾರವಾರದ ಟ್ಯಾಗೋರ್ ಕಡಲತೀರದಲ್ಲಿ ಜಿಲ್ಲಾಧಿಕಾರಿ ಗಂಗೂಬಾಯಿ ಮಾನಕರ್ ಅವರು ಮಂಗಳವಾರ ಗಾಳಿಪಟ ಹಾರಿಸಿದರು

ಒಬಿಸಿ ಪ್ರಮಾಣ ಪತ್ರ ಕಡ್ಡಾಯ ಬೇಡ: ಸಿ.ಎಂ

ಪ್ರಜಾವಾಣಿ ವಾರ್ತೆ


ಸಿದ್ದರಾಮಯ್ಯ

ಬೆಂಗಳೂರು: ರಾಜ್ಯ ನಾಗರಿಕ ಸೇವಾ ಹುದ್ದೆಗಳಿಗೆ ಮೀಸಲಾತಿಯಿಂದ ಯಾವುದೇ ರಿಯಾಯಿತಿ ಪಡೆಯದೇ ಅಂತಿಮ ಆಯ್ಕೆ ಪಟ್ಟಿಯಲ್ಲಿ ಸಾಮಾನ್ಯ ವರ್ಗದ ಹುದ್ದೆಗಳಿಗೆ ಆಯ್ಕೆಗೊಂಡ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಸಿಂಧುತ್ವ ಪ್ರಮಾಣ ಪತ್ರ ಕಡ್ಡಾಯಗೊಳಿಸದಂತೆ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರಿಗೆ ನಿರ್ದೇಶನ ನೀಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದಾರೆ.


ಈ ಸಂಬಂಧ ಅವರು ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಪತ್ರ ಬರೆದಿದ್ದಾರೆ.

ಮೀಸಲಾತಿ ಕೋರಿ ಸರ್ಕಾರಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಅಂತಿಮ ಆಯ್ಕೆ ಪಟ್ಟಿಯಲ್ಲಿ ಸಾಮಾನ್ಯ ವರ್ಗದ ಹುದ್ದೆಗಳಿಗೆ ಎದುರಾಗಿ ಆಯ್ಕೆಗೊಂಡಾಗಲೂ ಸಿಂಧುತ್ವ ಪ್ರಮಾಣ ಪತ್ರ ಸಲ್ಲಿಸುವಂತೆ ಕೆಲವು ಪ್ರಾಧಿಕಾರಿಗಳು ಅಭ್ಯರ್ಥಿಗಳಿಗೆ ಸೂಚಿಸುತ್ತಿವೆ. ಇದರಿಂದ ಅಂತಿಮ ಆಯ್ಕೆ ಪಟ್ಟಿಯಲ್ಲಿ ಮೆರಿಟ್ ಆಧಾರದಲ್ಲಿ ಸಾಮಾನ್ಯವರ್ಗದ ಹುದ್ದೆಗಳಿಗೆ ಎದುರಾಗಿ ಆಯ್ಕೆಯಾದ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಅನಾವಶ್ಯಕ ತೊಂದರೆ ಆಗುತ್ತಿದೆ ಎಂಬ ದೂರು ಬಂದಿದೆ ಎಂದು ಹೇಳಿದ್ದಾರೆ.

ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ ನೇಮಕಾತಿ ನಿಯಮ 1992 ರ ಅನ್ವಯ ರಾಜ್ಯ ನಾಗರಿಕ ಸೇವಾ ಹುದ್ದೆಗಳಿಗೆ ನೇರ ನೇಮಕಾತಿ ಮೂಲಕ ಆಯ್ಕೆಗೊಳ್ಳುವ ಹಿಂದುಳಿದ ವರ್ಗಗಳ ಅಭ್ಯರ್ಥಿಗಳು ಅಂತಿಮ ಆಯ್ಕೆ ಪಟ್ಟಿಯಲ್ಲಿ ವಿವಿಧ ಮೀಸಲಾತಿಯಡಿ ಆಯ್ಕೆ ಹೊಂದುವ ಮತ್ತು ಮೀಸಲಾತಿಯಿಂದ ರಿಯಾಯಿತಿ ಪಡೆಯುವ ಅಭ್ಯರ್ಥಿಗಳು ಸಲ್ಲಿಸಿರುವ ಪ್ರಮಾಣ ಪತ್ರಗಳು ಸಿಂಧುವೇ ಎಂಬ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರದಿಂದ ಸಿಂಧುತ್ವ ಪ್ರಮಾಣ ಪತ್ರ ಪಡೆಯಬೇಕಾಗುತ್ತಿತ್ತು.

ನಿಧನವಾರ್ತೆ

ಎಂ.ಆನಂದ ಆಳ್ವ



ಮೂಡುಬಿದಿರೆ (ದಕ್ಷಿಣ ಕನ್ನಡ): ಮಿಜಾರುಗುತ್ತು ಆನಂದ ಆಳ್ವ (106) ಅವರು ಅಲ್ಪ ಕಾಲದ ಅನಾರೋಗ್ಯದಿಂದ ಮಂಗಳವಾರ ನಿಧನರಾದರು.

ಕಂಬಳ ಕೋಣಗಳ ಯಜಮಾನರಾಗಿದ್ದ ಅವರು ಮಿಜಾರಿನಲ್ಲಿ ಕಂಬಳ ಆಯೋಜಿಸಿದ್ದರು. ಪ್ರಗತಿಪರ ಕೃಷಿಕರಾಗಿದ್ದ ಆಳ್ವ ಅವರು ಭತ್ತ, ಅಡಿಕೆ, ತೆಂಗು, ಕೊಕ್ಕೊ ಬೆಳೆಸುತ್ತಿದ್ದರು. ಹೈನುಗಾರಿಕೆಯಲ್ಲೂ ತೊಡಗಿಸಿಕೊಂಡಿದ್ದರು.

ಅವರಿಗೆ ಆಳ್ವಾಸ್ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ ಡಾ. ಎಂ ಮೋಹನ ಆಳ್ವ ಸೇರಿದಂತೆ ಮೂವರು ಪುತ್ರರು, ಒಬ್ಬ ಪುತ್ರಿ ಇದ್ದಾರೆ.

ಮೂಡುಬಿದಿರೆಯಲ್ಲಿ ಆಳ್ವಾಸ್ ಹೆಲ್ತ್ ಸೆಂಟರ್ ಆರಂಭಿಸಲು ಹಾಗೂ ಆಳ್ವಾಸ್ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಬೆಳೆಸಲು ಮೋಹನ ಆಳ್ವ ಅವರಿಗೆ ಬೆಂಬಲವಾಗಿದ್ದರು.

ಅಂತ್ಯಕ್ರಿಯೆ ಮಿಜಾರುಗುತ್ತು ಆವರಣದಲ್ಲಿ ಬುಧವಾರ (ನ.1) ಬೆಳಿಗ್ಗೆ 11ಕ್ಕೆ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಸಲೂನಿನ ಮೇಲೆ ದಾಳಿ: ಐವರು ಯುವತಿಯರ ರಕ್ಷಣೆ

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಆಲನಹಳ್ಳಿಯ ಮನೆಯ ಮೊದಲ ಮಹಡಿಯಲ್ಲಿ ಸಲೂನ್ ಮೇಲೆ ಮಂಗಳವಾರ ಸಂಜೆ ದಾಳಿ ನಡೆಸಿದ ವಿಶೇಷ ಪೊಲೀಸರ ತಂಡವು, ಐವರು ಯುವತಿಯರನ್ನು ರಕ್ಷಿಸಿದೆ.

'ದನಿಯಾ ಫ್ಯಾಮಿಲಿ ಸಲೂನ್'ನಲ್ಲಿ ಅನೈತಿಕ ಚಟುವಟಿಕೆಗಳು ನಡೆಯುತ್ತಿವೆ' ಎಂದು ಒಡನಾಡಿ ಸೇವಾ ಸಂಸ್ಥೆಯವರು ನೀಡಿದ ಮಾಹಿತಿ ಆಧರಿಸಿ ಈ ದಾಳಿ ನಡೆದಿದೆ. ಸಲೂನ್‌ನಲ್ಲಿ ಇಬ್ಬರು ಯುವಕರು ಹಾಗೂ ಐವರು ಯುವತಿಯರು ಇದ್ದರು ಎಂದು ತಿಳಿದುಬಂದಿದೆ.

'ಮನೆಯು ನಿವೃತ್ತ ಪೊಲೀಸ್ ಅಧಿಕಾರಿಗೆ ಸೇರಿದ್ದು, ಮಹಡಿಯನ್ನು ಬಾಡಿಗೆಗೆ ಪಡೆದಿದ್ದ ಮಹೇಶ್ ಎನ್ನುವವರು ಸಲೂನ್ ನಡೆಸುತ್ತಿದ್ದು 8 ತಿಂಗಳಿನಿಂದ ಅನೈತಿಕ ಚಟುವಟಿಕೆ ನಡೆಸುತ್ತಿದ್ದರು ಎಂದು ಸ್ಥಳೀಯರು ಮಾಹಿತಿ ನೀಡಿದ್ದರು' ಎಂದು ಒಡನಾಡಿ ಸಂಸ್ಥೆಯ ಪರಶುರಾಮ್ ತಿಳಿಸಿದರು.


'ಖಚಿತ ಮಾಹಿತಿ ಆಧರಿಸಿ ದಾಳಿ ನಡೆಸಿದ್ದೇವೆ. ತನಿಖೆ ಮುಂದುವರಿದಿದೆ' ಎಂದು ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ಪ್ರತಿಕ್ರಿಯಿಸಿದರು.

ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಡಾ.ಸಿ.ಎನ್‌. ಮಂಜುನಾಥ್ ಕಳವಳ

ಹೃದಯಾಘಾತ: 10 ವರ್ಷದಿಂದಲೂ ಹೆಚ್ಚಳ

ಪ್ರಜಾವಾಣಿ ವಾರ್ತೆ


ಡಾ.ಸಿ.ಎನ್‌. ಮಂಜುನಾಥ್



ಬೆಂಗಳೂರು: 'ರಾಜ್ಯದಲ್ಲಿ ಕಳೆದ ಹತ್ತು ವರ್ಷಗಳಲ್ಲಿ ಹೃದಯಾಘಾತ ಪ್ರಕರಣಗಳು ಶೇ 22 ರಷ್ಟು ಹೆಚ್ಚಳವಾಗಿದೆ. ಆದರೆ, ಕೊರೊನಾ ವೈರಾಣು ಹಾಗೂ ಲಸಿಕೆಯಿಂದ ಹೃದಯಾಘಾತ ಹೆಚ್ಚಳವಾಗುತ್ತಿದೆ ಎನ್ನಲು ಸಾಧ್ಯವಿಲ್ಲ' ಎಂದು ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕ ಡಾ.ಸಿ.ಎನ್‌. ಮಂಜುನಾಥ್ ತಿಳಿಸಿದರು.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕೋವಿಡ್ ಲಸಿಕೆ ಪಡೆದು ಎರಡು ವರ್ಷಗಳಾಗಿವೆ. ದೇಶದ ಶೇ 90ರಷ್ಟು ಜನರಿಗೆ ಕೋವಿಡ್ ಬಂದು ಹೋಗಿದೆ. ಸೋಂಕಿತರು ಕಠಿಣ ಕೆಲಸ ಮಾಡಬಾರದು ಎನ್ನುವುದಕ್ಕೆ ವೈಜ್ಞಾನಿಕ ಅಧ್ಯಯನವಿಲ್ಲ. ಎಷ್ಟು ಗಂಟೆಗಳು ಕೆಲಸ ಮಾಡುತ್ತೇವೆ ಎನ್ನುವುದು ಮುಖ್ಯವಲ್ಲ, ಎಷ್ಟು ಒತ್ತಡದಲ್ಲಿ ಕೆಲಸ ಮಾಡುತ್ತೇವೆ ಎನ್ನುವುದು ಮುಖ್ಯವಾಗುತ್ತದೆ. ಒತ್ತಡದಲ್ಲಿ ಕೆಲಸ ಮಾಡುವವರಿಗೆ ಹೃದಯಾಘಾತ ಸೇರಿ ವಿವಿಧ ಸಮಸ್ಯೆಗಳ ಅಪಾಯ ಇರುತ್ತದೆ.

'ಕೋವಿಡ್‌ನಿಂದ ಚೇತರಿಸಿಕೊಂಡವರು ಕಠಿಣ ಕೆಲಸ ಮಾಡಬಾರದೆಂದು' ಕೇಂದ್ರ ಸರ್ಕಾರ ಯಾವ ಅರ್ಥದಲ್ಲಿ ಹೇಳಿದೆ ಎನ್ನುವುದು ತಿಳಿದಿಲ್ಲ' ಎಂದು ಹೇಳಿದರು.

'ಕೋವಿಡ್ ಪೂರ್ವದಲ್ಲಿಯೂ ಯುವಕರು ಹಾಗೂ ಮಧ್ಯ ವಯಸ್ಕರು ಹೃದಯಾಘಾತಕ್ಕೆ ಒಳಗಾಗುತ್ತಿದ್ದರು. ವಾಯುಮಾಲಿನ್ಯ ಕೂಡ ಹೃದಯಾಘಾತಕ್ಕೆ ಪ್ರಮುಖ ಕಾರಣವಾಗುತ್ತಿದೆ. ಕಳೆದ ಒಂದು ವರ್ಷದ ಅವಧಿಯಲ್ಲಿ ದೇಶದಲ್ಲಿ ವಾಯುಮಾಲಿನ್ಯದಿಂದ 22 ಲಕ್ಷ ಮಂದಿ ಮೃತಪಟ್ಟಿದ್ದಾರೆ. ಒತ್ತಡ ಕೂಡ ಇತ್ತೀಚಿನ ದಿನಗಳಲ್ಲಿ ಹೃದಯಾಘಾತಕ್ಕೆ ಕಾರಣವಾಗುತ್ತಿದೆ. ವೈದ್ಯರ ಮೇಲೆ ಒತ್ತಡ ಹೆಚ್ಚಾಗುತ್ತಿರುವುದರಿಂದ ವೈದ್ಯರ ಆಯಸ್ಸು 10 ವರ್ಷ ಕಡಿಮೆ ಆಗುತ್ತಿದೆ. ಕೇರಳದಲ್ಲಿ ಈ ಬಗ್ಗೆ ಅಧ್ಯಯನ ಮಾಡಲಾಗಿದೆ. ಮಧುಮೇಹದ ಆರಂಭಿಕ ಹಂತದಲ್ಲಿ ಇರುವವರಿಗೂ ಹೃದಯಾಘಾತ ಆಗುತ್ತಿದೆ. ಧೂಮಪಾನ, ಅತಿಯಾದ ಮದ್ಯಪಾನ, ಡ್ರಗ್ಸ್ ಸೇವನೆ, ಸ್ಥೂಲಕಾಯ, ಆನುವಂಶಿಕ ಸಮಸ್ಯೆ ಸೇರಿ ವಿವಿಧ ಕಾರಣಗಳಿಂದ ಹೃದಯಾಘಾತ ಪ್ರಕರಣಗಳು ಹೆಚ್ಚಳವಾಗುತ್ತಿವೆ' ಎಂದರು.

'ಯುರೋಪ್, ಅಮೆರಿಕದಲ್ಲಿ ಹೃದಯಾಘಾತದ ಪ್ರಮಾಣ ಇತ್ತೀಚೆಗೆ ಕಡಿಮೆ ಆಗುತ್ತಿದೆ. ಏಷ್ಯಾ ದೇಶಗಳ ಜನರಲ್ಲಿ ಜಾಸ್ತಿಯಾಗುತ್ತಿದೆ. ವ್ಯಾಯಾಮದ ಜತೆಗೆ ಚೆನ್ನಾಗಿ ಕೆಲಸ ಮಾಡಬೇಕು' ಎಂದು ಹೇಳಿದರು.

ಬಿಎಂಟಿಸಿ ಸಿಬ್ಬಂದಿಯಲ್ಲಿ ಸಮಸ್ಯೆ

'ಬಿಎಂಟಿಸಿ ಜತೆಗಿನ ಒಪ್ಪಂದಂತೆ 13 ತಿಂಗಳಲ್ಲಿ 8.5 ಸಾವಿರ ಸಿಬ್ಬಂದಿಯನ್ನು ಸಂಸ್ಥೆಯಲ್ಲಿ ವಿವಿಧ ಪರೀಕ್ಷೆಗೆ ಒಳಪಡಿಸಲಾಗಿದೆ. ಶೇ 5 ರಷ್ಟು ಸಿಬ್ಬಂದಿಯಲ್ಲಿ ಹೃದಯ ಸಂಬಂಧಿ ಸಮಸ್ಯೆ ಪತ್ತೆಯಾದರೆ, ತಲಾ ಶೇ 40 ರಷ್ಟು ಸಿಬ್ಬಂದಿಗೆ ಅಧಿಕ ರಕ್ತದೊತ್ತಡ ಹಾಗೂ ಸಕ್ಕರೆ ಕಾಯಿಲೆ ಇರುವುದು ದೃಢಪಟ್ಟಿದೆ. ಶೇ 62 ರಷ್ಟು ಮಂದಿ ಸ್ಥೂಲಕಾಯ ಸಮಸ್ಯೆ ಎದುರಿಸುತ್ತಿದ್ದಾರೆ. ಪರೀಕ್ಷೆಗೆ ಒಳಪಟ್ಟವರಲ್ಲಿ 25 ರಷ್ಟು ಮಂದಿ ಧೂಮಪಾನಿಗಳಾಗಿದ್ದರು. ವಿವಿಧ ಸಮಸ್ಯೆಗಳು ಇರುವುದರಿಂದ ಇವರನ್ನು ಅಪಾಯದ ವರ್ಗದಲ್ಲಿ ಗುರುತಿಸಲಾಗುತ್ತಿದೆ. ಸಮಯಕ್ಕೆ ಸರಿಯಾಗಿ ಊಟ–ನಿದ್ದೆ ಇರದಿರುವುದು, ವ್ಯಾಯಾಮ ಮಾಡದಿರುವುದು ಸಹ ಸಮಸ್ಯೆ ಕಾಣಿಸಿಕೊಳ್ಳಲು ಕಾರಣವಾಗಿದೆ' ಎಂದು ಡಾ.ಸಿ.ಎನ್‌. ಮಂಜುನಾಥ್ ಹೇಳಿದರು.

ಬುಧವಾರ, ನವೆಂಬರ್ 1, 2023 | ₹ 7.00
www.prajavani.net
prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕರ್ನಾಟಕ ರಾಜ್ಯೋತ್ಸವದ ಶುಭಾಶಯಗಳು



ನೃತ್ಯ
ಗುಜರಾತ್‌ನ ಕೆವಡಿಯಾದಲ್ಲಿ ಹಮ್ಮಿಕೊಂಡಿದ್ದ 'ರಾಷ್ಟ್ರೀಯ ಏಕತಾ ದಿವಸ್' ಕಾರ್ಯಕ್ರಮದಲ್ಲಿ ಯುವತಿಯರು ನೃತ್ಯ ಪ್ರದರ್ಶಿಸಿದರು

ರಾಜ್ಯದ ಹೆಸರು ಕರ್ನಾಟಕ ಎಂದು ಮರುನಾಮಕರಣವಾಗಿ 50 ವರ್ಷವಾದ ಈ ಸಂದರ್ಭದಲ್ಲಿ 'ಮುಂದಿನ 25 ವರ್ಷಗಳಲ್ಲಿ ಕರ್ನಾಟಕ ಹೇಗಿರಬೇಕು' ಎಂಬ ಪ್ರಶ್ನೆಯನ್ನು 'ಪ್ರಜಾವಾಣಿ' ನಾಡಿನ ಗಣ್ಯರ ಮುಂದಿರಿಸಿತು. ಈ ಪ್ರಶ್ನೆಗೆ ಗಣ್ಯರು ನೀಡಿದ ಪ್ರತಿಕ್ರಿಯೆಗಳು ಹೀಗಿವೆ:

ತಳಪಾಯ ಕಟ್ಟಬೇಕಿದೆ


ಪ್ರಜಾವಾಣಿಯ ಈ ಪ್ರಶ್ನೆ ಕೇಳಿಯೇ ನನಗೆ ಗಾಬರಿಯಾಯ್ತು. ಭಾರತ ಅಂದರೆ ರಾಜ್ಯಗಳ ಒಕ್ಕೂಟ ಎಂಬ ವಿವೇಕದ ಸಂವಿಧಾನದ ಪರಿಕಲ್ಪನೆಯನ್ನೆ ಕಾಲುಕಸ ಮಾಡಿರುವ ಇಂದಿನ 'ಬಲಿಷ್ಠ' ಕೇಂದ್ರ ಸರ್ಕಾರವು ರಾಜ್ಯಗಳನ್ನು ದುರ್ಬಲಗೊಳಿಸುತ್ತ ಧಾವಿಸುತ್ತಿದೆ. ಜಿಎಸ್‌ಟಿ ತೆರಿಗೆ ಪದ್ಧತಿಯಿಂದಾಗಿ ರಾಜ್ಯಗಳು ತಮ್ಮ ಬಹುಪಾಲು ಸಂಪತ್ತನ್ನು ಬಲಿಷ್ಠ ಕೇಂದ್ರಕ್ಕೆ ಒಪ್ಪಿಸಿ ಯಾಚಿಸುವ ಭಿಕ್ಷುಕರಂತಾಗಿಬಿಟ್ಟಿವೆ. ಕಾರ್ಪೊರೇಟ್ ಸೆಕ್ಟರ್‌ನ ಶತಕೋಟ್ಯಧಿಪತಿಗಳ ಹಿಂತಿರುಗಿಸಲಾಗದ ಸಾಲವನ್ನು ಪಕ್ಕಕ್ಕಿಡುವ 'ಘನ ಕಾರ್ಯ'ದಲ್ಲಿ 'ಬಲಿಷ್ಠ' ಕೇಂದ್ರ ಸರ್ಕಾರ ನಿರತವಾಗಿದೆ. ಜನರ ಸಂಪತ್ತು ಉಳ್ಳವರ ಪಾಲಾಗುತ್ತಿದೆ. ರಾಜ್ಯಗಳು ಉಸಿರೆತ್ತದಂತೆ 'ಬಲಿಷ್ಠ' ಕೇಂದ್ರವು ರಾಜ್ಯಗಳ ಕುತ್ತಿಗೆಗೆ ಕವೆಕೋಲು ಹಾಕಿ ಕೂರಿಸಿದೆ.

ಹೀಗಿರುವಾಗ, ಇಂದಿನ ವೇಗದ ಯುಗದಲ್ಲಿ ಇನ್ನು 25 ವರ್ಷಗಳ ತದನಂತರ ಕರ್ನಾಟಕ ಎಂಬ ರಾಜ್ಯ ಅದು ಒಂದು ರಾಜ್ಯವಾಗಿ ಉಳಿಯುತ್ತದೆಯೆ? ಅದರ ಸ್ವಾಯತ್ತತೆ, ಪ್ರಾದೇಶಿಕತೆ, ಭಾಷೆಗಳು, ಸಂಪತ್ತು ಉಳಿಯುತ್ತವೆಯೆ? ಈ ದಿಗಿಲು ನನಗೆ. ಕರ್ನಾಟಕವು ಒಂದು ಸ್ವಾಯತ್ತ ರಾಜ್ಯವಾಗಿ ಉಳಿಯಬೇಕಾದರೆ, ಕರ್ನಾಟಕದ ಬುಡ ಗಟ್ಟಿ ಮಾಡಬೇಕಿದೆ.

ತಳಪಾಯ ಕಟ್ಟುವ ಕಾಯಕದಲ್ಲಿ ಮುಚ್ಚಲ್ಪಟ್ಟ ಸರ್ಕಾರಿ ಶಾಲೆಗಳನ್ನು ಮತ್ತೆ ತೆರೆಯುವುದು, ಉಚಿತ ಪ್ರಾಥಮಿಕ ಶಿಕ್ಷಣವನ್ನು ತಾಯಿನುಡಿಯಲ್ಲಿ ನೀಡುವುದು, ಸಮೀಪ ಶಾಲೆ ನೀತಿ ಜಾರಿಗೊಳಿಸುವುದು ಇತ್ಯಾದಿ. ಹೀಗೆಯೇ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಕೂಡ ಉನ್ನತೀಕರಿಸಬೇಕು.

ಅರಣ್ಯ ಸಂಪತ್ತು, ಜಲ ಸಂಪತ್ತು, ಗಣಿ ಸಂಪತ್ತು, ಭೂಸತ್ವ ಸಂಪತ್ತು ಕಾಪಾಡಿಕೊಳ್ಳಬೇಕು. ಇದನ್ನು ಜನಮಾನಸದಲ್ಲಿ ಜಾಗೃತಗೊಳಿಸಬೇಕು. ಎಲ್ಲಾ ಕೈಗಳಿಗೆ ಕೆಲಸ, ವಿದ್ಯೆ, ಆರೋಗ್ಯ ಇವು ಗುರಿಯಾಗಬೇಕು. ಕೃಷಿ ಕೇಂದ್ರಿತ ಆರ್ಥಿಕತೆ ರೂಪಿಸಬೇಕು. ಸ್ವಾವಲಂಬನೆಗೆ ಮಹತ್ವ ಕೊಡಬೇಕು. ಗೃಹ, ಸಣ್ಣ ಮಧ್ಯಮ ಕೈಗಾರಿಕೆಗಳಿಗೆ ಉತ್ತೇಜನ ನೀಡಬೇಕು. ಪಂಚಾಯಿತಿ ರಾಜ್ ವ್ಯವಸ್ಥೆ ಪ್ರಬಲವಾಗಬೇಕು.

ಇಂತಹವುಗಳಿಂದ ನಮ್ಮ ನಾಡನ್ನು ಕಟ್ಟುವುದಾದರೆ 25 ವರ್ಷಗಳಾದ ಮೇಲೂ ಕರ್ನಾಟಕ ಉಳಿಯಬಹುದು. ಇಂತಹ ಧನ್ಯತೆಯ ಕೆಲಸಕ್ಕೆ ನಮ್ಮ ರಾಜ್ಯ ಸರ್ಕಾರವು ಇಚ್ಛಾಶಕ್ತಿ ಪ್ರದರ್ಶಿಸಲಿ ಎಂದು ಆಶಿಸುವೆ.



ದೇವನೂರ ಮಹಾದೇವ, ಸಾಹಿತಿ

ಜೀವಂತಿಕೆ ಉಳಿಸಿಕೊಳ್ಳಲಿ

ಕರ್ನಾಟಕ ವಿಶಿಷ್ಟ ಕಲೆ ಮತ್ತು ಸಂಸ್ಕೃತಿಯ ನೆಲೆಯಾಗಿದೆ. ಈ ನಾಡು ಅತ್ಯಂತ ಸುಂದರವಾಗಿದ್ದು, ಇದಕ್ಕೆ ಇಡಲಾದ 'ಕರ್ನಾಟಕ' ಹೆಸರು ಸಹ ಸೂಕ್ತವಾಗಿದೆ. ಯಾವುದೇ ಕಾರಣಕ್ಕೂ ಈ ಹೆಸರನ್ನು ಮುಂದಿನ ದಿನಗಳಲ್ಲಿ ಬದಲಾಯಿಸಬಾರದು.

ನಮ್ಮ ಸಾಹಿತ್ಯ, ನೃತ್ಯದಲ್ಲಿ ಹೊಸತನವನ್ನು ಕಾಣಬಹುದು. ಕಾಲಕ್ಕೆ ತಕ್ಕಂತೆ ಭಾಷೆ, ನಾಡು ಬದಲಾಗುತ್ತ ಹೋಗುತ್ತದೆ. ಬದಲಾವಣೆ ಪ್ರಕೃತಿಯ ಸಹಜ ನಿಯಮ. ಸಾಹಿತ್ಯ ನಿಂತ ನೀರಾಗಬಾರದು. ಹೊಸ ಹೊಸ ಸಾಹಿತ್ಯ ಬರುತ್ತಾ ಇದ್ದರೆ ಅಲ್ಲಿ ಜೀವನ ಕಂಡುಕೊಳ್ಳಲು ಸಾಧ್ಯ.

ಬೇರೆ ಭಾಷೆಗಳನ್ನು ಗಮನಿಸಿದರೆ ನಮ್ಮ ಭಾಷೆ ಹಾಗೂ ನಾಡು ಜೀವಂತಿಕೆ ಹೊಂದಿದೆ. ಹೊಸ ತಲೆಮಾರಿನವರು ಉತ್ತಮವಾಗಿ ಸಾಹಿತ್ಯ ಸೃಷ್ಟಿಸುತ್ತಿದ್ದು, ಮುಂದಿನ ದಿನಗಳಲ್ಲಿ ಸಾಹಿತ್ಯಿಕವಾಗಿ ರಾಜ್ಯ ಇನ್ನಷ್ಟು ಬೆಳವಣಿಗೆ ಹೊಂದುವ ಬಗ್ಗೆ ಆಶಾವಾದ ಹೊಂದಿದ್ದೇನೆ.



ಚಂದ್ರಶೇಖರ ಕಂಬಾರ, ಸಾಹಿತಿ

ಹಸಿರಿನ ಸಿರಿ ಮರಳಲಿ

ನನಗೆ ಯಾವತ್ತೂ ನಾಡಿನ ಹಸಿರು ಪ್ರದೇಶಗಳನ್ನು ಉಳಿಸಿಕೊಳ್ಳುವುದು ಹೇಗೆ ಎನ್ನುವ ಪ್ರಶ್ನೆ ಕಾಡುತ್ತಿರುತ್ತದೆ. ಹಿಂದೆ ಇದ್ದಷ್ಟೇ ಪ್ರಮಾಣದಲ್ಲಿ 'ಗ್ರೀನ್ ಬೆಲ್ಟ್ ಏರಿಯಾಗಳು' ಇರುವಂತೆ ಮಾಡಲು ಸಾಧ್ಯವೇ ಎಂದು ನೀತಿ ನಿರೂಪಕರು ಆಲೋಚಿಸಬೇಕು. ಮುಂದಿನ 25 ವರ್ಷಗಳಲ್ಲಿ ಅಂತಹ ರಾಜ್ಯವನ್ನು ನೋಡಲು ನಾನು ಇಷ್ಟಪಡುತ್ತೇನೆ.

ರಾಜ್ಯದ ಪ್ರಮುಖ ನಗರಗಳ ಅದರಲ್ಲೂ ಬೆಂಗಳೂರಿನ ಅಭಿವೃದ್ಧಿಗೆ ಒಂದು ಮಿತಿ ಹಾಕಬೇಕು. ಉಪನಗರಗಳನ್ನು ನಿರ್ಮಿಸಬೇಕು. ಎಲ್ಲ ಕಡೆಯೂ ನಗರ ಸಾರಿಗೆ ವ್ಯವಸ್ಥೆ ಸುಧಾರಿಸುವ ಅನೇಕ ಮಾರ್ಗೋಪಾಯಗಳಿವೆ. ದೂರದೃಷ್ಟಿಯಿಂದ ಅವನ್ನು ಅನುಷ್ಠಾನಕ್ಕೆ ತಂದರೆ, ವ್ಯಕ್ತಿಗೊಂದು ವಾಹನ, ಮನೆಗೆರಡು ವಾಹನಗಳು ಇರಬೇಕು ಎನ್ನುವ ಮನಃಸ್ಥಿತಿ ಬದಲಾಗುತ್ತದೆ. ಕಸದ ವಿಲೇವಾರಿ–ನಿರ್ವಹಣೆ ಎಲ್ಲೆಡೆಯೂ ಕಾಡುತ್ತಿರುವ ಇನ್ನೊಂದು ಮುಖ್ಯವಾದ ಸಮಸ್ಯೆ. ಸರ್ಕಾರದಷ್ಟೇ ಅಲ್ಲ, ಇದರಲ್ಲಿ ನಾಗರಿಕರ ಪಾತ್ರವೂ ಇದೆ. ಎಲ್ಲೆಂದರಲ್ಲಿ ಕಸವನ್ನು ಎಸೆಯದೇ ಇರುವ ಪ್ರಜ್ಞೆ ಮೂಡಬೇಕು. ಕಸವೇ ಇಲ್ಲದಂತೆ ಹಸನಾದಲ್ಲಿ ನಮ್ಮ ನಾಡು ಇನ್ನು 25 ವರ್ಷಗಳಲ್ಲಿ ಹೆಚ್ಚು ಸ್ವಚ್ಛವಾಗಿ ಉಳಿಯುವುದರಲ್ಲಿ ಅನುಮಾನವಿಲ್ಲ.



ಅರುಂಧತಿ ನಾಗ್, ರಂಗಕರ್ಮಿ, ಚಲನಚಿತ್ರ ನಟಿ

ವಿಚಾರಶೀಲ, ಕ್ರಿಯಾಶೀಲ ಸಮುದಾಯವಾಗಲಿ

'ನನ್ನ ಕನಸಿನ ಕರ್ನಾಟಕ' ಹೇಗಿರಬೇಕು' ಇಂತಹದ್ದೊಂದು ಪ್ರಶ್ನೆ ನನ್ನ ಮುಂದಿರಿಸಿಕೊಂಡಾಗ ನನ್ನೊಳಗೆ ಮೂಡುವ ಒಂದು ಸಾಲಿನ ಉತ್ತರವೆಂದರೆ ಅದು ಹಲ್ಮಿಡಿ ಶಾಸನದ ಕಾಲದಿಂದ ಮೊದಲುಗೊಂಡು ಆದಿಕವಿ ಪಂಪನ ಕಾವ್ಯದಲ್ಲಿ ಸ್ಫುಟಗೊಂಡು ಬಸವಾದಿ ಶರಣರಿಂದ ಚಿಂತನೆಗಳಲ್ಲಿ ಹದಗೊಂಡು ಆಧುನಿಕ ಕಾಲಘಟ್ಟದಲ್ಲಿ ಬೇಂದ್ರೆಯವರಲ್ಲಿ ನೆಲದ ಸೊಗಡಾಗಿ ಕುವೆಂಪು ಅವರಲ್ಲಿ ವೈಚಾರಿಕ ಪ್ರಜ್ಞೆಯಾಗಿ ಹೊರಹೊಮ್ಮಿದ ಕನ್ನಡ ಪ್ರಜ್ಞೆಯ ಸಾತತ್ಯವೇನಿದೆ ಅದು ಮುಂದಿನ ದಿನಗಳಲ್ಲಿ ಮತ್ತಷ್ಟು ಮುಪ್ಪುರಿಗೊಂಡು ವಿಶ್ವಪ್ರಜ್ಞೆಯೇ ತಾನಾಗಬೇಕು ಎನ್ನುವುದು.

ಒಂದು ನಾಡಿನ ಪ್ರಜ್ಞೆಯ ಚಲನೆ ವಿಶ್ವಪ್ರಜ್ಞೆಯಾಗುವುದರೆಡೆಗೆ ಸಾಗುವುದೇನಿದೆ ಅದುವೇ ನಾಗರಿಕತೆಯ ನೈಜ ಆಶಯದ ಸಾಕಾರ ಎನ್ನುವುದು ನನ್ನ ಭಾವನೆ.

ನನ್ನ ಕನಸಿನ ಕರ್ನಾಟಕದಲ್ಲಿ ಮೊದಲಿಗೆ ನಾವೆಲ್ಲರೂ ಈ ನಾಡಿನ ಸಾಮುದಾಯಿಕ ಪ್ರಜ್ಞೆ, ಚಿಂತನೆಗಳನ್ನು ರೂಪಿಸಿದ, ಶತಶತಮಾನಗಳಿಂದ ತಮ್ಮ ಉದಾತ್ತ ಚಿಂತನೆ, ತತ್ವಾದರ್ಶಗಳಿಂದ ಈ ನಾಡಿನ ಸಾಕ್ಷಿಪ್ರಜ್ಞೆಯಾಗಿ ನೆಲೆ ನಿಂತ ನಮ್ಮ ಪೂರ್ವಸೂರಿಗಳೇನಿದ್ದಾರೆ ಅವರ ಅರ್ಹ ವಾರಸುದಾರರಾಗಬೇಕು. ಈ ನಾಡಿನಲ್ಲಿ ಮೂಡಿದ ಕ್ರಿಯಾಶೀಲತೆ, ಸೃಜನಶೀಲತೆ, ಜಾನಪದ, ವಾಸ್ತುಶಿಲ್ಪ, ವಿಚಾರವಂತಿಕೆಯ ತೇರನ್ನು ಸಮರ್ಥವಾಗಿ ಎಳೆಯುವಂತಹ ವಿಚಾರಶೀಲ, ಕ್ರಿಯಾಶೀಲ, ಉದ್ಯಮಶೀಲ ಸಮುದಾಯವಾಗಬೇಕು.

ಯಾವುದೇ ಕನಸಿನ ಸಾಕಾರಕ್ಕೆ, ಈಡೇರಿಕೆಗೆ ಮೊದಲು ಅದನ್ನು ನಮ್ಮ ಕೈಗೆ ಎಟುಕಿಸಿಕೊಳ್ಳುವ, ನಮ್ಮ ಪರಿಧಿಗೆ ನಿಲುಕಿಸಿಕೊಳ್ಳುವ ಅರ್ಹತೆಯನ್ನು ನಾವು ದಕ್ಕಿಸಿಕೊಳ್ಳಬೇಕು. ಈ ಹಿನ್ನೆಲೆಯಲ್ಲಿ ಕನ್ನಡಿಗರಾದ ನಾವೆಲ್ಲರೂ ನಮ್ಮ ಘನ ಪರಂಪರೆಗೆ ಅರ್ಹ ವಾರಸುದಾರರಾಗುವುದು ನನ್ನ ಕನಸಿನ ಕರ್ನಾಟಕವನ್ನು ಸಾಕಾರಗೊಳಿಸಿಕೊಳ್ಳುವ ಮೊದಲ ಹೆಜ್ಜೆ.



ಸಿದ್ದರಾಮಯ್ಯ, ಮುಖ್ಯಮಂತ್ರಿ

ನಮ್ಮಲ್ಲಿ ಕೌಶಲವಿದೆ, ಕೈಗಾರಿಕಾ ಕ್ಷೇತ್ರ ಸಮೃದ್ಧವಾಗಲಿ

ಕರ್ನಾಟಕದಲ್ಲಿ ಈವರೆಗೆ ಕೈಗಾರಿಕಾ ಕ್ಷೇತ್ರದಲ್ಲಿ ನಿರೀಕ್ಷಿತ ಬೆಳವಣಿಗೆ ಆಗಿಲ್ಲ. ನಮ್ಮಲ್ಲಿ ಕೌಶಲವಿದೆ, ನೈಸರ್ಗಿಕ ಸಂಪತ್ತು ಇದೆ, ತಾಂತ್ರಿಕ ಸಾಮರ್ಥ್ಯವಿದೆ, ಮಾರುಕಟ್ಟೆ ವಿಸ್ತಾರವಾಗಿದೆ. ನೀರಿನ ಬರವಿಲ್ಲದಷ್ಟು ನದಿಗಳಿವೆ. ಆದರೂ ಕೈಗಾರಿಕಾ ಕ್ಷೇತ್ರ ಬೆಳೆದಿಲ್ಲ. ರಾಜಕೀಯ ಇಚ್ಛಾಶಕ್ತಿ ಕೊರತೆಯೇ ಇದಕ್ಕೆ ಕಾರಣ. ನಮ್ಮ ಪಕ್ಷಗಳು ಅಧಿಕಾರಕ್ಕೆ ಹಂಬಲಿಸಿದಷ್ಟು, ಅಭಿವೃದ್ಧಿಗೆ ತುಡಿಯುತ್ತಿಲ್ಲ. ಈ ಮನಃಸ್ಥಿತಿ ಬದಲಾಗಬೇಕು.

ಸದ್ಯ ಎದುರಿಸುತ್ತಿರುವ ಬಡತನ, ನಿರುದ್ಯೋಗ ಸಮಸ್ಯೆಗಳು ನೀಗಬೇಕೆಂದರೆ ಕೃಷಿ ಹಾಗೂ ಕೈಗಾರಿಕಾ ಕ್ಷೇತ್ರಕ್ಕೆ ಉತ್ತೇಜನ ಸಿಗಬೇಕು. ಗುಜರಾತ್ ಮೊದಲ ಸ್ಥಾನ, ಮಹಾರಾಷ್ಟ್ರ ಎರಡನೇ ಸ್ಥಾನದಲ್ಲಿದೆ. ನಾವು ಐದೋ, ಆರನೇ ಸ್ಥಾನದಲ್ಲಿ ಇದ್ದೇವೆ. ಈಗಿನಿಂದಲೇ ಸ್ಪಷ್ಟ ದೃಷ್ಟಿಕೋನ, ನಿಖರ ಕಾರ್ಯಯೋಜನೆ ರೂಪಿಸಿದರೆ ಮುಂದಿನ 25 ವರ್ಷಗಳಲ್ಲಿ ಸಮೃದ್ಧಿ ಕಾಣಬಹುದು.



ವಿದ್ಯಾ ಮುರಕುಂಬಿ, ಸಂಸ್ಥಾಪಕ ಅಧ್ಯಕ್ಷೆ, ರೇಣುಕಾ ಶುಗರ್ಸ್, ಮುನವಳ್ಳಿ/ ಚೇರ್‌ಪರ್ಸನ್, ರವೀಂದ್ರ ಎನರ್ಜಿ ಇಂಡಸ್ಟ್ರೀಸ್, ಬೆಳಗಾವಿ

'ಕೇವಲ ಹೆಸರು ಬದಲಾವಣೆಯಲ್ಲ'

• ಸುಕೃತ ಎಸ್.

ಮೈಸೂರು ರಾಜ್ಯದ ಹೆಸರನ್ನು ಕರ್ನಾಟಕ ಎಂದು ಬದಲಿಸುವ ನಿರ್ಣಯಕ್ಕೆ ರಾಜ್ಯ ವಿಧಾನಸಭೆಯು 1972ರ ಜುಲೈ 27ರಂದು ಅನುಮೋದನೆ ನೀಡಿತ್ತು. ಅಂದಿನ ನಡೆದ ಕಲಾಪದ ಬಗೆ ಇದು.

ಅಧ್ಯಕ್ಷರು: ನಿರ್ಣಯದ ವಿರುದ್ಧ ಯಾರೂ ಇಲ್ಲದಾದ್ದರಿಂದ ಈ ನಿರ್ಣಯವನ್ನು (ಸರ್ವಾನುಮತದಿಂದ) ಅಂಗೀಕರಿಸಲಾಯಿತು. The Resolution was adopted.

ವಾಟಾಳ್ ನಾಗರಾಜ್: ಈ ಶುಭ ಸಂತೋಷದ ಸಮಯದಲ್ಲಿ ಸಂತೋಷ ಸೂಚಕವಾಗಿ ನಾನು ಈ ಮಲ್ಲಿಗೆ ಹೂಗಳನ್ನು ಎಲ್ಲರ ಮೇಲೆಯೂ ಚೆಲ್ಲುತ್ತೇನೆ. (ವಾಟಾಳ್ ನಾಗರಾಜ್ ಮತ್ತು ಎಸ್. ಬಂಗಾರಪ್ಪ ಅವರು ಮಲ್ಲಿಗೆ ಹೂವುಗಳನ್ನು ಚೆಲ್ಲಿದರು)

ಡಿ. ದೇವರಾಜ ಅರಸು: ನಾನು ಈಗ ಕರ್ನಾಟಕಕ್ಕೆ ಎಂದು ಹೇಳುತ್ತೇನೆ. ತಾವೆಲ್ಲರೂ ಒಕ್ಕಂಠದಿಂದ ಜಯವಾಗಲಿ ಎಂದು ಹೇಳಬೇಕು.

ಡಿ. ದೇವರಾಜ ಅರಸು: ಕರ್ನಾಟಕಕ್ಕೆ.

ಎಲ್ಲ ಸದಸ್ಯರು– ಜಯವಾಗಲಿ.

(ಎಲ್ಲ ಸದಸ್ಯರು ಕರ್ನಾಟಕಕ್ಕೆ ಜಯವಾಗಲಿ ಎಂದು ಘೋಷಣೆಯನ್ನು ಮತ್ತು ಕರತಾಡನವನ್ನು ಮಾಡಿದರು)

ಮಲ್ಲಿಗೆಯ ಹಾಸಿನ ಮೇಲೆ ಹೀಗೆ 'ಕರ್ನಾಟಕ'ವು ನಡೆದು ಬಂದಿತು. 1972ರ ವಿಧಾನಸಭೆ ಅಧಿವೇಶನದಲ್ಲಿ ಅಂದಿನ ಮುಖ್ಯಮಂತ್ರಿ ದೇವರಾಜ ಅರಸು ಅವರು ರಾಜ್ಯಕ್ಕೆ ಮರುನಾಮಕರಣದ ನಿರ್ಣಯ ಮಂಡಿಸಿದ್ದರು. ನಂತರ, 1973ರ ನವೆಂಬರ್ 1ರಂದು ಅಧಿಕೃತವಾಗಿ ಮೈಸೂರು ರಾಜ್ಯವು 'ಕರ್ನಾಟಕ'ವಾಗಿತು. ಈ ಮೂಲಕ ಬಹುಕಾಲದ ಜನರ ಬಯಕೆಯನ್ನು ಅರಸು ಅವರು ಸಾಕಾರಗೊಳಿಸಿದ್ದರು.

'ಹೊಸದನ್ನು ನೋಡಿ, ನಲಿದು ಸಂತೋಷ ಪಡುವ ಕಾಲವಿದು' ಎಂದು ನಿರ್ಣಯ ಮಂಡಿಸುವ ವೇಳೆ ಅರಸು ಅವರು ಹೇಳಿದ್ದರು. ಅಂತೆಯೇ, 1973ರ ನವೆಂಬರ್ 1ರ ಬೆಳಗು ಜನರಲ್ಲಿ ಹೊಸ ಉತ್ಸಾಹ, ಹುಮ್ಮಸ್ಸು ತಂದುಕೊಟ್ಟಿತ್ತು. ಬಹುವರ್ಷಗಳ ಕಾಲ ನಡೆದ ಚರ್ಚೆ, ಸಂಶೋಧನೆ, ಒತ್ತಾಯ, ಆಗ್ರಹ, ಹೋರಾಟ ಎಲ್ಲವಕ್ಕೂ ಅಂದು ಜಯದೊರಕಿತ್ತು.

ಕರ್ನಾಟಕದ ಬೀದಿ ಬೀದಿಗಳಲ್ಲಿ ಜನರು ಧ್ವಜ ಹಿಡಿದು, 'ಕರ್ನಾಟಕ' ಎಂದು ಕೂಗಿದ್ದರು. ಕಿರಿಯರಿಂದ ಹಿರಿಯರವರೆಗೂ ಒಡಗೂಡಿ ಬೀದಿ ಬೀದಿಗಳಲ್ಲಿ ಮೆರವಣಿಗೆ ಮಾಡಿದ್ದರು.

'ಇದು ಕೇವಲ ಹೆಸರು ಬದಲಾವಣೆಯಲ್ಲ. ಮಾನವ ಚಟುವಟಿಕೆಯ ಪ್ರತಿಯೊಂದು ಆಯಾಮದಲ್ಲೂ ಎತ್ತರದ ಶಿಖರವನ್ನು ಏರಿದ್ದ ಪ್ರದೇಶಕ್ಕೆ ಇದೊಂದು ಮರುಜೀವ' ಎಂದು ಅರಸು ಅವರು ಹೆಸರಿನ ಅಧಿಕೃತ ಘೋಷಣೆಗು ಮೊದಲು ತಮ್ಮ ಕಚೇರಿಯಲ್ಲಿ ಹೇಳಿದ್ದರು.

ರಾಜ್ಯಕ್ಕೆ ಮರುನಾಮಕರಣ ಮಾಡುವುದು ಅರಸು ಅವರ ಆದ್ಯತೆ ಆಗಿರಲಿಲ್ಲ ಎಂದು ಡಾ.ಸಿ.ಆರ್. ಗೋವಿಂದರಾಜು ಅವರು 'ಅರಸು, ಚದುರಂಗ ಮತ್ತು ಕರ್ನಾಟಕ' ಎಂಬ ತಮ್ಮ ಲೇಖನದಲ್ಲಿ ನೆನಪಿಸಿಕೊಂಡಿದ್ದರು. ಈ ಕುರಿತು ಚದುರಂಗರು ಹಾಗೂ ಅರಸು ಅವರ ನಡುವೆ ನಡೆದ ಘಟನೆವೊಂದನ್ನೂ ಅವರು ಉಲ್ಲೇಖಿಸಿದ್ದರು:

'ಇನ್ನೇನು ಅಧಿಕಾರ ಪಡೆಯಬೇಕು. ಅದರ ಹಿಂದಿನ ದಿನ ಚದುರಂಗರನ್ನು ಊಟಕ್ಕೆ ಆಹ್ವಾನಿಸಿದ್ದರಂತೆ. ಅರಸು ಅವರು ಚದುರಂಗರನ್ನು 'ನಾನು ಮುಖ್ಯಮಂತ್ರಿಯಾಗುತ್ತಿದ್ದೇನೆ. ಆ ಅಧಿಕಾರದಲ್ಲಿ ಕುಳಿತು ನಾನು ಮಾಡಬಹುದಾದ ಕೆಲಸಗಳ ಬಗ್ಗೆ ಮೊದಲಿಗೆ ಯಾವುದಕ್ಕೆ ಆದ್ಯತೆ ನೀಡಬೇಕು ಹೇಳಯ್ಯಾ' ಅಂದರಂತೆ. ಅದಕ್ಕೆ ಚದುರಂಗರು 'ನೋಡಯ್ಯ, ನೀನು ಮೊದಲು ಮಾಡಬೇಕಾದ ಕೆಲಸ ಒಂದಿದೆ. ಭಾವನಾತ್ಮಕವಾಗಿ ಸಂಬಂಧವಿರುವ 'ಕರ್ನಾಟಕ'ದ ಹೆಸರನ್ನು ನಾಡಿಗೆ ಇಟ್ಟಿದ್ದೇ ಆದರೆ ನಿನ್ನ ಉಳಿದೆಲ್ಲ ಕೆಲಸಗಳೂ ಸುಗಮ ಆಗುತ್ತದೆ' ಎಂದರಂತೆ. ಆದರೆ, ಅರಸು ಆ ಕ್ಷಣಕ್ಕೆ ಈ ವಿಚಾರಕ್ಕೆ ಸ್ಪಂದಿಸಿದ್ದು ವಿರೋಧಿ ನೆಲೆಯಲ್ಲಿ. 'ನಿಮ್ಮಂಥ ಸಾಹಿತಿಗಳಲ್ಲಿ ಈ ವಿಚಾರ ಇದ್ದಿದ್ದೇ' ಎಂದು ಮೂದಲಿಸಿದರಂತೆ'. ನಂತರ ನಡೆದದ್ದು ಇತಿಹಾಸ.

ಆಧಾರ: 'ಪ್ರತಿಭಾವಂತ ಸಂಸದೀಯ ಪಟುಗಳ ಬದುಕು ಬರಹಮಾಲಿಕೆ ಡಿ.ದೇವರಾಜ ಅರಸು', ಪ್ರಜಾವಾಣಿ ಆರ್ಕೈವ್ಸ್, 1973ರ ನ.2ರಂದು ನ್ಯೂಯಾರ್ಕ್ ಟೈಮ್ಸ್‌ನಲ್ಲಿ ಪ್ರಕಟವಾಗಿದ್ದ ವರದಿ




ರಾಜ್ಯಕ್ಕೆ 'ಕರ್ನಾಟಕ' ಎಂದು ಮರುನಾಮಕರಣ ಮಾಡಿದ ಸಂದರ್ಭ. ಮುಖ್ಯಮಂತ್ರಿ ದೇವರಾಜ ಅರಸು, ರಾಜ್ಯಪಾಲ ಮೋಹನ್ ಲಾಲ್ ಸುಖಾಡಿಯಾ, ಶಿಕ್ಷಣ ಸಚಿವ ಎ.ಆರ್. ಬದರಿನಾರಾಯಣ, ಮೇಯರ್ ಅನಂತನಾರಾಯಣ ಮುಂತಾದವರು ಇದ್ದರು ಚಿತ್ರ: ಪ್ರಜಾವಾಣಿ ಆರ್ಕೈವ್ಸ್

'ಭಾವೈಕ್ಯವಿದೆ'

'ಈ ಹೆಸರು ಅಸ್ತಂಗತವಾದರೂ ಸಹ ಇನ್ನೊಂದು ಹೆಸರು ಉದಯವಾಗುತ್ತಿದೆ. ಹೊಸ ಹೆಸರಿನಲ್ಲಿ ಭಾವೈಕ್ಯತೆ ಇದೆ. ವಿಶ್ವಾಸವಿದೆ. ಹೆಚ್ಚಿನ ಜನರಿಗೆ ಸಂತೋಷ, ಆನಂದ ಉಂಟಾಗುತ್ತಿದೆ. ಬದಲಾವಣೆಯಲ್ಲಿ ಹಳೆಯದು ಹೋಗಿ, ಹೊಸದು ಬರುವಾಗ ತೊಂದರೆ ಇಲ್ಲ. ಆನಂದ ಬರುತ್ತದೆ. ಆದ್ದರಿಂದ ಈ ಬಗ್ಗೆ ಹೆಚ್ಚು ಚಿಂತನೆ ಮಾಡಬೇಕಿಲ್ಲ' ಎಂದು ದೇವರಾಜ ಅರಸು ಅವರು ನಿರ್ಣಯ ಮಂಡಿಸಿದ್ದಾಗ ಹೇಳಿದ್ದರು. ಇದೇ ರೀತಿಯ ಅಭಿಪ್ರಾಯವನ್ನು ಅವರು 1973ರ ನ.1ರಂದೂ ಹೇಳಿದರು.

'ಕರ್ನಾಟಕ ಎಂಬ ಹೆಸರಿನಲ್ಲಿ ಮಂತ್ರಶಕ್ತಿ ಇದೆ. ಸಿದ್ಧಶಕ್ತಿ ಇದೆ. ಅದು ಇರುವುದರಿಂದಲೇ ರಾಜ್ಯದ ಹೆಸರನ್ನು ಬದಲಾಯಿಸಲಾಯಿತು. ಆದ್ದರಿಂದ ಭಾವೈಕ್ಯ ಆಗುವುದೆಂದು ನಂಬಿದ್ದೇನೆ. ಹೆಸರಿನ ಬದಲಾವಣೆಯ ಜೊತೆಗೆ ಜನತೆಯಲ್ಲಿ ಭಾವೈಕ್ಯ ಆಗಬೇಕು. ಅದು ಆಗದಿದ್ದರೆ ನಾವು ಬದುಕುವುದಿಲ್ಲ, ಅದು ಆಗಲೇಬೇಕು. ಎಲ್ಲರೂ ಒಂದು ಎಂಬ ಏಕ ಭಾವದಲ್ಲಿ ಹೋಗಬೇಕೆಂಬುದೇ ನನ್ನ ಆಸೆ' ಎಂದು ಹೇಳಿದ್ದರು.




ಪ್ರಜಾವಾಣಿ
ಇಂದಿನಿಂದ ನಮ್ಮ ರಾಜ್ಯ ಕರ್ನಾಟಕ
ಬಂದ ದಾರಿ ಸುಗಮ ಇರಲಿಲ್ಲ: ಆ ದಿನ ಕೊನೆಗೂ ಬಂತು
ರಾಜ್ಯದ ಕಲ್ಯಾಣಕ್ಕಾ ಭಾರಿ ಬುನಾದಿ
ನಗರ ಕಾರ್ಪೊರೇಷನ್
'ದೊಡ್ಡದಾಯಿತು-ಎತ್ತರದಲ್ಲಿ'

ಮೈಸೂರು ರಾಜ್ಯ ಕರ್ನಾಟಕವಾದ ದಿನ, ಆ ಸುದ್ದಿಯನ್ನು ಹೊತ್ತುತಂದ ಪ್ರಜಾವಾಣಿಯ ಮುಖಪುಟ

ಮೈಸೂರು ಪ್ರಾಂತ್ಯಕ್ಕೆ ಪ್ರಾಚೀನ ಕಾಲದಿಂದಲೂ ಕರ್ನಾಟಕವು ಹೆಚ್ಚು ಪ್ರಖ್ಯಾತಿಯನ್ನು ತಂದುಕೊಟ್ಟಿದೆ.

1973 ನ.1ರಂದು ಆಗಿನ ಪ್ರಧಾನಿ ಇಂದಿರಾ ಗಾಂಧಿ ಕಳುಹಿಸಿದ್ದ ಸಂದೇಶ

ನಾಮಕರಣ ಮಾಡಿದ್ದು ಮೈಸೂರಿನವರು!

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಅಂದು ಶಾಸನಸಭೆಯಲ್ಲಿ ಮುಖ್ಯಮಂತ್ರಿ ದೇವರಾಜ ಅರಸು ಮೈಸೂರು ರಾಜ್ಯಕ್ಕೆ 'ಕರ್ನಾಟಕ' ಎಂದು ನಾಮಕರಣ ಮಾಡುವ ಪ್ರಸ್ತಾವ ಮಂಡಿಸಿದರು. ಪ್ರಸ್ತಾವಕ್ಕೆ ಸಭೆ ಒಪ್ಪಿಗೆ ನೀಡಿದಾಗ ಗೊತ್ತುವಳಿ ಸ್ವೀಕಾರವಾಗಿದೆ ಎಂದು ಘೋಷಿಸಿದ್ದು ಸ್ಪೀಕರ್ ಸ್ಥಾನದಲ್ಲಿ ಕುಳಿತಿದ್ದ ಕೆ.ಎಸ್. ನಾಗರತ್ನಮ್ಮ. ವಿಶೇಷವೆಂದರೆ ಅರಸು ಹುಣಸೂರು ಕ್ಷೇತ್ರದವರು. ನಾಗರತ್ನಮ್ಮ ಗುಂಡ್ಲುಪೇಟೆಯವರು. ಇಬ್ಬರೂ ಮೈಸೂರು ಜಿಲ್ಲೆಯನ್ನು ಪ್ರತಿನಿಧಿಸುತ್ತಿದ್ದರು. 'ಕರ್ನಾಟಕ' ಎಂದು ನಾಮಕರಣ ಮಾಡುವಲ್ಲಿ ಮೈಸೂರಿನವರೇ ಪ್ರಮುಖ ಪಾತ್ರವಹಿಸಿದ್ದರು.

ಹೀಗೆಂದು ಶಿವಮೊಗ್ಗದ ಹಿರಿಯ ಸಮಾಜವಾದಿ ನಾಯಕ ಕೋಣಂದೂರು ಲಿಂಗಪ್ಪ 'ಪ್ರಜಾವಾಣಿ' ಎದುರು ಆ ದಿನದ ನೆನಪನ್ನು ಮೆಲುಕು ಹಾಕಿದರು.

ತೀರ್ಥಹಳ್ಳಿ ಕ್ಷೇತ್ರದಿಂದ 1972ರಲ್ಲಿ ಮೊದಲ ಬಾರಿಗೆ ಪ್ರಜಾ ಸೋಶಿಯಲಿಸ್ಟ್ ಪಕ್ಷದಿಂದ ಶಾಸಕರಾಗಿ ಆಯ್ಕೆಯಾಗಿದ್ದ ಇವರು, 'ಕರ್ನಾಟಕ' ಎಂದು ಶಾಸನಸಭೆಯಲ್ಲಿ ಪುನರ್ ನಾಮಕರಣಗೊಂಡ ಕ್ಷಣಕ್ಕೆ ಸಾಕ್ಷಿಯಾಗಿದ್ದರು.

'ಅರಸು ಅವರು ಆ ನಿರ್ಣಯ ಮಂಡಿಸುತ್ತಿದ್ದಂತೆಯೇ ಆಗ ವಿರೋಧ ಪಕ್ಷದ ನಾಯಕರೂ ಆಗಿದ್ದ ಎಚ್.ಡಿ. ದೇವೇಗೌಡ ಸೇರಿದಂತೆ ಸದನದ ಎಲ್ಲ ಸದಸ್ಯರೂ ಎದ್ದು ನಿಂತು ಚಪ್ಪಾಳೆ ತಟ್ಟಿ ಒಕ್ಕೊರಲಿನಿಂದ ಸ್ವಾಗತಿಸಿದ್ದೆವು. ಅಲ್ಲಿದ್ದ ಯಾರೊಬ್ಬರೂ ಅದಕ್ಕೆ ವಿರೋಧ ವ್ಯಕ್ತಪಡಿಸಲಿಲ್ಲ. ಕರ್ನಾಟಕ ಎಂದು ನಾಮಕರಣ ಮಾಡಿದ ನಂತರ ಶಾಸನಸಭೆಯಲ್ಲಿ ಸುದೀರ್ಘ ಅವಧಿಯ ಚರ್ಚೆಗೆ ಅವಕಾಶ ಕೂಡ ನೀಡಲಾಗಿತ್ತು' ಎಂದು 93 ವರ್ಷದ ಲಿಂಗಪ್ಪ ಸ್ಮರಿಸಿದರು.



ಮೈಸೂರು ರಾಜ್ಯಕ್ಕೆ 'ಕರ್ನಾಟಕ' ಎಂದು ನಾಮಕರಣ ಮಾಡಿದ್ದ ವೇಳೆ 1973ರಂದು ಸರ್ಕಾರದಿಂದ ಶಾಸಕರಿಗೆ ನೀಡಿದ್ದ ಸ್ಮರಣಿಕೆಯನ್ನು ಮಂಗಳವಾರ ಶಿವಮೊಗ್ಗದ ತಮ್ಮ ನಿವಾಸದಲ್ಲಿ ಮಾಜಿ ಶಾಸಕ ಕೋಣಂದೂರು ಲಿಂಗಪ್ಪ ಪ್ರದರ್ಶಿಸಿದರು ಚಿತ್ರ: ಶಿವಮೊಗ್ಗ ನಾಗರಾಜ

ಮೈಸೂರು ರಾಜ್ಯದ ಮರುನಾಮಕರಣದ ಕತೆ

• ಎಚ್.ಕೆ.ಪಾಟೀಲ

'ಕಾವೇರಿಯಿಂದಮಾಗೋದಾ
ವರಿವರಮಿರ್ದ ನಾಡದಾ ಕನ್ನಡದೊಳ್ ....'

ರೋಮಾಂಚನ ತರಿಸುವ ನೃಪತುಂಗ ಕವಿಯ ಈ ಸಾಲುಗಳು ಕನ್ನಡ ನಾಡಿನ ಉದ್ದ ಅಗಲ ವ್ಯಾಪ್ತಿಯನ್ನು ಸಾರುತ್ತದೆ. ಚಲುವ ಕನ್ನಡ ನಾಡಿನ ಕನಸನ್ನು ಕಂಡ ನಮ್ಮ ಗದುಗಿನ ಹುಯಿಲಗೋಳ್ ನಾರಾಯಣರಾಯರು

'ಪಾವನೆಯರ ... ಕೃಷ್ಣೆ ಭೀಮೆಯರ ತಾಯ್ನಾಡು,
ಕಾವೇರಿ ಗೋದೆಯರ ಮೈದೊಳೆವ ನಲುನಾಡು:
ಅವಗಂ ಬಗೆಯ ನಗಿಸುವ ಕಬ್ಬಿಗರ ಹಾಡು,
ಕಾವ ಗದುಗಿನ ವೀರನಾರಾಯಣನ ಬೀಡು'

ಎಂದು ಹಾಡಿ ರವಿ ಕಾಣದನ್ನು ಕವಿ ಕಂಡ ಎಂಬುದನ್ನು ಅಕ್ಷರಶಃ ಅನ್ವರ್ಥಕಗೊಳಿಸಿದ್ದಾರೆ.

ಮೈಸೂರು ರಾಜ್ಯವು 1956ರಲ್ಲಿ ಭಾಷಾವಾರು ಪ್ರಾಂತ್ಯಗಳ ಜೊತೆಗೆ ಕನ್ನಡ ಭಾಷಿಕರಿಗಾಗಿ ಒಂದು ಪ್ರತ್ಯೇಕ ರಾಜ್ಯವಾಗಿ ಉದಯಿಸಿತು. ಕರ್ನಾಟಕ ಏಕೀಕರಣ ನಂತರ ಮೈಸೂರು ರಾಜ್ಯವನ್ನು ಕರ್ನಾಟಕ ಎಂಬುದಾಗಿ ನಾಮಕರಣ ಮಾಡಬೇಕೆಂಬ ಕರ್ನಾಟಕ ರಾಜ್ಯದ ಎಲ್ಲಾ ನಾಗರಿಕರ ಒಕ್ಕೊರಲಿನ ಆಶೋತ್ತರಗಳನ್ನು ಪ್ರತಿಬಿಂಬಿಸುವ ವಿಶಿಷ್ಟವಾದ ಆಸೆ 1973ರಲ್ಲಿ ಕೈಗೂಡಿತ್ತು.

1970-71ರಲ್ಲಿ ನಡೆದಂತಹ ಮಧ್ಯಂತರ ಚುನಾವಣೆಯ ಕಾಲಘಟ್ಟದಲ್ಲಿ ಇದೊಂದು ಚುನಾವಣಾ ಜನಮತ ಸಂಗ್ರಹದ ವಿಷಯವಾಗಿ ಮಾರ್ಪಟ್ಟಿತ್ತು. ಮೈಸೂರು ರಾಜ್ಯದ ಹೆಸರು ಬದಲಾವಣೆಗಾಗಿ ವಾದ ವಾಗ್ವಾದಗಳು ಬಹಿರಂಗವಾಗಿ ಹಾಗೂ ಆಂತರಿಕವಾಗಿ ಪಕ್ಷಗಳ ಒಳಗೆ ಹೊರಗೆ ವಿಸ್ತೃತವಾದ ಚರ್ಚೆಯಾಗಿತ್ತು. ದೇವರಾಜ ಅರಸು ಅವರು ಚುನಾವಣಾ ಪ್ರಚಾರ ಭಾಷಣದಲ್ಲಿ ಆಡಿದ ಮಾತುಗಳು ದೊಡ್ಡ ವಿವಾದಕ್ಕೆ ಕಾರಣವಾಯಿತು. ಶಾಸನ ಸಭೆಯ ಪ್ರತಿನಿಧಿಗಳ ಅಭಿಪ್ರಾಯದ ಆಧಾರದ ಮೇಲೆ ಹೆಸರು ಬದಲಾವಣೆಯನ್ನು ಮಾಡೋಣ, ಬಹುಮತದ ಅಭಿಪ್ರಾಯದಂತೆ ಹೆಸರು ಬದಲಾವಣೆಯನ್ನು ಪರಿಗಣಿಸೋಣ ಎಂದು ಹೇಳಿದ್ದು ದೇಶದಲ್ಲಿ ಬಹುಕಾಲ ಚರ್ಚೆಗೆ ಕಾರಣವಾಯಿತು.

ಮೈಸೂರು ರಾಜ್ಯ ಉದಯವಾದ ಸರಿಯಾಗಿ 17 ವರ್ಷಗಳ ನಂತರ ಮೈಸೂರು ರಾಜ್ಯವನ್ನು ಕರ್ನಾಟಕವೆಂದು ನಾಮಕರಣ ಮಾಡುವ ಚಾರಿತ್ರಿಕ ನಿರ್ಣಯವನ್ನು ವಿಧಾನ ಮಂಡಲದ ಉಭಯ ಸದನಗಳಲ್ಲಿ ಮಂಡಿಸಲಾಯಿತು. ಅಂದು ಕನ್ನಡ ನಾಡಿನ ಮುಖ್ಯಮಂತ್ರಿಯಾಗಿದ್ದ ಡಿ. ದೇವರಾಜ ಅರಸು ಅವರು ವಿಧಾನಸಭೆಯಲ್ಲಿ ಈ ಚಾರಿತ್ರಿಕ ನಿರ್ಣಯವನ್ನು ಮಂಡಿಸಿದರೆ, ವಿಧಾನ ಪರಿಷತ್ತಿನಲ್ಲಿ ಇದೇ ನಿರ್ಣಯವನ್ನು ಅರಣ್ಯ ಇಲಾಖೆಯ ಸಚಿವರಾಗಿದ್ದ ಕೆ.ಎಚ್. ಪಾಟೀಲ ಮಂಡಿಸಿದರು.

'ಭಾರತ ಸಂವಿಧಾನದಲ್ಲಿ ನಮೂದಿಸಿದ ಈ ರಾಜ್ಯದ ಹೆಸರನ್ನು 'ಕರ್ನಾಟಕ' ವೆಂಬುದಾಗಿ ಬದಲಾಯಿಸಬೇಕೆಂದು ಈ ಸಭೆಯವರು ತಮ್ಮ ಖಚಿತ ಅಭಿಪ್ರಾಯವನ್ನು ಘೋಷಿಸಿ ಈ ಬಗ್ಗೆ ಅಗತ್ಯವಾದ ಸಂವಿಧಾನದ ತಿದ್ದುಪಡಿಗಳನ್ನು ರಾಜ್ಯ ಸರ್ಕಾರದವರು ಪಡೆದುಕೊಳ್ಳಲು ಕ್ರಮ ಕೈಗೊಳ್ಳಬೇಕೆಂದು ಈ ಸಭೆಯವರು ಶಿಫಾರಸು ಮಾಡುತ್ತಾರೆ' ಎಂದು ಅರಸು ಅವರು ನಿರ್ಣಯ ಮಂಡಿಸಿದ್ದರು. ನಂತರ ತಮ್ಮ ಭಾಷಣವನ್ನು ಪ್ರಾರಂಭಿಸಿದ ಅವರು, 'ಈ ದಿವಸ ನಮ್ಮ ದೇಶದ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯ ಪ್ರಾರಂಭವಾಗತಕ್ಕ ದಿವಸವಾಗಿದೆ. ಅದರ ಕಾರಣ ಏನು ಎನ್ನುವುದು ಈ ಸಭೆಗೆ ವಿವರಿಸಬೇಕಾದ ಅಗತ್ಯವಿಲ್ಲ' ಎಂದು ಅಭಿಪ್ರಾಯಪಟ್ಟಿದ್ದರು. ಅರಸು ಅವರ ಭಾಷಣದ ನಂತರ ನಿರ್ಣಯವನ್ನು ಅಂಗೀಕರಿಸಲಾಯಿತು. ಅರಸು ಅವರು 'ಕರ್ನಾಟಕಕ್ಕೆ' ಎಂದಾಗ ಎಲ್ಲಾ ಸದಸ್ಯರು 'ಜಯವಾಗಲಿ' ಎಂದು ಘೋಷಣೆ ಕೂಗಿದರು.

ವಿಧಾನ ಪರಿಷತ್ತಿನಲ್ಲಿ ಕೆ.ಎಚ್. ಪಾಟೀಲ ಅವರು ಐತಿಹಾಸಿಕ ಭಾಷಣ ಮಾಡಿದ್ದರು. 'ಇವತ್ತು ಭಾರತದ ನಕ್ಷೆಯಲ್ಲಿ ಕರ್ನಾಟಕ ಒಂದು ದೊಡ್ಡ ಪ್ರಾಂತವಾಗಿದೆ. ಈ ಪ್ರಾಂತದಲ್ಲಿ ಮುಂಬಯಿ ಪ್ರದೇಶದವರು ತಮ್ಮ ನಡೆನುಡಿಯನ್ನು ಕರೆದುಕೊಂಡು ಬಂದಿದ್ದಾರೆ. ಮದ್ರಾಸ್, ಹೈದರಾಬಾದ್ ಮುಂತಾದ ಪ್ರಾಂತಗಳಿಂದ ಬಂದಿರುವವರೂ ಸಹ ತಮ್ಮ ತಮ್ಮ ನಡೆನುಡಿಗಳನ್ನು ತಂದಿದ್ದಾರೆ. ಮೈಸೂರಿಗೆ ಹಿಂದಿನಿಂದಲೂ ಸಹ ಒಂದು ಹಿರಿಮೆ ಇದೆ. ಸುಗಂಧದ ಹಿರಿಮೆ, ಕನ್ನಡದ ಹಿರಿಮೆ ಇದೆ. ಮುಂಬಯಿ ಪ್ರದೇಶಗಳಿಂದ ಕಾರವಾರ ಮುಂತಾದ ಬಂದರುಗಳು ಸೇರಿವೆ... ತುಂಗಭದ್ರ ಸೌಕರ್ಯ ಹೊಂದಿದೆ. ಮಂಗಳೂರು ಬಂದರು ಬಂದಿರುವುದರಿಂದ ಔದ್ಯೋಗಿಕ ಬೆಳವಣಿಗೆ ಕಾರಣವಾಗಿದೆ. ಉತ್ತರ ಕರ್ನಾಟಕದಿಂದ ಬಂದಂಥ ಜನಗಳೂ ಕೂಡ ಹೇಳುತ್ತಾರೆ, 'ಇದು ನಮ್ಮ ಕೈಯಲ್ಲೂ ಆಗಲಿಲ್ಲ. ಮೈಸೂರಿನವರೇ ಮುಂದಾಗಿ ಬಂದು ತಾವು ಇದಕ್ಕಾಗಿ ತ್ಯಾಗ ಬೇಕಾದರೂ ಮಾಡುತ್ತೇವೆ. ಈ ಹೆಸರನ್ನು ಇಡೋಣ ಎಂದು ಮೈಸೂರಿನವರು ಉದಾರ ದೃಷ್ಟಿಯಿಂದ ಹೇಳಿದ್ದಾರೆ' ಎಂದು. ಕರ್ನಾಟಕ ಮೊದಲಿನ ಕಾಲದೊಳಗೆ ಏನು ಇತ್ತೋ ಚಾಲುಕ್ಯ, ಕದಂಬರ ಕಾಲದಲ್ಲಿ, ಹಾಗೆ ಬರಬೇಕೆಂದು ತಾವು ಆಶೀರ್ವಾದ ಮಾಡಬೇಕು' ಎಂದು ಅವರು ಹೇಳಿದ್ದರು.

ಕರ್ನಾಟಕ ನಾಮಕರಣ ಮಹೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಬೇಕೆಂಬ ಉದ್ದೇಶದಿಂದ ಅಂದು ಕರ್ನಾಟಕ ನಾಮಕರಣ ಮಹೋತ್ಸವ ಸಮಿತಿಯನ್ನು ರಚಿಸಲಾಯಿತು. ಕರ್ನಾಟಕ ನಾಮಕರಣದ ಮಹೋತ್ಸವ ಅತ್ಯಂತ ಅದ್ದೂರಿಯಾಗಿ ನೇರವೇರಿತು. ಅಂದಿನ ಪ್ರಧಾನಿ ಇಂದಿರಾ ಗಾಂಧಿಯವರು ತಮ್ಮ ಸಂದೇಶದಲ್ಲಿ ಕನ್ನಡ ನಾಡನ್ನು ಕರ್ನಾಟಕ ಎಂದು ನಾಮಕರಣ ಮಾಡಿದ ಸಂದರ್ಭವು ನಾಡಿನ ಮುಗಿಲಲಿ ಮಾರ್ದನಿಗೊಳ್ಳುವಂತೆ ಮಾಡಿದರು. ಹಂಪೆ ಮತ್ತು ಗದುಗಿನಲ್ಲಿ ನಡೆದ ಉತ್ಸವಗಳ ಸಂದರ್ಭದಲ್ಲಿ ಕರ್ನಾಟಕದ ಹಿರಿಮೆ ಗರಿಮೆಗಳನ್ನು ಬಾನೆತ್ತರಕ್ಕೆ ಕೊಂಡೊಯ್ಯುವ ಸಂಭ್ರಮ ಸಡಗರಗಳು ನಡೆದವು.

ಲೇಖಕ: ರಾಜ್ಯ ಕಾನೂನು ಮತ್ತು ಪ್ರವಾಸೋದ್ಯಮ ಸಚಿವ

ನಿರೂಪಣೆ: ಲಕ್ಷ್ಮೀಕಾಂತ ಜೋಷಿ

ಪ್ರಮುಖ ಹೆಜ್ಜೆ ಗುರುತು

- 1972ರ ಜುಲೈ 18: ರಾಜ್ಯ ಸಚಿವ ಸಂಪುಟದ ನಿರ್ಣಯ
- 1972ರ ಜುಲೈ 27: ವಿಧಾನ ಸಭೆಯ ಒಪ್ಪಿಗೆ
- 1972ರ ಜೂನ್ 31: ವಿಧಾನ ಪರಿಷತ್ತಿನ ಒಪ್ಪಿಗೆ
- 1973ರ ಜುಲೈ 30: ಲೋಕ ಸಭೆಯ ಒಪ್ಪಿಗೆ
- 1973ರ ಆಗಸ್ಟ್ 8: ರಾಜ್ಯ ಸಭೆಯ ಒಪ್ಪಿಗೆ
- 1973ರ ಅಕ್ಟೋಬರ್ 8: ರಾಷ್ಟ್ರಪತಿಯವರ ಅಂಕಿತ
- 1973ರ ನವೆಂಬರ್ 1: ನಾಮಕರಣ
- 1973ರ ನವೆಂಬರ್ 1: ನಾಮಕರಣ ಸ್ಮರಣೆಗಾಗಿ ಹಂಪೆಯಲ್ಲಿ ವಿಶೇಷ ಉತ್ಸವ
- 1973ರ ನವೆಂಬರ್ 3: ನಾಮಕರಣ ಸ್ಮರಣೆಗಾಗಿ ಗದುಗಿನ ವೀರನಾರಾಯಣನ ಗುಡಿಯಲ್ಲಿ ಹೊತ್ತಿಸಿದ ಕರ್ನಾಟಕ ಜ್ಯೋತಿಯನ್ನು ನಂದಾದೀಪವಾಗಿರಿಸುವಿಕೆ ಹಾಗೂ ದೇವರಾಜ ಅರಸು, ಜಯಚಾಮರಾಜ ಒಡೆಯರರಾದಿಯಾಗಿ ಕರ್ನಾಟಕಕ್ಕೆ ದುಡಿದವರಿಗೆ ಸಾಂಕೇತಿಕ ಸನ್ಮಾನ ಮಾಡಲಾಯಿತು

ಬುಧವಾರ, ನವೆಂಬರ್ 1, 2023 | ₹ 7.00
● www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕರ್ನಾಟಕ ರಾಜ್ಯೋತ್ಸವದ ಶುಭಾಶಯಗಳು

ಹುಲಿ ಕುಣಿತ
ಕೇರಳದ ತಿರುವನಂತಪುರದಲ್ಲಿ 'ಕೇರಳೀಯಂ' ನಿಮಿತ್ತ ಮಂಗಳವಾರ ನಡೆದ ಜಾಥಾದಲ್ಲಿ ಕಲಾವಿದರು ಹುಲಿವೇಷ ಧರಿಸಿ ಗಮನಸೆಳೆದರು



ಇದು ಧಾರ್ಮಿಕ ಕಾರ್ಯಕ್ರಮವಲ್ಲ, ಆಕ್ಷೇಪ ವ್ಯಕ್ತಪಡಿಸಬಾರದು: ಹೈಕೋರ್ಟ್

ಈದ್ಗಾ: ರಾಜ್ಯೋತ್ಸವಕ್ಕೆ ಅನುಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಚಾಮರಾಜಪೇಟೆಯ ಈದ್ಗಾ ಮೈದಾನದಲ್ಲಿ, 'ಚಾಮರಾಜ ಪೇಟೆ ನಾಗರಿಕರ ಒಕ್ಕೂಟ'ವು ನವೆಂಬರ್ 1 ರಿಂದ ಮೂರು ದಿನ ಕರ್ನಾಟಕ ರಾಜ್ಯೋತ್ಸವ ಆಚರಿಸಲು ಹೈಕೋರ್ಟ್ ಷರತ್ತುಬದ್ಧ ಅನುಮತಿ ನೀಡಿದೆ.

ಈದ್ಗಾ ಮೈದಾನದಲ್ಲಿ ರಾಜ್ಯೋತ್ಸವ ಆಚರಣೆಗೆ ಅವಕಾಶ ನಿರಾಕರಿಸಿದ್ದ ಬೆಂಗಳೂರು ನಗರ ಜಿಲ್ಲಾಧಿಕಾರಿ ಹಿಂಬರಹ ಪ್ರಶ್ನಿಸಿ, ಒಕ್ಕೂಟದ ಅಧ್ಯಕ್ಷ ಶ್ರೀರಾಮೇಗೌಡ ಸಲ್ಲಿಸಿದ್ದ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು. ಅರ್ಜಿದಾರರ ಪರ ವಕೀಲ ಶ್ರೀಧರ ಪ್ರಭು ವಿಷಯ ಪ್ರಸ್ತಾಪಿಸಿದರು.

ಬೇಸರ: 'ಇದು ಧಾರ್ಮಿಕ ಕಾರ್ಯಕ್ರಮವಲ್ಲ. ಕರ್ನಾಟಕ ರಚನೆಯಾದ ದಿನ. ಇದನ್ನು ಎಲ್ಲ ಧರ್ಮದವರೂ ಹಬ್ಬದಂತೆ ಆಚರಿಸಬೇಕು. ಇಂತಹ ಕಾರ್ಯಕ್ರಮಗಳಿಗೆ ಸರ್ಕಾರ ಆಕ್ಷೇಪ ವ್ಯಕ್ತಮಾಡಬಾರದು. ಸರ್ಕಾರವೇ ರಾಜ್ಯೋತ್ಸವ ಆಚರಿಸುವಾಗ ಇಲ್ಲಿ ಅನುಮತಿ ನೀಡುವುದಿಲ್ಲ ಎಂದರೆ ಹೇಗೆ' ಎಂದು ಸರ್ಕಾರದ ನಡೆಗೆ ನ್ಯಾಯಪೀಠ ಬೇಸರ ವ್ಯಕ್ತಪಡಿಸಿತು.

'ಧಾರ್ಮಿಕ ಭಾವನೆಗಳ ವಿರುದ್ಧ ಹಾಗೂ ಕೋಮುಸೌಹಾರ್ದಕ್ಕೆ ಧಕ್ಕೆಯಾಗುವಂತಹ ಹೇಳಿಕೆ ನೀಡಬಾರದು' ಎಂದು ಒಕ್ಕೂಟದ ಮುಖ್ಯಸ್ಥರಿಗೆ ಪೀಠವು ನಿರ್ದೇಶಿಸಿತು.

ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಅವರ ಕೋರಿಕೆ ಮನ್ನಿಸಿದ ನ್ಯಾಯಪೀಠ, 'ಒಂದು ವೇಳೆ ಕಾನೂನು ಸುವ್ಯವಸ್ಥೆಗೆ ಅಡ್ಡಿ ಅಥವಾ ಕಾನೂನಾತ್ಮಕ ಅಡಚಣೆ ಉಂಟಾದಲ್ಲಿ ಅರ್ಜಿದಾರರಿಗೆ ಪರ್ಯಾಯ ಮೈದಾನ ಒದಗಿಸಬೇಕು' ಎಂದು ಜಿಲ್ಲಾಡಳಿತಕ್ಕೆ ನಿರ್ದೇಶಿಸಿದೆ.

ಕೋರ್ಟ್‌ಗೆ ಮುಚ್ಚಳಿಕೆ

'ಕನ್ನಡ ನಾಡು, ನುಡಿಗೆ ಸಂಬಂಧಿಸಿದ ಸಾಂಸ್ಕೃತಿಕ ಕಾರ್ಯಕ್ರಮಗಳಷ್ಟೇ ಹಮ್ಮಿಕೊಳ್ಳಲಾಗುವುದು. ಧ್ವಜಾರೋಹಣದ ವೇಳೆ ರಾಜ್ಯ ಬಾವುಟವನ್ನು ಮಾತ್ರವೇ ಬಳಕೆ ಮಾಡಲಾಗುವುದು. ಬೇರಾವುದೇ ಬಾವುಟಗಳ ಬಳಕೆಗೆ ಅವಕಾಶ ನೀಡುವುದಿಲ್ಲ' ಎಂಬ ಅರ್ಜಿದಾರರ ಪರ ವಕೀಲರ ಮುಚ್ಚಳಿಕೆಯನ್ನು ನ್ಯಾಯಪೀಠ ಇದೇ ವೇಳೆ ದಾಖಲಿಸಿಕೊಂಡಿತು.

ಪ್ರಕರಣವೇನು?: 'ಚಾಮರಾಜಪೇಟೆ ಈದ್ಗಾ ಮೈದಾನದಲ್ಲಿ ನವೆಂಬರ್ 1 ರಿಂದ 3ರವರೆಗೆ ರಾಜ್ಯೋತ್ಸವ, ನಗರ ದೇವತೆ ಅಣ್ಣಮ್ಮ ದೇವಿ ಉತ್ಸವ ಮತ್ತು ಕನ್ನಡ ಸಂಸ್ಕೃತಿಯನ್ನು ಪ್ರಸ್ತುತಪಡಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರದರ್ಶನಕ್ಕೆ ಅನುಮತಿ ನೀಡಬೇಕು' ಎಂದು ಕೋರಿ ಒಕ್ಕೂಟವು ಇದೇ 17ರಂದು ಬೆಂಗಳೂರು ನಗರ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿತ್ತು.

ಮನವಿ ಪರಿಶೀಲಿಸಿದ್ದ ಜಿಲ್ಲಾಧಿಕಾರಿ, 'ಸುಪ್ರೀಂ ಕೋರ್ಟ್ ಆದೇಶವನ್ನು ಉಲ್ಲೇಖಿಸಿ ರಾಜ್ಯೋತ್ಸವ ಆಚರಣೆಗೆ ಅನುಮತಿ ನೀಡಿದಲ್ಲಿ ಅದು ಸುಪ್ರೀಂಕೋರ್ಟ್ ಆದೇಶದ ಉಲ್ಲಂಘನೆಯಾಗಲಿದೆ. ಅನುಮತಿ ನೀಡುವುದಕ್ಕೆ ಸಾಧ್ಯವಿಲ್ಲ' ಎಂದು ಹಿಂಬರಹ ನೀಡಿದ್ದರು. ಇದನ್ನು ಪ್ರಶ್ನಿಸಿ ಒಕ್ಕೂಟವು ಹೈಕೋರ್ಟ್ ಮೆಟ್ಟಿಲೇರಿತ್ತು.

ಆಸ್ಟರ್ ಆಸ್ಪತ್ರೆ ಕಾರ್ಯಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ಟರ್ ಡಿ.ಎಂ ಹೆಲ್ತ್‌ಕೇರ್ ಸಂಸ್ಥೆಯು ನಗರದ ವೈಟ್‌ಫೀಲ್ಡ್‌ನಲ್ಲಿ ನಿರ್ಮಿಸಿರುವ 506 ಹಾಸಿಗೆಗಳ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗೆ ಮಂಗಳವಾರ ಚಾಲನೆ ದೊರೆತಿದೆ.

ನಗರದಲ್ಲಿ ಕಾರ್ಯಾರಂಭಿಸಿದ ಸಂಸ್ಥೆಯ ಮೂರನೇ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಇದಾಗಿದೆ. ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ನೂತನ ಆಸ್ಪತ್ರೆ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಡಾ.ಆಜಾದ್ ಮೂಪೆನ್, 'ಗುಣಮಟ್ಟದ ವೈದ್ಯಕೀಯ ಚಿಕಿತ್ಸೆ ಒದಗಿಸುವುದು ನಮ್ಮ ಆದ್ಯತೆ. ಕ್ಯಾನ್ಸರ್‌ನ ನಿಖರ ಚಿಕಿತ್ಸೆ ಇಂಟ್ರಾ ಆಪರೇಟಿವ್ ಎಲೆಕ್ಟ್ರಾನ್ ರೇಡಿಯೇಷನ್ ಥೆರಪಿಯನ್ನು ಅಳವಡಿಸಿಕೊಳ್ಳಲಾಗಿದೆ. ಅತ್ಯಾಧುನಿಕ ತಂತ್ರಜ್ಞಾನಗಳಿದ್ದು, ಒಂದೇ ಸೂರಿನಡಿ ವಿವಿಧ ವಿಭಾಗಗಳು ಕಾರ್ಯನಿರ್ವಹಿಸಲಿವೆ' ಎಂದು ಹೇಳಿದರು.

ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ನಿತಿನ್ ಶೆಟ್ಟಿ, 'ಆಸ್ಪತ್ರೆಯಲ್ಲಿ ಪರಿಣತ ವೈದ್ಯರ ತಂಡವಿದೆ. ವಿಶ್ವದರ್ಜೆ ಗುಣಮಟ್ಟದ ಚಿಕಿತ್ಸೆಯನ್ನು ಒದಗಿಸಲಾಗುತ್ತದೆ. ಸಮಗ್ರ ಆರೋಗ್ಯ ಅನುಭವವನ್ನು ಆಸ್ಪತ್ರೆಯು ಒದಗಿಸಲಿದೆ' ಎಂದು ತಿಳಿಸಿದರು.



ಆಸ್ಪತ್ರೆಯನ್ನು ದಿನೇಶ್ ಗುಂಡೂರಾವ್ ಉದ್ಘಾಟಿಸಿದರು. ವಿಧಾನಸಭೆ ಸ್ಪೀಕರ್ ಯು. ಟಿ.ಖಾದರ್, ಸಂಸದ ಪಿ.ಸಿ.ಮೋಹನ್, ಜೆಡಿಯು ಮುಖಂಡ ಮಹಿಮ ಪಟೇಲ್, ಡಾ.ಆಜಾದ್ ಮೂಪೆನ್, ಡಾ. ನಿತಿನ್ ಶೆಟ್ಟಿ, ಸಂಸ್ಥೆಯ ವೈದ್ಯಕೀಯ ಸಲಹಾ ಮಂಡಳಿ ಅಧ್ಯಕ್ಷ ಡಾ. ಸೋಮಶೇಖರ್ ಎಸ್‌.ಪಿ. ಹಾಗೂ ವೈದ್ಯರು ಇದ್ದಾರೆ

ಮಹಾರಾಣಿ ವಿ.ವಿ ಘಟಿಕೋತ್ಸವ ನಾಳೆ

ಬೆಂಗಳೂರು: 'ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ಪ್ರಥಮ ಘಟಿಕೋತ್ಸವ ಇದೇ 2ರಂದು ಸೆಂಟ್ರಲ್ ಕಾಲೇಜಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ನಡೆಯಲಿದೆ' ಎಂದು ವಿಶ್ವವಿದ್ಯಾಲಯದ ಕುಲಸಚಿವೆ ಗೋಮತಿ ದೇವಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಇನ್ಫೊಸಿಸ್ ಫೌಂಡೇಶನ್‌ನ ಅಧ್ಯಕ್ಷೆ ಸುಧಾ ಮೂರ್ತಿ, ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ಮಾಜಿ ನಿರ್ದೇಶಕ ಪದ್ಮನಾಭನ್ ಬಲರಾಮ್ ಮತ್ತು ಮೈಸೂರು ರಾಜವಂಶಸ್ಥರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಗುತ್ತದೆ' ಎಂದು ತಿಳಿಸಿದರು.

'29 ವಿದ್ಯಾರ್ಥಿಗಳಿಗೆ ಸ್ವರ್ಣ ಪದಕ, 59 ವಿದ್ಯಾರ್ಥಿಗಳಿಗೆ ರ‍್ಯಾಂಕ್ ಪ್ರಮಾಣಪತ್ರವನ್ನು ಪ್ರದಾನ ಮಾಡಲಾಗುವುದು. ವಿಶ್ವವಿದ್ಯಾಲಯದ ಕುಲಾಧಿಪತಿಗಳಾದ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅಧ್ಯಕ್ಷತೆ ವಹಿಸಲಿದ್ದು, ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಭಾಗವಹಿಸಲಿದ್ದಾರೆ' ಎಂದು ತಿಳಿಸಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

WANTED TEACHERS B.A.B.ED B.SC.B.ED Teach Maths Science Computer English Medium classes. Contact:- 080-23350778, 9448074071, 9480608715. Manjunatha Vidyalaya Magadi Road, Tolgate, Bangalore- 560023.

SESHADRIPURAM INSTITUTIONS
27, Nagappa Street, Seshadripuram Bengaluru-560 020. Phone: 22955350
Website: www.set.edu.in E-mail : info@set.edu.in
Require
ASSISTANT PROFESSOR
for Seshadripuram Law College, Bengaluru
Eligibility: Master's Degree in Law with at least 55% marks in the aggregate and at least two years teaching experience. NET / KSET / Ph. D. desirable.
WALK-IN-INTERVIEW ON
Tuesday the 7th November 2023 @ 4.00 p. m.
Venue: **Seshadripuram Educational Trust Office,** No. 27, Nagappa Street, Seshadripuram, Bengaluru-560 020.
Eligible candidates should bring handwritten application along with resume, photos & copies of testimonials at the time of Interview.
N. R. Pandith Aradhya, President — Dr. Wooday P. Krishna, Honorary General Secretary

POORNAPRAJNA EDUCATION CENTRE, INDIRANAGAR
(Promoted & Managed by Udupi Sri Admar Mutt Education Council)
C.A Site No. 48, New Thippasandra, HAL 3rd Stage, Bangalore -75. Ph.080-25292930
English medium school under Karnataka State syllabus invites applications for the post of
PRINCIPAL
having **Master's degree in any stream with M Ed / B Ed, 5 years experience as Principal & 10 years in teaching.** Preferred age 40 years and above.
Expected joining date before next academic year
Apply to the Hon. Secretary before **10-11-2023** through post or email to **poornaprajnants@gmail.com**

Be A Part of A Transformational Team
Join the Legacy: Exciting Job Opportunities for Faculty and Administrative Staff at RBANMS First Grade College in the Heart of IT City Bangalore
Join Us & Live your Dreams
- Commerce
- Marketing
- Finance
- Political Science
- English
- Blockchain, IOT & Data Science
- Accounts
- HR
- Economics
- Tamil
- Executive Admissions
- Executive Corporate Relations

Salary Best in the Industry
If you are below 35, send your Cv's within 7 days to : principal.fgc@rbanmscharities.in
RBANM's First Grade College — CONJUCTISVIRIBUS

WANTED NTT TRAINED/ Lady Graduates interested in Teaching Primary Classes/ ENGLISH MEDIUM PUC passed girls to assist Nursery and Primary teachers. Contact at the earliest in person (10.00 am-3.00 pm on all working days) -Secretary, Deccan Educational Society®, No. 95, 3rd Cross, Srirampuram, Bengaluru- 560021 (Near Sampige Theater, Malleswaram).

WANTED KANNADA Teacher for high School. Contact: CITIZENS HIGH SCHOOL, 12th Cross, Sagayapuram, Bangalore-560084. Mobile: 9663533826, 9738139824

ACCOUNTANT REQUIRED having knowledge of Tally GST, TDS, PF, ESI etc. Contact: Rathod Build Mart Pvt Ltd, Near ISKCON Temple, Yeshwanthpur. 9448992214 info@buildmart.co.in

REQUIRED EXPERIENCED Male/ Female OFFICE CLERK/ ASSISTANT (B.com/BA/BBA) WITH GOOD ENGLISH for a Pharma Company @ Domlur. Contact: 9480529536/ 7019715711/ 080-25353641 medilabindia@yahoo.com.

Hospital & Medical Jobs

HOSMAT HOSPITAL
HOSMAT HOSPITAL, is Recruiting the following staff at HOSMAT Main Unit at Magrath Road, Bangalore. For the new Neuro and Orthopaedic Rehabilitation, Recovery and recuperation centre.
01. Geriatric Physician
02. Rehabilitation Consultant PM&R
03. Physiotherapist & Neuro Physiotherapist
04. Rehabilitation Manager
05. Occupational Therapist
06. Respiratory Therapist
07. Speech/ Hearing and Swallowing Therapist
08. Staff Nurses with experience in Geriatric / rehabilitation wards
09. Home care Nurses and physiotherapy. Experienced ward boys / Nurse assistants.

Call: 91084 50312
hr@hosmathospitals.com / coordinatorhosmat@gmail.com

Architects

REQUIRED EXPERIENCED ARCHITECT/DRAFTMAN. Contact- 9886722262/ 7829622262 OR E-mail to: abubakrandbilal@gmail.com

General

REQUIRED RECEPTIONIST/ ACCOUNTANT/ TURNER, FITTER, MILLER, CNC/ VMC Programer- Operator/ Supervisor, House keeping. 9448558947/ 9916552712.

HRD & Admin

ADMISSION COUNSELLOR with minimum of 3 yrs. experience, with excellent communication skills, staying within 10 km from the Campus will be preferred. ISME, Sarjapur Road. 8880612345. jobs@isme.in

Part-Time Jobs

RETIRED/ VRS Persons And Age above 45 Years Earn 2nd Income 35K to 40K PM: 9886641282/ 7019215243

Security & Detectives

URGENTLY WANTED SECURITY GUARD, 8 Hours Duty, Minimum. Salary Rs. 22000/-. Bangalore. Contact: 8660754775 9036745516

Accounts & Finance

REQUIRE: 1.ACCOUNTS MANAGER, 2.STORE EXECUTIVES for our Motor and special pumps Manufacturing Unit at Devarachikkanahalli, Bannergatta Road, Bangalore. Email: flowoilpumps@hotmail.com, Ph: 080-26484068, 26482095

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager, The Printers (Mysore) Pvt. Ltd. Bengaluru

Wanted

ಅಡುಗೆಯವರು ಹಾಗೂ ಕನ್ನಡ ಲಿಪಿಗಾರರು ಬೇಕಾಗಿದ್ದಾರೆ
ಶ್ರೀ ತೈಲೇಶ್ವರ ಗಾಣಿಗರ ಮಹಾಸಂಸ್ಥಾನ ಮಠಕ್ಕೆ (ಬೆಂಗಳೂರು ಉತ್ತರ) ಶುದ್ಧ ಸಸ್ಯಾಹಾರಿ ಅಡುಗೆಯವರು ಹಾಗೂ ಕನ್ನಡ ಲಿಪಿಗಾರರು ಬೇಕಾಗಿದ್ದಾರೆ. ವಸತಿ ಸೌಲಭ್ಯವಿದೆ. ಸಂಪರ್ಕಿಸಿ: ಮೊ: 9480259762/ 6360014573

WANTED ARCHITECTS with 6 to 7 years of experience for an architect's office. Please contact 9449009325

AUTOMOTIVE

Four Wheelers Selling

Maruti

QUOTATIONS REQUIRED for with & without RC/ KA51 M6628/ 2006/ Alto LX/ Accident vehicle. 9945108318

BUSINESS

Business to Business

Business

OPPORTUNITY TO Earn 1.5 lakh above Per Month. Trade mark, Fssai, MSME and GST registered Branded Dry Fruits Company Wishes to appoint Franchise outlets throughout Bangalore and all districts of Karnataka. Reasonable Investment: 8095059460/ 6360940295

STUCKUP? ANY Central Government work, we assist you with high level contacts. Vamshadhara Project Services: 9342247637

Business Offers

Finance

NRI'S INVESTMENT& Finance Available On Low Interest Against Properties, Land& Building,Sites,Flats,Converted& Agriculture Lands Call:7204995189

WANTED BUSINESS Partners Saree Business 10 Lakhs Investment Monthly Income 1 Lakhs Contact: 8892501007/ 9606701007

EDUCATIONAL

Diploma Courses

JNANA JYOTHI YOGA STUDY CENTRE Mahalakshmi Layout (Affiliated to Karnataka Sanskrit University) Admission Open- Courses- Certificate/ Diploma/ PG Diploma in Yoga 9663663637/ 9008557979/ 7019356168

RENTAL PROPERTIES

Accommodation Wanted

Commercial

COMMERCIAL OPEN SPACE Or Basement WANTED FOR RENT On Main Roads With High Footfalls For DISCOUNT SALES EXHIBITIONS. WhatsappLocation And Photos 6366936485.

REAL ESTATE SELLING

Commerical

Marathahalli

SALE: 5700 Sqft, Commercial Site FOR SALE, Near Varthur, WEST Facing, 'B' Khatha in BBMP limit. Contact- 9353532040

Flat

Basaveshwaranagar

2 BHK FLAT (North) 2nd Floor BDA Property Basaveswarnagar Water Tank Bus Stop 60L: 9880443362

Farm House/ Land/ Resorts

Out-Station

NILGIRIS KTGR Tea Estate For Sale /JV. Coonoor Bunglow @ RS.59 L, 10 Min From Town, Ct. 80079 80076

Sites

Chikkaballapura

CHIKKABALLAPUR SITES 30x40 with 1800 sft constructed villas, 40' Roads Approved by Chikkaballapur Town Planning Authority, 70 Lakhs. Vamshadhara Projects- 9342247637.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

WE FIX LEAKING ROOF,TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY,CIVIL WORKS. Call:9448572697

PERSONAL

Announcements

ANNOUNCEMENT
I, **MADHAVI.**, W/o P. Pechalaiah, R/at # 38, 10th Cross, 1st Floor, Lakshmipuram, Halasuru, Bangalore- 560008, Declare that my DOB is wrongly mentioned in some documents as 22-08-1972. My correct **DOB** is **06-08-1972**. vide affidavit dated 21-09-2023, before Notary Y.R.Chandrasekar, Bangalore

Change of Name

CHANGE OF NAME
I, **TANUJA MALLIKARJUNA PATIL** W/o Mallikarjuna P Patil R/a No. D 105, Fortuna White Wings, 1st Main Tala Cauvery Layout, Basavanagar, Marathahalli Colony, Bengaluru-560037 have changed my Name from **TANUJA PATIL** to **TANUJA MALLIJARJUNA PATIL** vide affidavit dated: 28.10.2023 sworn before Notary Shreedharan Nair P.N. Bangalore.

I, PALLAVI R/a#59 Salkani_Road, koppa Sirsi_Taluk, Balegadde Uttara Kannada-581336 have changed name PALLAVI_HEGDE vide`affidavit 16.9.2023 before`Notary Hemalatha Bangalore

I, GANESH Madhyastha Residing at No.538/66, Samsaara Saaram, 12th cross, 6th main, Narayana Nagar 2nd stage, Doddakallasandra, Bengaluru- 560062 have changed my name to GANESH CHANDRASHEKAR MADHYASTHA vide affidavit dated 31/10/2023 before notary P.N. Nagesha, Bengaluru.

CHANGE OF NAME
I, **CHERIAN ABRAHAM, SHIBIN CHERIAN & SHIBIN ABRAHAM CHERIAN,** R/at # 44, Chairman Layout, Doddabanaswadi, Bangalore-43, have changed my name to **SHIBIN ABRAHAM CHERIAN** affidavit dt.16-10-2023, Notary Y.R.Chandrasekar, Bangalore. Henceforth I shall be called **SHIBIN ABRAHAM CHERIAN** only.

WE, SHIRAZ AHMED KHAN_&_NAZIA SIRAJUDDIN R/a#230 4th`Main 2nd_Cross Anandgiri Extension Hebbal, Bengaluru-560024 have`changed our minor KID name from FIDHRA_SHIRAZ to SIDRA_SHIRAZ vide`affidavit 31.10.2023 before`Notary Hemalatha Bangalore

I MANJUNATHA KRISHNAPPA. #164,Gayatri Temple,Bidaraguppe,Anekal, Bengaluru-562107, Have changed my name to MANJUNATH B.K. vide affidavit Dated-12/10/2023

PUBLIC NOTICE

PUBLIC NOTICE
The General Public are hereby informed by my client, **SMT.G.ROHINI** W/o Kumaraswamiraju, No.133, 4th Main Road, K.G.Layout, New BEL Road, Bangalore, has lost the following Original Sale Deeds i.e., Original Sale Deed dated 21.6.1962, vide registration No.754/1962-63 Original Sale Deed dated 11.2.1963, vide registration No.2659/1962-63, and Original Sale Deed dated 27.10.1984, vide registration No.909/1984-85 with respect to the Schedule Property mentioned herein. In case of any claims over the said property or if any persons gets the said original documents it is hereby called upon to approach the undersigned with said original documents or the relevant documents in support of any claims within 10 days from the date of issue of this notice.
SCHEDULE PROPERTY
All that piece and parcel of the agricultural land bearing Sy.No.27/3 measuring 2 acre 23 guntas, (Sy.No.27/3 measuring 0-34 guntas, Sy.No.27/4 measuring 0-34 guntas, and Sy.No.27/5 measuring 0-35 guntas situated at Venkatapura Village, Kundana Hobli, Devanahalli Taluk, Bangalore Rural District, which is bounded on:
East by: Property belonged to Eerappa Sy.No.25. **West by :** Property belonged to Rajanna in Sy.No.27/2. **North by :** Property belonged to Chikkabasappa in Sy.No.27/1. **South by:** Dinnur Main Road
S/d- B.S.RADHANANDAN Advocate
No.239/1, Nagashri, IV Main, Chamarajpet, Bangalore-560 018. Phone: 26500612, Mobile: 9845009885
Date: 31.10.2023 Email: nandanradha@yahoo.com

PUBLIC NOTICE
The General Public are hereby informed that **D.Basavaiah** S/o Deveerappa, Lingadeeragollahalli, Kundana Hobli, Devanahalli Taluk, Bangalore Rural District, Bangalore, has lost the Original Sale Deed dated 26-5-1971, vide registration No.562/1971-72 with respect to the Schedule Property mentioned herein. In case of any claims over the said property or if any persons gets the said original documents it is hereby called upon to approach the undersigned with said original documents or the relevant documents in support of any claims within 10 days from the date of issue of this notice.
SCHEDULE PROPERTY
All that piece and parcel of the agricultural land bearing Re-Sy.No.27/3 measuring 2 acre 23 Guntas situated at Venkatapura Village, Kundana Hobli, Devanahalli Taluk, Bangalore Rural District, which is bounded on:
East by: Property belonged to Eerappa Sy.No.25. **West by :** Property belonged to Rajanna in Sy.No.27/2, **North by :** Property belonged to Chikkabasappa in Sy.No.27/1, **South by:** Dinnur Main Road
S/d- B.S.RADHANANDAN Advocate
No.239/1, Nagashri, IV Main, Chamarajpet, Bangalore-560 018. Phone: 26500612, Mobile: 9845009885
Date: 31.10.2023 Email: nandanradha@yahoo.com

DH DECCAN HERALD — ಪ್ರಜಾವಾಣಿ
Wishing all our Readers & Advertisers a very Happy Kannada Rajyotsava
Classifieds Booking Open Today
For Advertisement Bookings Contact: 080-4555 7160 / 162 / 163 / 164

ಕ್ಲಾಸಿಫೈಡ್ಸ್ ADMISSION CORNER

Mysore Education Society
M E S COLLEGE OF ARTS, COMMERCE AND SCIENCE
Affiliated to Bengaluru City University, NAAC Accredited 'A' Grade
15th Cross, Malleshwaram, Bangalore – 560 003.
Ph:080 23347045, 080 23341225 Extension- 227
P. G. Admissions 2023-2024
M. Sc. Mathematics
Post Graduate Department of Mathematics
Students of other States are also eligible for Management Seats.
Eligibility: 40% in the aggregate and 50% in Mathematics in Bachelor's Degree
Apply using the link: https://mesacs.edchemy.com/
Website: www.mesacs.in Mobile No. 9842096102

Facilities Available:
- Ph. D. qualified faculty members
- Exclusive Library for PG
- Well-equipped Laboratory
- ICT enabled Class Rooms
- Research Centre in Applied Mathematics
- Facilities to carry out research leading to Ph.D.
- BCU recognized Ph. D. Guides
- Placement Cell
- UGC/CSIR/NET/KSET Orientation Programs

Skill Enhancement Opportunities
- Sports and yoga
- Cultural and Literary Activities
- Add on certificate courses

Achievements:
- University rank holders in M. Sc. Mathematics
- 10 Ph. D. Degrees awarded from the research centre till date
- KSET qualified students .

CONNECT

ಅಂತರಾಷ್ಟ್ರೀಯ ಗೃಹಬಳಕೆ ವಸ್ತುಗಳ ಪ್ರದರ್ಶನ
ಗೃಹಶೋಭೆ
GRUHA SHOBHE — LIVING STYLE EXHIBITION
Last 5 Days
TIMING : 11 Am to 9 Pm
Special Attraction — ALIENS SHOW
ಅಕ್ಟೋಬರ್ 27 ರಿಂದ ನವೆಂಬರ್ 5 ರವರೆಗೆ
ಎಚ್.ಎಂ.ಟಿ ಗ್ರೌಂಡ್
ಆರ್.ಟಿ.ನಗರ, ಬೆಂಗಳೂರು
ENTRY Rs. 20/- Children Below 5 Years Free Entry PARKING FREE

ಅರುಣ ಸಿಲ್ಕ್ಸ್
ದಸರಾ, ದೀಪಾವಳಿ ಹಾಗೂ ವಾರ್ಷಿಕೋತ್ಸವದ ಪ್ರಯುಕ್ತ
DISCOUNT SALE 10% to 50%*
*Only at RAJAJINAGAR
- ವೆಡ್ಡಿಂಗ್ ಸ್ಯಾರಿಸ್
- ಫ್ಯಾನ್ಸಿ ಸ್ಯಾರಿಸ್
- ಸಲ್ವರ್ಸ್
- ಡ್ರೆಸ್ ಮೆಟಿರಿಯಲ್ಸ್
- ಮೆನ್ಸ್
- ಕಿಡ್ಸ್ ವೇರ್

*On Selected Counter
ಅರುಣ ಸಿಲ್ಕ್ ಪ್ಯಾರಡೈಸ್ — #713, ಜಿಂಕಾ ಅವೆನ್ಯೂ, ಮೋದಿ ಹಾಸ್ಪಿಟಲ್ ರೋಡ್, ವೆಸ್ಟ್ ಆಫ್ ಕಾರ್ಡ್ ರೋಡ್, ರಾಜಾಜಿನಗರ ಬೆಂಗಳೂರು– 86 Ph : 080 23197755.
ಶ್ರೀ ಅರುಣ ಸಿಲ್ಕ್ಸ್ — #141, 1ನೇ ಮುಖ್ಯರಸ್ತೆ, ಆಕ್ಸಿಸ್ ಬ್ಯಾಂಕ್ ಪಕ್ಕ ಹೊಯ್ಸಳ ಸರ್ಕಲ್ ಹತ್ತಿರ, ಕೆಂಗೇರಿ ಉಪನಗರ, ಬೆಂಗಳೂರು– 60 Ph : 080 29917755
ಪಾರ್ಕಿಂಗ್ ಸೌಲಭ್ಯವಿದೆ — ಭಾನುವಾರ ಸಹ ತೆರೆದಿರುತ್ತದೆ

ಬುಧವಾರ, ನವೆಂಬರ್ 1, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 302 | ಪುಟ 20

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕರ್ನಾಟಕ ರಾಜ್ಯೋತ್ಸವದ ಶುಭಾಶಯಗಳು

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
63,874 ▽	19,079 ▽	₹63,120 (ಬೆಂಗಳೂರು) ▽	₹74,100 (ಬೆಂಗಳೂರು) ▲	83.24 ▲

70 ಗಂಟೆ ಕೆಲಸ ಪ್ರಿಯಾಂಕ್ ಬೆಂಬಲ

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತವು ಆರ್ಥಿಕವಾಗಿ ಉತ್ತುಂಗಕ್ಕೆ ಏರಲು ಯುವಜನರು ವಾರದಲ್ಲಿ 70 ತಾಸು ದುಡಿಯಬೇಕೆಂಬ ಇನ್ಫೊಸಿಸ್ ಸಹ ಸಂಸ್ಥಾಪಕ ಎನ್.ಆರ್.ನಾರಾಯಣಮೂರ್ತಿ ಹೇಳಿಕೆಗೆ ಕರ್ನಾಟಕದ ಮಾಹಿತಿ ತಂತ್ರಜ್ಞಾನ (ಐಟಿ) ಸಚಿವ ಪ್ರಿಯಾಂಕ್ ಖರ್ಗೆ ಬೆಂಬಲ ವ್ಯಕ್ತಪಡಿಸಿದ್ದಾರೆ.

ಮಂಗಳವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ನಾರಾಯಣಮೂರ್ತಿ ಅವರು ಕಠಿಣ ಪರಿಶ್ರಮದಿಂದ ಇನ್ಫೊಸಿಸ್ ಸಂಸ್ಥೆಯನ್ನು ಕಟ್ಟಿದರು. ಅವರು ತಮ್ಮ ಅಭಿಪ್ರಾಯ ಹೇಳಿದ್ದಾರೆ. ಭಾರತದ ಭವಿಷ್ಯದ ದೃಷ್ಟಿಯಿಂದ ಇದೊಂದು ಉತ್ತಮ ಸಲಹೆ. ಅದನ್ನು ನಾನು ಸ್ವಾಗತಿಸುತ್ತೇನೆ' ಎಂದರು.

'ಮೂರ್ತಿಯವರ ಅಭಿಪ್ರಾಯಕ್ಕೆ ನಾನು ಇನ್ನೊಂದು ವಿಷಯ ಸೇರಿಸಲು ಬಯಸುತ್ತೇನೆ. ನಾವು ಹೆಚ್ಚು ಉತ್ಪಾದಕ ಕೆಲಸಗಳತ್ತ ಗಮನ ಹರಿಸಬೇಕು. ಜಾಗತಿಕ ಉತ್ಪಾದನಾ ಕೇಂದ್ರವಾಗಿ ಹೊರಹೊಮ್ಮಲು ಭಾರತವು ತನ್ನ ಉತ್ಪಾದಕತೆಯನ್ನು ಹೆಚ್ಚಿಸಿಕೊಳ್ಳಬೇಕು' ಎಂದು ಅವರು ಹೇಳಿದರು.


ಚಿನಕುರಳಿ

ಪ್ರಕಾಶ್ ಶೆಟ್ಟಿ



ಸವಾಲು ಸಾವಿರ, ಪರಿಹಾರದ ದಾರಿ ದೂರ...

ರಾಜ್ಯಕ್ಕೆ 'ಕರ್ನಾಟಕ' ಎಂದು ನಾಮಕರಣವಾಗಿ ಈಗ 50 ವರ್ಷ. ನಾಡಿನೆಲ್ಲೆಡೆ ಸುವರ್ಣ ಸಂಭ್ರಮ ಮನೆ ಮಾಡಿದೆ. ಈ ಅರ್ಧ ಶತಮಾನದಲ್ಲಿ ರಾಜ್ಯವು ಎಲ್ಲ ಕ್ಷೇತ್ರಗಳಲ್ಲಿಯೂ ಬೆಳೆದಿದೆ. ಆದರೆ, ಆ ಬೆಳವಣಿಗೆಯಲ್ಲಿ ಎಲ್ಲವೂ ಸುಸ್ಥಿರವಲ್ಲ ಎಂಬುದರ ಅರಿವು ನಮಗೆ ಇದೆ. ಈ ಭೂಮಿ, ಜೀವ ಸಂಕುಲ, ಪರಿಸರಕ್ಕೆ ಮಾರಕವಾಗುವ ರೀತಿಯ ಪ್ರಗತಿಯನ್ನೂ ಕಂಡಿದ್ದೇವೆ. 50ರ ಈ ಹೊತ್ತಿನಲ್ಲಿ, ಮುಂದಿನ 25 ವರ್ಷಗಳು ಹೇಗಿರಬೇಕು, ಯಾವೆಲ್ಲ ವಿವೇಕವನ್ನು ನಾವು ಮೈಗೂಡಿಸಿಕೊಳ್ಳಬೇಕು ಎಂಬ ಪ್ರಶ್ನೆಗೆ ಕರ್ನಾಟಕ ಸರ್ಕಾರದ ನಿವೃತ್ತ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಚಿರಂಜೀವಿ ಸಿಂಘ್ ನೀಡಿದ ಪ್ರತಿಕ್ರಿಯೆಯ ಲೇಖನ ರೂಪ ಇಲ್ಲಿದೆ. ಮುಂದಿನ 25 ವರ್ಷಗಳಲ್ಲಿ ಕರ್ನಾಟಕದ ಬೆಳವಣಿಗೆ ಹೇಗಿರಬೇಕು ಎಂಬುದರ ಕುರಿತ ಲೇಖನ ಸರಣಿ ಮುಂದುವರಿಯಲಿದೆ



• ಚಿರಂಜೀವಿ ಸಿಂಘ್

ಮುಂದಿನ ಇಪ್ಪತ್ತೈದು ವರ್ಷಗಳು ಕರ್ನಾಟಕ ಮಾತ್ರವಲ್ಲದೇ ಜಗತ್ತಿನ ಪಾಲಿಗೆ ಸಮಸ್ಯೆಗಳ ಸರಮಾಲೆಯನ್ನೇ ಧುತ್ತೆನ್ನಿಸುವ ಹಾಗೆ ಮುಖಕ್ಕೆ ಹಿಡಿದಿಡಲಿವೆ. ಕಳೆದು ಹೋದ ವೈಭವದ ದಿನಗಳನ್ನು ಮೆಲುಕು ಹಾಕುತ್ತಲೇ, ಮಾಡಿದ ತಪ್ಪುಗಳನ್ನು ಮತ್ತೆ ಎಸಗದಂತೆ ಕಡು ಎಚ್ಚರದಿಂದ ಭವಿಷ್ಯದಲ್ಲಿ ಎದುರಾಗಬಹುದಾದ ಸವಾಲುಗಳನ್ನು ಮುಖಾಮುಖಿಯಾಗಿಸಲು ಬೇಕಾದ ತಯಾರಿಯನ್ನು ಯೋಜಿತ ರೀತಿಯಲ್ಲಿ ರೂಪಿಸಬೇಕಾದ ಸಂಕ್ರಮಣ ಕಾಲದಲ್ಲಿ ಇದ್ದೇವೆ.

ಜಾಗತಿಕ ತಾಪಮಾನದ ಏರಿಕೆ, ಹವಾಮಾನ ವೈಪರೀತ್ಯ ಕರ್ನಾಟಕವನ್ನು ಮಾತ್ರವಲ್ಲದೇ ದೇಶವನ್ನೂ ಮತ್ತು ನಮ್ಮನ್ನೆಲ್ಲ ಒಳಗೊಂಡ ವಿಶ್ವವನ್ನೂ ಕಾಡಲಿದೆ. ಮಳೆಯ ಅನಿಶ್ಚಿತತೆ ಒಂದು ಕಡೆ ನಮ್ಮನ್ನು ಬಾಧಿಸಿದರೆ, ಏಕಕಾಲದಲ್ಲಿ ಪ್ರವಾಹ ಮತ್ತು ತೀವ್ರ ಬರಗಾಲದ ಎರಡೂ ಪರಿಸ್ಥಿತಿಗಳು ನಮ್ಮನ್ನು ಕಂಗೆಡಿಸುತ್ತಿವೆ. ಇವಕ್ಕೆಲ್ಲ ಪರಿಹಾರ ಸುಲಭವಲ್ಲ; ಆದರೆ, ಪರಿಹಾರವನ್ನು ಯೋಚಿಸಿ, ಯೋಜಿಸಬೇಕಾಗಿದೆ.

ತಾಪಮಾನ ಮತ್ತು ಹವಾಮಾನ ವೈಪರೀತ್ಯಗಳು ಜಾಗತಿಕ ಸಮಸ್ಯೆಗಳಾಗಿವೆ. ಇದರ ಪರಿಹಾರಕ್ಕೆ ಏನೆಲ್ಲ ಸಿದ್ಧತೆ ಮಾಡಿಕೊಳ್ಳಬೇಕು ಎಂಬ ಬಗ್ಗೆ ಕರ್ನಾಟಕ ಮುಂಜಾಗರೂಕತೆ ವಹಿಸಬೇಕು. ಏಕೆಂದರೆ, ದೇಶದಲ್ಲಿ ರಾಜಸ್ಥಾನ ಬಿಟ್ಟರೆ ಕರ್ನಾಟಕವೇ ಅತಿ ಹೆಚ್ಚು ಬಂಜರುಭೂಮಿಯನ್ನು ಹೊಂದಿದ ರಾಜ್ಯವಾಗಿದೆ. ಆ ದೃಷ್ಟಿಯಿಂದ ನಮಗೆ ಕೆಡುಕುಗಳು (ದುಷ್ಟಭಾವ) ಹೆಚ್ಚಾಗುತ್ತವೆ. ಇದಕ್ಕೆ ಪೂರ್ವಭಾವಿಯಾದ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ ಸಮಾಲೋಚನೆ ನಡೆಸಿ, ಎದುರಿಸುವ ಕಾರ್ಯತಂತ್ರವನ್ನು ಹೆಣೆಯಬೇಕಿದೆ.

ನಮ್ಮ ಅಣೆಕಟ್ಟುಗಳ ಬಗ್ಗೆಯೂ ಗಮನ ಕೊಡಬೇಕಿದೆ. ಬೃಹತ್ ಅಣೆಕಟ್ಟುಗಳ ಅಂತರರಾಷ್ಟ್ರೀಯ ಆಯೋಗದ ಪ್ರಕಾರ ಒಂದು ಅಣೆಕಟ್ಟೆಯ ಬಾಳಿಕೆ 50ರಿಂದ 100 ವರ್ಷ. ಅಣೆಕಟ್ಟು ನಿರ್ಮಾಣ ಮಾಡಿದ 50 ವರ್ಷಗಳ ಬಳಿಕ ಅದರ ವಾರ್ಷಿಕ ನಿರ್ವಹಣೆ ವೆಚ್ಚ ಹೆಚ್ಚಾಗುತ್ತದೆ ಹಾಗೂ ಹೂಳು ತುಂಬುತ್ತಲೇ ಹೋಗುವುದರಿಂದ ನೀರಿನ ಸಂಗ್ರಹ ಸಾಮರ್ಥ್ಯ ಕುಸಿಯುತ್ತಾ ಹೋಗುತ್ತದೆ. ಕರ್ನಾಟಕದ ಪ್ರಮುಖ ಅಣೆಕಟ್ಟುಗಳನ್ನು ನೋಡುವುದಾದರೆ ಕೆಆರ್‌ಎಸ್ ಅಣೆಕಟ್ಟೆಗೆ 92 ವರ್ಷ, ತುಂಗಭದ್ರಾ ಅಣೆಕಟ್ಟೆಗೆ 70 ವರ್ಷ ಭದ್ರಾ ಅಣೆಕಟ್ಟೆಗೆ 58 ವರ್ಷ ಆಗಿದೆ.

5ನೇ ಪುಟ ನೋಡಿ

'ಸರ್ಕಾರಿ ಪ್ರಾಯೋಜಿತ ದಾಳಿ' ಮಾಹಿತಿ ಒದಗಿಸಲು ಆ್ಯಪಲ್‌ಗೆ ಸೂಚನೆ

ಐಫೋನ್ ಹ್ಯಾಕ್: ವಿಪಕ್ಷ ಆಕ್ರೋಶ

ಪ್ರಜಾವಾಣಿ ವಾರ್ತೆ

ನವದೆಹಲಿ: ತಮ್ಮ ಐಫೋನ್ ಹ್ಯಾಕ್ ಮಾಡಲು 'ಸರ್ಕಾರಿ ಪ್ರಾಯೋಜಿತ ದಾಳಿಕೋರರು' ಯತ್ನಿಸುತ್ತಿರುವುದಾಗಿ ಆ್ಯಪಲ್ ಕಂಪನಿಯು ಎಚ್ಚರಿಕೆ ಸಂದೇಶ ನೀಡಿದೆ ಎಂದು ವಿರೋಧ ಪಕ್ಷಗಳ ನಾಯಕರು ಹಾಗೂ ಕೆಲ ಪತ್ರಕರ್ತರು ಹೇಳಿರುವುದು ಸಂಚಲನ ಸೃಷ್ಟಿಸಿದೆ.

ಈ ವಿಚಾರವನ್ನು ಮುಂದಿಟ್ಟುಕೊಂಡು ವಿರೋಧ ಪಕ್ಷಗಳು ಕೇಂದ್ರ ಸರ್ಕಾರದ ಮೇಲೆ ಮುಗಿ ಬಿದ್ದಿವೆ. ಪೆಗಾಸಸ್ ಕುತಂತ್ರಾಂಶ ಪ್ರಕರಣವನ್ನು ಪ್ರಸ್ತಾಪಿಸಿರುವ ವಿಪಕ್ಷಗಳು, ತಮ್ಮ ವಿರುದ್ಧ ಕೇಂದ್ರ ಸರ್ಕಾರ ಬೇಹುಗಾರಿಕೆ ನಡೆಸುತ್ತಿದೆ ಎಂದು ವಾಗ್ದಾಳಿ ನಡೆಸಿವೆ.

'ಅದಾನಿ ಸಮೂಹದ ವಿಚಾರವಾಗಿ ಕೇಂದ್ರ ಸರ್ಕಾರದ ಮುಂದೆ ಹಲವು ಪ್ರಶ್ನೆಗಳನ್ನು ಇಟ್ಟಿದ್ದೆವು. ಇದೇ ಕಾರಣಕ್ಕಾಗಿ ಕೇಂದ್ರ ಸರ್ಕಾರ ವಿರೋಧ ಪಕ್ಷಗಳ ನಾಯಕರ ಮೇಲೆ ಬೇಹುಗಾರಿಕೆಯಲ್ಲಿ ತೊಡಗಿದೆ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹಾಗೂ ಇತರ ಪಕ್ಷಗಳ ನಾಯಕರು ಆರೋಪಿಸಿದ್ದಾರೆ.

'ನೀವು ಬಯಸಿದಷ್ಟು ನಮ್ಮ ಫೋನ್‌ಗಳನ್ನು ಕದ್ದಾಲಿಸಿ. ಇದಕ್ಕೆ ನಾವು ಹೆದರುವುದಿಲ್ಲ. ನನ್ನ ಫೋನ್ ನಿಮಗೆ ಬೇಕು ಎಂದಾದಲ್ಲಿ ಅದನ್ನೂ ಕೊಟ್ಟುಬಿಡುವೆ' ಎಂದು ರಾಹುಲ್ ಗಾಂಧಿ ಹೇಳಿದ್ದಾರೆ.

ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಹಾಗೂ ಸಿಪಿಎಂ ನಾಯಕ ಸೀತಾರಾಮ್ ಯೆಚೂರಿ ಅವರು ಪ್ರಧಾನಿ ಮೋದಿ ಅವರಿಗೆ ಪ್ರತ್ಯೇಕವಾಗಿ ಪತ್ರ ಬರೆದಿದ್ದು, ಈ ಆರೋಪಗಳ ಕುರಿತು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ.

'ನನ್ನ ಕೆಲಸ ತೆರೆದ ಪುಸ್ತಕದಂತೆ. ಮುಚ್ಚಿಡುವುದು ಏನೂ ಇಲ್ಲ' ಎಂದು ಯೆಚೂರಿ ಹೇಳಿದ್ದಾರೆ.

'ನನ್ನ ಫೋನ್ ಹ್ಯಾಕ್ ಮಾಡಿ, ಕೆಲ ಮಾಹಿತಿಯನ್ನು ಅದರಲ್ಲಿ ಅಳವಡಿಸುವುದು. ಇಂತಹ ಮಾಹಿತಿ ಆಧಾರವನ್ನಾಗಿಟ್ಟುಕೊಂಡು ನನ್ನ ವಿರುದ್ಧ ಆರೋಪ ಹೊರಿಸುವುದೇ ಈ ಬೇಹುಗಾರಿಕೆಯ ಉದ್ದೇಶವಾಗಿದೆ' ಎಂದು ಅವರು ಹೇಳಿದ್ದಾರೆ.

'ಸರ್ಕಾರದಲ್ಲಿ ಉತ್ತರದಾಯಿತ್ವ ಮತ್ತು ಪಾರದರ್ಶಕತೆ ಇರಬೇಕು ಎಂದು ನಾನು ಅಪೇಕ್ಷಿಸುತ್ತೇನೆ. ಈ ವಿಚಾರವಾಗಿ ಸರ್ಕಾರವನ್ನು ಟೀಕಿಸುತ್ತೇನೆ. ಇದಕ್ಕೆ ಕಡಿವಾಣ ಹಾಕಬೇಕು ಎಂಬ ಕಾರಣಕ್ಕೆ ನನ್ನ ವಿರುದ್ಧ ಬೇಹುಗಾರಿಕೆ ನಡೆಸಲಾಗುತ್ತಿದೆ' ಎಂದು ಪ್ರಿಯಾಂಕಾ ಗಾಂಧಿ ಪತ್ರದಲ್ಲಿ ಆರೋಪಿಸಿದ್ದಾರೆ.

10ನೇ ಪುಟ ನೋಡಿ

ತನಿಖೆಗೆ ಆದೇಶ



'ದೇಶದ ಎಲ್ಲ ಪ್ರಜೆಗಳ ಖಾಸಗಿತನ ಮತ್ತು ಸುರಕ್ಷತೆಯನ್ನು ಸಂರಕ್ಷಣೆ ಮಾಡುವ ತನ್ನ ಹೊಣೆಗಾರಿಕೆಯನ್ನು ಸರ್ಕಾರ ಗಂಭೀರವಾಗಿ ತೆಗೆದುಕೊಳ್ಳುತ್ತದೆ. ಐಫೋನ್‌ಗಳಲ್ಲಿನ ಮಾಹಿತಿಯನ್ನು ಕಳ್ಳತನ ಮಾಡುವ ಯತ್ನಗಳು ನಡೆದಿವೆ ಎಂಬ ಬಗ್ಗೆ ಸಮಗ್ರ ತನಿಖೆ ನಡೆಸಿ, ಮೂಲ ಪತ್ತೆ ಹಚ್ಚಲಾಗುವುದು' ಎಂದು ಕೇಂದ್ರದ ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಮಂಗಳವಾರ ಹೇಳಿದ್ದಾರೆ.

ಈ ಕುರಿತು ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಅವರು, 'ಭಾರತೀಯ ಕಂಪ್ಯೂಟರ್ ತುರ್ತು ಪ್ರತಿಸ್ಪಂದನಾ ತಂಡ (ಸಿಇಆರ್‌ಟಿ-ಐಎನ್) ತನಿಖೆ ನಡೆಸುವುದು' ಎಂದೂ ತಿಳಿಸಿದ್ದಾರೆ. 'ಈ ಕುರಿತ ತನಿಖೆಗೆ ಸಹಕರಿಸುವಂತೆ ಆ್ಯಪಲ್ ಕಂಪನಿಯನ್ನು ಕೋರಿದ್ದೇವೆ. 'ಸರ್ಕಾರಿ ಪ್ರಾಯೋಜಿತ ದಾಳಿ' ಆರೋಪಗಳ ಕುರಿತ ವಾಸ್ತವ ಹಾಗೂ ನಿಖರ ಮಾಹಿತಿ ಒದಗಿಸುವಂತೆಯೂ ಕೇಳಿದ್ದೇವೆ' ಎಂದು ಅವರು ಪೋಸ್ಟ್‌ನಲ್ಲಿ ಹೇಳಿದ್ದಾರೆ.

> ನನಗೂ ಆ್ಯಪಲ್ ಕಂಪನಿಯಿಂದ ಸಂದೇಶ ಬಂದಿದೆ. ಸಂದೇಶವನ್ನು ಪರಿಶೀಲಿಸಿದ್ದು, ಅದು ಅಧಿಕೃತ ಎಂಬುದು ಸಹ ದೃಢಪಟ್ಟಿದೆ
>
> **ಶಶಿ ತರೂರ್,** ಕಾಂಗ್ರೆಸ್ ಸಂಸದ

> ನನ್ನಂಥ ತೆರಿಗೆದಾರನ ಹಣದಲ್ಲಿ ಅಧಿಕಾರಿಗಳು ಇಂತಹ ಕೆಲಸದಲ್ಲಿ ತೊಡಗುವಂತೆ ಮಾಡಿರುವುದು ಖುಷಿ ತಂದಿದೆ. ಇದಕ್ಕಿಂತ ಮುಖ್ಯ ಕೆಲಸ ಇಲ್ಲವೇ? ಮೋದಿ ಅವರೇ ಈ ರೀತಿ ಏಕೆ ಮಾಡುತ್ತಿರುವಿರಿ?
>
> **ಪವನ್ ಖೇರಾ,** ಕಾಂಗ್ರೆಸ್ ವಕ್ತಾರ

> ನನ್ನ ಸಂಸದೀಯ ಕಾರ್ಯಗಳಿಗಾಗಿ, ಮೋದಿ ಸರ್ಕಾರದ ಸರ್ವಾಧಿಕಾರಿ ಧೋರಣೆಗಳನ್ನು ಪ್ರಶ್ನಿಸುವುದಕ್ಕಾಗಿ ಸ್ಮಾರ್ಟ್‌ಫೋನ್ ಬಳಸುತ್ತೇನೆ. ನನ್ನ ಹಲವು ಪ್ರಕರಣಗಳಿಗೆ ಸಂಬಂಧಿಸಿ ವಕೀಲರೊಂದಿಗೆ ಚರ್ಚೆ ನಡೆಸುವುದಕ್ಕೂ ಬಳಸುವೆ. ನನ್ನ ಸ್ಮಾರ್ಟ್‌ಫೋನ್ ಮಾತ್ರವಲ್ಲ, ದೇಶದ ಪ್ರಜಾತಾಂತ್ರಿಕ ಮೌಲ್ಯಗಳೂ ದಾಳಿಗೆ ಒಳಗಾಗಿವೆ
>
> **ರಾಘವ್ ಛಡ್ಡಾ,** ಎಎಪಿ ರಾಜ್ಯಸಭಾ ಸದಸ್ಯ

68 ಸಾಧಕರಿಗೆ ಈ ಬಾರಿಯ ರಾಜ್ಯೋತ್ಸವ ಪ್ರಶಸ್ತಿ ಗರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ, ಇಸ್ರೊ ಅಧ್ಯಕ್ಷ ಎಸ್.ಸೋಮನಾಥ್, ಕವಿ ಸುಬ್ಬು ಹೊಲೆಯಾರ್, ರಂಗ ನಿರ್ದೇಶಕ ಚಿದಂಬರರಾವ್ ಜಂಬೆ, ಯಕ್ಷಗಾನ ಭಾಗವತರಾದ ಲೀಲಾವತಿ ಬೈಪಡಿತ್ತಾಯ, ಚಲನಚಿತ್ರ ನಟ ಡಿಂಗ್ರಿ ನಾಗರಾಜ್, ಕವಿ ಲಕ್ಷ್ಮೀಪತಿ ಕೋಲಾರ ಸೇರಿ 68 ಮಂದಿ ಸಾಧಕರಿಗೆ 2023ನೇ ಸಾಲಿನ ರಾಜ್ಯೋತ್ಸವ ಪ್ರಶಸ್ತಿಯನ್ನು ಪ್ರಕಟಿಸಲಾಗಿದೆ.

ಅಲ್ಲದೇ, ಮೈಸೂರು ರಾಜ್ಯವು ಕರ್ನಾಟಕ ಎಂದು ನಾಮಕರಣವಾಗಿ ನವೆಂಬರ್ 1ಕ್ಕೆ 50 ವರ್ಷ ಪೂರ್ಣಗೊಳ್ಳುತ್ತಿರುವುದರಿಂದ, ಬೆಂಗಳೂರಿನ ಮಿಥಿಕ್ ಸೊಸೈಟಿ, ಶಿವಮೊಗ್ಗದ ಕರ್ನಾಟಕ ಸಂಘ, ಗದಗದ ವಿದ್ಯಾದಾನ ಸಮಿತಿ ಸೇರಿ ಒಟ್ಟು 10 ಸಂಘ– ಸಂಸ್ಥೆಗಳಿಗೆ 'ಕರ್ನಾಟಕ ಸಂಭ್ರಮ–50 ರಾಜ್ಯೋತ್ಸವ ಪ್ರಶಸ್ತಿ–23' ಎಂಬ ಹೆಸರಿನ ಪ್ರಶಸ್ತಿ ನೀಡಲು ತೀರ್ಮಾನಿಸಲಾಗಿದೆ.

ಪ್ರಶಸ್ತಿಯು ₹5 ಲಕ್ಷ ನಗದು ಮತ್ತು 25 ಗ್ರಾಂ ಚಿನ್ನದ ಪದಕವನ್ನು ಒಳಗೊಂಡಿದೆ. ಬುಧವಾರ ಸಂಜೆ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.



ಲೀಲಾವತಿ ಬೈಪಡಿತ್ತಾಯ



ಚಾರ್ಮಾಡಿ ಹಸನಬ್ಬ



ಚಿದಂಬರರಾವ್ ಜಂಬೆ



ಸೋಮನಾಥ್

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಪ್ರಶಸ್ತಿ ಪಟ್ಟಿಯನ್ನು ಬಿಡುಗಡೆಗೊಳಿಸಿದರು. ಬಳಿಕ ಮಾತನಾಡಿದ ಅವರು, ಈ ಬಾರಿ ಪ್ರಶಸ್ತಿಗಾಗಿ ನೇರವಾಗಿ 1,357 ಅರ್ಜಿಗಳು, ಸೇವಾಸಿಂಧು ಮೂಲಕ 2,166 ಅರ್ಜಿಗಳೂ ಸೇರಿ ಒಟ್ಟು 26,555 ನಾಮನಿರ್ದೇಶನಗಳು ಬಂದಿದ್ದವು.

8ನೇ ಪುಟ ನೋಡಿ

ಅಮೆರಿಕದ ಹಸಿರು ಕಾರ್ಡ್ ಮಾದರಿಯಲ್ಲಿ ರಾಜ್ಯದವರಿಗೆ ಕಾರ್ಡ್ ನೀಡುವ ಪ್ರಸ್ತಾವ

ಕನ್ನಡಿಗರಿಗೆ ವಿಶಿಷ್ಟ ಗುರುತಿನ ಸಂಖ್ಯೆ

• ವರುಣ ಹೆಗಡೆ

ಬೆಂಗಳೂರು: ರಾಜ್ಯದಲ್ಲಿ ಕನ್ನಡಿಗರು ಹಾಗೂ ಕನ್ನಡ ಕಲಿತ ಅನ್ಯಭಾಷಿಕರನ್ನು ಗುರುತಿಸಲು ನಿಗದಿತ ಪ್ರಮಾಣಪತ್ರವಿಲ್ಲ. ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು, ಭಾಷೆಯ ಬೆಳವಣಿಗೆಗೆ ಪೂರಕವಾದ ಯೋಜನೆ ರೂಪಿಸಲು ಅಮೆರಿಕದಲ್ಲಿರುವ ಹಸಿರು ಕಾರ್ಡ್ ಪರಿಕಲ್ಪನೆ ರಾಜ್ಯದಲ್ಲಿಯೂ ಜೀವ ತಳೆದಿದೆ.

ಈ ಪರಿಕಲ್ಪನೆ ರಾಜ್ಯ ಸರ್ಕಾರದ ಅಂಗ ಸಂಸ್ಥೆಗಳು ಅಥವಾ ಕನ್ನಡ ಪರ ಸಂಸ್ಥೆಗಳದ್ದಲ್ಲ. ಬದಲಾಗಿ, ಉತ್ತರ ಭಾರತದಿಂದ ಇಲ್ಲಿಗೆ ಬಂದು, ಕನ್ನಡವನ್ನು ಓದಲು, ಬರೆಯಲು ಮತ್ತು ಮಾತನಾಡಲು ಕಲಿತಿರುವ ನಟಿ ಪೂಜಾ ಗಾಂಧಿ ಅವರದ್ದು. ಇದನ್ನು ಅವರು ಏಕಾಏಕಿ ಒಬ್ಬರೇ ಕೂತು ಸಿದ್ಧಪಡಿಸಿದ ಪರಿಕಲ್ಪನೆಯಲ್ಲ. ಭಾಷಾ ತಜ್ಞರು ಹಾಗೂ ಸಾಹಿತ್ಯ ವಲಯದ ಪ್ರಮುಖರನ್ನು ಸಂಪರ್ಕಿಸಿ, ರೂಪುರೇಷೆ ಸಿದ್ಧಪಡಿಸಿದ್ದಾರೆ. ಇದಕ್ಕಾಗಿ ಅವರು ಒಂದೂವರೆ ವರ್ಷ ಶ್ರಮ ಹಾಕಿ, 'ಕನ್ನಡಿಗರಿಗೆ ಮತ್ತು ಕನ್ನಡ ಕಲಿತವರಿಗೆ ಕನ್ನಡ ಕಾರ್ಡ್' ಶೀರ್ಷಿಕೆಯಡಿ 14 ಪುಟಗಳ ವರದಿ ಸಿದ್ಧಪಡಿಸಿದ್ದಾರೆ. ವಿಶಿಷ್ಟ ಗುರುತಿನ ಸಂಖ್ಯೆ ಹೊಂದಿರುವ ಕೆಂಪು ಮಿಶ್ರಿತ ಹಳದಿ ಕಾರ್ಡ್, ಹಳದಿ ಕಾರ್ಡ್ ಹಾಗೂ ಕೆಂಪು ಕಾರ್ಡ್ ಎಂದು ವಿಂಗಡಿಸಿದ್ದು, ಅವರು ವರದಿಯನ್ನು ಶೀಘ್ರದಲ್ಲಿಯೇ ಸರ್ಕಾರಕ್ಕೂ ಸಲ್ಲಿಸಲಿದ್ದಾರೆ.



ಕನ್ನಡ ಓದಲು, ಬರೆಯಲು ಕಲಿತಾಗ ನನಗೆ ಹೆಮ್ಮೆ ಅನಿಸಿತು. ಕನ್ನಡಿಗ ಎನ್ನುವುದಕ್ಕೆ ವ್ಯಾಖ್ಯಾನವಿದ್ದರೂ ಪ್ರಮಾಣೀಕರಣವಿಲ್ಲ. ಈ ಭಾಷೆ ಹಾಗೂ ಭಾಷಿಕರ ಬೆಳವಣಿಗೆಗೆ ಕನ್ನಡ ಕಾರ್ಡ್ ಅಗತ್ಯ

ಪೂಜಾ ಗಾಂಧಿ, ಚಿತ್ರನಟಿ

ಪ್ರಜಾವಾಣಿ ವಿಶೇಷ

2011ರ ಜನಗಣತಿಯ ಆಧಾರದಲ್ಲಿ ರಾಜ್ಯದ ಜನಸಂಖ್ಯೆ ಈಗ ಏಳು ಕೋಟಿಯೆಂದು ಅಂದಾಜಿಸಲಾಗಿದೆ. ಇವರಲ್ಲಿ ಶೇ 66 ರಷ್ಟು ಕನ್ನಡಿಗರಾದರೆ, ಶೇ 34 ರಷ್ಟು ಜನರು ಅನ್ಯಭಾಷಿಕರಿದ್ದಾರೆ. ಬೆಂಗಳೂರಿನ ಜನಸಂಖ್ಯೆ 1.1 ಕೋಟಿಯಿದ್ದು, ಉದ್ಯೋಗ, ಶಿಕ್ಷಣ ಸೇರಿ ವಿವಿಧ ಕಾರ್ಯ ನಿಮಿತ್ತ ಇಲ್ಲಿಗೆ ಬಂದ ಅನ್ಯಭಾಷಿಗರೂ ಹೆಚ್ಚಿನ ಸಂಖ್ಯೆಯಲ್ಲಿ ನೆಲೆ ಕಂಡುಕೊಂಡಿದ್ದಾರೆ. ಇದರಿಂದಾಗಿ ಕನ್ನಡಿಗರು ಹಾಗೂ ಅನ್ಯಭಾಷಿಗರ ನಿಖರ ಅಂಕಿ ಸಂಖ್ಯೆ ಇಲ್ಲವಾಗಿದೆ. ಆದ್ದರಿಂದ ರಾಜ್ಯೋತ್ಸವದ ಸಂದರ್ಭದಲ್ಲಿ ವಿಶಿಷ್ಟ ಗುರುತಿನ ಸಂಖ್ಯೆ ಹೊಂದಿರುವ ಕನ್ನಡದ ಕಾರ್ಡ್ ಪರಿಕಲ್ಪನೆ ಸಾಂಸ್ಕೃತಿಕ ವಲಯದಲ್ಲಿ ಚರ್ಚೆಗೆ ಕಾರಣವಾಗಿದೆ.

ಮೂರು ಮಾದರಿ: 15 ವರ್ಷಗಳಿಂದ ರಾಜ್ಯದಲ್ಲಿ ವಾಸವಿದ್ದು, ಕನ್ನಡ ಓದಲು ಹಾಗೂ ಬರೆಯಲು ಬರುವವರಿಗೆ 'ಕೆಂಪು ಮಿಶ್ರಿತ ಹಳದಿ ಕಾರ್ಡ್', ಕನ್ನಡ ಓದಲು ಹಾಗೂ ಬರೆಯಲು ಬರುವ ಕರ್ನಾಟಕದಲ್ಲಿರುವ ಪರಭಾಷಿಕರು, ಪರರಾಜ್ಯದವರು ಹಾಗೂ ಪರರಾಷ್ಟ್ರದವರಿಗೆ 'ಹಳದಿ ಕಾರ್ಡ್' ಹಾಗೂ ಕನ್ನಡ ಮಾತನಾಡಲು ಬರುವ ಪರಭಾಷಿಕರು, ಪರರಾಜ್ಯದವರು ಮತ್ತು ಪರರಾಷ್ಟ್ರದವರಿಗೆ 'ಕೆಂಪು ಕಾರ್ಡ್' ವಿತರಿಸುವ ಬಗ್ಗೆ ವರದಿಯಲ್ಲಿ ವಿಂಗಡಿಸಲಾಗಿದೆ. ಈ ಯೋಜನೆ ಕಾರ್ಯಗತಗೊಳಿಸಲು ₹ 250 ಕೋಟಿ ವೆಚ್ಚವಾಗಬಹುದು ಎಂದು ಅಂದಾಜಿಸಲಾಗಿದೆ.

ಈ ಕಾರ್ಡ್‌ಗಳ ವಿತರಣೆ ಹಾಗೂ ನಿರ್ವಹಣೆಯ ಜವಾಬ್ದಾರಿಯನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ನೀಡಬೇಕು. ಕನ್ನಡಿಗರ ಮತ್ತು ಕನ್ನಡ ಬಲ್ಲವರ ಗಣತಿಗಾಗಿ ಪೋರ್ಟಲ್ ರೂಪಿಸಬೇಕು. ಈ ಪೋರ್ಟಲ್ ಮೂಲಕ ಆನ್‌ಲೈನ್ ಪರೀಕ್ಷೆ ಹಾಗೂ ಸರ್ಕಾರಿ ಶಾಲೆಗಳಲ್ಲಿ ಆಫ್‌ಲೈನ್ ಪರೀಕ್ಷೆಗಳನ್ನು ನಿಯಮಿತವಾಗಿ ನಡೆಸುವ ವ್ಯವಸ್ಥೆ ರೂಪಿಸಬೇಕು ಎಂದು ಪೂಜಾ ಗಾಂಧಿ ವರದಿಯಲ್ಲಿ ಉಲ್ಲೇಖಿಸಿದ್ದಾರೆ.

ಕನ್ನಡ ಕಾರ್ಡ್ ಪ್ರಯೋಜನ ಏನು?

- ಕನ್ನಡಿಗರು ಹಾಗೂ ಅನ್ಯಭಾಷಿಗರ ದತ್ತಾಂಶ ಪಡೆದು, ವಿಶ್ಲೇಷಣೆ ನಡೆಸಬಹುದು
- ಯಾರೆಲ್ಲ ಕನ್ನಡಿಗರೆಂದು ಗುರುತಿಸಲು ಹಾಗೂ ವ್ಯಾಖ್ಯಾನಿಸಲು ಸಹಕಾರಿ
- ಕನ್ನಡಿಗರ ಮತ್ತು ಕನ್ನಡ ಬಲ್ಲವರ ನಿಖರ ಹಾಗೂ ನಿರಂತರ ಗಣತಿಗೆ ಸಹಾಯಕ
- ಕನ್ನಡಿಗ ಹಾಗೂ ಕನ್ನಡ ಕಲಿತಿರುವ ಬಗ್ಗೆ ಪ್ರಮಾಣ ಪತ್ರ ಹೊಂದಲು ಉಪಯುಕ್ತ
- ಕನ್ನಡಿಗರ ಸ್ಥಿತಿಗತಿ ತಿಳಿಯಲು, ಭಾಷೆ ಹಾಗೂ ಕನ್ನಡಿಗರ ಪರವಾದ ಕಾರ್ಯಕ್ರಮ ಅನುಷ್ಠಾನಕ್ಕೆ
- ವರ್ಷದಿಂದ ವರ್ಷಕ್ಕೆ ಕನ್ನಡಿಗರ ಸಂಖ್ಯೆಯ ಶೇಖಡಾವಾರು ಏರಿಕೆ ತಿಳಿಯಲು
- ರಾಜ್ಯದ ಜನರಿಗೆ ಉಪಯುಕ್ತವಾದ ಯೋಜನೆಗಳನ್ನು ರೂಪಿಸಲು
- ಕನ್ನಡಿಗರಿಗೆ ಉದ್ಯೋಗ ಸೇರಿ ವಿವಿಧ ಕ್ಷೇತ್ರಗಳಲ್ಲಿ ಮೀಸಲಾತಿ ಒದಗಿಸಲು
- ಖಾಸಗಿ ಕಂಪನಿಗಳಲ್ಲಿ ಕನ್ನಡಕ್ಕೆ ಆದ್ಯತೆ ನೀಡಲು, ಕನ್ನಡಿಗರ ಸಂಖ್ಯೆ ಹೆಚ್ಚಿಸಲು
- ಹೊರರಾಜ್ಯ-ರಾಷ್ಟ್ರಗಳಲ್ಲಿನ ಕನ್ನಡಿಗರ ಬಗ್ಗೆ ತಿಳಿಯಲು, ರಾಜ್ಯದೊಂದಿಗೆ ಸಂಪರ್ಕ ಕಾಯ್ದುಕೊಳ್ಳಲು
- ನಾಡಿನ ಬಗ್ಗೆ ಹೆಮ್ಮೆ, ಗೌರವ ಹೆಚ್ಚಿಸಲು ಸಹಕಾರಿ



ಅನ್ಯ ಭಾಷಿಕರ 'ಕನ್ನಡದ ದೀಪ'

ಪರಭಾಷಿಕರಿಗೆ ಕನ್ನಡ ನುಡಿ ಕಲಿಸುವ ಸದ್ದಿಲ್ಲದ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯೋಗಕ್ಕಾಗಿ ಬೆಂಗಳೂರಿಗೆ ಬಂದು ನೆಲೆಸುವವರ ಸಂಖ್ಯೆ ಹೆಚ್ಚುತ್ತಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಅವರು ಕನ್ನಡ ಮಾತನಾಡುವುದಿಲ್ಲವಂಬ ಕಾರಣಕ್ಕೆ ಸಂಘರ್ಷಗಳೂ ನಡೆಯುತ್ತಿವೆ.

ಈ ಸಮಸ್ಯೆಗೆ ಸಂಘರ್ಷರಹಿತ ಪರಿಹಾರ ಕಂಡುಕೊಳ್ಳುವತ್ತ ಭಾರತೀಯ ಸಿಟಿ ವಸತಿ ಸಮುಚ್ಚಯದ ನಿವಾಸಿಗಳು ಮಹತ್ವದ ಹೆಜ್ಜೆ ಇಟ್ಟಿದ್ದಾರೆ. ಇದಕ್ಕಾಗಿ ಆರಂಭಿಸಲಾದ ಅಭಿಯಾನವು ಸಿಹಿಫಲ ಕೊಡುತ್ತಿದೆ. ಈ ಅಭಿಯಾನದಲ್ಲಿ ಕನ್ನಡ ಕಲಿತವರು ಬುಧವಾರ ಕರ್ನಾಟಕ ರಾಜ್ಯೋತ್ಸವಕ್ಕೆ 'ದೀಪ' ಬೆಳಗಲಿದ್ದಾರೆ. ಒಂದು ತಿಂಗಳು ಸತತವಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ.

ಬೆಂಗಳೂರಿನ ಉತ್ತರದಲ್ಲಿರುವ ಈ ಸಮುಚ್ಚಯದಲ್ಲಿ ಎರಡೂವರೆ ಸಾವಿರ ಮನೆಗಳಿವೆ. ಇಲ್ಲಿ ಐಟಿ, ಬಿಟಿ ಸೇರಿದಂತೆ ವಿವಿಧ ಕ್ಷೇತ್ರಗಳ ಉದ್ಯೋಗಿಗಳ ಕುಟುಂಬಗಳು ನೆಲೆಸಿವೆ. ದೂರದ ರಾಜ್ಯಗಳಿಂದ ಬಂದವರ ಸಂಖ್ಯೆಯೇ ಇಲ್ಲಿ ಹೆಚ್ಚಿದೆ.

'ಉದ್ಯೋಗ, ಶಿಕ್ಷಣಕ್ಕಾಗಿ ಬಂದವರಿಗೆ ತಮ್ಮ ಬದುಕು ಕಟ್ಟಿಕೊಳ್ಳುವುದು ಮುಖ್ಯವಾಗಿರುತ್ತದೆ. ಬೆಂಗಳೂರಿನ ಜನರೂ ಬಂದವರ ಭಾಷೆಯಲ್ಲಿಯೇ ವ್ಯವಹರಿಸುವುದರಿಂದ ಇಲ್ಲಿ ಎಲ್ಲವೂ ಸುಲಭ. ಅದ್ದರಿಂದ ಅವರಿಗೆ ಕನ್ನಡ ಕಲಿಯುವ ಅನಿವಾರ್ಯ ಸೃಷ್ಟಿಯಾಗುವುದಿಲ್ಲ. ನಮ್ಮ ಸಮುಚ್ಚಯದಲ್ಲಿಯೂ ಇದೇ ವಾತಾವರಣ ಸಹಜವಾಗಿತ್ತು. ಆದರೆ ನಾನು ಮತ್ತು ಕೆಲವು ಸಮಾನಮನಸ್ಕರು ಒಂದುಗೂಡಿ ಪರರಾಜ್ಯದಿಂದ ಬಂದವರಿಗೆ ಕನ್ನಡ ಕಲಿಸುವ ಅಭಿಯಾನ ಆರಂಭಿಸಿದೆವು' ಎಂದು ಇಲ್ಲಿಯ ನಿವಾಸಿ ವೆಂಕಟೇಶ್ ಮರಕಲ್ ವಿವರಿಸಿದರು.



ಬೆಂಗಳೂರಿನ ಭಾರತೀಯ ಸಿಟಿಯ ನಿಕೂ 1 ವಿಭಾಗದಲ್ಲಿ ಕನ್ನಡ ಕಲಿತವರು ಮತ್ತು ಕಲಿಸುವವರು

'ಒಂದು ನವರಾತ್ರಿ ಹಬ್ಬದ ದಿನ ನಮ್ಮ ಮನೆಯಲ್ಲಿ ಪೂಜೆಗೆ, ಸಮುಚ್ಚಯದಲ್ಲಿರುವ ಉತ್ತರ ಭಾರತೀಯ ಸ್ನೇಹಿತರನ್ನು ಆಹ್ವಾನಿಸಿದ್ದೆ. ಆ ಸಂದರ್ಭದಲ್ಲಿ ಅವರೊಂದಿಗೆ ಚರ್ಚಿಸಿ ಕನ್ನಡ ಕಲಿಯಲು ಮನವೊಲಿಸಿದ್ದು ಫಲ ನೀಡಿತು. ಅವರಲ್ಲಿಯೇ ಕನ್ನಡ ಕಲಿಕೆಯ ಅಸಕ್ತಿ ಇರುವವರ ಮೂಲಕ ಪ್ರಚಾರ ಆರಂಭಿಸಿದೆವು. ನಾನು ಸೇರಿದಂತೆ ಇನ್ನಷ್ಟು ಜನ ಕನ್ನಡಿಗರು ಶಿಕ್ಷಕರಾಗಿ ಸೇವೆ ಸಲ್ಲಿಸಲು ಸಿದ್ಧರಾದೆವು. ಇಂಟರ್‌ನೆಟ್‌ನಲ್ಲಿ ಲಭ್ಯವಿರುವ 'ಬಳಕೆ ಕನ್ನಡ' ಮಾಹಿತಿಗಳನ್ನು ಸಂಗ್ರಹಿಸಿ, 'ಮಾತನಾಡುವ ಕನ್ನಡ' ಪುಸ್ತಕವನ್ನು ಮುದ್ರಿಸಲಾಯಿತು. ಹೋದ ವರ್ಷ ಕನ್ನಡ ರಾಜ್ಯೋತ್ಸವದ ದಿನ ಮನೆ ಮನಗಳಿಗೆ ಕನ್ನಡ ಅಭಿಯಾನ ಘೋಷಿಸಲಾಯಿತು. ಪ್ರಥಮ ಪ್ರಯತ್ನದಲ್ಲಿಯೇ 200 ಆಸಕ್ತರು ಕಲಿಕೆಗಾಗಿ ನೋಂದಣಿ ಮಾಡಿಕೊಂಡರು' ಎಂದು ಸಾಫ್ಟ್‌ವೇರ್ ಉದ್ಯೋಗಿಯೂ ಆಗಿರುವ ವೆಂಕಟೇಶ್ ಹೇಳುತ್ತಾರೆ.

ಕಲಿಯುವವರು ಮತ್ತು ಕಲಿಸುವವರ ಸಮಯ ಹೊಂದಾಣಿಕೆ, ಆನ್‌ಲೈನ್ ತರಗತಿಗಳ ನಿಯೋಜನೆ ಇತ್ಯಾದಿ ಸವಾಲುಗಳನ್ನು ಮೀರಿ ನಿಂತರು. ಉಚ್ಚಾರಣೆ, ಸಂಭಾಷಣೆ, ಪದ ಪರಿಚಯ, ಸರಳ ವ್ಯಾಕರಣ, ಸನ್ನಿವೇಶಗಳಾಧಾರಿತ ಪಾಠಗಳು ಇತ್ಯಾದಿ ಅಂಶಗಳನ್ನು ಸೇರಿಸಿ ಪಾಠ ಆರಂಭಿಸಲಾಯಿತು. ವಾರದ ಎಲ್ಲ ದಿನಗಳಲ್ಲಿಯೂ ಕನಿಷ್ಠ ಒಂದು ಗಂಟೆ ಮೀಸಲಿಡಲಾಯಿತು.

'ಪರರಾಜ್ಯಗಳಿಂದ ಬಂದವರು ಮೂರು ಗುಂಪುಗಳಲ್ಲಿ ಕಲಿಯುತ್ತಿದ್ದಾರೆ. ಎರಡು ತಂಡಗಳಲ್ಲಿ 80 ಮತ್ತು ಮೂರನೇ ಗುಂಪಿನಲ್ಲಿ 30ಕ್ಕಿಂತ ಹೆಚ್ಚು ಜನ ಸಕ್ರಿಯವಾಗಿದ್ದಾರೆ. ಕನ್ನಡ ಕಲಿತಿದ್ದಾರೆ' ಎಂದು ವೆಂಕಟೇಶ್ ಹೇಳುತ್ತಾರೆ.

ಕನ್ನಡ ಕಲಿತವರಿಗಾಗಿ ಪರೀಕ್ಷೆಗಳನ್ನೂ ಮಾಡಲಾಗಿದೆ. ಅದರಲ್ಲಿ ಉತ್ತೀರ್ಣರಾದವರಿಗೆ ಬುಧವಾರದ ಕಾರ್ಯಕ್ರಮದಲ್ಲಿ 'ನನಗೆ ಕನ್ನಡ ಗೊತ್ತು' ಎಂಬ ನುಡಿಯಿರುವ ಪ್ರಮಾಣ ಪತ್ರ ನೀಡಲಾಗುತ್ತಿದೆ.

'ಕನ್ನಡ ಪ್ರಾಧಿಕಾರ ಮತ್ತಿತರ ಇಲಾಖೆಗಳು ಒಂದು ಕೋಟಿ ರೂಪಾಯಿಗಿಂತಲೂ ಹೆಚ್ಚು ಖರ್ಚು ಮಾಡಿ ಕಲಿಕಾ ಪಾಠ ತಯಾರಿಸುವ ಯೋಜನೆಗಳನ್ನು ಹಾಕಿಕೊಳ್ಳುತ್ತವೆ. ಆದರೆ ನಮ್ಮ ನಿವಾಸಿಗಳು ಈ ಕಾರ್ಯಗಳನ್ನು ಹೆಚ್ಚು ಖರ್ಚಿಲ್ಲದೇ, ಸದ್ದುಗದ್ದಲವಿಲ್ಲದೇ ಮಾಡಿದ್ದಾರೆ. ಈಗ ನಮ್ಮಲ್ಲಿ ಕನ್ನಡ ಕಲಿತಿರುವ ಉತ್ತರ ಭಾರತೀಯರು ತಮ್ಮ ಕಚೇರಿ, ಕುಟುಂಬ ಮತ್ತು ಸ್ನೇಹಿತರಿಗೂ ಪ್ರೇರಣೆಯಾಗುತ್ತಿದ್ದಾರೆ. ಕನ್ನಡ ಬೆಳೆಯುತ್ತಿದೆ' ಎಂದು ವೆಂಕಟೇಶ್ ಸಂತಸ ವ್ಯಕ್ತಪಡಿಸುತ್ತಾರೆ.

ಅನ್ಯ ಭಾಷಿಕರೊಂದಿಗೆ ಕೈಜೋಡಿಸಲು ಆಸಕ್ತಿ ಇರುವವರು ಸಂಪರ್ಕಿಸಿ, ಭಾರತೀಯ ಸಿಟಿ, ನಿಕೂ (1) ದೂರವಾಣಿ: 9845199940

ಸದಾಶಿವ ಆಯೋಗದ ವರದಿ ಜಾರಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗದ ವರದಿಯ ಶಿಫಾರಸುಗಳ ಜಾರಿ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಸಾಮಾಜಿಕ ನ್ಯಾಯಕ್ಕಾಗಿ ಪರಿಶಿಷ್ಟ ಜಾತಿಗಳ ಒಕ್ಕೂಟದ ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

'ಒಳಮೀಸಲಾತಿಗೆ ಸಂಬಂಧಿಸಿದ ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿದೆ. ಅದಕ್ಕೆ ನುರಿತ ಕಾನೂನು ತಜ್ಞರ ತಂಡವನ್ನು ರಚಿಸಿ ಸಾಮಾಜಿಕ, ಸಂವಿಧಾನಿಕ ಹಕ್ಕುಗಳ ರಕ್ಷಣೆ ಒತ್ತು ನೀಡಬೇಕು. ಪರಿಶಿಷ್ಟ ಜಾತಿಗಳ ನಿಗಮಗಳಿಗೆ ಹೆಚ್ಚಿನ ಅನುದಾನ ಒದಗಿಸಿ, ಜನಾಂಗ, ಪ್ರಾದೇಶಿಕವಾರು ಪ್ರಾತಿನಿಧ್ಯವನ್ನು ಖಾತರಿಪಡಿಸಬೇಕು' ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

'ರಾಜ್ಯದಲ್ಲಿ 10 ಲಕ್ಷ ಜನಸಂಖ್ಯೆ ಇರುವ ಸಮಗಾರ ಹರಳಯ್ಯ ಸಮಾಜಕ್ಕೆ ಪ್ರತ್ಯೇಕ ನಿಗಮ ಮಂಡಳಿ ಸ್ಥಾಪಿಸಬೇಕು. ರಾಯಚೂರು ಜಿಲ್ಲೆಯ ದಲಿತ ಮುಖಂಡ ಪ್ರಸಾದ್ ಮದ್ಲಾಪುರ ಹತ್ಯೆಗೆ ಕಾರಣರಾದ ಆರೋಪಿಗಳನ್ನು ಬಂಧಿಸಬೇಕು' ಎಂದು ಒತ್ತಾಯಿಸಿದರು.

ಸ್ಥಳಕ್ಕೆ ಭೇಟಿ: ಸ್ಥಳಕ್ಕೆ ಭೇಟಿ ನೀಡಿ ಮನವಿ ಸ್ವೀಕರಿಸಿದ ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ, 'ಪರಿಶಿಷ್ಟ ಸಮುದಾಯಗಳ ಮೀಸಲಾತಿ ಹಂಚಿಕೆ ಸಂಪುಟದ ಅನುಮೋದನೆ ಪಡೆದು ಕೇಂದ್ರದಲ್ಲಿ ಚರ್ಚೆಯಾದರೆ ಮಾತ್ರ ಒಳಮೀಸಲಾತಿ ಲಭಿಸುತ್ತದೆ. ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಚರ್ಚಿಸುತ್ತೇನೆ' ಎಂದು ಭರವಸೆ ನೀಡಿದರು.

'ಸದಾಶಿವ ಆಯೋಗದ ವರದಿಯನ್ನು ಜಾರಿಗೊಳಿಸುವ ಬಗ್ಗೆ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು' ಎಂದರು.

ಪ್ರತಿಭಟನೆಯಲ್ಲಿ ಹಿರಿಯೂರಿನ ಆದಿಜಾಂಬವ ಮಠದ ಷಡಕ್ಷರಮುನಿ ಸ್ವಾಮೀಜಿ, ಒಳಮೀಸಲಾತಿ ಹೋರಾಟದ ಮುಖಂಡರಾದ ಎನ್. ವೆಂಕಟೇಶ್, ಎನ್. ಮುನಿಸ್ವಾಮಿ, ಸಿ.ಎಸ್. ದ್ವಾರಕಾನಾಥ್, ಬಸವರಾಜ್ ಕೌತಾಳ, ಬಿ. ಗೋಪಾಲ್, ಅಂಬಣ್ಣ ಅರೋಲಿಕರ್ ಭಾಗವಹಿಸಿದ್ದರು.



ಸಾಮಾಜಿಕ ನ್ಯಾಯಕ್ಕಾಗಿ ಪರಿಶಿಷ್ಟ ಜಾತಿಗಳ ಒಕ್ಕೂಟದ ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟಿಸಿದರು –ಪ್ರಜಾವಾಣಿ ಚಿತ್ರ

ಛತ್ತೀಸಗಢದ ಸಾಧಕನಿಗೆ 'ರೋಹಿಣಿ ನಯ್ಯರ್' ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಛತ್ತೀಸಗಢದಲ್ಲಿ ಆದಿವಾಸಿಗಳ ಶ್ರೇಯೋಭಿವೃದ್ಧಿಗೆ ಶ್ರಮಿಸಿದ ಸಾಮಾಜಿಕ ಕಾರ್ಯಕರ್ತ ದೀನನಾಥ ರಜಪೂತ್ ಅವರಿಗೆ 'ರೋಹಿಣಿ ನಯ್ಯರ್ ಪ್ರಶಸ್ತಿ' ಪ್ರದಾನ ಮಾಡಲಾಯಿತು.

15ನೇ ಹಣಕಾಸು ಆಯೋಗದ ಅಧ್ಯಕ್ಷ ಎನ್.ಕೆ.ಸಿಂಗ್ ಅವರು, ರೋಹಿಣಿ ನಯ್ಯರ್ ಪ್ರತಿಷ್ಠಾನದ ಆಶ್ರಯದಲ್ಲಿ ಇಲ್ಲಿನ ಇಂಡಿಯಾ ಇಂಟರ್‌ನ್ಯಾಷನಲ್ ಸೆಂಟರ್‌ನಲ್ಲಿ ಮಂಗಳವಾರ ನಡೆದ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಿದರು. ಗ್ರಾಮೀಣ ಅಭಿವೃದ್ಧಿ ಕ್ಷೇತ್ರದಲ್ಲಿ ಮಾಡಿರುವ ಅನುಪಮ ಸೇವೆಗಾಗಿ ನೀಡುವ ಈ ಪ್ರಶಸ್ತಿಯು ₹10 ಲಕ್ಷ ನಗದು ಹಾಗೂ ಪ್ರಶಸ್ತಿ ಫಲಕವನ್ನು ಒಳಗೊಂಡಿದೆ.

ಪ್ರಶಸ್ತಿ ಪುರಸ್ಕೃತ ದೀನನಾಥ ರಜಪೂತ್, '2013ರಲ್ಲಿ ಎಂಜಿನಿಯರಿಂಗ್ ಪದವಿ ಪಡೆದ ಬಳಿಕ ಬೆಂಗಳೂರಿನಲ್ಲಿ ಐಟಿ ಕಂಪನಿಯೊಂದರಲ್ಲಿ ಉದ್ಯೋಗಕ್ಕೆ ಸೇರಿದೆ. ಆದರೆ, ಆ ಉದ್ಯೋಗದಲ್ಲಿ ತೃಪ್ತಿ ಸಿಗಲಿಲ್ಲ. ಗ್ರಾಮೀಣ ಜನರ ಸೇವೆ ಮಾಡಬೇಕು ಎಂಬ ಉದ್ದೇಶದಿಂದ ಆ ಉದ್ಯೋಗಕ್ಕೆ ರಾಜೀನಾಮೆ ನೀಡಿದೆ. ಕೃಷಿಕರ ಉತ್ಪನ್ನಗಳಿಗೆ ಉತ್ತಮ ದರ ಒದಗಿಸುವ ಉದ್ದೇಶದಿಂದ ಬಸ್ತಾರ್ ಜಿಲ್ಲೆಯಲ್ಲಿ 2018ರಲ್ಲಿ ಸಂಸ್ಥೆ ಆರಂಭಿಸಿದೆ. ಆರಂಭದಲ್ಲಿ 337 ಆದಿವಾಸಿ ಮಹಿಳೆಯರ ಕೃಷಿ ಉತ್ಪನ್ನಗಳಿಗೆ ಉತ್ತಮ ದರ ಒದಗಿಸಿ ಕೊಡಲಾಯಿತು. ಈಗ 6,100 ಕೃಷಿಕರಿಗೆ ಮಾರ್ಗದರ್ಶನ ನೀಡಲಾಗುತ್ತಿದೆ' ಎಂದರು.

ಪ್ರತಿಷ್ಠಾನದ ಅಧ್ಯಕ್ಷ ದೀಪಕ್ ನಯ್ಯರ್ ಮಾತನಾಡಿ, '2021ರ ಅಕ್ಟೋಬರ್‌ಲ್ಲಿ ನಿಧನರಾದ ಅರ್ಥಶಾಸ್ತ್ರಜ್ಞೆ ರೋಹಿಣಿ ನಯ್ಯರ್ ಅವರು ಗ್ರಾಮೀಣ ಅಭಿವೃದ್ಧಿ ಕ್ಷೇತ್ರದಲ್ಲಿ ಮಾಡಿರುವ ಮಹತ್ವದ ಕೆಲಸಗಳನ್ನು ಗೌರವಿಸುವ ದಿಸೆಯಲ್ಲಿ ಅವರ ಹೆಸರಿನಲ್ಲಿ ಪ್ರತೀವರ್ಷ ಪ್ರಶಸ್ತಿ ನೀಡಲಾಗುತ್ತಿದೆ. ಗ್ರಾಮೀಣ ಅಭಿವೃದ್ಧಿ ಕ್ಷೇತ್ರದಲ್ಲಿ ಮಹಿಳೆಯ ಹೆಸರಿನಲ್ಲಿ ನೀಡುತ್ತಿರುವ ಮೊದಲ ಪ್ರಶಸ್ತಿ ಇದಾಗಿದೆ. ಯುವ ಸಾಧಕರಿಗೆ ಗ್ರಾಮೀಣ ಕ್ಷೇತ್ರದಲ್ಲಿ ಕೆಲಸ ಮಾಡಲು ಈ ಪ್ರಶಸ್ತಿ ಇನ್ನಷ್ಟು ಉತ್ತೇಜನ ನೀಡಲಿದೆ. 40 ವರ್ಷದೊಳಗಿನ ಸಾಧಕರಿಗೆ ಈ ಪ್ರಶಸ್ತಿ ನೀಡಲಾಗುತ್ತಿದೆ' ಎಂದರು.



15ನೇ ಹಣಕಾಸು ಆಯೋಗದ ಅಧ್ಯಕ್ಷ ಎನ್. ಕೆ. ಸಿಂಗ್ ಅವರು ದೀನನಾಥ ರಜಪೂತ್ ಅವರಿಗೆ 'ರೋಹಿಣಿ ನಯ್ಯರ್ ಪ್ರಶಸ್ತಿ'ಯನ್ನು ಪ್ರದಾನ ಮಾಡಿದರು

ಬಿಬಿಎಂಪಿಗೆ ₹675 ಕೋಟಿ

ಬೆಂಗಳೂರು: ವಿಶೇಷ ಮೂಲಸೌಕರ್ಯ ಬಂಡವಾಳ ಬೆಂಬಲ ಯೋಜನೆಯಡಿ ಬಿಬಿಎಂಪಿಗೆ ಎರಡನೇ ಕಂತಿನಲ್ಲಿ ₹675 ಕೋಟಿ ಬಿಡುಗಡೆ ಮಾಡಿ ಸರ್ಕಾರ ಅ. 26ರಂದು ಆದೇಶ ಹೊರಡಿಸಿದೆ.

ಮುಖ್ಯಮಂತ್ರಿಯವರ ಅಮೃತ ನಗರೋತ್ಥಾನ ಯೋಜನೆಯಡಿ ₹3 ಸಾವಿರ ಕೋಟಿ ಅನುದಾನ ನಿಗದಿಪಡಿಸಲಾಗಿತ್ತು. ಇದರಲ್ಲಿ ₹675 ಕೋಟಿಯನ್ನು ಮೇ 3ರಂದು ಮೊದಲ ಕಂತಿನಲ್ಲಿ ಬಿಡುಗಡೆ ಮಾಡಲಾಗಿತ್ತು. ಬೃಹತ್ ರಸ್ತೆಗಳು, ಮೇಲ್ಸೇತುವೆ, ಕಾರಿಡಾರ್ ಮುಂತಾದ ಕಾಮಗಾರಿಗಳು ಪ್ರಗತಿಯಲ್ಲಿದ್ದು, ₹2,150 ಕೋಟಿ ಮೊತ್ತದ ಬಿಲ್‌ಗಳು ಪಾವತಿಯಾಗಿಲ್ಲ. ಇದನ್ನು ಸಕಾಲದಲ್ಲಿ ಪಾವತಿಸದಿದ್ದರೆ ಕಾಮಗಾರಿಗಳ ಪ್ರಗತಿ ಕುಂಠಿತವಾಗಬಹುದು ಎಂದು ಹೇಳಲಾಗಿದೆ.

ಎರಡನೇ ಕಂತಿನ ₹675 ಕೋಟಿಯಲ್ಲಿ ₹100 ಕೋಟಿಯನ್ನು ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ ಸಂಸ್ಥೆಗೆ (ಬಿಎಸ್‌ಡಬ್ಲ್ಯುಎಂಎಲ್) ಕೂಡಲೇ ಬಿಡುಗಡೆ ಮಾಡಬೇಕು ಎಂದು ಬಿಬಿಎಂಪಿಗೆ ಆದೇಶಿಸಲಾಗಿದೆ.

ಬಿಬಿಎಂಪಿಗೆ ನೀಡಿರುವ ಅನುದಾನದಲ್ಲಿ, ಪ್ರಗತಿಯಲ್ಲಿರುವ ಕಾಮಗಾರಿಗಳಿಗಷ್ಟೇ ಬಳಸಲು ಬಿಎಸ್‌ಡಬ್ಲ್ಯುಎಂಎಲ್‌ಗೆ ನಿರ್ದೇಶಿಸಲಾಗಿದೆ. ಕಂದಾಯ, ಆಡಳಿತಾತ್ಮಕ ವೆಚ್ಚಗಳಿಗೆ ಬಳಸುವಂತಿಲ್ಲ ಎಂದು ಷರತ್ತು ವಿಧಿಸಲಾಗಿದೆ.

'ಜೇಷ್ಠತೆ ಆಧಾರದಲ್ಲಿ ಪಾವತಿಸಲಿ': 'ರಾಜ್ಯ ಸರ್ಕಾರ ಬಿಡುಗಡೆ ಮಾಡಿರುವ ಅನುದಾನವನ್ನು ಗುತ್ತಿಗೆದಾರರಿಗೆ ಜೇಷ್ಠತೆ ಆಧಾರದಲ್ಲಿ ಪಾವತಿಸಲಿ. ಕಳೆದಬಾರಿ ಕಾಮಗಾರಿಗಳನ್ನು ವರ್ಗೀಕರಿಸಿ ಹಣ ಬಿಡುಗಡೆ ಮಾಡಲಾಗಿತ್ತು. ಅದರಂತೆ ಈ ಬಾರಿ ಆಗುವುದು ಬೇಡ' ಎಂದು ಬಿಬಿಎಂಪಿ ಗುತ್ತಿಗೆದಾರರ ಸಂಘದ ಕಾರ್ಯಾಧ್ಯಕ್ಷ ಜಿ.ಎಂ. ರವೀಂದ್ರ ಆಗ್ರಹಿಸಿದರು.

ಚಿರತೆ ಸೆರೆಗೆ ಮುಂದುವರಿದ ಶೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಂಗಸಂದ್ರ ಭಾಗದಲ್ಲಿ ಕಾಣಿಸಿಕೊಂಡು ಸಾರ್ವಜನಿಕರಲ್ಲಿ ಆತಂಕ ಮೂಡಿಸಿರುವ ಚಿರತೆ ಸೆರೆಗೆ ಮಂಗಳವಾರವೂ ಅರಣ್ಯ ಇಲಾಖೆ ಸಿಬ್ಬಂದಿ ಕಾರ್ಯಾಚರಣೆ ನಡೆಸಿದರು. ಆದರೆ ಚಿರತೆಯ ಸುಳಿವು ಸಿಕ್ಕಿಲ್ಲ.

ಎಸಿಎಸ್ ಲೇಔಟ್ ಅಪಾರ್ಟ್‌ಮೆಂಟ್ ಸುತ್ತಮುತ್ತ ಹಾಗೂ ಸಮೀಪದ ಅರಣ್ಯ ಪ್ರದೇಶದಲ್ಲಿ ಶೋಧ ಕಾರ್ಯ ನಡೆಸಲಾಯಿತು. ಕಾರ್ಯಾಚರಣೆಗೆ ಮೈಸೂರಿನಿಂದ ವಿಶೇಷ ತಂಡ ಬಂದಿತ್ತು. ಥರ್ಮಲ್ ಡ್ರೋನ್ ಮೂಲಕವೂ ಕಾರ್ಯಾಚರಣೆ ನಡೆಸಿದರೂ ಚಿರತೆ ಸುಳಿವು ಪತ್ತೆಯಾಗಿಲ್ಲ. ಇದು ಸ್ಥಳೀಯರಲ್ಲಿ ಆತಂಕಕ್ಕೆ ಕಾರಣವಾಗಿದೆ.

ಕೂಡ್ಲು ಸಮೀಪದ ಕೃಷ್ಣಾರೆಡ್ಡಿ ಇಂಡಸ್ಟ್ರಿಯಲ್ ಲೇಔಟ್‌ನ ಬಾಳುಬಿದ್ದ ಬೃಹತ್ ಕಟ್ಟಡವೊಂದರಲ್ಲಿ ಕಾರ್ಯಾಚರಣೆ ನಡೆಸಲಾಯಿತು. ಆದರೆ, ಚಿರತೆಯ ಸುಳಿವು ಅಲ್ಲಿಯೂ ಸಿಗಲಿಲ್ಲ. ಕಟ್ಟಡದ ಸುತ್ತಮುತ್ತಲಿನ ಐದು ಸ್ಥಳದಲ್ಲಿ ಬೋನ್‌ಗಳನ್ನು ಇಡಲಾಗಿದೆ.

'ಥರ್ಮಲ್ ಇಮೇಜ್ ಕ್ಯಾಮೆರಾ ಬಳಕೆ'

ಬೆಂಗಳೂರು: ಥರ್ಮಲ್ ಇಮೇಜ್ ಕ್ಯಾಮೆರಾಗಳನ್ನು ಬಳಸಿ ರಾತ್ರಿ ವೇಳೆಯೂ ಚಿರತೆ ಪತ್ತೆ ಕಾರ್ಯಾಚರಣೆ ಮಾಡಲು ಅರಣ್ಯ ಪರಿಣತರ ಪಡೆಯನ್ನು ಸಜ್ಜುಗೊಳಿಸಲಾಗಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು.

ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ನಗರದಲ್ಲಿ ಚಿರತೆ ಕಾಣಿಸಿಕೊಂಡಿರುವುದು ಆತಂಕ ಸೃಷ್ಟಿಸಿದೆ. ಆಧುನಿಕ ತಂತ್ರಜ್ಞಾನ ಬಳಸಿ ಚಿರತೆ ಸೆರೆಗೆ ಇಲಾಖೆ ಪ್ರಯತ್ನಿಸುತ್ತಿದೆ. ಡ್ರೋನ್ ಕ್ಯಾಮೆರಾಗಳ ನೆರವಿನಿಂದಲೂ ಶೋಧ ನಡೆಸುತ್ತಿದೆ. ಈಗಾಗಲೇ ಚಿರತೆ ಓಡಾಡಿರುವ ಸ್ಥಳದಲ್ಲಿ ಬೋನುಗಳನ್ನು ಇಡಲಾಗಿದೆ ಎಂದು ಹೇಳಿದರು.



ಚಿರತೆ ಸೆರೆಗೆ ಬೋನ್ ತರಲಾಯಿತು

ರಾಜ್ಯೋತ್ಸವ ವಿಶೇಷ

ಧ್ವಜಾರೋಹಣ: ಆಯೋಜನೆ ಮತ್ತು ಸ್ಥಳ: ಬಿಬಿಎಂಪಿ ಕೇಂದ್ರ ಕಚೇರಿ, ಬೆಳಿಗ್ಗೆ 7.30

ಧ್ವಜಾರೋಹಣ: ವಿಪುಲಾ ದೇವಿ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಆವರಣ, ಹೊಂಬೇಗೌಡನಗರ, ಬೆಳಿಗ್ಗೆ 7.30

ಕವಿಗಳ ಪ್ರತಿಮೆಗಳಿಗೆ ಮಾಲಾರ್ಪಣೆ: ಕನ್ನಡ ಚಿಂತನೆ: ಆರ್.ಲಕ್ಷ್ಮೀನಾರಾಯಣ, ಅಧ್ಯಕ್ಷತೆ: ಆರ್.ಶೇಷಶಾಸ್ತ್ರಿ, ಆಯೋಜನೆ: ಕನ್ನಡ ಗೆಳೆಯರ ಬಳಗ, ಸ್ಥಳ: ಬಿ.ಎಂ. ಶ್ರೀ ಪ್ರತಿಮೆ ಎದುರು, ಬಸವನಗುಡಿ ನ್ಯಾಷನಲ್ ಕಾಲೇಜು ವೃತ್ತ, ಬೆಳಿಗ್ಗೆ 7.30ರಿಂದ

ಧ್ವಜಾರೋಹಣ: ಅತಿಥಿಗಳು: ಶಾಂತಪ್ಪ ಜಡೆಮ್ಮನವರ್, ಆಯೋಜನೆ ಮತ್ತು ಸ್ಥಳ: ಮಹಾತ್ಮ ಉದ್ಯಾನ ವಾಯುವಿಹಾರಿಗಳ ಸಂಘ, ನಾಗರಭಾವಿ, 2ನೇ ಹಂತ, ಬೆಳಿಗ್ಗೆ 8

ಪರಮೇಶ್ವರ ಪುಲಿಕೇಶಿ ಪ್ರಶಸ್ತಿ ಪ್ರದಾನ, ಧ್ವಜಾರೋಹಣ: ಕುರುಬೂರು ಶಾಂತಕುಮಾರ್, 'ಮುಖ್ಯಮಂತ್ರಿ' ಚಂದ್ರು, ಅಧ್ಯಕ್ಷತೆ: ಗುರುದೇವ್ ನಾರಾಯಣಕುಮಾರ್, ಅತಿಥಿಗಳು: ಎಂ.ವೆಂಕಟಸ್ವಾಮಿ, ಸಿ.ಕೆ.ರಾಮೇಗೌಡ, ಶಿವಣ್ಣ ಎನ್.ಕೆ. ಪ್ರಶಸ್ತಿ ಪುರಸ್ಕೃತರು: ಟಿ.ಜೆ.ರೇಣುಕಾ, ದೇವರಕೊಂಡ ರೆಡ್ಡಿ, ಎಂ.ಜಗದೀಶ್, ನಿರಂಜನಾರಾಧ್ಯ ವಿ.ಪಿ., ಸೋಮಸುಂದರ ರೆಡ್ಡಿ, ಆಯೋಜನೆ: ಅಖಿಲ ಕರ್ನಾಟಕ ಕನ್ನಡ ಚಳವಳಿ ಕೇಂದ್ರ ಸಮಿತಿ, ಸ್ಥಳ: ಪರಮೇಶ್ವರ ಪುಲಿಕೇಶಿ ಮಹಾಮಂಟಪ, ಬನ್ನಪ್ಪ ಆಟದ ಮೈದಾನ, ಕೆಂಪೇಗೌಡ ರಸ್ತೆ, ಬೆಳಿಗ್ಗೆ 8ರಿಂದ

ಪುಸ್ತಕ ಜಾತ್ರೆ: ಉದ್ಘಾಟನೆ: ಕಮಲಾ ಹಂಪನಾ, ಸಪ್ತಮಿಗೌಡ, ಅತಿಥಿಗಳು: ಕೃತ್ತಿಕಾ ಶ್ರೀನಿವಾಸ್, ದೊಡ್ಡರಂಗೇಗೌಡ, ಆಯೋಜನೆ ಮತ್ತು ಸ್ಥಳ: ಸಪ್ನ ಬುಕ್ ಹೌಸ್, ಗಾಂಧಿನಗರ, ಬೆಳಿಗ್ಗೆ 10



ಸಪ್ತಮಿಗೌಡ

ಧ್ವಜಾರೋಹಣ: ಅತಿಥಿಗಳು: ಬಿ.ಎಚ್. ಚಂದ್ರಶೇಖರ್, ವೈ.ವಿ.ಲೋಕನಾಥ್, ಪ್ರಕಾಶ್ ನಾಯ್ಕ್, ಪ್ರವೀಣ್, ನಾಗರಾಜು, ರಿಯಾಜ್, ನರಸಿಂಹ, ಮಾಯಬ್ರಹ್ಮಾಚಾರ್, ಆಯೋಜನೆ: ಬಿ.ಇ.ಎಂಎಲ್. ಬಡಾವಣೆ ನಾಗರಿಕರ ಹಿತರಕ್ಷಣಾ ವೇದಿಕೆ, ಸ್ಥಳ: ಟಿ.ಎನ್. ಬಾಲಕೃಷ್ಣ ಬಯಲು ರಂಗಮಂದಿರ, ರಾಜರಾಜೇಶ್ವರಿನಗರ, ಬೆಳಿಗ್ಗೆ 9

ಕರ್ನಾಟಕ ರಾಜ್ಯೋತ್ಸವ: ಅತಿಥಿ: ಮೈಸೂರು ಆನಂದ್, ಅಧ್ಯಕ್ಷತೆ: ಜೋಯ್ ರೋಡ್ರಿಗಸ್ ಸ್ವಾಮಿ, ಆಯೋಜನೆ ಮತ್ತು ಸ್ಥಳ: ಸಂತ ಜೋಸೆಫರ ಪದವಿಪೂರ್ವ ಕಾಲೇಜು, ಫೀಲ್ಡ್ ಮಾರ್ಷಲ್ ಕೆ.ಎಂ.ಕಾರಿಯಪ್ಪ ರಸ್ತೆ, ಬೆಳಿಗ್ಗೆ 9

ಡಿ.ವಿ.ಜಿ ಅವರಿಗೆ ನುಡಿ ನಮನ: ಉದ್ಘಾಟನೆ: ಎಸ್.ಪಿನಾಕಪಾಣಿ, ಅಧ್ಯಕ್ಷತೆ: ಕಟ್ಟೆ ಸತ್ಯನಾರಾಯಣ, ಅತಿಥಿಗಳು: ಭಾಸ್ಕರ್ ರಾವ್, ಸಮೀವುಲ್ಲಾಖಾನ್, ಆಯೋಜನೆ: ಡಿ.ವಿ.ಜಿ ಕನ್ನಡ ಬಳಗ, ಸ್ಥಳ: ಕಹಳೆ ಬಂಡೆ ಉದ್ಯಾನ, ಬಸವನಗುಡಿ, ಬೆಳಿಗ್ಗೆ 9

'ಹೊತ್ತಿಗೆ ದಿಬ್ಬಣ' 11 ಪುಸ್ತಕಗಳ ಬಿಡುಗಡೆ: ಅತಿಥಿಗಳು: ವಿದ್ಯಾಭೂಷಣ, ಟಿ.ಎಸ್.ನಾಗಾಭರಣ, ಬೊಳುವಾರು ಮಹಮದ್ ಕುಂಞ, ಮೊಗಳ್ಳಿ ಗಣೇಶ, ವಿಜಯಮ್ಮ, ಕೆ.ಎನ್.ಗಣೇಶಯ್ಯ, ಚ.ಸರ್ವಮಂಗಳ, ಪುಸ್ತಕಗಳ ಕುರಿತು: ಕುಸುಮ ಆನಂದ್, ಶೋಭಾ ರಾವ್, ಆಶಯ ನುಡಿ: ವೀರಕಪುತ್ರ ಶ್ರೀನಿವಾಸ, ಆಯೋಜನೆ: ವೀರಲೋಕ ಪುಸ್ತಕ, ಸ್ಥಳ: ಸಿ.ಅಶ್ವತ್ಥ ಕಲಾಭವನ, ಎನ್.ಆರ್. ಕಾಲೊನಿ, ಬೆಳಿಗ್ಗೆ 9.30

ವಿವಿಧ ಕಾರ್ಯಕ್ರಮ: ದೇಶಭಕ್ತಿ ಗೀತೆಗಳು, ರಸಪ್ರಶ್ನೆ, ಭರತನಾಟ್ಯ, ಪುಸ್ತಕದಾನ, 'ಕನ್ನಡ–ಕನ್ನಡಿಗ–ಕರ್ನಾಟಕ' ಕುರಿತು ಸಾರ್ವಜನಿಕರ ಸಂವಾದ, ಸ್ಥಳ: ಸೆಂಟ್ರಲ್ ಕಾಲೇಜು ಹಳೆಯ ವಿದ್ಯಾರ್ಥಿಗಳ ಸಂಘದ ಕಟ್ಟಡದ ಮುಂಭಾಗ, ಬೆಳಿಗ್ಗೆ 9.30

ಧ್ವಜಾರೋಹಣ: ಯು.ಬಿ. ವೆಂಕಟೇಶ್, ಕನ್ನಡ ದೀಪದ ಉದ್ಘಾಟನೆ: ಕುಮಾರ ಚಂದ್ರಶೇಖರ ಸ್ವಾಮೀಜಿ, ಅತಿಥಿಗಳು: ಎಲ್.ಎ. ರವಿಸುಬ್ರಮಣ್ಯ, ಕೆ.ವಿ.ಶಂಕರ್, ಎಚ್.ಶ್ರೀನಿವಾಸ್, ಮಹಾಲಿಂಗೇಗೌಡ, ರಮೇಶ್ ವಿ. ಶೆಟ್ಟಿ, ಲೀಲಮ್ಮ, ಆಯೋಜನೆ: ಶ್ರೀನಗರ ಕನ್ನಡ ರಾಜ್ಯೋತ್ಸವ ಸಮಿತಿ, ಸ್ಥಳ: 11ನೇ ಮುಖ್ಯರಸ್ತೆ, ಶ್ರೀನಗರ, ಬೆಳಿಗ್ಗೆ 9.30

ಕರ್ನಾಟಕ ರಾಜ್ಯೋತ್ಸವ; ಅತಿಥಿ: ಚ.ಹ.ರಘುನಾಥ, ಅಧ್ಯಕ್ಷತೆ: ಪ್ರಸಾದಸ್ವಾಮಿ ಎಸ್., ಆಯೋಜನೆ ಮತ್ತು ಸ್ಥಳ: ಸರ್ಕಾರಿ ಪ್ರಥಮದರ್ಜೆ ಕಾಲೇಜು, ಟಿ. ದಾಸರಹಳ್ಳಿ, ಬೆಳಿಗ್ಗೆ 10

ಕನ್ನಡ ಪುಸ್ತಕ ಹಬ್ಬದ ಉದ್ಘಾಟನೆ: ಸುಚೇಂದ್ರ ಪ್ರಸಾದ್, ಅತಿಥಿಗಳು: ಸುದರ್ಶನ ಚನ್ನಂಗಿಹಳ್ಳಿ, ರಘುನಂದನ್ ಬೆಳಿಗ್ಗೆ 11, 'ಸಂಸ್ಕೃತಿ' ಪುಸ್ತಕ ಬಿಡುಗಡೆ: ಗುರುರಾಜ ಕರಜಗಿ, ಅತಿಥಿ: ರವಿ ಹೆಗಡೆ, ಆಯೋಜನೆ: ರಾಷ್ಟ್ರೋತ್ಥಾನ ಸಾಹಿತ್ಯ, ಸ್ಥಳ: ಕೇಶವಶಿಲ್ಪ ಸಭಾಂಗಣ, ರಾಷ್ಟ್ರೋತ್ಥಾನ ಪರಿಷತ್, ಕೆಂಪೇಗೌಡನಗರ, ಸಂಜೆ 5



ಗುರುರಾಜ ಕರಜಗಿ

ಆಯುರ್ವೇದ ಚಿಕಿತ್ಸಾ ಶಿಬಿರ, ಧನ್ವಂತರಿ ಪುರಸ್ಕಾರ ಪ್ರದಾನ: ಪುರಸ್ಕೃತರು: ಜಗನ್ನಾಥ ವಿ.ಪೈ., ಶ್ರೀನಿವಾಸ ಸಾಸ್ತಾನ, ವಿಷ್ಣುಮೂರ್ತಿ ಆರೂರು, ಗಣೇಶ ಉಡುಪ, ಅತಿಥಿಗಳು: ಉದಯ ಗರುಡಾಚಾರ್, ಮಹೇಶ ಜೋಶಿ, ಎಂ.ವಿ. ನಾರಾಯಣ ಮೂರ್ತಿ, ನಾಗರಾಜ ಉಪಾಧ್ಯ, ಆಯೋಜನೆ: ದಕ್ಷಿಣ ಕನ್ನಡಿಗರ ಸಂಘ, ಸ್ಥಳ: ಪೂರ್ಣಿಮಾ ರೀಜೆನ್ಸಿ, ವಿಲ್ಸನ್‌ಗಾರ್ಡನ್, ಬೆಳಿಗ್ಗೆ 10

ಮೆಲ್ಲುಸಿರೇ ಸವಿಗಾನ: ಪ್ರಸ್ತುತಿ: ರಾಮಚಂದ್ರ ಹಡಪದ ಮತ್ತು ತಂಡ, ಅಧ್ಯಕ್ಷತೆ: ರಾಮನ್ ಕೆ., ಅತಿಥಿಗಳು: ಮಹೇಶ ಜೋಶಿ, ಉಪಸ್ಥಿತಿ: ರಮೇಶ್ ಕುಮಾರ್, ಮಂಜುನಾಥ್ ಕೆ.ಸಿ., ಸಿ.ಧರ್ಮರಾಜು, ಕೆ.ದೊರೈ, ಆಯೋಜನೆ: ಕರ್ನಾಟಕ ವಾಣಿಜ್ಯ ತೆರಿಗೆಗಳ ಸೇವಾ ಸಂಘ, ಸ್ಥಳ: ತೆರಿಗೆ ಭವನ, ನಾಗರಭಾವಿ, ಬೆಳಿಗ್ಗೆ 10.30

ಹೆಸರಾಯಿತು ಕರ್ನಾಟಕ–50: ಉದ್ಘಾಟನೆ: ಎನ್.ಸಿ.ಶ್ರೀನಿವಾಸ, ಆಶಯ ನುಡಿ: ಟಿ.ವಿ.ವೆಂಕಟಾಚಲಶಾಸ್ತ್ರಿ, ಅಧ್ಯಕ್ಷತೆ: ಮಹೇಶ ಜೋಶಿ, ಸನ್ಮಾನ: ಶರ್ಮಾಸ್ ವಲಿ, ಆಯೋಜನೆ ಮತ್ತು ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಚಾಮರಾಜಪೇಟೆ, ಬೆಳಿಗ್ಗೆ 10.30

ನಗರ ದೇವತೆ ಕನ್ನಡ ತಾಯಿ ಅಣ್ಣಮ್ಮ ದೇವತೆ ಮೆರವಣಿಗೆಗೆ ಚಾಲನೆ: ಸಿದ್ದರಾಮಯ್ಯ, ಅತಿಥಿ: ತುಷಾರ್ ಗಿರಿನಾಥ್, ಉಪಸ್ಥಿತಿ: ರಾಕೇಶ್ ಸಿಂಗ್, ಅಧ್ಯಕ್ಷತೆ: ವಾಟಾಳ್ ನಾಗರಾಜ್, ಆಯೋಜನೆ: ಕರ್ನಾಟಕ ರಾಜ್ಯೋತ್ಸವ ಸಮಿತಿ, ಸ್ಥಳ: ಮೈಸೂರು ಬ್ಯಾಂಕ್ ಹತ್ತಿರ, ಬೆಳಿಗ್ಗೆ 10.30

ಧ್ವಜಾರೋಹಣ, ಮೆರವಣಿಗೆಗೆ ಚಾಲನೆ: ಸಿದ್ದರಾಮಯ್ಯ, ಅತಿಥಿಗಳು: ಜಮೀರ್ ಅಹಮ್ಮದ್ ಖಾನ್, ಪಿ.ಸಿ.ಮೋಹನ್, ರಾಮಲಿಂಗಾರೆಡ್ಡಿ, ಮಹಮ್ಮದ್ ಹ್ಯಾರಿಸ್ ನಲಪಾಡ್, ಸೌಮ್ಯ ರೆಡ್ಡಿ, ಆಯೋಜನೆ: ಚಾಮರಾಜಪೇಟೆ ನಾಡಹಬ್ಬದ ಕನ್ನಡ ರಾಜ್ಯೋತ್ಸವ ಸಮಿತಿ, ಸ್ಥಳ: 3ನೇ ಮುಖ್ಯರಸ್ತೆ, ಚಾಮರಾಜಪೇಟೆ, ಬೆಳಿಗ್ಗೆ 10.30

ರಾಜ್ಯೋತ್ಸವ ಪ್ರಶಸ್ತಿ ಪ್ರದಾನ: ಉದ್ಘಾಟನೆ: ಭಾಗೀರಥಿ ಕನ್ನಡತಿ, ಅನಿತಾ ಪಿ.ಕೆ., ಅಧ್ಯಕ್ಷತೆ: ಅಂಬರೀಷ್ ಜಿ., ಪ್ರಶಸ್ತಿ ಪುರಸ್ಕೃತರು: ಎಚ್. ಎಸ್.ಪ್ರತಿಮಾ, ಶುಭಾ ಕೃಪೇಶ್, ಆಶಾ, ಮಹೇಶ್ ಕೆ.ಎಚ್., ಮನೋ, ಆಯೋಜನೆ: ಮಂದಗೆರೆ ಕಲೆ ಸಾಹಿತ್ಯ ಸಾಂಸ್ಕೃತಿಕ ವೇದಿಕೆ, ಮಂದಗೆರೆ ಮಾಧ್ಯಮ ಸಂಪರ್ಕ ಕೇಂದ್ರ, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10.30

ಸಂಗೀತ ಕಾರ್ಯಕ್ರಮ: ಚಂದ್ರು ಮೆಲೋಡಿಸ್ ತಂಡ, ಅತಿಥಿಗಳು: ಗೋವರ್ಧನ್ ರೆಡ್ಡಿ, ಅಶ್ವನಿ ಮೋಹನ್, ಬಿ. ಮೋಹನ್, ಕಾವ್ಯ ಶಂಕರ, ಮುರುಗೇಶ್ ಮೊದಲಿಯರ್, ಚಾಂದ್ ಪಾಷ, ಆಯೋಜನೆ: ನಾಡಪ್ರಭು ಕೆಂಪೇಗೌಡ ಪುನೀತ್ ರಾಜ್‌ಕುಮಾರ್ ಕನ್ನಡ ಸೇವಾ ಟ್ರಸ್ಟ್, ಸ್ಥಳ: ಬಿಬಿಎಂಪಿ ಸಮುದಾಯ ಭವನ ರಾಜೇಂದ್ರನಗರ, ಬೆಳಿಗ್ಗೆ 10.30

ಧ್ವಜಾರೋಹಣ: ಸಾಂಸ್ಕೃತಿಕ ಕಾರ್ಯಕ್ರಮಗಳು, ಆಯೋಜನೆ: ಜಯ ಕರ್ನಾಟಕ ಜನಪರ ವೇದಿಕೆ, ಸ್ಥಳ: ಬಾರ್ಟನ್ ಸೆಂಟರ್ ಮುಂಭಾಗ, ಎಂ.ಜಿ. ರಸ್ತೆ, ಬೆಳಿಗ್ಗೆ 10.30

ಧ್ವಜಾರೋಹಣ: ಕಮಲ್ ಕುಮಾರ್ ಅಗರವಾಲ್, ಅತಿಥಿಗಳು: ಜಿ.ಬಿ. ಹರೀಶ, ವಸಂತ ಕುಮಾರಿ, ಅಧ್ಯಕ್ಷತೆ: ಮ.ಚಂದ್ರಶೇಖರ್, ಆಯೋಜನೆ: ಕೇಂದ್ರೀಯ ಸದನ ಕನ್ನಡ ಸಂಘ, ಸ್ಥಳ: ಧ್ವಜ ಸ್ತಂಭದ ಹತ್ತಿರ, ಕೇಂದ್ರೀಯ ಸದನ, ಕೋರಮಂಗಲ, ಬೆಳಿಗ್ಗೆ 11

ಕರ್ನಾಟಕ ರಾಜ್ಯೋತ್ಸವ: ಅತಿಥಿಗಳು: ಲಕ್ಷ್ಮಿ, ಗೋವಿಂದರಾಜ್, ವಿನಯ್ ರಾಜ್‌ಕುಮಾರ್, ಷಣ್ಮುಖ, ಎನ್. ಸಿದ್ಧರಾಜು, ಸಾ.ರಾ. ಗೋವಿಂದು, ಪುಟ್ಟಣ್ಣ, ಸುದರ್ಶನ್, ಆಯೋಜನೆ: ಡಾ.ರಾಜ್‌ಕುಮಾರ್ ಸೇನೆ, ಸ್ಥಳ: ಪ್ರಕಾಶ್‌ನಗರ ಸಂಘದ ಆವರಣ, ಬೆಳಿಗ್ಗೆ 11

'ಶ್ರೀಕೃಷ್ಣ ಸಂಧಾನ' ಯಕ್ಷಗಾನ ಪ್ರದರ್ಶನ: ಹಿಮ್ಮೇಳ: ಸತೀಶ್ ಹೆಗಡೆ, ನಂದನ್ ಹೆಗಡೆ, ಗಜಾನನ ಹೆಗಡೆ, ಮದ್ದಳೆ: ನಾರಾಯಣ ಹೆಬ್ಬಾರ್, ನಾರಾಯಣ ಮೂರ್ತಿ ಹೊಸಬಾಳೆ, ಚಂಡೆ: ಭಾವನ ಮಳಗೀಮನೆ, ಆಯೋಜನೆ: ನಿರ್ಮಾಣ್ ಯಕ್ಷ ಬಳಗ, ಸ್ಥಳ: ಮಾರುತಿ ಜ್ಯೋತಿಷಾಲಯ, ವಿಜಯನಗರ, ಮಧ್ಯಾಹ್ನ 3

ನಾಟಕಗಳ ಪ್ರದರ್ಶನ: 'ಸುಮ್ಮನೆ' ಮಧ್ಯಾಹ್ನ 3ಕ್ಕೆ, 'ಮಲ್ಲಿಗೆ ತೋಟದಲ್ಲಿ ಮರ್ಡರ್' ನಿರ್ದೇಶನ: ರಾಜೇಂದ್ರ ಕಾರಂತ, ಆಯೋಜನೆ: ನಮ್ಮೆ ನಟನೆ, ಸ್ಥಳ: ಕೆ.ಎಚ್. ಕಲಾಸೌಧ, ಹನುಮಂತನಗರ, ಸಂಜೆ 7.30

ಪೊಲೀಸ್ ಸಮೂಹ ವಾದ್ಯಮೇಳ: ಅತಿಥಿ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಜಿ. ಪರಮೇಶ್ವರ್, ಆಯೋಜನೆ: ಪೊಲೀಸ್ ಇಲಾಖೆ, ಸ್ಥಳ: ವಿಧಾನಸೌಧದ ಮೆಟ್ಟಿಲುಗಳು, ಸಂಜೆ 5.30

'ತತ್ವಪದ–ಕನ್ನಡ ಬದುಕಿನ ಜೀವನದಿ' ಒಂದು ಚಿಂತನೆ: ಎಸ್. ನಟರಾಜ ಬೂದಾಳು, ತತ್ವಪದ ಗಾಯನ: ಪಿಚ್ಚಳ್ಳಿ ಶ್ರೀನಿವಾಸ್, ಆಯೋಜನೆ ಮತ್ತು ಸ್ಥಳ: ರಂಗ ಶಂಕರ, ಜೆ.ಪಿ. ನಗರ, ಸಂಜೆ 5.30

ರಾಜೋತ್ಸವ ಪ್ರಶಸ್ತಿ ಪ್ರದಾನ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಶಿವರಾಜ ಎಸ್. ತಂಗಡಗಿ, ಅತಿಥಿ: ತೇಜಸ್ವಿ ಸೂರ್ಯ, ಅಧ್ಯಕ್ಷತೆ: ಉದಯ್ ಬಿ.ಗರುಡಾಚಾರ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 7.30

ನಗರದಲ್ಲಿ ಇಂದು

'ಕರ್ನಾಟಕ ವೈಭವ' ಪುಸ್ತಕ ಬಿಡುಗಡೆ: ರೋಹಿತ್ ಚಕ್ರತೀರ್ಥ, ಉಪಸ್ಥಿತಿ: ಸದ್ಯೋಜಾತ ಭಟ್ಟ, ರಘುನಂದನ್, ಆಯೋಜನೆ: ಪ್ರಜ್ಞಾ ಪ್ರವಾಹ, ಸ್ಥಳ: ಎಸ್. ಜೆ.ಆರ್.ಸಿ ಕಾಲೇಜು ಸಭಾಂಗಣ, ಆನಂದರಾವ್ ವೃತ್ತ, ಸಂಜೆ 5.30

53ನೇ ಸಂಗೀತ ಸಮ್ಮೇಳನದ ಸಂಗೀತ ಕಛೇರಿ: 'ಶ್ರೀರಾಮಕಥ' ಭರತನಾಟ್ಯ ಪ್ರದರ್ಶನ: ಸತ್ಯನಾರಾಯಣ ರಾಜು, ಸಂಗೀತ: ಡಿ.ಆರ್.ಶ್ರೀವತ್ಸ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್.ರಸ್ತೆ, ಸಂಜೆ 6

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಕಾರು ಗುದ್ದಿಸಿ ಕೊಲೆ ಐವರ ಬಂಧನ

ಬೆಂಗಳೂರು: ಪುಲಕೇಶಿನಗರದಲ್ಲಿ ಇತ್ತೀಚೆಗೆ ನಡೆದಿದ್ದ ಅಸ್ಗರ್ ಕೊಲೆ ಪ್ರಕರಣವನ್ನು ಪೊಲೀಸರು ಭೇದಿಸಿದ್ದಾರೆ. ಅಮ್ರಿನ್, ನಯಾಜ್ ಸೇರಿ ಐವರನ್ನು ಬಂಧಿಸಲಾಗಿದೆ.

ಅ.20ರಂದು ಪಾಟರಿ ವೃತ್ತದಲ್ಲಿ ಕಾರು ಡಿಕ್ಕಿಯಾಗಿ ಅಸ್ಗರ್ ಮೃತಪಟ್ಟಿದ್ದರು. 'ಇದು ಅಪಘಾತ' ಎಂದು ಭಾವಿಸಲಾಗಿತ್ತು. ಪೊಲೀಸರ ತನಿಖೆಯಲ್ಲಿ 'ಇದು ಕೊಲೆ ಎಂಬುದು ಗೊತ್ತಾಗಿದೆ.

'ಅಸ್ಗರ್ ಹಾಗೂ ಬಂಧಿತ ಆರೋಪಿಗಳು ಪರಿಚಯಸ್ಥರು. ಹಳೆ ಕಾರು ಮಾರಾಟ ವ್ಯವಹಾರ ನಡೆಸುತ್ತಿದ್ದರು. ಬಂಧಿತರು ಅಸ್ಗರ್ ಬಳಿ ಕಾರು ಖರೀದಿಸಿದ್ದರು. ಹಣದ ವಿಚಾರಕ್ಕೆ ಗಲಾಟೆ ನಡೆದಿತ್ತು. ಆರೋಪಿಗಳು ಹಲ್ಲೆ ನಡೆಸಿದ್ದರಿಂದ, ಅಸ್ಗರ್ ಜೆ.ಸಿ.ನಗರ ಠಾಣೆಗೆ ದೂರು ನೀಡಿದ್ದರು. ದೂರಿನ ವಿಚಾರವಾಗಿ ಸ್ಥಳವೊಂದಕ್ಕೆ ಕರೆಸಿದ್ದರು' ಎಂದು ಪೊಲೀಸರು ಹೇಳಿದರು.

'ಅ.20ರಂದು ರಾತ್ರಿ ಅಸ್ಗರ್ ಅವರು ಸ್ನೇಹಿತನನ್ನು ಬೈಕ್‌ನಲ್ಲಿ ಡ್ರಾಪ್ ಮಾಡಲು ಪಾಟರಿ ರಸ್ತೆ ಬಳಿಗೆ ಬಂದಿದ್ದರು. ಆಗ ಸ್ಕಾರ್ಪಿಯೊ ಕಾರಿನಲ್ಲಿ ಹಿಂಬಾಲಿಸಿ ಬಂದಿದ್ದ ಆರೋಪಿಗಳು, ಕಾರಿನಿಂದ ಬೈಕ್‌ಗೆ ಡಿಕ್ಕಿ ಹೊಡಿಸಿದ್ದರು. ಅಸ್ಗರ್ ಸ್ಥಳದಲ್ಲೇ ಮೃತಪಟ್ಟಿದ್ದರೆ, ಸ್ನೇಹಿತ ಗಾಯಗೊಂಡಿದ್ದರು. ಆರಂಭದಲ್ಲಿ ಸಂಚಾರ ಪೊಲೀಸರು ಅಪಘಾತ ಪ್ರಕರಣ ದಾಖಲಿಸಿಕೊಂಡಿದ್ದರು. ಸ್ನೇಹಿತನ ಹೇಳಿಕೆ ಮೇರೆಗೆ ತನಿಖೆ ನಡೆಸಿದ್ದ ಪುಲಕೇಶಿನಗರ ಪೊಲೀಸರು ಇದು ಕೊಲೆ ಎಂಬುದನ್ನು ಪತ್ತೆ ಹಚ್ಚಿದ್ದಾರೆ.

ಅಪಘಾತದಲ್ಲಿ ಎಂಜಿನಿಯರ್ ಸಾವು

ಬೆಂಗಳೂರು: ಜಾಲಹಳ್ಳಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಎಚ್‌ಎಂಟಿ ರಸ್ತೆಯಲ್ಲಿ ನಡೆದ ಅಪಘಾತದಲ್ಲಿ, ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿರುವ ಕಾರ್ಖಾನೆಯೊಂದರ ಎಂಜಿನಿಯರ್ ಮೃತಪಟ್ಟಿದ್ದಾರೆ.

ಪೀಣ್ಯ 2ನೇ ಹಂತದ ನಿವಾಸಿ ಸುಭಾಷ್ (26) ಮೃತರು. ಮಂಗಳವಾರ ಬೆಳಿಗ್ಗೆ 6.30ರಲ್ಲಿ ಅಪಘಾತ ನಡೆದಿದೆ. ಎಲೆಕ್ಟ್ರಿಕ್ ಬೈಕ್‌ನಲ್ಲಿ ಎಚ್‌ಎಂಟಿ ರಸ್ತೆಯಲ್ಲಿ ತೆರಳುತ್ತಿದ್ದ ಸುಭಾಷ್‌ಗೆ ಅತೀವೇಗವಾಗಿ ಬಂದ ವಾಹನಕ್ಕೆ ಡಿಕ್ಕಿ ಹೊಡೆದಿದೆ. ರಕ್ತಸ್ರಾವದಿಂದ ಬಿದ್ದಿದ್ದ ಸುಭಾಷ್, ಸ್ಥಳೀಯರು ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯದಲ್ಲಿ ಮೃತಪಟ್ಟರು. ವಾಹನದ ಪತ್ತೆ ಕಾರ್ಯ ನಡೆಯುತ್ತಿದೆ ಎಂದು ಪೊಲೀಸರು ಹೇಳಿದರು.

ರಮೇಶ್ ಜಾರಕಿಹೊಳಿ ಮನೆಗೆ ಭದ್ರತೆ

ಬೆಂಗಳೂರು: ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಅವಾಚ್ಯವಾಗಿ ನಿಂದಿಸಿದ್ದಾರೆ ಎಂದು ಆರೋಪಿಸಿ ಶಾಸಕ ರಮೇಶ್ ಜಾರಕಿಹೊಳಿ ಮನೆ ಎದುರು ಡಿಕೆಶಿ ಅಭಿಮಾನಿಗಳು ಸೋಮವಾರ ರಾತ್ರಿ ಪ್ರತಿಭಟಿಸಿದರು. ಸದಾಶಿವನಗರದ ರಮೇಶ್ ಮನೆಯ ಗೋಡೆಗಳಿಗೆ ಅವಾಚ್ಯ ಬರಹಗಳಿದ್ದ ಪೋಸ್ಟರ್ ಅಂಟಿಸಿ ಆಕ್ರೋಶ ಹೊರಹಾಕಿದರು. 'ಪೋಸ್ಟರ್ ತೆರವುಗೊಳಿಸಿದ್ದು, ಮನೆಗೆ ಭದ್ರತೆ ಕಲ್ಪಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಕಾವೇರಿ' ವೆಬ್‌ಸೈಟ್ ಮೂಲಕ ಎಇಪಿಎಸ್ ಸಾಧನ ಬಳಸಿ ಕೃತ್ಯ

ಗ್ರಾಹಕರ ಬ್ಯಾಂಕ್ ಖಾತೆಗೆ ಕನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೋಂದಣಿ ಹಾಗೂ ಮುದ್ರಾಂಕ ಇಲಾಖೆಯ 'ಕಾವೇರಿ' ವೆಬ್‌ಸೈಟ್ ಮೂಲಕ ಎಇಪಿಎಸ್ ಸಾಧನ ಬಳಸಿ, ಗ್ರಾಹಕರ ಬ್ಯಾಂಕ್ ಖಾತೆಯಿಂದ ಹಣ ದೋಚುತ್ತಿದ್ದ ಬಿಹಾರದ ಅಬುಜರ್ (28) ಹಾಗೂ ಮೊಹಮ್ಮದ್ ಪರ್ವಾಜ್ ಅನ್ವಾರ್ (26) ಎಂಬ ಆರೋಪಿಗಳನ್ನು ಈಶಾನ್ಯ ವಿಭಾಗದ ಸೈಬರ್ ಪೊಲೀಸರು ಬಂಧಿಸಿದ್ದಾರೆ.

ಬಂಧಿತರಿಂದ ₹1.5 ಲಕ್ಷ ನಗದು, ಎರಡು ಲ್ಯಾಪ್‌ಟಾಪ್, ಎರಡು ಮೊಬೈಲ್ ಮೂರು ಬೆರಳಚ್ಚು ಸಾಧನ ಜಪ್ತಿ ಮಾಡಲಾಗಿದೆ.

ಗ್ರಾಹಕರ ಮೊಬೈಲ್ ಸಂಖ್ಯೆ, ಇ-ಮೇಲ್ ವಿಳಾಸದ ಮೂಲಕ ವೆಬ್‌ಸೈಟ್‌ಗೆ ಪ್ರವೇಶಿಸುತ್ತಿದ್ದ ಆರೋಪಿಗಳು, ಅಲ್ಲಿಂದ ಸಾರ್ವಜನಿಕರ ನೋಂದಣಿ ಪತ್ರ ಡೌನ್‌ಲೋಡ್ ಮಾಡಿಕೊಳ್ಳುತ್ತಿದ್ದರು. ಬಳಿಕ, ಅದರಲ್ಲಿರುವ ಆಧಾರ್ ಸಂಖ್ಯೆ, ಬೆರಳಚ್ಚಿನ ಫೋಟೊ ಪ್ರಿಂಟ್ ಹಾಕಿ ಮೇಲೆ ನಕಲು ಮಾಡುತ್ತಿದ್ದರು. ಎಇಪಿಎಸ್ (ಆಧಾರ್ ಎನೇಬಲ್ ಪೇಮೆಂಟ್ ಸಿಸ್ಟಂ) ಸೌಲಭ್ಯದ ಮೂಲಕ ಬ್ಯಾಂಕ್ ಖಾತೆಗಳಿಂದ ಹಣ ವರ್ಗಾವಣೆ ಮಾಡಿಕೊಳ್ಳುತ್ತಿದ್ದರು ಎಂದು ನಗರ ಪೊಲೀಸ್ ಆಯುಕ್ತ ಬಿ.ದಯಾನಂದ ತಿಳಿಸಿದರು. ಗ್ರಾಹಕರು ಬ್ಯಾಂಕ್ ಖಾತೆಯ ಮಾಹಿತಿ, ಒಟಿಪಿ ನೀಡದಿದ್ದರೂ ಖಾತೆಯಿಂದ ಆರೋಪಿಗಳು ಹಣ ಪಡೆದುಕೊಳ್ಳುತ್ತಿದ್ದರು. ಅಪರಿಚಿತರು ಯಾವುದೇ ಲಿಂಕ್ ತೆರೆಯದೇ ಇದ್ದರೂ ವಂಚಿಸುತ್ತಿದ್ದರು ಎಂದರು.

ಹಣ ಕಳೆದುಕೊಂಡಿದ್ದ ವ್ಯಕ್ತಿಯೊಬ್ಬರು ನೀಡಿದ ದೂರು ಆಧರಿಸಿ ತನಿಖೆ ನಡೆಸಲಾಯಿತು. ಅವರ ಖಾತೆಯಿಂದ ₹38 ಸಾವಿರ ಮತ್ತು ₹10 ಸಾವಿರ ಕಳೆದುಕೊಂಡಿದ್ದರು. ಮೊಬೈಲ್ ನಂಬರ್, ಒಟಿಪಿ, ಪಾಸ್ ಬುಕ್ ಇಲ್ಲದೇ ಹಣ ಡ್ರಾ ಮಾಡಲು ಎಇಪಿಎಸ್ ಜಾರಿಗೆ ತರಲಾಗಿದೆ. ಆಧಾರ್ ಸಂಖ್ಯೆ, ಬಯೊಮೆಟ್ರಿಕ್ ಮೂಲಕ ಹಣ ಡ್ರಾ ಮಾಡಿಕೊಳ್ಳಲು ಮೈಕ್ರೊ ಎಟಿಎಂ ಕೇಂದ್ರ ತೆರೆಯಲಾಗಿದೆ. ಆರೋಪಿಗಳು, ಕಾವೇರಿ ವೆಬ್‌ಸೈಟ್‌ಗೆ ಪ್ರವೇಶಿಸಿ, ಮುದ್ರಾಂಕ ಪತ್ರ ಡೌನ್‌ಲೋಡ್ ಮಾಡಿ, ಗ್ರಾಹಕರ ದಾಖಲೆಗಳನ್ನು ನಕಲು ಮಾಡಿ ವಂಚಿಸುತ್ತಿದ್ದರು ಎಂದು ಕಮಿಷನರ್ ತಿಳಿಸಿದರು.

ಅಪರಾಧ ಸುದ್ದಿ

₹45 ಲಕ್ಷದ ಚಿನ್ನಾಭರಣ ಜಪ್ತಿ: ಮೂವರ ಸೆರೆ

ಬೆಂಗಳೂರು: ಮಾಲೀಕರು ಇಲ್ಲದ ಮನೆಯನ್ನೇ ಗುರುತಿಸಿ ಬೀಗ ಒಡೆದು ಚಿನ್ನಾಭರಣ, ನಗದು ಕಳ್ಳತನ ಮಾಡುತ್ತಿದ್ದ ಮೂವರು ಆರೋಪಿಗಳನ್ನು ಪುಟ್ಟೇನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಗಣೇಶ್, ರಘು ಹಾಗೂ ಅಲೆಕ್ಸ್ ಬಂಧಿತರು.

ಆರೋಪಿಗಳಿಂದ ₹45 ಲಕ್ಷ ಮೌಲ್ಯದ ಚಿನ್ನಾಭರಣ, 454 ಗ್ರಾಂ ಬೆಳ್ಳಿ ಸಾಮಗ್ರಿ, ಎರಡು ಬೈಕ್ ಹಾಗೂ ₹8 ಸಾವಿರ ನಗದು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದರು.

ಶಾಂತಿನಗರ ಬಂಗಾರು ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ.

'ಸಿಸಿ ಟಿ.ವಿ ಕ್ಯಾಮೆರಾ ದೃಶ್ಯಾವಳಿ ಆಧರಿಸಿ ವಿಶೇಷ ತಂಡ ಆರೋಪಿಗಳನ್ನು ಬಂಧಿಸಿದೆ. ಗಣೇಶ್ ರಾತ್ರಿ ವೇಳೆ ಎಲ್ಲೆಂದರಲ್ಲಿ ಕಾರು ಕಳ್ಳತನ ಮಾಡುತ್ತಿದ್ದ. ಕೃತ್ಯಕ್ಕೆ ಮನೆಗಳನ್ನು ಗುರುತಿಸುತ್ತಿದ್ದ. ಆತನಿಗೆ ಮತ್ತಿಬ್ಬರು ನೆರವು ನೀಡುತ್ತಿದ್ದರು. ಕದ್ದ ಆಭರಣಗಳನ್ನು ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದ್ದರು' ಎಂದು ಪೊಲೀಸರು ತಿಳಿಸಿದರು.

ಮಾನವ ಕಳ್ಳಸಾಗಣೆ: 14 ಆರೋಪಿಗಳ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಂಗ್ಲಾದೇಶ ಹಾಗೂ ಹೊರರಾಜ್ಯದ ಮಹಿಳೆಯರನ್ನು ಕಳ್ಳಸಾಗಣೆ ಮೂಲಕ ನಗರಕ್ಕೆ ಕರೆತಂದು ವೇಶ್ಯಾವಾಟಿಕೆ ಜಾಲಕ್ಕೆ ದೂಡುತ್ತಿದ್ದ 14 ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

20 ಮಹಿಳೆಯರನ್ನು ರಕ್ಷಿಸಲಾಗಿದೆ. ವಿಶೇಷ ಕಾರ್ಯಾಚರಣೆ ವೇಳೆ ಮಾನವ ಕಳ್ಳಸಾಗಣೆ ಜಾಲ ಪತ್ತೆಯಾಗಿದೆ. 'ಅಕ್ಟೋಬರ್ 1ರಿಂದ 30ರ ತನಕ ಸಿಸಿಬಿ ಮಹಿಳಾ ಸಂರಕ್ಷಣಾ ದಳದ ನೇತೃತ್ವದಲ್ಲಿ ವಿಶೇಷ ಕಾರ್ಯಾಚರಣೆ ನಡೆದಿತ್ತು. ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿದೆ' ಎಂದು ಪೊಲೀಸ್ ಕಮಿಷನರ್ ಬಿ.ದಯಾನಂದ ಅವರು ತಿಳಿಸಿದರು.

ಬಾಂಗ್ಲಾದೇಶದ 4, ಪಶ್ಚಿಮ ಬಂಗಾಳದ 11, ತೆಲಂಗಾಣ ಹಾಗೂ ಉತ್ತರಾಖಂಡದ ತಲಾ ಒಬ್ಬರು ಹಾಗೂ ಕರ್ನಾಟಕದ ಮೂವರು ಮಹಿಳೆಯರನ್ನು ರಕ್ಷಿಸಲಾಗಿದೆ. ಆರೋಪಿಗಳ ವಿರುದ್ಧ ಬಾಗಲಗುಂಟೆ, ವರ್ತೂರು, ವಿದ್ಯಾರಣ್ಯಪುರ, ಅಮೃತಹಳ್ಳಿ, ಕೆ.ಆರ್.ಪುರ ಪೊಲೀಸ್ ಠಾಣೆಗಳಲ್ಲಿ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ಮುಂದುವರಿಸಲಾಗಿದೆ.

ಆರೋಪಿಗಳಿಂದ ನಾಲ್ಕು ಬೈಕ್, ಒಂದು ಕಾರು, 40 ಮೊಬೈಲ್, ಎರಡು ಲ್ಯಾಪ್‌ಟಾಪ್ ಹಾಗೂ ಮೂರು ವಿವಿಧ ಕಂಪನಿಗಳ ಮೂರು ಸಿಮ್ ಕಾರ್ಡ್‌ಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ.

'ಮಾನವ ಕಳ್ಳಸಾಗಣೆಯ ಮಾಹಿತಿ ಬಂದಿತ್ತು. ಪ್ರಕರಣ ಭೇದಿಸಲು ಬೆಂಗಳೂರು ನಗರ, ಕೇಂದ್ರ ಅಪರಾಧ ವಿಭಾಗ ಹಾಗೂ ಮಹಿಳಾ ಸಂರಕ್ಷಣಾ ದಳದ ಅಧಿಕಾರಿಗಳನ್ನು ಒಳಗೊಂಡ ತಂಡ ರಚಿಸಲಾಗಿತ್ತು' ಎಂದು ಕಮಿಷನರ್ ಮಾಹಿತಿ ನೀಡಿದರು.



ಜಯನಗರ ವಾಣಿಜ್ಯ ಸಂಕೀರ್ಣದಲ್ಲಿ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಮಂಗಳವಾರ ಪರಿಶೀಲನೆ ನಡೆಸಿದರು

ಒತ್ತುವರಿ ತೆರವಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಯನಗರ ವಾಣಿಜ್ಯ ಸಂಕೀರ್ಣ ಒಳಭಾಗದಲ್ಲಿ ವ್ಯಾಪಾರಿಗಳು ಒತ್ತುವರಿ ಮಾಡಿಕೊಂಡಿರುವ ಪಾದಚಾರಿ ಮಾರ್ಗವನ್ನು ತೆರವುಗೊಳಿಸಲು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅಧಿಕಾರಿಗಳಿಗೆ ಸೂಚಿಸಿದರು.

ಜಯನಗರ ವಾಣಿಜ್ಯ ಸಂಕೀರ್ಣದ ಸುತ್ತಲಿನ ಪ್ರದೇಶಗಳಲ್ಲಿ ಬೀದಿ ಬದಿಯ ವ್ಯಾಪಾರಿಗಳು ರಸ್ತೆ ಹಾಗೂ ಪಾದಚಾರಿ ಮಾರ್ಗವನ್ನೂ ಒತ್ತುವರಿ ಮಾಡಿಕೊಂಡಿದ್ದಾರೆ. ಜೊತೆಗೆ ಅನಧಿಕೃತವಾಗಿ ನಿರ್ಮಿಸಿಕೊಂಡಿರುವ ಮಳಿಗೆಗಳನ್ನೂ ತೆರವುಗೊಳಿಸಲು ಆದೇಶಿಸಿದರು.

'ಜಯನಗರ ಶಾಪಿಂಗ್ ಕಾಂಪ್ಲೆಕ್ಸ್ ನೆಲಮಾಳಿಗೆಯಲ್ಲಿ ಅಕ್ರಮವಾಗಿ ನಿರ್ಮಿಸಿದ ಮಳಿಗೆಗಳನ್ನು ತೆರವುಗೊಳಿಸುವಂತೆ ಹೈಕೋರ್ಟ್ ಹೊರಡಿಸಿದ್ದ ಆದೇಶವನ್ನು ಪಾಲನೆ ಮಾಡಿಲ್ಲ' ಎಂಬ ಆರೋಪದ ಹಿನ್ನೆಲೆಯಲ್ಲಿ ತುಷಾರ್ ಗಿರಿನಾಥ್ ಅವರಿಗೆ ನ್ಯಾಯಾಂಗ ನಿಂದನೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿತ್ತು.

ಜಯನಗರ ವಾಣಿಜ್ಯ ಸಂಕೀರ್ಣದ ಮೀನು ಮಾರುಕಟ್ಟೆ ಸುತ್ತಲಿನ ಪ್ರದೇಶಗಳನ್ನು ಮಂಗಳವಾರ ಪರಿಶೀಲಿಸಿದ ತುಷಾರ್ ಗಿರಿನಾಥ್, ವಿದ್ಯುತ್ ದೀಪಗಳನ್ನು ಅಳವಡಿಸಿ, ಅನಧಿಕೃತ ಪ್ರವೇಶ ನಿರ್ಬಂಧಗೊಳಿಸಲು ಕ್ರಮವಹಿಸಲು ಸೂಚಿಸಿದರು.

ಶಾಸಕ ಸಿ.ಕೆ.ರಾಮಮೂರ್ತಿ, ದಕ್ಷಿಣ ವಲಯದ ವಲಯ ಆಯುಕ್ತೆ ವಿನೋತ್ ಪ್ರಿಯಾ, ಜಂಟಿ ಆಯುಕ್ತ ಕೆ. ಜಗದೀಶ್ ನಾಯ್ಕ್, ಮುಖ್ಯ ಎಂಜಿನಿಯರ್ ರಾಜೇಶ್ ಇದ್ದರು.

ಮೆಡಿಕಲ್ ಸೀಟು ಆಮಿಷ: ವಂಚಿಸುತ್ತಿದ್ದವನ ಬಂಧನ

ಬೆಂಗಳೂರು: ಹೊರ ರಾಜ್ಯದಲ್ಲಿ ವೈದ್ಯಕೀಯ ಸೀಟು ಕೊಡಿಸುವ ಆಮಿಷವೊಡ್ಡಿ ವಿದ್ಯಾರ್ಥಿಗಳಿಂದ ಲಕ್ಷಾಂತರ ರೂಪಾಯಿ ಪಡೆದು ವಂಚಿಸುತ್ತಿದ್ದ ಹೈದರಾಬಾದ್‌ನ ಆರೋಪಿ ಶರತ್‌ಗೌಡ (45) ಎಂಬಾತನನ್ನು ಸಂಜಯನಗರ ಪೊಲೀಸರು ಬಂಧಿಸಿದ್ದಾರೆ.

ಆರೋಪಿಯಿಂದ ₹ 47.80 ಲಕ್ಷ ಜಪ್ತಿ ಮಾಡಿಕೊಳ್ಳಲಾಗಿದೆ. ಸಂಜಯನಗರದ ನ್ಯೂ ಬಿ.ಇ.ಎಲ್ ರಸ್ತೆಯಲ್ಲಿ 'ನೆಕ್ಸಸ್ ಎಡು' ಸಂಸ್ಥೆ ತೆರೆದಿದ್ದ ಎಂದು ಪೊಲೀಸರು ಹೇಳಿದರು.

ಹೈದರಾಬಾದ್‌ನಿಂದ ಶರತ್, ಎರಡು ವರ್ಷಗಳ ಹಿಂದೆ ಬೆಂಗಳೂರಿಗೆ ಬಂದಿದ್ದ. ಏಜೆನ್ಸಿಯೊಂದು ಸಿದ್ಧಪಡಿಸಿದ್ದ ಆ್ಯಪ್‌ನಲ್ಲಿ ರಾಜ್ಯ ಹಾಗೂ ನೆರೆರಾಜ್ಯದ ವೈದ್ಯಕೀಯ ಸೀಟು ಆಕಾಂಕ್ಷಿಗಳ ಪಟ್ಟಿ ದಾಖಲಾಗಿತ್ತು. ಮಧ್ಯವರ್ತಿಗಳ ಮೂಲಕ ಪಟ್ಟಿಯನ್ನು ಪಡೆದಿದ್ದ ಆರೋಪಿ, ತನ್ನ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ಯುವತಿಯರ ಮೂಲಕ ಕರೆ ಮಾಡಿಸಿ ಕಡಿಮೆ ಮೊತ್ತಕ್ಕೆ ತಮಿಳುನಾಡು, ಕೇರಳ, ತೆಲಂಗಾಣದಲ್ಲಿ ವೈದ್ಯಕೀಯ ಸೀಟು ಕೊಡಿಸುವುದಾಗಿ ನಂಬಿಸುತ್ತಿದ್ದ' ಎಂದು ಪೊಲೀಸರು ಹೇಳಿದರು.

₹20 ರಿಂದ ₹ 25 ಲಕ್ಷಕ್ಕೆ ವೈದ್ಯಕೀಯ ಸೀಟು ಕೊಡಿಸುವುದಾಗಿ ಹೇಳಿ ಮುಂಗಡವಾಗಿ ₹ 12ರಿಂದ ₹ 15 ಲಕ್ಷ ಪಡೆಯುತ್ತಿದ್ದ. ತಿಮ್ಮೇಗೌಡ ಅವರ ಪುತ್ರನಿಗೆ ಕೇರಳದ ಪಿ.ಕೆ.ದಾಸ್ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್‌ನಲ್ಲಿ ಸೀಟು ಕೊಡಿಸುವುದಾಗಿ ₹10 ಲಕ್ಷ ಪಡೆದುಕೊಂಡಿದ್ದ. ಸೀಟು ದೊರೆಯದಿದ್ದಾಗ ತಿಮ್ಮೇಗೌಡ ಅವರು ದೂರು ನೀಡಿದ್ದರು. ಹೈದರಾಬಾದ್‌ನಲ್ಲಿದ್ದ ಆತನ ಅಪಾರ್ಟ್‌ಮೆಂಟ್‌ನಲ್ಲೇ ಆರೋಪಿಯನ್ನು ಬಂಧಿಸಿ ನಗರಕ್ಕೆ ಕರೆತರಲಾಯಿತು ಎಂದು ಪೊಲೀಸರು ಹೇಳಿದರು.

ಆರೋಪಿ 18 ಮಂದಿಗೆ ವಂಚನೆ ಮಾಡಿದ್ದು, ಆತನಿಂದ ₹ 47.80 ಲಕ್ಷ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಕಚ್ಚಿದ ಶ್ವಾನ: ನಟ ದರ್ಶನ್ ವಿರುದ್ಧ ಎಫ್‌ಐಆರ್

ಬೆಂಗಳೂರು: ಚಿತ್ರನಟ ದರ್ಶನ್ ತೂಗುದೀಪ ಅವರ ಮನೆಯ ಸಾಕು ನಾಯಿಗಳು ಮಹಿಳೆಯೊಬ್ಬರ ಮೇಲೆ ದಾಳಿ ನಡೆಸಿ ಗಾಯಗೊಳಿಸಿದ್ದು ದರ್ಶನ್ ಸೇರಿ ಇಬ್ಬರ ವಿರುದ್ಧ ರಾಜರಾಜೇಶ್ವರಿ ನಗರ ಪೊಲೀಸ್ ಠಾಣೆ ಎಫ್‌ಐಆರ್ ದಾಖಲಾಗಿದೆ.

ಆರ್.ಆರ್.ನಗರದ ಬಿಇಎಂಎಲ್ 5ನೇ ಹಂತದ ನಿವಾಸಿ, ವಕೀಲೆ ಅಮಿತಾ ಜಿಂದಾಲ್ ಎಂಬುವರು ದೂರು ನೀಡಿದ್ದಾರೆ. ಅ.28ರಂದು ಪ್ರಕರಣ ದಾಖಲಾಗಿದೆ.

'ಸ್ಪರ್ಶ ಆಸ್ಪತ್ರೆಗೆ ಕಾರ್ಯಕ್ರಮವೊಂದಕ್ಕೆ 28ರಂದು ತೆರಳಿದ್ದೆ. ಕಾರನ್ನು ದರ್ಶನ್ ಮನೆ ಬಳಿಯ ರಸ್ತೆಯಲ್ಲಿ ನಿಲ್ಲಿಸಿದ್ದೆ. ಕಾರ್ಯಕ್ರಮ ಮುಗಿಸಿ ವಾಪಸ್ ಬಂದಾಗ ನಾಯಿಗಳು ದಾಳಿ ನಡೆಸಿದವು' ಎಂದು ತಿಳಿಸಿದ್ದಾರೆ.

' ಕಾರು ತೆಗೆದುಕೊಳ್ಳಬೇಕಿದೆ. ನಾಯಿಗಳನ್ನು ಬೇರೆಡೆ ಒಯ್ಯಲು ಕಾವಲುಗಾರನಲ್ಲಿ ಮನವಿ ಮಾಡಿದೆ. ಆದರೆ, ಆತ ಕಾರು ಪಾರ್ಕಿಂಗ್ ವಿಚಾರಕ್ಕೆ ಗಲಾಟೆ ನಡೆಸಿದ. ಅದೇ ಸಂದರ್ಭದಲ್ಲಿ ನಾಯಿಗಳು ದಾಳಿ ನಡೆಸಿದವು. ಹೊಟ್ಟೆ ಭಾಗಕ್ಕೆ ಗಾಯವಾಗಿದೆ. ಬಟ್ಟೆ ಹರಿದುಹಾಕಿವೆ' ಎಂದು ಮಹಿಳೆ ತಿಳಿಸಿದ್ದಾರೆ.

'ನಾಯಿಗಳು ಕಚ್ಚುತ್ತವೆ ಎಂದು ತಿಳಿದಿದ್ದರೂ ಎಚ್ಚರಿಕೆ ವಹಿಸಿರಲಿಲ್ಲ. ಮನೆ, ಶ್ವಾನಗಳ ಮಾಲೀಕರು, ಶ್ವಾನ ನೋಡಿಕೊಳ್ಳುತ್ತಿದ್ದ ವ್ಯಕ್ತಿ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಕೋರಿದ್ದಾರೆ.

ಮಣ್ಣು ಕುಸಿದು ಮೂವರು ಸಾವು

ಮಡಿಕೇರಿ: ಇಲ್ಲಿನ ಸ್ಟುವರ್ಟ್ ಹಿಲ್‌ನ ರೆಡ್‌ಕ್ರಾಸ್ ಸಂಸ್ಥೆಯ ಸಮೀಪ ಕಟ್ಟಡ ನಿರ್ಮಾಣ ಕಾಮಗಾರಿ ವೇಳೆ ಮಂಗಳವಾರ ಸಂಜೆ ಮಣ್ಣು ಕುಸಿದು ಕಾರ್ಮಿಕರಾದ ಹುಬ್ಬಳ್ಳಿಯ ಬಸವ (35) ಹಾಗೂ ಲಿಂಗಪ್ಪ (45), ಹಾವೇರಿಯ ಆನಂದ (35) ಮೃತಪಟ್ಟರು.

ಗಾಯಗೊಂಡ ಮಂಜು ಹಾಗೂ ರಾಜು ಎಂಬುವವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. 'ಕಟ್ಟಡ ನಿರ್ಮಿಸಲು ತಡೆಗೋಡೆ ಕಟ್ಟುವ ವೇಳೆ ಮಂಗಳವಾರ ಸಂಜೆ 5.45ರ ವೇಳೆಯಲ್ಲಿ ಐವರು ಕಾರ್ಮಿಕರ ಮೇಲೆ ಮಣ್ಣು ಕುಸಿದಿದೆ. ಅವರಲ್ಲಿ ಇಬ್ಬರನ್ನು ಇತರ ಕಾರ್ಮಿಕರು ಕೂಡಲೇ ಹೊರಗೆಳೆದು ಆಸ್ಪತ್ರೆಗೆ ದಾಖಲಿಸಿದರು. ಆದರೆ, ಬಸವರಾಜು, ಆನಂದ, ನಿಂಗಪ್ಪ ಎಂಬ ಕಾರ್ಮಿಕರು ಮಣ್ಣಿನಡಿ ಸಿಲುಕಿದರು. ಅಗ್ನಿಶಾಮಕ ದಳದವರು ಮಣ್ಣು ತೆರವುಗೊಳಿಸುವ ವೇಳೆಗೆ ಮೂವರೂ ಮೃತಪಟ್ಟಿದ್ದರು' ಎಂದು ಎಸ್‌ಪಿ ಕೆ.ರಾಮರಾಜನ್ ತಿಳಿಸಿದರು.

ಮೃತರ ಕುಟುಂಬಕ್ಕೆ ಸರ್ಕಾರ ತಲಾ ₹2 ಲಕ್ಷ ಪರಿಹಾರ ಘೋಷಿಸಿದೆ.

ಬೆಂಕಿ ಅವಘಡ: ಮಾದರಿ ಸಂಗ್ರಹ

ಬೆಂಗಳೂರು: ಬನಶಂಕರಿ 3ನೇ ಹಂತದ ವೀರಭದ್ರನಗರದ ಎಸ್.ವಿ.ಕೋಚ್ ವರ್ಕ್ಸ್ ಹಾಗೂ ಬಸ್ ವರ್ಕ್‌ಶಾಪ್‌ನಲ್ಲಿ ಸಂಭವಿಸಿದ್ದ ಅಗ್ನಿ ಅವಘಡ ಸಂಬಂಧ ಗಿರಿನಗರ ಪೊಲೀಸ್ ಠಾಣೆಯಲ್ಲಿ ಎಫ್‌ಎಆರ್ (ಫೈರ್ ಆಕ್ಸಿಡೆಂಟಲ್ ರಿಪೋರ್ಟ್) ದಾಖಲಾಗಿದೆ.

ವಿಧಿ ವಿಜ್ಞಾನ ಪ್ರಯೋಗಾಲಯದ (ಎಫ್‌ಎಸ್‌ಎಲ್) ತಜ್ಞರು ಮಂಗಳವಾರ ಸ್ಥಳಕ್ಕೆ ತೆರಳಿ ಪರಿಶೀಲಿಸಿದರು. ಸ್ಥಳದಲ್ಲಿದ್ದ ಕೆಲವು ಕಬ್ಬಿಣದ ಮಾದರಿಗಳು ಹಾಗೂ ವೆಲ್ಡಿಂಗ್‌ಗೆ ಬಳಸಿದ್ದ ಕಾರ್ಬನ್ ರಾಡ್‌ಗಳ ಮಾದರಿ ಸಂಗ್ರಹಿಸಿದರು.

ವೆಲ್ಡಿಂಗ್ ವೇಳೆ ಕಿಡಿ ಹಾರಿದ್ದರಿಂದಲೇ ದುರಂತ ಸಂಭವಿಸಿದೆ ಎಂದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ.

ಮಾಲೀಕ ಅಸ್ವಸ್ಥ: ಘಟನೆಯಿಂದ ಆಘಾತಕ್ಕೆ ಒಳಗಾಗಿ ಅಸ್ವಸ್ಥಗೊಂಡಿರುವ ವರ್ಕ್‌ಶಾಪ್ ಮಾಲೀಕ ಶ್ರೀನಿವಾಸ್ ಆಸ್ಪತ್ರೆಗೆ ದಾಖಲಾಗಿದ್ದಾರೆ. ಆಸ್ಪತ್ರೆಯಿಂದ ಬಿಡುಗಡೆಯಾದ ಮೇಲೆ ವಿಚಾರಣೆ ನಡೆಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ವರ್ಕ್‌ಶಾಪ್‌ನ ಕಚೇರಿಯಲ್ಲಿದ್ದ ₹8 ಲಕ್ಷ ನಗದು ಬೆಂಕಿಗೆ ಆಹುತಿಯಾಗಿದೆ ಎಂದು ಸಿಬ್ಬಂದಿ ತಿಳಿಸಿದ್ದಾರೆ.



ಸುಭಾಷಿತ
ಕನ್ನಡಿಗರು ವಿನಯಕ್ಕಾಗಿ ಬಗ್ಗಿ ನಡೆಯಬಹುದು. ಆದರೆ ರಿಕ್ತರಂತೆ ಕುಗ್ಗಿ ನಡೆಯಬೇಕಾಗಿಲ್ಲ.
-ಕುವೆಂಪು

‘ಸುವರ್ಣ ಕರ್ನಾಟಕ’ ಮೈಲಿಗಲ್ಲು ಕನ್ನಡ ಬಲವರ್ಧನೆಗೆ ಅಡಿಗಲ್ಲಾಗಲಿ

ಮೈಸೂರು ರಾಜ್ಯವನ್ನು ಕರ್ನಾಟಕವೆಂದು ಕರೆದ ಚಾರಿತ್ರಿಕ ವಿದ್ಯಮಾನಕ್ಕೆ ಐವತ್ತು ವರ್ಷಗಳು ತುಂಬಿರುವ ಸಂದರ್ಭ ನಾಡಿನುದ್ದಕ್ಕೂ ಸಹಜವಾಗಿಯೇ ಸಂಭ್ರಮದ ತರಂಗಗಳನ್ನು ಉಂಟುಮಾಡಿದೆ. ಕನ್ನಡ ನಾಡಿಗೆ ‘ಕರ್ನಾಟಕ’ ಎಂದು ಹೆಸರಿಟ್ಟಿದ್ದು ಮಗುವೊಂದಕ್ಕೆ ನಾಮಕರಣ ಮಾಡಿದಷ್ಟು ಸಲೀಸಾಗಿರಲಿಲ್ಲ. 1956ರಲ್ಲಿ ಕರ್ನಾಟಕ ಏಕೀಕರಣಗೊಂಡ ದಿನದಿಂದಲೂ ಮೈಸೂರು ರಾಜ್ಯವನ್ನು ಕರ್ನಾಟಕ ಎಂದು ಕರೆಯಬೇಕೆನ್ನುವ ಅಭಿಪ್ರಾಯ ವ್ಯಕ್ತವಾಗುತ್ತಲೇ ಇತ್ತು. ಆದರೆ, ಅಖಂಡ ಕರ್ನಾಟಕಕ್ಕೊಂದು ಅರ್ಥಪೂರ್ಣ ಹೆಸರು ಬೇಕೆನ್ನುವ ಕನ್ನಡ ಜನಪದದ ಅಪೇಕ್ಷೆ ಮೂರ್ತರೂಪಕ್ಕೆ ಬರಲು ಏಕೀಕರಣ ನಂತರದಲ್ಲಿ ಹದಿನೇಳು ವರ್ಷಗಳು ಬೇಕಾದವು. 1973ರ ನವೆಂಬರ್ 1ರಂದು, ದೇವರಾಜ ಅರಸು ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಮೈಸೂರು ರಾಜ್ಯವನ್ನು ‘ಕರ್ನಾಟಕ’ ಎಂದು ಅಧಿಕೃತವಾಗಿ ಕರೆಯಲಾಯಿತು. ಮೈಸೂರು ರಾಜ್ಯ ಕರ್ನಾಟಕವಾಗಿ ರೂಪಾಂತರಗೊಳ್ಳಲಿಕ್ಕೆ ಹಲವು ಕಾರಣಗಳಿದ್ದವು. ಮೈಸೂರು ಎನ್ನುವ ಹೆಸರು ಒಂದು ಪ್ರಾಂತ್ಯದ ಹೆಸರನ್ನು ಸೂಚಿಸುವಂತಿತ್ತೇ ಹೊರತು ಸಮಗ್ರ ಕರ್ನಾಟಕವನ್ನು ಸಂಕೇತಿಸುವಂತಿರಲಿಲ್ಲ. ಏಕೀಕರಣದ ನಂತರ ಕನ್ನಡ ನುಡಿ ಮತ್ತು ಸಂಸ್ಕೃತಿಯ ನೆಲೆಗಟ್ಟಿನಲ್ಲಿ ರೂಪುಗೊಂಡಿದ್ದ ಕನ್ನಡನಾಡನ್ನು ಅಖಂಡವಾಗಿ ಗುರುತಿಸುವ ಹೆಸರಿಗಾಗಿ ಹುಡುಕಾಟ ನಡೆದೇ ಇತ್ತು. ಮೈಸೂರು ರಾಜ್ಯವನ್ನು ‘ಕರ್ನಾಟಕ’ ಎಂದು ಹೆಸರಿಸಬೇಕೆನ್ನುವ ಜನಸಾಮಾನ್ಯರ ಭಾವನೆಗಳಿಗೆ ಕನ್ನಡ ಚಳವಳಿಗಾರರು, ಲೇಖಕರು ಮತ್ತು ಪ್ರಾಜ್ಞ ರಾಜಕಾರಣಿಗಳು ಒತ್ತಾಸೆಯಾಗಿ ನಿಂತರು. ಆ ಒತ್ತಾಸೆ ಮತ್ತು ಹೋರಾಟದ ಫಲವಾಗಿ, ಕರ್ನಾಟಕ ಎನ್ನುವ ಹೆಸರಿಗೆ ಶಾಸನಸಭೆಯ ಅಂಗೀಕಾರ ದೊರೆಯಿತು.



ಹೊಸ ಕಾಲದ ಸವಾಲುಗಳನ್ನು ಎದುರಿಸಲು ಸಾಧ್ಯವಾಗುವಂತೆ ಕನ್ನಡ ಹಾಗೂ ಕನ್ನಡಿಗರ ಸಬಲೀಕರಣಕ್ಕೆ ‘ಕರ್ನಾಟಕ 50’ರ ಸಂಭ್ರಮ ಪ್ರೇರಣೆಯಾಗಬೇಕು

ಏಕೀಕೃತ ಕನ್ನಡನಾಡು ಕರ್ನಾಟಕ ಎನ್ನುವ ಹೆಸರನ್ನು ಪಡೆದ ಸಂದರ್ಭದಲ್ಲಿ, ನಾಡು-ನುಡಿಗೆ ಸಂಬಂಧಿಸಿದಂತೆ ಅನೇಕ ಕನಸುಗಳನ್ನು ಜನಮಾನಸದಲ್ಲಿ ಬಿತ್ತಲಾಗಿತ್ತು. ನಾಡಿನ ಅಮೂಲ್ಯ ಪ್ರಾಕೃತಿಕ ಸಂಪತ್ತನ್ನು ಸಂರಕ್ಷಿಸುವುದು ಹಾಗೂ ಆ ಸಂಪತ್ತನ್ನು ನಾಡವರ ಹಿತಕ್ಕೆ ಬಳಸಿಕೊಳ್ಳುವ ಮೂಲಕ ಆಧುನಿಕ ಕರ್ನಾಟಕವನ್ನು ಕಟ್ಟುವ ಹಂಬಲ ‘ಕರ್ನಾಟಕ ನಾಮಕರಣ’ದ ಆಶಯಗಳಲ್ಲೊಂದಾಗಿತ್ತು. ಹಾಗೆಯೇ, ಕರ್ನಾಟಕದ ಬಹುತ್ವ ಪರಂಪರೆಯ ಅನನ್ಯತೆಯನ್ನು ಸಂರಕ್ಷಿಸಿಕೊಂಡು, ಭಾರತ ಒಕ್ಕೂಟದ ಸಾರ್ವಭೌಮತ್ವವನ್ನು ಎತ್ತಿಹಿಡಿಯುವ ದಿಸೆಯಲ್ಲಿ ನಾಡನ್ನು ಸಜ್ಜುಗೊಳಿಸುವ ಆಕಾಂಕ್ಷೆಯೂ ಇತ್ತು. ಕಳೆದ ಐವತ್ತು ವರ್ಷಗಳಲ್ಲಿ ಈ ಆಶಯ ಎಷ್ಟರಮಟ್ಟಿಗೆ ಸಾಕಾರಗೊಂಡಿದೆ ಎನ್ನುವುದರ ಅವಲೋಕನ ‘ಕರ್ನಾಟಕ ಸುವರ್ಣ ಮಹೋತ್ಸವ’ ಸಂದರ್ಭದಲ್ಲಿ ನಡೆಯಬೇಕಾಗಿದೆ. ಕಳೆದ ಎರಡು ದಶಕಗಳ ಅವಧಿಯಲ್ಲಿ ಕರ್ನಾಟಕದಲ್ಲಿ ನಡೆದ ಪ್ರಾಕೃತಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಸಂಗತಿಗಳು ನಾಡಿನ ಹೆಮ್ಮೆಯನ್ನು ಹೆಚ್ಚಿಸುವಂತೇನೂ ಇರಲಿಲ್ಲ ಎನ್ನುವುದನ್ನು ಮರೆಯಬಾರದು. ಬಳ್ಳಾರಿಯನ್ನು ಕೇಂದ್ರವಾಗಿಸಿಕೊಂಡು ನಡೆದ ಗಣಿಗಾರಿಕೆ ಹಾಗೂ ಅದರ ಪರಿಣಾಮಗಳು ಪ್ರಾಕೃತಿಕವಾಗಿಯೂ, ರಾಜಕೀಯವಾಗಿಯೂ ರಾಜ್ಯದ ವರ್ಚಸ್ಸನ್ನು ಮಸುಕುಗೊಳಿಸುವಂತಿದ್ದವು. ಪಶ್ಚಿಮ ಘಟ್ಟಗಳ ಸಂರಕ್ಷಣೆಗೆ ಸಂಬಂಧಿಸಿದಂತೆ ಸ್ಪಷ್ಟವಾದ ನೀತಿಯೊಂದನ್ನು ಅಳವಡಿಸಿಕೊಳ್ಳುವುದು ನಮಗೆ ಸಾಧ್ಯವಾಗಿಲ್ಲ. ಧರ್ಮ ಮತ್ತು ರಾಜಕಾರಣದ ನಡುವಣ ಗೆರೆ ತೆಳುವಾಗುತ್ತಾ ಹೋಗಿರುವುದು ಕೂಡ ಕನ್ನಡ–ಕರ್ನಾಟಕದ ‘ವಿವೇಕ ಪರಂಪರೆ’ಗೆ ಪೂರಕವಾಗಿಲ್ಲ. ‘ಸರ್ವ ಜನಾಂಗದ ಶಾಂತಿಯ ತೋಟ’ ಎನ್ನುವ ನಾಡಗೀತೆಯ ಆಶಯಕ್ಕೆ ಗಾಸಿ ಉಂಟುಮಾಡುವ ಘಟನೆಗಳು ರಾಜ್ಯದ ವಿವಿಧ ಭಾಗಗಳಿಂದ ನಿರಂತರವಾಗಿ ವರದಿಯಾಗುತ್ತಿರುವುದು ಕಳವಳಕಾರಿ. ಈ ಎಲ್ಲ ವಿದ್ಯಮಾನಗಳ ಚರ್ಚೆಗೆ ‘ಕರ್ನಾಟಕ 50’ರ ಸಂದರ್ಭ ಅವಕಾಶ ಕಲ್ಪಿಸಬೇಕು.

ಯಾವುದೇ ಸಂಭ್ರಮದ ಸಂದರ್ಭ ಅರ್ಥಪೂರ್ಣವಾಗುವುದು ಕಳೆದ ದಿನಗಳನ್ನು ವಿಮರ್ಶಾತ್ಮಕವಾಗಿ ನೋಡುತ್ತ, ವರ್ತಮಾನದ ತವಕ–ತಲ್ಲಣಗಳನ್ನು ಒರೆಗೆ ಹಚ್ಚುತ್ತ, ಆರೋಗ್ಯಕರ ನಾಳೆಗಳನ್ನು ರೂಪಿಸಿಕೊಳ್ಳಲು ಅಗತ್ಯವಾದ ಅರಿವಿನ ಬೆಳಕನ್ನು ಪಡೆದುಕೊಳ್ಳುವುದರಲ್ಲಿ. ಈ ಅರಿವಿನ ಉದ್ದೀಪನದ ರೀತಿಯಲ್ಲಿ ‘ಕರ್ನಾಟಕ ಸುವರ್ಣ ಮಹೋತ್ಸವ’ ಸಂದರ್ಭವನ್ನು ನಾಡು ಬಳಸಿಕೊಳ್ಳಬೇಕಾಗಿದೆ. ‘ಕರ್ನಾಟಕ 50’ರ ಸಂಭ್ರಮವನ್ನು ಸರ್ಕಾರ ಸಹಜವಾಗಿಯೇ ದೊಡ್ಡ ಮಟ್ಟದಲ್ಲಿ ಆಚರಿಸಲಿದೆ. ಆದರೆ, ಈ ಸಂಭ್ರಮವು ಅದ್ದೂರಿ ಕಾರ್ಯಕ್ರಮಗಳಿಗೆ ಹಾಗೂ ಗೌರವ ಸಮರ್ಪಣೆಗಳಿಗೆ ಸೀಮಿತವಾಗಬಾರದು. ನುಡಿ ಸಂಭ್ರಮದಿಂದಷ್ಟೇ ‘ಆಧುನಿಕ ಕರ್ನಾಟಕ’ ತಲೆ ಎತ್ತುವುದು ಸಾಧ್ಯವಿಲ್ಲ. ವೈಚಾರಿಕ ಹಾಗೂ ವೈಜ್ಞಾನಿಕ ನೆಲೆಗಟ್ಟಿನ ಮೂಲಕ ನಾಡು–ನುಡಿಯ ಸಾಧ್ಯತೆಗಳನ್ನು ರೂಪಿಸುವ ಸವಾಲಿಗೆ ಮುಖಾಮುಖಿಯಾಗದೆ ಹೋದರೆ ಕನ್ನಡದ ನಾಳೆಗಳು ಉಜ್ವಲಗೊಳ್ಳುವ ಕನಸು ನನಸಾಗುವುದು ಅಸಾಧ್ಯ. ‘ಪ್ರಜಾಪ್ರಭುತ್ವ ಭಾರತ’ವನ್ನು ಬಲಗೊಳಿಸುವ ದಿಸೆಯಲ್ಲಿ ‘ಪ್ರಜಾಪ್ರಭುತ್ವ ಕರ್ನಾಟಕ’ ಹೆಗಲೆಣೆಯಾಗಿ ಕಾರ್ಯನಿರ್ವಹಿಸಬೇಕಾದ ಅಗತ್ಯವೂ ಇದೆ. ಕನ್ನಡವನ್ನು ಪರಿಣಾಮಕಾರಿಯಾಗಿ ಆಡಳಿತ ಭಾಷೆಯಾಗಿಸುವ ಹಾಗೂ ಶಿಕ್ಷಣ ಮಾಧ್ಯಮದ ಭಾಷೆಯಾಗಿಸುವ ನಿಟ್ಟಿನಲ್ಲಿ ಸರ್ಕಾರ ದೃಢ ಪ್ರಯತ್ನಗಳನ್ನು ನಡೆಸಬೇಕಾಗಿದೆ. ಇವೆಲ್ಲಕ್ಕಿಂತ ಮುಖ್ಯವಾಗಿ, ವರ್ಷದಿಂದ ವರ್ಷಕ್ಕೆ ದುರ್ಬಲಗೊಳ್ಳುತ್ತಿರುವ ಕನ್ನಡ ಶಾಲೆಗಳ ತಳಹದಿಯನ್ನು ಗಟ್ಟಿಗೊಳಿಸಬೇಕಾಗಿದೆ. ಕನ್ನಡ ಶಾಲೆಗಳೇ ಇಲ್ಲದೆ ಹೋದರೆ, ಕನ್ನಡದ ನಾಳೆಗಳ ಕುರಿತ ಯಾವ ಕನಸುಗಳಿಗೂ ಅರ್ಥವಿಲ್ಲ ಎನ್ನುವುದನ್ನು ನಾಗರಿಕರು ಹಾಗೂ ಸರ್ಕಾರ ಮರೆಯಬಾರದು. ಹೊಸ ಕಾಲದ ಸವಾಲುಗಳನ್ನು ಎದುರಿಸಲು ಸಾಧ್ಯವಾಗುವಂತೆ ಕನ್ನಡ ಹಾಗೂ ಕನ್ನಡಿಗರ ಸಬಲೀಕರಣಕ್ಕೆ ‘ಕರ್ನಾಟಕ 50’ರ ಸಂಭ್ರಮ ಪ್ರೇರಣೆಯಾಗಬೇಕು.

ಗಾಂಧೀಜಿ ಬದುಕಿಲ್ಲದಿರಬಹುದು; ಆದರೆ, ಜಗತ್ತಿಗೆ ಗಾಂಧೀಜಿಯ ಅಗತ್ಯ ಇದೆ

ಗಾಜಾ ಪ್ರದೇಶದಲ್ಲಿ ಆತ್ಮಹೀನ ಕೃತ್ಯ



ವಿಶ್ಲೇಷಣೆ

ಕ್ಯಾಪ್ಟನ್ ಜಿ.ಆರ್. ಗೋಪಿನಾಥ್

‘ಶಾಂತಿಗಿಂತ ಹೆಚ್ಚಾಗಿ ಯುದ್ಧವನ್ನು ಬಯಸುವಷ್ಟು ಯಾರೂ ಮೂರ್ಖರಲ್ಲ. ಏಕೆಂದರೆ, ಶಾಂತಿಕಾಲದಲ್ಲಿ ಮಕ್ಕಳು ಅಪ್ಪಂದಿರ ಅಂತ್ಯಸಂಸ್ಕಾರ ನಡೆಸಿದರೆ, ಯುದ್ಧಕಾಲದಲ್ಲಿ ಅಪ್ಪಂದಿರು ಮಕ್ಕಳ ಅಂತ್ಯಸಂಸ್ಕಾರ ನಡೆಸಬೇಕಾಗುತ್ತದೆ’ ಎಂದು ಗ್ರೀಕ್ ಇತಿಹಾಸಕಾರ ಹೆರೊಡೊಟಸ್ 2,500 ವರ್ಷಗಳ ಹಿಂದೆ ಹೇಳಿದ್ದ.

ಆದರೆ ಇಸ್ರೇಲ್ ಮತ್ತು ಹಮಾಸ್ ನಡುವಿನ ಸಮರವು ಹೆರೊಡೊಟಸ್‌ನ ಮಾತುಗಳಿಗೆ ವಿರುದ್ಧವಾಗಿ ನಡೆಯುತ್ತಿದೆ. ಈ ಯುದ್ಧದಲ್ಲಿ ಮಕ್ಕಳು ತಮ್ಮ ಅಪ್ಪ–ಅಮ್ಮಂದಿರ, ಅಜ್ಜ–ಅಜ್ಜಿಯರ ಅಂತ್ಯಸಂಸ್ಕಾರ ನಡೆಸುತ್ತಿದ್ದಾರೆ; ಅಪ್ಪ–ಅಮ್ಮ ಸೇರಿ ಮಕ್ಕಳ ಅಂತ್ಯಸಂಸ್ಕಾರ ನಡೆಸುತ್ತಿದ್ದಾರೆ; ಪತಿಯು ಪತ್ನಿಯ, ಪತ್ನಿಯು ಪತಿಯ ಅಂತ್ಯಸಂಸ್ಕಾರ ನಡೆಸುತ್ತಿದ್ದಾರೆ. ಅಂತ್ಯಸಂಸ್ಕಾರದ ಮುಂದಿನ ಪಾಳಿ ಯಾರದ್ದು, ಮುಂದಿನ ದಾಳಿಯಲ್ಲಿ ಅನಾಥರಾಗುವವರು ಯಾರು ಎಂಬ ಭೀತಿಯಲ್ಲಿ ಅಲ್ಲಿನವರು ಇದ್ದಾರೆ.

ಇಸ್ರೇಲಿ ಯಹೂದಿ ಮಾವೋಜ್ ಇನೊನ್ ಅವರು ತಮ್ಮ ತಂದೆ, ತಾಯಿಯ ಅಂತ್ಯಸಂಸ್ಕಾರ ನಡೆಸಿ ದುಃಖದಲ್ಲಿದ್ದಾರೆ. ಇವರಿಬ್ಬರನ್ನು ಹಮಾಸ್ ಬಂಡುಕೋರರು ಹತ್ಯೆ ಮಾಡಿದ್ದರು. ಈಚೆಗೆ ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಗೆ ಸಂದರ್ಶನ ನೀಡಿದ್ದ ಅವರು, ‘ನಾನು ಅಳುತ್ತಲೇ ಇದ್ದೇನೆ. ನನ್ನ ಅಪ್ಪ–ಅಮ್ಮನಿಗಾಗಿ, ಸ್ನೇಹಿತರಿಗಾಗಿ, ಅಪಹೃತರಿಗಾಗಿ, ಬಲಿಯಾಗಿರುವ ಪ್ಯಾಲೆಸ್ಟೀನ್ ಜನರಿಗಾಗಿ, ಕಷ್ಟ ಅನುಭವಿಸಲಿರುವ ಎಲ್ಲರಿಗಾಗಿ ನಾನು ಅಳುತ್ತಿದ್ದೇನೆ’ ಎಂದು ಹೇಳಿದ್ದಾರೆ. ಆದರೆ ಕ್ರೋಧದಿಂದ ಕುದಿಯುತ್ತಿರುವ ಜನರ ಸಂಖ್ಯೆಯು ಇನೊನ್ ಅವರಂಥ ವ್ಯಕ್ತಿಗಳಿಗಿಂತ ಹೆಚ್ಚಿದೆ. ‘ನಾವು ಇತಿಹಾಸದಿಂದ ಪಾಠ ಕಲಿಯಬೇಕು. ಮಿಲಿಟರಿ ಪರಿಹಾರವು ನನ್ನ ಅಪ್ಪ–ಅಮ್ಮನನ್ನು ಜೀವಂತ ಉಳಿಸುವಲ್ಲಿ ವಿಫಲವಾಯಿತು. ನಾವು ಈ ಹಿಂದೆ ಮಾಡುತ್ತಿದ್ದುದನ್ನು ಮತ್ತೆ ಮಾಡುವುದನ್ನು ನಿಲ್ಲಿಸಬೇಕು. ಹೊಸ ನೀತಿ ಬೇಕು. ಶತಮಾನದಿಂದ ನಡೆಯುತ್ತಿರುವ ಹಿಂಸೆಯನ್ನು ನಿಲ್ಲಿಸುವ ಧೈರ್ಯವಂತರು ಬೇಕು’ ಎಂದು ಇನೊನ್ ಹೇಳಿದ್ದಾರೆ. ಇದಕ್ಕೆ ನ್ಯೂಯಾರ್ಕ್ ಟೈಮ್ಸ್‌ನ ಪತ್ರಕರ್ತ, ‘ಅಂದರೆ, ಹೀಗೆ ಮಾಡಲು ಗಾಂಧೀಜಿಗೆ ಇದ್ದಂತಹ ಆತ್ಮಸ್ಥೈರ್ಯ ಬೇಕು’ ಎಂದು ತಮ್ಮಲ್ಲೇ ಹೇಳಿಕೊಂಡಿದ್ದಾರೆ.

ಹಮಾಸ್ ಸಂಘಟನೆಯು ಮಹಿಳೆಯರು, ಮಕ್ಕಳು ಸೇರಿದಂತೆ 1,400 ನಾಗರಿಕರನ್ನು ಹತ್ಯೆ ಮಾಡಿದ್ದು ಭಯೋತ್ಪಾದನಾ ಕೃತ್ಯ. ಅದಕ್ಕೆ ಕ್ಷಮೆಯಿಲ್ಲ. ಆದರೆ ಇಸ್ರೇಲ್ ಪ್ರತೀಕಾರದಿಂದ ನಡೆಸುತ್ತಿರುವ ದಾಳಿಯು ಹತ್ಯಾಕಾಂಡಕ್ಕೆ ಸಮ, ಅದು ಸರ್ಕಾರಿ ಭಯೋತ್ಪಾದನೆ. ಅದು ಹಿಟ್ಲರ್ ಅವಧಿಯಲ್ಲಿ ಯಹೂದಿಗಳೇ ಅನುಭವಿಸಿದ ಜನಾಂಗ ನಿರ್ಮೂಲನೆ ಉದ್ದೇಶದ ಹತ್ಯಾಕಾಂಡಕ್ಕೆ ಸಮ. ಇಸ್ರೇಲ್ ಸರ್ಕಾರವು ಹಿಟ್ಲರನ ಜರ್ಮನಿಗಿಂತ ಭಿನ್ನವಾಗಿದೆಯೇ?

ಪ್ಯಾಲೆಸ್ಟೀನ್ ಪ್ರದೇಶಗಳನ್ನು ಇಸ್ರೇಲ್ 75 ವರ್ಷಗಳಿಂದ ತನ್ನ ವಸಾಹತು ಮಾಡಿಕೊಳ್ಳುತ್ತಿದೆ. ಗಾಜಾ ಪಟ್ಟಿಯ ಮೇಲೆ ದಿಗ್ಬಂಧನ ವಿಧಿಸಿ, ಅದನ್ನು ಬಯಲು ಬಂದೀಖಾನೆಯನ್ನಾಗಿಸಿದೆ. ಪೂರ್ವ ಜೆರುಸಲೇಂ ಭಾಗವನ್ನು ಇಸ್ರೇಲ್ ಏಕಪಕ್ಷೀಯವಾಗಿ ವಶಕ್ಕೆ ತೆಗೆದುಕೊಂಡಿದೆ. ಇಸ್ರೇಲ್‌ನಲ್ಲಿಯೂ 25 ಲಕ್ಷ ಮಂದಿ ಪ್ಯಾಲೆಸ್ಟೀನಿಯನ್ನರು ತೃತೀಯ ದರ್ಜೆ ನಾಗರಿಕರಂತೆ ಬದುಕುತ್ತಿದ್ದಾರೆ.

ಪ್ಯಾಲೆಸ್ಟೀನ್ ಜನರನ್ನು ವಿಭಜಿಸಿ, ದುರ್ಬಲರನ್ನಾಗಿಸುವ ಉದ್ದೇಶದಿಂದ, ಪ್ಯಾಲೆಸ್ಟೀನ್ ಲಿಬರೇಷನ್ ಆರ್ಗನೈಸೇಷನ್‌ಗೆ ಪ್ರತಿಸ್ಪರ್ಧಿಯಾಗಿ ಹಮಾಸ್ ಸಂಘಟನೆಯನ್ನು ಬೆಂಜಮಿನ್ ನೆತನ್ಯಾಹು ಅವರಂಥವರ ನಾಯಕತ್ವವು ಪ್ರೋತ್ಸಾಹಿಸಿತು ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಪ್ಯಾಲೆಸ್ಟೀನ್ ಪ್ರದೇಶಗಳ ಮೇಲಿನ ಹಿಡಿತವನ್ನು ಶಾಶ್ವತಗೊಳಿಸುವ, ದ್ವಿರಾಷ್ಟ್ರ ಸೂತ್ರಕ್ಕೆ ಸಂಬಂಧಿಸಿದ ಮಾತುಕತೆಗಳನ್ನು ಮುಂದಕ್ಕೆ ಹಾಕುವ ಉದ್ದೇಶ ಕೂಡ ಇತ್ತು. ಗಾಜಾ ಪ್ರದೇಶವನ್ನು ಆಳುತ್ತಿರುವ ಹಮಾಸ್, ಪ್ಯಾಲೆಸ್ಟೀನ್‌ನಿಂದ ಇಸ್ರೇಲ್ ಅನ್ನು ಹೊರಹಾಕಿ ತಾರತಮ್ಯವನ್ನು ಕೊನೆಗೊಳಿಸುವ ಶಪಥ ಮಾಡಿದೆ.

ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಇತಿಹಾಸಕಾರ ಪ್ರೊ. ಅವಿ ಶ್ಲೈಮ್ ಅವರು ಯಹೂದಿ, ಇಸ್ರೇಲ್ ಸೇನೆಯಲ್ಲಿದ್ದವರು. ‘ಸಂಘರ್ಷ ಶುರುವಾಗಿದ್ದು ಅಕ್ಟೋಬರ್ 7ರಿಂದ ಅಲ್ಲ. ಪ್ಯಾಲೆಸ್ಟೀನ್ ಮೇಲೆ ಯಹೂದಿಯರ ಹಕ್ಕು ಕೇಳುವಿಕೆಯು ದುರ್ಬಲ ನೆಲೆಗಟ್ಟಿನ ಮೇಲೆ ನಿಂತಿದೆ. ಹಿಂದೆ ಒಂದು ಜಾಣ ಘೋಷಣೆಯನ್ನು ರೂಪಿಸಲಾಯಿತು. ದೇಶವಿಲ್ಲದ ಜನ ಹಾಗೂ ಜನರಿಲ್ಲದ ದೇಶ ಎಂಬುದು ಆ ಘೋಷಣೆ. ಅಂದರೆ, ಯಹೂದಿಯರಿಗೆ ದೇಶ ಇರಲಿಲ್ಲ. ಅದು ನಿಜವೂ ಆಗಿತ್ತು. ಆದರೆ ಪ್ಯಾಲೆಸ್ಟೀನ್‌ನಲ್ಲಿ ಜನರಿಲ್ಲ ಎಂಬುದು ನಿಜವಾಗಿರಲಿಲ್ಲ. ಅಲ್ಲಿ ಅರಬ್ ಸಮಾಜ ಇತ್ತು. ಅರಬರು ಹಲವು ಶತಮಾನಗಳಿಂದ ಪ್ಯಾಲೆಸ್ಟೀನ್‌ನಲ್ಲಿ ವಾಸಿಸುತ್ತಿದ್ದರು’ ಎಂದು ಹೇಳಿದ್ದಾರೆ.

ಮೊದಲ ವಿಶ್ವಯುದ್ಧದ ಅಂತ್ಯಕ್ಕೂ ಮೊದಲು ಬಾಲ್ಫರ್ ಘೋಷಣೆಯನ್ನು ಬ್ರಿಟಿಷರು ಹೊರಡಿಸಿದರು. ಪ್ಯಾಲೆಸ್ಟೀನ್‌ನಲ್ಲಿ ಯಹೂದಿಯರಿಗೆ ನೆಲೆ ಸೃಷ್ಟಿಸಿಕೊಡು ವುದಾಗಿ ಹೇಳಿದರು. ‘ಪ್ಯಾಲೆಸ್ಟೀನ್‌ನಲ್ಲಿ ಇರುವ ಯಹೂದೇತರ ನಾಗರಿಕರು ಮತ್ತು ಅವರ ಧಾರ್ಮಿಕ ಹಕ್ಕುಗಳಿಗೆ ಚ್ಯುತಿ ಬರಬಾರದು’ ಎಂದೂ ಬ್ರಿಟಿಷರು ಹೇಳಿದ್ದರು. ಆದರೆ ಯುದ್ಧದಲ್ಲಿ ಗೆದ್ದ ನಂತರ ಬ್ರಿಟಿಷರು ಅರಬರನ್ನು ವಂಚಿಸಿದರು. ಪ್ಯಾಲೆಸ್ಟೀನ್‌ನಲ್ಲಿ ಯಹೂದಿಯರ ನೆಲೆಗಳನ್ನು ಸ್ಥಾಪಿಸಲು ಮುಂದಾದರು. ಅರಬ್ ಪ್ಯಾಲೆಸ್ಟೀನಿಯನ್ನರು ಹಾಗೂ ಯಹೂದಿ ವಲಸಿಗರ ನಡುವೆ ಸಂಘರ್ಷದ ಬೀಜ ಬಿತ್ತಿದರು. ಆ ಸಂದರ್ಭದಲ್ಲಿ ಅರಬರ ಜನಸಂಖ್ಯೆಯು ಅಲ್ಲಿ ಶೇಕಡ 95ರಷ್ಟು ಆಗಿತ್ತು, ಯಹೂದಿಯರ ಜನಸಂಖ್ಯೆಯ ಪ್ರಮಾಣವು ನಗಣ್ಯವಾಗಿತ್ತು.



ಎರಡನೆಯ ವಿಶ್ವಯುದ್ಧದ ನಂತರದಲ್ಲಿ ಯಹೂದಿಯರ ರಾಷ್ಟ್ರದ ಸೃಷ್ಟಿಯ ಕೆಲಸದ ಮೇಲ್ವಿಚಾರಣೆಯನ್ನು ಬ್ರಿಟನ್ ನಡೆಸಿತು. ಅಮೆರಿಕ ಮತ್ತು ಇತರ ಪಾಶ್ಚಿಮಾತ್ಯ ಮಿತ್ರರಾಷ್ಟ್ರಗಳು ಪ್ಯಾಲೆಸ್ಟೀನಿಯನ್ನರ ನೆಲವನ್ನು ಬಲವಂತವಾಗಿ ಸ್ವಾಧೀನಕ್ಕೆ ತೆಗೆದುಕೊಳ್ಳುವ ಕೆಲಸಕ್ಕೆ ನೆರವು ನೀಡಿದವು. ಪ್ಯಾಲೆಸ್ಟೀನ್‌ನ ಲಕ್ಷಾಂತರ ಮಂದಿ ತಮ್ಮದೇ ನೆಲದಲ್ಲಿ ನಿರಾಶ್ರಿತರಾದರು. ಪ್ಯಾಲೆಸ್ಟೀನ್ ನೆಲವನ್ನು ಶತಮಾನಗಳ ಹಿಂದೆ ತೊರೆದು, ಯುರೋಪ್ ಮತ್ತು ಅಮೆರಿಕದಲ್ಲಿ ನೆಲೆ ಕಂಡುಕೊಂಡಿದ್ದ ಯಹೂದಿಗಳು ಹತ್ಯಾಕಾಂಡವನ್ನು ಎದುರಿಸಿದ ನಂತರದಲ್ಲಿ ತಮ್ಮದೇ ಆದ ಒಂದು ದೇಶಕ್ಕಾಗಿ ಹಂಬಲಿಸಿದ್ದು ಸಮರ್ಥನೀಯ ಹೌದು. ಆದರೆ, ಪ್ಯಾಲೆಸ್ಟೀನ್ ನಾಗರಿಕರನ್ನು ಸ್ಥಳಾಂತರಿಸಿ, ಅವರ ಶವದ ಮೇಲೆ ಸೌಧ ಕಟ್ಟುವುದು ಸಾಧ್ಯವೇ? ಆ ಕೆಲಸವನ್ನು ಸದಾಶಯದಿಂದ ಹಾಗೂ ಪ್ಯಾಲೆಸ್ಟೀನ್ ನಾಗರಿಕರ ಸ್ವಯಂ ಆಡಳಿತದ ಹಕ್ಕನ್ನು ಗೌರವಿಸುವ ಮೂಲಕ ಮಾಡಬೇಕಿತ್ತಲ್ಲವೇ?

ಇಲ್ಲಿ ಅಮೆರಿಕದ ಕೈಗಳು ರಕ್ತಸಿಕ್ತವಾಗಿವೆ. ಇಸ್ರೇಲ್‌ಗೆ ಶಸ್ತ್ರಾಸ್ತ್ರಗಳನ್ನು ಪೂರೈಸುವುದಾಗಿ ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರು ಬೇಷರತ್ತಾಗಿ ಘೋಷಿಸಿದ್ದಾರೆ. ಅಮೆರಿಕದಲ್ಲಿ ಚುನಾವಣೆ ಹತ್ತಿರವಾಗುತ್ತಿದೆ. ಹೀಗಾಗಿ ಹಿಂದಿನ ಅಧ್ಯಕ್ಷರಂತೆಯೇ ಬೈಡನ್ ಅವರೂ ಶಕ್ತಿಯುತ ಯಹೂದಿ ಲಾಬಿಗೆ ಮಣಿದಿದ್ದಾರೆ.

ಬೇರೊಬ್ಬರ ನೆಲವನ್ನು ಸ್ವಾಧೀನದಲ್ಲಿ ಇರಿಸಿಕೊಂಡಾಗ ಹಿಂಸೆ ಸೃಷ್ಟಿಯಾಗುತ್ತದೆ. ಅರಬ್ ನೆಲದ ಮೇಲೆ ದಾಳಿ ನಡೆಸಿದ ಎಲ್ಲ ಸೇನೆಗಳೂ ನಂತರದಲ್ಲಿ ನಾಶವಾಗಿವೆ. ಥಾಮಸ್ ಫ್ರೀಡ್ಮನ್ ಅವರು ಬರೆದಿರುವಂತೆ, ‘ತಾಲಿಬಾನ್, ಹಮಾಸ್, ಐಎಸ್‌ಐಎಸ್, ಅಲ್ ಕೈದಾ, ಪ್ಯಾಲೆಸ್ಟೀನಿಯನ್ ಇಸ್ಲಾಮಿಕ್ ಜಿಹಾದ್, ಹಿಜ್ಬುಲ್ಲಾ ಇವೆಲ್ಲ ಇಂದಿಗೂ ಸಂಪೂರ್ಣವಾಗಿ ನಾಶವಾಗಿಲ್ಲ. ಈ ಸಂಘಟನೆಗಳು ತಮ್ಮ ಸಮಾಜದಲ್ಲಿ ಆಳವಾದ ಸಾಂಸ್ಕೃತಿಕ ಬೇರುಗಳನ್ನು ಹೊಂದಿವೆ. ಅವಮಾನಕ್ಕೆ ಗುರಿಯಾದ ಯುವಕರು ಅವರಿಗೆ ಸಿಗುತ್ತಾರೆ. ಈ ಯುವಕರಲ್ಲಿ ಹಲವರು ಉದ್ಯೋಗ ಕಂಡವರಲ್ಲ, ಅಧಿಕಾರ ನೋಡಿದವರಲ್ಲ, ಪ್ರೇಮ ಸಂಬಂಧವನ್ನು ಅನುಭವಿಸಿದವರಲ್ಲ. ಹಿಂಸೆಯ ಕೆಲಸಕ್ಕೆ ಇವರನ್ನು ಒಗ್ಗೂಡಿಸುವುದು ಸುಲಭ’.

ಇಸ್ರೇಲ್ ನಡೆಸಿರುವ ದಾಳಿಗೆ ಪ್ರತಿದಾಳಿ ಇದ್ದೇ ಇದೆ. ಈ ವಾಸ್ತವವನ್ನು ಉಪೇಕ್ಷಿಸುವುದು ಮೂರ್ಖತನದ ಕೆಲಸ. ಇಸ್ರೇಲಿನ ಲೇಖಕ ಎತ್ಗರ್ ಕೆರೆಟ್ ಅವರು ಹೇಳಿದ್ದು ಹೀಗೆ: ‘ನಾವು ಇರಾನ್ ಮತ್ತು ಅಮೆರಿಕದ ನಡುವಿನ ಛಾಯಾಸಮರದಲ್ಲಿ ಸಿಲುಕಿದ್ದೇವೆ. ನಮಗೆ ಇಸ್ರೇಲ್ ಹಾಗೂ ಪ್ಯಾಲೆಸ್ಟೀನ್‌ನಲ್ಲಿ ಅರ್ಧ ಡಜನ್‌ನಷ್ಟು ಮಹಾತ್ಮ ಗಾಂಧೀಜಿ ಬೇಕಿದೆ’.

ಗಾಂಧೀಜಿ, ನೀವು ಈ ಹೊತ್ತಿನಲ್ಲಿ ಬದುಕಿಲ್ಲದಿರಬಹುದು. ಆದರೆ, ಜಗತ್ತಿಗೆ ನಿಮ್ಮ ಅಗತ್ಯ ಇದೆ!

ಚುರುಮುರಿ



ದುಡಿತವೇ ಕೈಲಾಸ!

• ಸುಮಂಗಲಾ

ಬೆಕ್ಕಣ್ಣ ಭಾನುವಾರವೂ ಬೆಳಗಿನ ಜಾವವೇ ಎದ್ದು ರೆಡಿಯಾಗುತ್ತಿತ್ತು.

‘ನೀನೂ ಎದ್ದು ಲಗೂ ರೆಡಿಯಾಗು. ನನಗೂ ಹಂಗೆ ಬುತ್ತಿ ಮಾಡಿಕೊಡು’ ಎಂದು ಗಡಬಡಿಸಿತು.

‘ಇವತ್ ಭಾನುವಾರ, ರಜಾ... ಮಲಕ್ಕೊಳಲೇ ಸಾಕು, ಎಲ್ಲಿಗೆ ಹೊಂಟೀ’ ಎಂದು ಬೈದರೆ ಹಿಂದಿನ ದಿನದ ಪೇಪರು ಮುಖಕ್ಕೆ ಹಿಡಿಯಿತು.

‘ನೋಡಿಲ್ಲಿ... ಇನ್ಫಿ ಮೂರ್ತಿ ಅಜ್ಜಾರು ಹೇಳ್ಯಾರೆ... ವಾರಕ್ಕೆ ಎಪ್ಪತ್ತು ಗಂಟೆ ದುಡೀಬಕು, ಅವಾಗ ನಮ್ಮ ದೇಶ ಭಾರತ ಮುಂದೆ ಬರತೈತೆ ಅಂತ. ಅಂದರೆ ದಿನಕ್ಕೆ ಹತ್ತು ತಾಸಿನಂತೆ ವಾರದ ಎಲ್ಲಾ ದಿನನೂ ದುಡಿಬಕು ಅಥವಾ ಹನ್ನೆರಡು ತಾಸಿನಂತೆ ವಾರದ ಆರು ದಿನ ದುಡೀಬಕು’ ಎಂದು ಭಾಷಣ ಕಂಠಪಾಠ ಮಾಡಿದವರಂತೆ ಒದರಿತು.

‘ಮಂಗ್ಯಾನಂಥವ್ನೆ... ಅದು ಐಟಿವಳಗ ಕೆಲಸ ಮಾಡೂ ಯುವಜನರಿಗೆ ಹೇಳ್ಯಾರೆ. ನಾನೂ, ನೀನೂ ಐಟಿವಳಗ ಕೆಲಸ ಮಾಡಂಗಿಲ್ಲ, ಹಿಂಗಾಗಿ ನಮಗೆ ಅನ್ವಯ ಆಗಂಗಿಲ್ಲ’ ಎಂದೆ.

‘ಮೂರ್ತಿ ಅಜ್ಜಾರು ಐಟಿ ಮಂದಿ ಅಂದಿದ್ರೂ, ಅದು ಎಲ್ಲಾರಿಗೂ ಅನ್ವಯ ಆಗತೈತಿ. ಎಲ್ಲರೂ ಹಂಗ ದುಡಿದ್ರೇನೆ ನಮ್ಮ ದೇಶ ಮುಂದೆ ಬರತೈತಿ’.

‘ಮೊದಲೇ ಐಟಿವಳಗ ದುಡಿಯೋ ಹೆಣ್ಮಕ್ಕಳ ಸಂಖ್ಯೆ ಕಡಿಮೆ ಐತಿ, ಇನ್ ವಾರಕ್ಕೆ ಎಪ್ಪತ್ತು ತಾಸು ದುಡೀರಿ ಅಂದ್ರ ಹೆಣ್ಮಕ್ಕಳು ಐಟಿ ಕೆಲಸ ಬಿಟ್ಟು ಮನಿವಳಗ ಕುಂದ್ರೂ ಪರಿಸ್ಥಿತಿ ಬರತೈತಿ. ಹಂಗ ನೋಡಿದರ ನಮ್ಮ ರೈತರು ಎಪ್ಪತ್ತು ತಾಸಿಗಿಂತ ಹೆಚ್ಚೇ ದುಡಿತಾರ. ಮತ್ತ ಎದಕ್ಕ ಅವರೂ ಮುಂದೆ ಬರಂಗಿಲ್ಲ, ದೇಶನೂ ಮುಂದೆ ಬರಂಗಿಲ್ಲ?’

‘ಹೆಣ್ಣು ಮಕ್ಕಳು ಮನಿವಳಗೆ, ಮನಿ ಹೊರಗೆ ದುಡಿಯದು, ರೈತರು ಹೊಲದೊಳಗೆ ದುಡಿಯದು, ಅದೆಲ್ಲ ಬ್ಯಾರೆ ವಿಷಯ. ನೀ ಇದ್ರ ಜೊತಿಗಿ ಅವನ್ನ ಸೇರಿಸಬ್ಯಾಡ. ಯುವಜನರು ವಾರಕ್ಕ ಎಪ್ಪತ್ತು ತಾಸು ದುಡಿದರೆ ದೇಶ ಉದ್ಧಾರ ಆಗತೈತೆ ಅಂತಷ್ಟೇ ಹೇಳ್ಯಾರವರು’ ಎನ್ನುತ್ತ ಬೆಕ್ಕಣ್ಣ ಮೂರ್ತಿ ಅಜ್ಜಾರ ಪರವಾಗಿ ವಾದ ಮಂಡಿಸಿತು!

ದಿನದ ಟ್ವೀಟ್

ವಿಜಯಿಯಾದವನ ವಿಷಾದ



ಪ್ರಾಸಿಕ್ಯೂಟರ್ ಆಗಿ ನಾನು ಕೆಲವು ಕಾನೂನುಗಳು ರೂಪುಗೊಳ್ಳುವಂತೆ ಮಾಡಿದೆ. ಆದರೆ ಅವು ಕ್ರಿಮಿನಲ್ ನ್ಯಾಯದಾನ ವ್ಯವಸ್ಥೆಯ ಪಾಲಿಗೆ ನ್ಯಾಯಸಮ್ಮತವಾಗಿಲ್ಲ ಎಂಬುದನ್ನು ನಂತರ ಕಂಡುಕೊಂಡೆ. ಮನೀಶ್ ಸಿಸೋಡಿಯಾ ಪ್ರಕರಣದಲ್ಲಿ ನೀಡಿದ ತೀರ್ಪು, ವಿಜಯಿಯಾದವರು ತಮ್ಮ ವಿಜಯಕ್ಕೆ ವಿಷಾದ ವ್ಯಕ್ತಪಡಿಸಬೇಕಾಗುವುದಕ್ಕೆ ಒಂದು ನಿದರ್ಶನ ಆಗಬಹುದು.

ಸಂಜಯ್ ಹೆಗ್ಡೆ, ವಕೀಲ

ಕಿಡಿನುಡಿ



ಎಂಇಎಸ್ ಸಂಘಟನೆ ಕರಾಳ ದಿನ ಆಚರಿಸಿದರೆ ಕಠಿಣ ಕ್ರಮ ಎದುರಿಸಬೇಕಾಗುತ್ತದೆ. ನಮ್ಮ ನೆಲ, ಜಲ, ಗಾಳಿ... ಎಲ್ಲ ಸವಲತ್ತುಗಳನ್ನು ಪಡೆದು ಈ ರೀತಿ ವರ್ತಿಸುವುದು ಸರಿಯಲ್ಲ. ಇದನ್ನೇ ಮುಂದುವರಿಸಿದರೆ ಸರ್ಕಾರ ಸುಮ್ಮನಿರುವುದಿಲ್ಲ. ನೀವುಗಳು ಎಲ್ಲಿ ಇರುತ್ತೀರೊ ಅಲ್ಲಿನ ಭಾಷೆ ಗೌರವಿಸಿ.

ಶಿವರಾಜ್ ತಂಗಡಗಿ , ಕನ್ನಡ ಮತ್ತು ಸಂಸ್ಕೃತಿ ಸಚಿವ

25 ವರ್ಷಗಳ ಹಿಂದೆ

ಭಾನುವಾರ, 1-11-1998

• **ಬೆಲೆ ಏರಿಕೆ ಹತೋಟಿಗೆ ಶೀಘ್ರವೇ ಹೊಸ ನೀತಿ**

ಬೆಂಗಳೂರು, ಅ.31– ಅಗತ್ಯ ವಸ್ತುಗಳ ಬೆಲೆ ಏರಿಕೆ ತಡೆಗೆ ಸದ್ಯದಲ್ಲೇ ನೀತಿ ರೂಪಿಸಲಾಗುವುದು ಎಂದು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಇಂದು ಇಲ್ಲಿ ಹೇಳಿದರು.

ಪ್ರಧಾನಿಯಾದ ಮೇಲೆ ನಗರಕ್ಕೆ ಮೊದಲ ಬಾರಿಗೆ ಆಗಮಿಸಿದ ಅವರು, ಸಂಜೆ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಭಾರತೀಯ ಜನತಾ ಪಕ್ಷ ಏರ್ಪಡಿಸಿದ್ದ ಭಾರಿ ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡಿ, ಈ ವರ್ಷ ಇಡೀ ರಾಷ್ಟ್ರದಲ್ಲಿ ಭಾರಿ ಮಳೆಯಾಗಿ ಈರುಳ್ಳಿ ಸೇರಿದಂತೆ ಕೆಲವು ಬೆಳೆಗಳು ಹಾನಿಗೊಳಗಾಗಿವೆ. ಆದ್ದರಿಂದ ಅವುಗಳ ಬೆಲೆ ಹೆಚ್ಚಾಗಿದೆ. ಕೊರತೆ ಇರುವ ವಸ್ತುಗಳನ್ನು ಆಮದು ಮಾಡಿಕೊಳ್ಳಲಾಗುವುದು ಎಂದು ಹೇಳಿ, ನಮ್ಮ ಸರ್ಕಾರದ ಮೇಲೆ ಭರವಸೆ ಇಡಿ ಎಂದು ಸಾರ್ವಜನಿಕರಲ್ಲಿ ವಿನಂತಿಸಿಕೊಂಡರು.

• **ಬ್ರಹ್ಮಪ್ಪ ಅವರಿಗೆ ಚಾವುಂಡರಾಯ ಪ್ರಶಸ್ತಿ**

ಬೆಂಗಳೂರು, ಅ.31– ಕನ್ನಡ ಸಾಹಿತ್ಯ ಪರಿಷತ್ತಿನ ಅತ್ಯುನ್ನತ ಪುರಸ್ಕಾರ ‘ಚಾವುಂಡರಾಯ ಪ್ರಶಸ್ತಿ’ಗೆ ಈ ವರ್ಷ ಹಿರಿಯ ವಿದ್ವಾಂಸ ಪ್ರೊ.ಜಿ.ಬ್ರಹ್ಮಪ್ಪ ಅವರು ಆಯ್ಕೆಯಾಗಿದ್ದಾರೆ.

50 ವರ್ಷಗಳ ಹಿಂದೆ

ಗುರುವಾರ, 1-11-1973

• **ಇಂದಿನಿಂದ ನಮ್ಮ ರಾಜ್ಯ ಕರ್ನಾಟಕ**

ಬೆಂಗಳೂರು, ಅ.31– ಆ ದಿನ ಕೊನೆಗೂ ಬಂತು, ಬಂದ ದಾರಿ ಅಷ್ಟೇನು ಸುಗಮವಾಗಿರಲಿಲ್ಲ. ಕಷ್ಟವಾದ್ದರಿಂದಲೇ ಅದಕ್ಕೆ ಅಷ್ಟೊಂದು ಮಹತ್ವ.

ಸ್ವಾತಂತ್ರ್ಯಾನಂತರ ಒಂಬತ್ತು ವರ್ಷದಲ್ಲಿ ಕನ್ನಡದ ಜನ ತಮ್ಮದೇ ಆದ ವಿಶಾಲ ರಾಜ್ಯ ಪಡೆದರು. ಆದರೆ ಆ ರಾಜ್ಯಕ್ಕೆ ಬಹುಜನ ಬಯಸಿದ ಹೆಸರು ಪಡೆಯಲು ಹದಿನೇಳು ವರ್ಷ ಬೇಕಾಯಿತು.

ಸಾಕಷ್ಟು ಜನಪ್ರಿಯವಾಗಿದ್ದ ‘ಮೈಸೂರು’ ಎಂಬ ಹೆಸರನ್ನು ಬಿಟ್ಟುಕೊಡಲು ಅನೇಕರು, ಅದರಲ್ಲೂ ಕೆಲವು ಪ್ರಮುಖರು ಸಿದ್ಧರಿರಲಿಲ್ಲ. ಆಡಳಿತ ಪಕ್ಷದಲ್ಲೇ ಪ್ರಭಾವಶಾಲಿಗಳ ವಿರೋಧವಿದ್ದುದರಿಂದ ಕಳೆದ ವರ್ಷದವರೆಗೆ ನಾನಾ ಮಂತ್ರಿಮಂಡಲಗಳಿಗೆ ‘ಕರ್ನಾಟಕ’ ಎಂದು ಹೆಸರಿಡುವುದು ಸಾಧ್ಯವಾಗಲಿಲ್ಲ. ದೇವರಾಜ ಅರಸು ಅವರ ಮಂತ್ರಿಮಂಡಲ ಸುಗಮವಾಗಿ ಅದನ್ನು ಈ ವರ್ಷ ಸಾಧಿಸಿರುವುದರಲ್ಲಿ ಒಂದು ವಿಪರ್ಯಾಸ ಇದೆ. ಅರಸುರವರೇ ಹಿಂದೆ ವಿರೋಧಿಸಿದ್ದರು.

ಸಂಗತ

ಬಟವಾಡೆ ತರುಣರ ಬವಣೆ

ಅತ್ಯಧಿಕ ಶ್ರಮ ಬೇಡುವ ಕೆಲಸ ಇದು. ಇವರ ಆರೋಗ್ಯ ರಕ್ಷಣೆಗೆ ಸರ್ಕಾರ ಆಗಲೀ, ಕೆಲಸ ನೀಡುವ ಕಂಪನಿಗಳಾಗಲೀ ಅಷ್ಟಾಗಿ ತಲೆಕೆಡಿಸಿಕೊಂಡಂತಿಲ್ಲ

• ಶಿಶಿರ ವಸಿಷ್ಠ

ಹೋಟೆಲಿನ ಆಹಾರವನ್ನು ಮನೆಯ ವಿಳಾಸಕ್ಕೆ ತಂದುಕೊಟ್ಟ ಡೆಲಿವರಿಬಾಯ್ ಬಾಗಿಲಿನಿಂದ ತುಸು ದೂರವೇ ನಿಂತಿದ್ದ. ಕ್ಯಾಷ್ ಆನ್ ಡೆಲಿವರಿ ವಿಧಾನದಲ್ಲಿ ಆಹಾರವನ್ನು ಬುಕ್ ಮಾಡಿದ್ದರಿಂದ ‘ಬನ್ರೀ, ಕ್ಯೂಆರ್ ಕೋಡ್ ತೋರಿಸಿ, ಹಣ ಟ್ರಾನ್ಸ್‌ಫರ್ ಮಾಡುತ್ತೇನೆ’ ಎಂದೆ. ‘ಇರ್ಲಿ ಸರ್, ನನಗೆ ಕೆಮ್ಮು ಜಾಸ್ತಿ ಇದೆ, ಇಲ್ಲಿಂದಲೇ ಲಿಂಕ್ ಕಳಿಸುತ್ತೇನೆ, ಪೇ ಮಾಡಿಬಿಡಿ’ ಎಂದ. ಆಯಿತು ಎಂದು ಲಿಂಕ್ ಬಳಸಿ ಹಣ ಸಂದಾಯಿಸಿದ ನಂತರ ‘ಏಕೆ? ತುಂಬಾ ಕೆಮ್ಮು ಇದ್ದ ಹಾಗಿದೆ, ರೆಸ್ಟ್ ಮಾಡಿರಿ ಇಲ್ಲವೇ ವೈದ್ಯರಲ್ಲಿ ಸಲಹೆ ಪಡೆಯಿರಿ’ ಎಂದೆ. ಅದಕ್ಕೆ ಆತ, ‘ಇದೆಲ್ಲಾ ಮಾಮೂಲು ಸಾರ್, ಬೆಳಿಗ್ಗೆ ಏಳಕ್ಕೆ ಕೆಲಸ ಶುರುಮಾಡಿದ್ದೇನೆ, ಈಗ ರಾತ್ರಿ ಎಂಟಾಗಿದೆ ಇನ್ನೂ ಮನೆಗೆ ಹೋಗಿಲ್ಲ. ಹಗಲೆಲ್ಲಾ ಬಿಸಿಲು, ಉರಿ, ದೂಳಿನಲ್ಲೇ ಇರುತ್ತೇನೆ, ಅದಕ್ಕೇ ಹೀಗಾಗಿದೆ’ ಎಂದ. ಕೊನೆಗೆ ‘ಬರೋ ಸ್ವಲ್ಪ ಆದಾಯದಲ್ಲಿ ಡಾಕ್ಟರಿಗೆ, ಔಷಧಿಗೆ ಅಂತ ಹಣ ಖರ್ಚಾದರೆ, ಮನೆಯವರಿಗೆ ಏನು ಕೊಡುವುದು ಸಾರ್? ನನ್ನ ಬಗ್ಗೆ ಕಾಳಜಿ ತೋರಿದ್ದಕ್ಕೆ ಥ್ಯಾಂಕ್ಸ್’ ಎಂದ.

ಇದು ಈತನೊಬ್ಬನ ಸಮಸ್ಯೆಯಲ್ಲ. ದೇಶದಲ್ಲಿ ‘ಬಟವಾಡೆ ತರುಣ’ರಾಗಿ (ಡೆಲಿವರಿ ಬಾಯ್, ಗರ್ಲ್) ಕೆಲಸ ಮಾಡುತ್ತಿರುವ ಲಕ್ಷಾಂತರ ಜನ ಎದುರಿಸುತ್ತಿರುವ ಸಮಸ್ಯೆ ಇದು. ನಾವು ಆನ್‌ಲೈನ್ ಮುಖಾಂತರ ಖರೀದಿಸುವ ಸಾಮಾನುಗಳನ್ನು ನಿಗದಿತ ಸಮಯಕ್ಕೆ ತಲುಪಿಸುವ ಯುವಕ– ಯುವತಿಯರು, ವಯಸ್ಕರು ಉಸಿರಾಟದ ತೊಂದರೆ, ಗಂಟಲು ಉರಿ, ವಿಪರೀತ ತಲೆನೋವು, ವಾಕರಿಕೆ ಮತ್ತು ತಲೆ ಸುತ್ತುವಿಕೆಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಎಂಬ ವರದಿಗಳಿವೆ. ಒಂದು ಲೆಕ್ಕಾಚಾರದಂತೆ ದೇಶದ ಡೆಲಿವರಿಬಾಯ್‌ಗಳ ಸಂಖ್ಯೆ 83 ಲಕ್ಷದಷ್ಟು. ಇವರೆಲ್ಲ ದೇಶದ ಮಹಾನಗರ, ನಗರ ಮತ್ತು ಉಪನಗರಗಳ ಗಲ್ಲಿ– ಗಲ್ಲಿಗಳಿಗೆ ಆಹಾರ, ಔಷಧಿ, ಪುಸ್ತಕ, ತರಕಾರಿ, ದಿನಸಿ, ಮೊಬೈಲು, ಫರ್ನಿಚರ್, ಹೂವು, ಫ್ಯಾನು... ಹೀಗೆ ಮಾರುಕಟ್ಟೆಯಲ್ಲಿ ಬಿಕರಿಯಾಗುವ ಪ್ರತಿಯೊಂದು ವಸ್ತುವನ್ನೂ ಮನೆ–ಮನೆಯ ವಿಳಾಸ ಹುಡುಕಿ ತಲುಪಿಸುತ್ತಾರೆ. ಖರೀದಿದಾರರ ಮುಖಗಳಲ್ಲಿ ನಗುವರಳಿಸುತ್ತಾರೆ. ತುರ್ತು ಆರೋಗ್ಯ ಸೇವೆ ಬಯಸುವವರಿಗೆ ಸರಿಯಾದ ಸಮಯದಲ್ಲಿ ಔಷಧಿ ತಲುಪಿಸಿ ಜೀವ ಉಳಿಸುತ್ತಾರೆ. ತಾವು ಹಸಿದಿದ್ದರೂ ಹಸಿದ ಹೊಟ್ಟೆಗಳಿಗೆ ಆಹಾರ ತಲುಪಿಸಿ ಕೃತಾರ್ಥರಾಗುತ್ತಾರೆ. ಬೆಳಿಗ್ಗೆ ಏಳರ ಹೊತ್ತಿಗೆ ಶುರುವಾಗುವ ಇವರ ಕೆಲಸ ಮಧ್ಯರಾತ್ರಿಯವರೆಗೂ ಮುಂದುವರಿಯುತ್ತದೆ.

ದಿನದ ಬಹುಪಾಲು ಸಮಯ ಜನ– ವಾಹನ ಬಾಹುಳ್ಯವಿರುವ ವೃತ್ತ, ರಸ್ತೆ, ಮಾರ್ಕೆಟ್ ಪ್ರದೇಶಗಳಲ್ಲಿ ಬಿಸಿಲು, ದೂಳಿಗೆ ತೆರೆದುಕೊಳ್ಳುವ ಬಟವಾಡೆ ತರುಣರು ದಿನದಲ್ಲಿ ಏನಿಲ್ಲವೆಂದರೂ ಎರಡು ಗಂಟೆಗಳ ಕಾಲ ಟ್ರಾಫಿಕ್ ಜಾಮ್‌ಗಳಲ್ಲಿ ಸಿಕ್ಕಿಹಾಕಿಕೊಳ್ಳುತ್ತಾರೆ. ಟ್ರಾಫಿಕ್ ನಿಯಂತ್ರಿಸುವ ಪೊಲೀಸರು, ಬೀದಿ ಬದಿ ವ್ಯಾಪಾರಿಗಳು, ಬೈಕ್ ಟ್ಯಾಕ್ಸಿ, ಆಟೊರಿಕ್ಷಾ ಓಡಿಸುವವರು ಅತ್ಯಂತ ಕಲುಷಿತ ಗಾಳಿಯನ್ನು ಉಸಿರಾಡುತ್ತಾರೆ. ದೆಹಲಿ, ಮುಂಬೈ, ಬೆಂಗಳೂರು, ಕೋಲ್ಕತ್ತಾದಂತಹ ಮಹಾನಗರಗಳಲ್ಲಿ ದುಡಿಯುವ ನೌಕರರು ಗಾಳಿಯಲ್ಲಿ ಸೇರಿಕೊಂಡಿರುವ ತೇಲುಕಣ (ಪಾರ್ಟಿಕುಲೇಟ್ ಮ್ಯಾಟರ್- ಪಿಎಂ) ಮತ್ತು ಆವಿಯಾಗುವ ಸಾವಯವ ರಾಸಾಯನಿಕಗಳನ್ನು ವಿಧಿಯಿಲ್ಲದೇ ಉಸಿರಾಡುತ್ತಾರೆ. ಕೋಯಿಕ್ಕೋಡ್‌ನಲ್ಲಿ ಸಂಶೋಧನಾ ವಿದ್ಯಾರ್ಥಿಯಾಗಿರುವ ಅಭಿನಯ ಶೇಖರ್ ಪ್ರಕಾರ, ನಗರಗಳ ಗಾಳಿಯಲ್ಲಿ ಟಾಲೀನ್, ಬೆಂಜೀನ್ ಸೇರಿದಂತೆ 54 ಸಾವಯವ ಆವಿಯಾಗುವ ಪದಾರ್ಥಗಳಿವೆ. ದುಡಿಯುತ್ತಿರುವವರ ಪೈಕಿ ಶೇ 67ರಷ್ಟು ಮಂದಿಗೆ ಕಲುಷಿತ ವಾತಾವರಣದಿಂದ ತಮ್ಮ ಆರೋಗ್ಯ ಕೆಡುತ್ತಿದೆ ಎಂಬುದೂ ಅರಿವಿಗೆ ಬರುತ್ತಿಲ್ಲವಂತೆ!



ನಾವು ಉಸಿರಾಡುವ ಗಾಳಿಯ ತೇಲುಕಣಗಳನ್ನು ಪಿಎಂ 10, ಪಿಎಂ 2.5 ಮತ್ತು ಪಿಎಂ 1 ಎಂದು ಗುರುತಿಸಲಾಗುತ್ತದೆ. ಗಾಳಿಯಲ್ಲಿ ಇವು ಕ್ರಮವಾಗಿ ಪ್ರತಿ ಘನ ಮೀಟರ್‌ಗೆ 45, 15 ಮತ್ತು 10 ಮೈಕ್ರೊಗ್ರಾಂಗಿಂತ ಕಡಿಮೆ ಇರಬೇಕು. ಕಳೆದ ವರ್ಷ ದೆಹಲಿ ಸಮೀಪದ ಗಾಜಿಯಾಬಾದ್ ಪ್ರದೇಶದ ಗಾಳಿಯಲ್ಲಿ ಅವುಗಳ ಪ್ರಮಾಣ 516, 180 ಮತ್ತು 113 ಮೈಕ್ರೊಗ್ರಾಂನಷ್ಟಿದ್ದುದು ವರದಿಯಾಗಿತ್ತು. ಕೇಂದ್ರೀಯ ಮಾಲಿನ್ಯ ನಿಯಂತ್ರಣ ಮಂಡಳಿಯ ಮಾನದಂಡವು ಪಿಎಂ 10ರ ಪ್ರಮಾಣ 100 ಮತ್ತು ಪಿಎಂ 2.5ರ ಪ್ರಮಾಣ 60 ಮೈಕ್ರೊಗ್ರಾಂನಷ್ಟಿದ್ದರೆ ಅಂಥ ಅಪಾಯವೇನೂ ಇಲ್ಲ ಎನ್ನುತ್ತದೆ. ಬಹುಕಾಲದವರೆಗೆ 2.5 ಮೈಕ್ರಾನ್ ಗಾತ್ರದ ತೇಲುಕಣಗಳನ್ನು ಉಸಿರಾಡುವವರು ಅಸ್ತಮಾ, ಬ್ರಾಂಕೈಟಿಸ್‌ಗೆ ತುತ್ತಾಗುತ್ತಾರೆ ಮತ್ತು ಅವರಿಗೆ ಜನಿಸುವ ಮಕ್ಕಳಲ್ಲಿ ಅಂಗವೈಕಲ್ಯ ಮತ್ತು ಮನೋದೈಹಿಕ ಬೆಳವಣಿಗೆ ಸಂಬಂಧಿತ ತೊಂದರೆಗಳು ಉಂಟಾಗುತ್ತವೆ ಎಂಬ ವರದಿಗಳಿವೆ.

ಕಡಿಮೆ ಸಂಬಳ, ಅಧಿಕ ದುಡಿಮೆ, ಅತ್ಯಧಿಕ ಶ್ರಮ ಬೇಡುವ ಈ ಕೆಲಸ ಮಾಡುವ ಜನರ ಆರೋಗ್ಯ ರಕ್ಷಣೆಗೆ ಸರ್ಕಾರಗಳಾಗಲೀ, ಕೆಲಸ ನೀಡುವ ಕಂಪನಿಗಳಾಗಲೀ ಅಷ್ಟಾಗಿ ತಲೆಕೆಡಿಸಿಕೊಂಡಿಲ್ಲ. ಪ್ರಾರಂಭದಲ್ಲಿ ಕಾಳಜಿ ತೋರುವ ಕಂಪನಿಗಳು ಗಟ್ಟಿಯಾಗಿ ತಳವೂರಿದ ನಂತರ ಕೆಲಸಗಾರರ ಹಿತವನ್ನು ಕಡೆಗಣಿಸಿಬಿಡುತ್ತವೆ. ಜನಪ್ರಿಯತೆ ಹೆಚ್ಚಾದಂತೆ ‘ನೀನಲ್ಲದಿದ್ದರೆ ಹತ್ತಾರು ಜನ ಸಿಗುತ್ತಾರೆ’ ಎಂಬ ಧೋರಣೆ ತಳೆಯುತ್ತವೆ ಎಂದು ನೊಂದುಕೊಳ್ಳುವ ಅನೇಕ ಕೆಲಸಗಾರರು, ‘ನಮ್ಮ ಹಣೆಯಲ್ಲಿ ಬರೆದಿರುವುದು ಇಷ್ಟೇ ಎಂದು ಸುಮ್ಮನಾಗುತ್ತೇವೆ’ ಎನ್ನುತ್ತಾರೆ. ಹೆಲ್ಮೆಟ್, ಮುಖ, ಕೈಗವಸು, ಜೀವ- ಅಪಘಾತ ವಿಮೆ, ರೆಗ್ಯುಲರ್ ಆರೋಗ್ಯ ತಪಾಸಣೆ ಮಾಡುವ ಎಲ್ಲ ಅವಕಾಶಗಳಿವೆ. ಮಾಡುವವರಾರು?

ವಾಚಕರ ವಾಣಿ

ಬರಹ ಬೇರೆ, ಉಚ್ಚಾರ ಬೇರೆ ಎನ್ನುವುದು ವಿತಂಡವಾದ

ಮೈಸೂರು ದಸರಾದ ಸಂದರ್ಭದಲ್ಲಿ ನಿರೂಪಕರು ಹ-ಕಾರಕ್ಕೆ ಸ್ವರಪ್ರಯೋಗ ಮಾಡಿದುದಕ್ಕೆ ಜಗದೀಶ ನೂಲಿನವರ ಎಂಬುವರು ಬೇಸರ ವ್ಯಕ್ತಪಡಿಸಿದ್ದಕ್ಕೆ (ವಾ.ವಾ., ಅ.28), ಸಿ.ಪಿ. ನಾಗರಾಜ ಅವರು ಸಮರ್ಥನೆ ಕೊಟ್ಟು ಅದು ಆಡುರೂಪದಲ್ಲಿ ತಪ್ಪಲ್ಲ ಎಂದು ಪ್ರತಿಪಾದಿಸಿದ್ದಾರೆ (ವಾ.ವಾ., ಅ.30). ನಿರೂಪಕರು ಯಾವುದೇ ಶಿಕ್ಷಣವಿಲ್ಲದೆ ಹಳ್ಳಿಯಲ್ಲಿ ಇದ್ದವರೇ? ಅಥವಾ ಶಿಕ್ಷಣ ಪಡೆದವರಾದರೂ ಹಳ್ಳಿಯ ಉಚ್ಚಾರ ಬಿಡದವರೇ? ಇದರ ಬಗ್ಗೆ ಪ್ರತಿಕ್ರಿಯೆಕಾರರು ಏನನ್ನೂ ಹೇಳಿರುವುದಿಲ್ಲ. ಅವರನ್ನು ಸಮರ್ಥಿಸುವ ಇವರಾದರೂ ಶಿಕ್ಷಣ ಪಡೆದವರಲ್ಲವೇ? ಶಿಕ್ಷಣಾವಧಿಯಲ್ಲಿ ಇವರು ಕಲಿತದ್ದಾದರೂ ಏನು? ಸರಿ-ತಪ್ಪುಗಳನ್ನು ಇವರಿಗೆ ಆಗ ಹೇಳಿಕೊಟ್ಟಿರಲಿಲ್ಲವೇ? ಅನೇಕ ವರ್ಷ ಶಾಲಾಶಿಕ್ಷಣ ಪಡೆದವರು ತಪ್ಪನ್ನೇ ಉಚ್ಚಾರ ಮಾಡುವುದಾದರೆ, ಅವರದು ಶಿಕ್ಷಣವಾದರೂ ಹೇಗಾದೀತು? ಅದಕ್ಕೆ ಬೆಲೆಯಾದರೂ ಏನು? ಸರಿ-ತಪ್ಪುಗಳಿಗೆ ಅರ್ಥವಾದರೂ ಎಲ್ಲಿ? ಅವುಗಳ ನಡುವೆ ಗೆರೆಯೇ ಇಲ್ಲವಾಗುತ್ತದೆ.

ಬರೆಯುವುದೇ ಒಂದು ಉಚ್ಚರಿಸುವುದೇ ಒಂದು ಆದರೆ, ಅರ್ಥಪಲ್ಲಟದಂತಹ ಅನರ್ಥಗಳೂ ಘಟಿಸಬಹುದು. ಉದಾಹರಣೆಗೆ, ‘ಶಂಕರ’ ಎಂದು ಬರೆದಿರುವುದನ್ನು ‘ಸಂಕರ’ ಎಂದು ಉಚ್ಚರಿಸಿದರೆ ಎಂಥ ವೈಪರೀತ್ಯ ಆಗಬಹುದು ಎಂಬುದನ್ನು ಬಲ್ಲವರಿಗೆ ಹೇಳಬೇಕಾಗಿಲ್ಲ. ಹಾಗಾಗಿ ಏನನ್ನೋ ಬರೆದು ಏನನ್ನೋ ಉಚ್ಚರಿಸಬಹುದು ಎಂಬುದಕ್ಕೆ ಯಾವ ಸೈದ್ಧಾಂತಿಕ ನೆಲೆಗಟ್ಟೂ ಇರುವುದಿಲ್ಲ. ಅದು ಕೇವಲ ವಿತಂಡವಾದವಾಗುತ್ತದೆ, ಅಷ್ಟೆ!

ಬಿ. ರಾಜಶೇಖರಪ್ಪ, ಪಿ. ಯಶೋದಾ, ಚಿತ್ರದುರ್ಗ

ಸಮೃದ್ಧಿಯ ಜೊತೆಗೆ ಸಂತೃಪ್ತಿಯೂ ಬೇಕು

ಇನ್ಫೊಸಿಸ್ ಸಹಸಂಸ್ಥಾಪಕ ಎನ್.ಆರ್.ನಾರಾಯಣಮೂರ್ತಿ ಅವರ ಹೇಳಿಕೆ ಕುರಿತು ‘ಆಳ-ಅಗಲ’ದಲ್ಲಿ (ಪ್ರ.ವಾ., ಅ. 31) ಚರ್ಚಿಸಿರುವುದು ಸ್ವಾಗತಾರ್ಹ. ಸಮಕಾಲೀನ ಸಂಗತಿಗಳನ್ನು ಹೀಗೆ ಚರ್ಚೆಗೆ ತಂದು ಎಳೆ ಎಳೆಯಾಗಿ ಬಿಡಿಸಿಡುವುದು ಇಂದಿನ ಅಗತ್ಯ.

ಯುವಜನರಿಂದ ತುಂಬಿ ತುಳುಕುತ್ತಿರುವ ನಮ್ಮ ದೇಶಕ್ಕೆ ವಾರಕ್ಕೆ 70 ಗಂಟೆ ದುಡಿಯುವ ಅನಿವಾರ್ಯ ಇಲ್ಲ. ಬದಲಿಗೆ ಉದ್ಯೋಗವಿಲ್ಲದೆ ದಿನ ದೂಡುತ್ತಿರುವ ಅದೆಷ್ಟೋ ನಿರುದ್ಯೋಗಿಗಳಿಗೆ ಉದ್ಯೋಗ ನೀಡಿದರೆ ಉತ್ಪಾದನೆ ಹೆಚ್ಚುತ್ತದೆ, ಆರ್ಥಿಕ ಸಮಾನತೆಯೂ ಸಾಧ್ಯವಾಗುತ್ತದೆ. ದೇಶದ ಜನರು ಸಮೃದ್ಧಿ ಮತ್ತು ಸಂತೃಪ್ತಿಯಿಂದ ಬದುಕಲು ಅನುವಾಗುತ್ತದೆ. ಒಂದುಕಡೆ ವಾರಕ್ಕೆ 70 ಗಂಟೆ ದುಡಿಸಿಕೊಳ್ಳುತ್ತ, ಇನ್ನೊಂದೆಡೆ ಸಾವಿರಾರು ಉದ್ಯೋಗಿಗಳನ್ನು ಮನೆಗೆ ಕಳಿಸುವ ಕಂಪನಿಗಳು ಎಷ್ಟಿಲ್ಲ? ದೇಶವೆಂದರೆ ಅಲ್ಲಿನ ಜನರೇ ಹೊರತು ಭೂಪ್ರದೇಶ ಅಥವಾ ಗಡಿಗಳಲ್ಲ.

ಎನ್.ಎಂ. ಕುಲಕರ್ಣಿ, ಹೆಗ್ಗೋಡು

ಸಮಸ್ಯೆಗಳ ಸಾಲು, ಸವಾಲು

ಮೈಸೂರು ರಾಜ್ಯ ‘ಕರ್ನಾಟಕ’ ಎಂದು ಮರುನಾಮಕರಣಗೊಂಡ ವಿದ್ಯಮಾನಕ್ಕೆ ಈಗ 50ರ ಸಂಭ್ರಮ. ಈ ಸಂಭ್ರಮದ ನಡುವೆಯೂ ಅನೇಕ ಸಮಸ್ಯೆಗಳು ನಮ್ಮ ಮುಂದಿವೆ. ಮಹಾರಾಷ್ಟ್ರದ ಜೊತೆ ಗಡಿ ವಿವಾದ ಇಂದಿಗೂ ಬಗೆಹರಿದಿಲ್ಲ. ಕಾವೇರಿ ನೀರು ಹಂಚಿಕೆ ವಿಷಯದಲ್ಲಿ ಕರ್ನಾಟಕಕ್ಕೆ ಅನ್ಯಾಯ ಆಗುತ್ತಲೇ ಇದೆ. ಈ ವಿಚಾರದಲ್ಲಿ ಪಕ್ಷಭೇದ ಮರೆತು ಜನಪ್ರತಿನಿಧಿಗಳು ಹೋರಾಡಬೇಕು. ಕನ್ನಡ ಶಾಲೆಗಳ ಸ್ಥಿತಿ ಶೋಚನೀಯವಾಗಿದೆ. ಕನ್ನಡ ಸೊರಗುತ್ತಿದೆ. ಪೋಷಕರಲ್ಲಿ ಇಂಗ್ಲಿಷ್ ವ್ಯಾಮೋಹ ದಿನೇ ದಿನೇ ಹೆಚ್ಚುತ್ತಲೇ ಇದೆ. ನಮ್ಮ ಭಾಷೆಯ ಬಗ್ಗೆ ಅಭಿಮಾನ ಮೂಡಿಸುವಂತಹ ಪ್ರಯತ್ನಗಳು ನಿರಂತರವಾಗಿ ನಡೆಯಬೇಕು. ತಾಯಿಯನ್ನು ಹೇಗೆ ಗೌರವದಿಂದ ಕಾಣುತ್ತೇವೋ ಅದೇ ರೀತಿ ಕನ್ನಡ ನೆಲ, ನಾಡು, ನುಡಿಯನ್ನು ಗೌರವಿಸಬೇಕು. ಈ ಕೆಲಸ ಪ್ರತಿಯೊಬ್ಬ ಕನ್ನಡಿಗನಿಂದ ಆಗಬೇಕು.

ಪ್ರಸಾದ್ ಜಿ.ಎಂ., ಮೈಸೂರು

ಮಹಿಳೆಯರ ದಿಟ್ಟ ನಡೆ ಅಭಿನಂದನಾರ್ಹ

ಬೆಂಗಳೂರಿನ ‘ಚಿಕ್ಕಪೇಟೆ ಸರ್ಕಾರಿ ಶಾಲೆಗೇ ದಕ್ಕಿದ ಸ್ವತ್ತು’ (ಪ್ರ.ವಾ., ಅ.31) ಸುದ್ದಿ ಓದಿ ಸಂತಸವಾಯಿತು. ಶಾಲೆಯ ಮುಖ್ಯ ಶಿಕ್ಷಕಿ ಎಂ.ಶೀಲಾರಾಣಿ, ಕ್ಷೇತ್ರ ಶಿಕ್ಷಣಾಧಿಕಾರಿ ಎಚ್.ಎನ್.ಗಿರಿಜಮ್ಮ ಅವರ ಪ್ರಯತ್ನ ಹಾಗೂ ಸಕಾಲದಲ್ಲಿ ಈ ಕುರಿತು ಸುದ್ದಿ ಪ್ರಕಟಿಸಿ ಸರ್ಕಾರದ ಕಣ್ಣು ತೆರೆಸಿದ ‘ಪ್ರಜಾವಾಣಿ’ ಪತ್ರಿಕೆ ಅಭಿನಂದನೆಗೆ ಅರ್ಹ.

ಚಿಕ್ಕಪೇಟೆಯಲ್ಲಿ ಜಮೀನಿಗೆ ಚಿನ್ನಕ್ಕಿಂತ ಅಧಿಕ ಬೆಲೆ ಇದೆ. ಮುಖ್ಯಶಿಕ್ಷಕಿಯ ಸಮಯಪ್ರಜ್ಞೆಯಿಂದ ಈ ಸ್ವತ್ತು ಶಾಲೆಗೇ ದಕ್ಕಿದೆ. ಇಲ್ಲದೇ ಹೋಗಿದ್ದರೆ ಕೋಟ್ಯಂತರ ರೂಪಾಯಿ ಬೆಲೆಬಾಳುವ ಆಸ್ತಿ ಕೈತಪ್ಪಿ ಹೋಗುತ್ತಿತ್ತು. ಸರ್ಕಾರಿ ಶಾಲೆಗಳನ್ನು ಉಳಿಸಿಕೊಳ್ಳುವುದು ಇವತ್ತಿನ ತುರ್ತು. ಸರ್ಕಾರಿ ಶಾಲೆಗಳ ಸಬಲೀಕರಣದ ದಿಸೆಯಲ್ಲಿ ಪ್ರತಿ ಪ್ರಯತ್ನವೂ ಮೆಚ್ಚುವಂತಹ ಕೆಲಸ.

ಎಂ.ಜಿ.ರಂಗಸ್ವಾಮಿ, ಹಿರಿಯೂರು

ಪಾರಿಭಾಷಿಕ ಪದ: ಮಡಿವಂತಿಕೆ ಬೇಡ

‘ಕನ್ನಡವೂ ವಿಜ್ಞಾನ ಸಂವಹನವೂ’ ಲೇಖನದಲ್ಲಿ ಯೋಗಾನಂದ (ಸಂಗತ, ಅ.31) ಹೇಳಿರುವ ವಿಚಾರಗಳು ಮನನಯೋಗ್ಯ. ಇಂಗ್ಲಿಷ್‌ನ ಪಾರುಪತ್ಯದಿಂದ ಕನ್ನಡವನ್ನು ಬಿಡುಗಡೆ ಮಾಡುವುದಕ್ಕೆ ಬಹುಭಾಷೆಯ ಆಯ್ಕೆಯೇ ಸರಳ ಹಾಗೂ ಸುಲಭವಾದ ಪರಿಹಾರ. ಪಾರಿಭಾಷಿಕ ಪದಗಳನ್ನು ಅವು ಇದ್ದಹಾಗೇ ಸ್ವೀಕರಿಸುವುದು ಉತ್ತಮ. ಕನ್ನಡದ ಹೆಸರಿನಲ್ಲಿ ಸಂಸ್ಕೃತದ ಪದಗಳನ್ನು ತುರುಕಿ ವಿದ್ಯಾರ್ಥಿಗಳಿಗೆ ಹಿಂಸೆ ಕೊಡುವುದು ಸರಿಯಲ್ಲ. ವೈಜ್ಞಾನಿಕ ಪದಗಳು ಬಹುಮಟ್ಟಿಗೆ ನಾವು ಮನೆಯಲ್ಲಿ ಬಳಸುವ ಪದಗಳಲ್ಲ. ಅವು ಹೊರಗಿನಿಂದ ಬಂದು ಹೊರಗೇ ಓಡಾಡುತ್ತವೆ. ಹೀಗಿರುವಾಗ, ಆ ಪದಗಳನ್ನು ಕನ್ನಡದ ಹೆಸರಿನಲ್ಲಿ ಸಂಸ್ಕೃತಕ್ಕೆ ಭಾಷಾಂತರಿಸುವುದು ಏಕೆ? ಸಂಸ್ಕೃತವೂ ನಮ್ಮ ಮನೆಯ ಹೊರಗಷ್ಟೇ ಓಡಾಡುವ ಭಾಷೆ.

ಡಾ.ಈಶ್ವರ ಶಾಸ್ತ್ರಿ ಮೋಟಿನಸರ, ಶಿರಸಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಕನ್ನಡಿಗರು ಒಂದಾಗಬೇಕು ಮತ್ತು ಕನ್ನಡಿಗರ ನಾಡು ಕರ್ನಾಟಕವಾಗಬೇಕು ಎಂಬ ಆಗ್ರಹ ಕರ್ನಾಟಕ ಏಕೀಕರಣಕ್ಕೂ ಮೊದಲಿನಿಂದಲೂ ಇತ್ತು. ಅದರೊಂದಿಗೆ ಕರ್ನಾಟಕವನ್ನು ಹೇಗೆ ಕಟ್ಟಬೇಕು, ಕನ್ನಡನಾಡು ಹೇಗಿರಬೇಕು, ಅದು ನಡೆಯಬೇಕಾದ ಹಾದಿ ಯಾವುದು ಎಂಬುದನ್ನು ಕನ್ನಡದ ಸಾಹಿತಿಗಳು ಆಗ್ಗಾಗ್ಗೆ ಸ್ಪಷ್ಟಪಡಿಸುತ್ತಲೇ ಇದ್ದರು

ಕನ್ನಡನಾಡು, ನುಡಿ ಕಟ್ಟಬೇಕಾದ ಬಗೆ...

● ಜಯಸಿಂಹ ಆರ್.

ಕನ್ನಡನಾಡು ಹೇಗಿರಬೇಕು ಮತ್ತು ಅದನ್ನು ಹೇಗೆ ಕಟ್ಟಬೇಕು ಎಂಬುದನ್ನು ಕನ್ನಡದ ಸಾಹಿತ್ಯಲೋಕ ಸದಾಕಾಲ ವಿಚ್ಛಿಸುತ್ತಲೇ ಬಂದಿದೆ. ಭಾರತ ಎಂಬ ರಾಷ್ಟ್ರೀಯತೆಯ ಒಳಗೆ ಕನ್ನಡನಾಡು ಎಂಬುದು ಪ್ರಾದೇಶಿಕ ರಾಷ್ಟ್ರೀಯವಾದವಾಗಿ ರೂಪುಗೊಂಡಿತ್ತು ಎಂಬುದನ್ನು ಕನ್ನಡದ ವಿದ್ವಾಂಸರು ದಾಖಲಿಸುತ್ತಲೇ ಬಂದಿದ್ದಾರೆ.

ಕನ್ನಡತನ, ಕನ್ನಡನಾಡು, ಕರ್ನಾಟಕ ಎಂಬುದು ತನ್ನನ್ನು ತಾನು ಉಳಿಸಿಕೊಳ್ಳುತ್ತಲೇ, ಉಪಪ್ರಾದೇಶಿಕ-ಉಪಸಂಸ್ಕೃತಿಗಳು ಮತ್ತು ಅನ್ಯಪ್ರದೇಶದೊಂದಿಗಿನ ಸಮರಸವನ್ನು ಒಳಗೊಂಡ ಸಂಸ್ಕೃತಿಯಾಗಬೇಕು ಎಂಬುದು ಕನ್ನಡದ ಸಾಹಿತಿಗಳ ನಿಲುವಾಗಿತ್ತು. ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಕನ್ನಡದ ಹೆಸರಾಂತ ಸಾಹಿತಿಗಳು, ತಮ್ಮ ಅಧ್ಯಕ್ಷೀಯ ಭಾಷಣಗಳಲ್ಲಿ ಇದನ್ನು ಪದೇ-ಪದೇ ಹೇಳಿದ್ದಾರೆ. ಕರ್ನಾಟಕದ ಪ್ರಾದೇಶಿಕ ರಾಷ್ಟ್ರೀಯವಾದದ ಒಳಗೊಳ್ಳುವಿಕೆಯ ತೀವ್ರತೆ ಆಯಾ ಕಾಲಕ್ಕೆ ಏರಿಳಿತವಾಗಿರುವುದನ್ನು ಈ ಭಾಷಣಗಳಲ್ಲಿ ಗುರುತಿಸಬಹುದು.

ಡಿ.ಆರ್.ನಾಗರಾಜ ಅವರು ತಮ್ಮ 'ಕನ್ನಡ ರಾಷ್ಟ್ರೀಯತೆಯ ಸ್ವರೂಪ' ಲೇಖನದಲ್ಲಿ ಕನ್ನಡ ರಾಷ್ಟ್ರೀಯತೆಯ ಭಿನ್ನ ಸ್ವರೂಪಗಳನ್ನು ಗುರುತಿಸಿದ್ದಾರೆ. ಕನ್ನಡಕ್ಕಾಗಿ ವೀರಾವೇಶವಾಗಿ ಹೋರಾಡಬೇಕು ಎಂಬ ನಿಲುವನ್ನು 'ಅಹಂಕೇಂದ್ರಿತ ರಾಷ್ಟ್ರೀಯತೆ' ಎಂದಿದ್ದಾರೆ. ಅದರ ಏಕಮುಖೀ, ಜನಾಂಗ ಸರ್ವಶ್ರೇಷ್ಠತೆಯಿಂದೊಡನೆ ಸ್ವಾಗತವಿದೆ ಎಂಬ ಅವರು ವೆಂಕಟರಾಯರ ನಿಲುವನ್ನು 'ಆಧ್ಯಾತ್ಮಿಕ ರಾಷ್ಟ್ರೀಯತೆ' ಎಂದು ಕರೆದಿದ್ದಾರೆ. ಆಲೂರು ವೆಂಕಟರಾಯರು ತಮ್ಮ 'ಕರ್ನಾಟಕತ್ವದ ವಿಕಾಸ' ಕೃತಿಯಲ್ಲಿ, 'ಕರ್ನಾಟಕವು ಕನ್ನಡತ್ವಕ್ಕಾಗಿ ಪ್ರಾಣಕಾರರಾಗಿರುವುದು ಎಂಬುದನ್ನು ನಾವು ಮರೆಯಬಾರದು. ಮತ್ತು ಉಪಭಾಷಿಗರನ್ನು ಮಾತ್ರವಲ್ಲ, ನೆರೆಭಾಷಿಗಳ ಅಲ್ಪಸಂಖ್ಯಾತರನ್ನೂ ಮರೆಯಕೂಡದು–ಎಂಬುದು ಅಖಂಡ ಕರ್ನಾಟಕ ರಚನೆಯಲ್ಲಿ ನಾವು ಅವಶ್ಯವಾಗಿ ನೆನಪಿನಲ್ಲಿಡತಕ್ಕ ಮಾತು' ಎಂದು ಹೇಳಿದ್ದಾರೆ. ಇದನ್ನೇ ಡಿ.ಆರ್.ನಾಗರಾಜ ಅವರು 'ಆಧ್ಯಾತ್ಮಿಕ ರಾಷ್ಟ್ರೀಯತೆ' ಎಂದು ಕರೆದದ್ದು. ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಗಾದಿಯಲ್ಲಿ ಕುಳಿತು, ಕನ್ನಡದ ಹಲವು ಸಾಹಿತಿಗಳು ಹೇಳಿದ್ದೂ ಇದನ್ನೇ. ಅಂತಹ ಭಾಷಣಗಳ ಆಯ್ದ ಭಾಗಗಳು ಇಲ್ಲಿವೆ.

ಭಾಷೆ ಬೆಳೆಯಬೇಕಾದ ರೀತಿ



ಸಾಹಿತಿಗಳಾದ ನಾವೇ ಇಂದು ಕೃತಕ ಪುಸ್ತಕ ಭಾಷೆಯೊಂದನ್ನು ಕಲ್ಪಿಸುತ್ತಿದ್ದೇವೆ. ಜೀವಂತ ಭಾಷೆಯಲ್ಲಿ ಪ್ರಚಾರದಲ್ಲಿರುವ ಶಬ್ದಸಂಪತ್ತು, ಅರ್ಥಸಂಪತ್ತುಗಳನ್ನು ಮರೆಯುತ್ತಲಿದ್ದೇವೆ. ಇದು ಕನ್ನಡಕ್ಕೆ ಮಾಡುವ ಅಪಚಾರ ಹೊರತು ಉಪಚಾರವಲ್ಲ. ನಮ್ಮ ಜನಜೀವನದಲ್ಲಿನ ನೂರಾರು ವೃತ್ತಿ, ವಿಚಾರ ಸರಣಿ, ನಂದಿಕೆಗಳಿಂದ ಹುಟ್ಟಿ ಪ್ರಚಾರದಲ್ಲಿರುವ ಶಬ್ದಸಂಪತ್ತನ್ನು ಭಾಷಾಸೌಂದರ್ಯವನ್ನು ಕಾಯ್ದುಕೊಳ್ಳುವ ಹೊಣೆ ನಮ್ಮದು. ಅದಕ್ಕೆ ನಿಘಂಟುಗಳಲ್ಲಿ ಸ್ಥಾನ ಕಲ್ಪಿಸುವ ಹೊಣೆಯೂ ನಮ್ಮದು. ನಾವು ಹಳ್ಳಿ ಹಳ್ಳಿಗಳಲ್ಲಿ ಸಂಶೋಧಕರನ್ನು ಬಿಟ್ಟು, ಜನರು ಬಳಸುವ ನಿತ್ಯೋಪಯೋಗಿ ಶಬ್ದಗಳನ್ನೂ, ಹೆಸರುಗಳನ್ನೂ, ಪ್ರಯೋಗಗಳನ್ನೂ ಸಂಗ್ರಹಿಸುವಲ್ಲಿ-ನಮ್ಮ ಶಬ್ದಸಂಗ್ರಹ ಇಮ್ಮಡಿಸೀತು; ಮುಮ್ಮಡಿಸೀತು. ಅದರಿಂದ ಅನೇಕ ಹೊಸ ಶಬ್ದಗಳ ನಿರ್ಮಾಣ ಅನಾವಶ್ಯಕವಾದೀತು. ಹಾಗೆ ಮಾಡದೆ ಹೋದರೆ ಜನಗಳ ಭಾಷಾ ಪ್ರವಾಹವು ತನ್ನ ದಾರಿಯನ್ನು ಹಿಡಿದು ತಾನಾಗಿ ಮುಂದುವರಿಯುತ್ತದೆ. ಅದನ್ನಾರೂ ತಡೆಯಲಾರರು.

ಶಿವರಾಮ ಕಾರಂತ, 1955ರ ಮೈಸೂರು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ

ಆದಾನ ಪ್ರದಾನ ಕಾರ್ಯ ಹೆಚ್ಚಾಗಲಿ



ಮುಖ್ಯವಾದದ್ದೆಂದರೆ, ಕನ್ನಡ ಸಾಹಿತ್ಯ ಸಾಧನೆಯನ್ನೂ, ವಿಶಿಷ್ಟತೆಯನ್ನೂ, ಉತ್ಕೃಷ್ಟತೆಯನ್ನೂ ಇಂಗ್ಲಿಷ್ ಭಾಷೆಯ ಮೂಲಕ ಭಾರತೀಯ ಭಾಷೆಗಳಿಗೆ ಪಾಶ್ಚಿಮಾತ್ಯ ವಲಯಗಳಿಗೆ ಪರಿಚಯ ಮಾಡಿಕೊಡುವ ಕೆಲಸ. ಗಡಿಗಳಾಚೆಯ ಸೋದರ ಭಾಷಾಸಾಹಿತಿಗಳನ್ನು, ಕಲಾವಿದರನ್ನು ನಮ್ಮವರ ಜೊತೆಗೆ ತೊಡಗಿಸಿಕೊಳ್ಳಬೇಕು. ಬಹುಭಾಷಿಕ ಪರಿಸರದ ನಡುವೆ ಬದುಕುವ ನಾವೆಲ್ಲರೂ ಈ ಬಗೆಯ ಭಾಷಾಬಾಂಧವ್ಯಗಳ ಮೂಲಕವಾಗಿಯೇ ಬೆಳೆಯಬೇಕಾಗುತ್ತದೆ.

ಜಿ.ಎಸ್. ಶಿವರುದ್ರಪ್ಪ, 1992ರ ದಾವಣಗೆರೆ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ

ಸಿನಿ ಬಿಟ್ಸ್

ಮಾತಿನಮನೆಯಲ್ಲಿ 'chef ಚಿದಂಬರ'




ಅನಿರುದ್ಧ

ಇತ್ತೀಚೆಗಷ್ಟೇ ಚಿತ್ರೀಕರಣ ಪೂರ್ಣಗೊಳಿಸಿದ್ದ, ನಟ ಅನಿರುದ್ಧ ನಟನೆಯ 'chef ಚಿದಂಬರ' ಚಿತ್ರತಂಡವು ಪೋಸ್ಟ್ ಪ್ರೊಡಕ್ಷನ್ ಕೆಲಸದಲ್ಲಿ ತೊಡಗಿಸಿಕೊಂಡಿದೆ. ಅನಿರುದ್ಧ ಅವರು ತಮ್ಮ ಪಾತ್ರಕ್ಕೆ ಡಬ್ಬಿಂಗ್ ಆರಂಭಿಸಿದ್ದಾರೆ.

'ರಾಘು' ಸಿನಿಮಾ ಖ್ಯಾತಿಯ ನಿರ್ದೇಶಕ ಎಂ. ಆನಂದರಾಜ್ ನಿರ್ದೇಶನದ ಚಿತ್ರ ಇದಾಗಿದ್ದು, ಲೂಪ್ ಸ್ಟುಡಿಯೊದಲ್ಲಿ ಚಿತ್ರದ ಮಾತಿನ ಜೋಡಣೆ (ಡಬ್ಬಿಂಗ್) ನಡೆಯುತ್ತಿದೆ. ಡಾರ್ಕ್ ಕಾಮಿಡಿ ಜಾನರ್‌ನ ಈ ಚಿತ್ರದಲ್ಲಿ ಅನಿರುದ್ಧ ಅವರು ಶೆಫ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ದಮ್ಮಿ ಪಿಕ್ಚರ್ಸ್ ಲಾಂಛನದಲ್ಲಿ ರೂಪಾ ಡಿ.ಎನ್. ನಿರ್ಮಿಸುತ್ತಿರುವ ಈ ಚಿತ್ರಕ್ಕೆ ನಿರ್ದೇಶಕರೇ ಕಥೆ ಬರೆದಿದ್ದು, ಚಿತ್ರಕಥೆ ಹಾಗೂ ಸಂಭಾಷಣೆ ಗಣೇಶ್ ಪರಶುರಾಮ್ ಅವರದ್ದು.

ಉದಯಲೀಲ ಛಾಯಾಚಿತ್ರಗ್ರಹಣ, ರಿತ್ವಿಕ್ ಮುರಳೀಧರ್ ಸಂಗೀತ ನಿರ್ದೇಶನ ಚಿತ್ರಕ್ಕಿದೆ. ಅನಿರುದ್ಧ ಅವರಿಗೆ ನಾಯಕಿಯರಾಗಿ ನಿಧಿ ಸುಬ್ಬಯ್ಯ ಹಾಗೂ 'ಲವ್ ಮಾಕ್ಟೇಲ್' ಖ್ಯಾತಿಯ ರಚೆಲ್ ಡೇವಿಡ್ ಅಭಿನಯಿಸಿದ್ದಾರೆ. ಶರತ್ ಲೋಹಿತಾಶ್ವ, ಕೆ.ಎಸ್ ಶ್ರೀಧರ್, ಶಿವಮಣಿ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ.

ಆದರ್ಶದ ಕರ್ನಾಟಕ...



ನಾವಿಂದು ಇಲ್ಲಿ ಏಕೀಕೃತ ಅಖಂಡ ಕರ್ಣಾಟಕದ ಸಾಹಿತ್ಯ ಪರಿಷತ್ತಿನ ಪ್ರಪ್ರಥಮ ವಾರ್ಷಿಕ ಸಮ್ಮೇಳನೋತ್ಸವದಲ್ಲಿ ಭಾಗಿಗಳಾಗಲು ಬಂದಿದ್ದೇವೆ. ನಾವು ನಿಜವಾಗಿಯೂ ಭಾಗ್ಯಶಾಲಿಗಳಲ್ಲವೆ? ಧನ್ಯರಲ್ಲವೆ?

ಹೌದು, ಅದರೆ ಏಕೆ ಧನ್ಯರು? ಏನು ಧನ್ಯತೆ? ಶಾಶ್ವತ ಪ್ರಯೋಜನರೂಪವಾದ ಯಾವ ಪುರುಷಾರ್ಥ ದೊರೆಕೊಂಡಿದೆ? ಅಥವಾ ಅಂತಹ ಪುರುಷಾರ್ಥ ಸಾಧನೆಗೆ ಹಾದಿಯಾದರೂ ಸಿದ್ಧವಾಗಿದೆಯೆ?

ಕನ್ನಡ ಜನರ ಆಶೋತ್ತರ ಮತ್ತು ಕರ್ಣಾಟಕ ಸಂಸ್ಕೃತಿಯ ಪ್ರತಿನಿಧಿಯಾದ ಕನ್ನಡ ಸಾಹಿತ್ಯ ಪರಿಷತ್ತು ಸದ್ಯಕ್ಕೆ ನಮ್ಮ ಅಭ್ಯುದಯಕ್ಕೆ ಆವಶ್ಯಕವಾದ ಭೌಗೋಳಿಕ ಚೌಕಟ್ಟನ್ನು ಸಾಧಿಸಿದೆ. ನವಮ್ಮೈಸೂರು ರಾಜ್ಯದ ಆ ಚೌಕಟ್ಟಿನ ಮೇಲೆ ನಮ್ಮ ಸಂಸ್ಕೃತಿಯ ಆದರ್ಶದ 'ಕರ್ಣಾಟಕ'ವನ್ನು ಕಟ್ಟಬೇಕಾಗಿದೆ. ನಮ್ಮ ನೆರೆಯ ಸೋದರ ಭಾಷಾಸಾಹಿತ್ಯಗಳೊಡನೆ ಹೆಚ್ಚು ಹೆಚ್ಚು ಸಂಪರ್ಕ ಬೆಳೆಯಲು ಪರಸ್ಪರ ಹೃದಯ ಪರಿಚಯದ ಮೈತ್ರಿ ಸಾಧನೆಯ ರಂಗವಾಗಿ ಪರಿವರ್ತಿತವಾಗಬೇಕು. ಅಖಿಲ ಭಾರತೀಯವಾದ ಯಾವ ಮಹೋದ್ದೇಶದಿಂದ ಸಾಹಿತ್ಯ ಅಕಾಡೆಮಿಯು ಪ್ರೇರಿತವಾಗಿ ವಿವಿಧ ಕಾರ್ಯಗಳಲ್ಲಿ ಪ್ರವೃತ್ತವಾಗಿದೆಯೊ ಅದರ ಪ್ರಾದೇಶಿಕ ಪ್ರತಿನಿಧಿಯಾಗಬೇಕು.

ಕುವೆಂಪು, 1957ನೇ ಸಾಲಿನ ಧಾರವಾಡ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ

ಭಾಷಾ ಸಾಮರಸ್ಯ



ಒಮ್ಮೊಮ್ಮೆ ಈ ಭಾಷಾವಾರು ಪ್ರಾಂತ ರಚನೆಯಾದದ್ದು ತಪ್ಪಾಯಿತೇನೋ ಎನ್ನುವ ವಿಚಾರ ನನ್ನಲ್ಲಿಯೂ ಸುಳಿದು ಹೋಗುತ್ತದೆ. ದೇಶದಲ್ಲಿ ಇಂಥ ಒಂದು ಪರಿಸ್ಥಿತಿಯುಂಟಾಗಲು ಮೂಲ ಕಾರಣ ಭಾಷಾ ದುರಭಿಮಾನ; ಮತ್ತು ರಾಷ್ಟ್ರೀಯ ಮನೋಭಾವದ ಕೊರತೆ. ಈ ಭಾಷಾ ಪ್ರಾಂತಗಳ ರಥವನ್ನು ಸರಿಯಾದ ದಾರಿಗೆ ತಿರುಗಿಸಿ ಮುನ್ನಡೆಸಬೇಕಾಗಿದೆ. ಮರಾಠಿಯ ನನ್ನ ಬಂಧುಗಳಿಗೂ ಅನೇಕ ಸಲ ಈ ಮಾತನ್ನು ಭಾಷಣ ಬರಹಗಳ ಮೂಲಕ ತಿಳಿಸಿ ಹೇಳಿದ್ದೇನೆ.

ಮರಾಠಿ ಸಾಹಿತ್ಯ ಪರಿಷತ್ತಿನ ಮಂದಿರದಲ್ಲಿ ನಾನು ಮಾತನಾಡಿ ಈ ವಿಷಯಗಳನ್ನು ವಿವರಿಸಿದಾಗ, 'ನೀವು ಕನ್ನಡದಲ್ಲಿ ಮಾತಾಡಿ, ನಾವು ಕೇಳಲು ಸಿದ್ಧರು' ಎಂದು ಕೂಗಿದ್ದುಂಟು. ಪುಣೆಯಲ್ಲಿ, ಮರಾಠಿ ಸಾಹಿತ್ಯ ಪರಿಷತ್ತಿನಲ್ಲಿ ಈ ಪ್ರತಿಕ್ರಿಯೆಯನ್ನು ನಾನು ಕಂಡಿದ್ದೇನೆ. ಮರಾಠಿ ಸಾಹಿತಿಯೊಬ್ಬನು ಬಂದು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಮಾತನಾಡಿದಾಗ, 'ಮರಾಠಿಯಲ್ಲಿ ಮಾತನಾಡಬಹುದು' ಎನ್ನುವ ಮಾತನ್ನು ನಾನು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿಯೂ ಕೇಳಬಯಸುತ್ತೇನೆ ಎಂದು ಅವರಿಗೆ ಹೇಳಿದೆನು. ಭಾಷೆಯು ಪಟ್ಟಭದ್ರ ರಾಜಕೀಯ ಜನರ ಕೈಗೆ ಸಿಕ್ಕಾಗ, ಒಂದು ಮಾರಕ ಅಸ್ತ್ರವಾಗಿ ಪರಿಣಮಿಸುತ್ತದೆ. ಆದರೆ ಅದೇ ಭಾಷೆ, ಸಾಹಿತಿಗಳ ಸೃಜನಶೀಲತೆಯಿಂದ ಜನ-ಜನರನ್ನು ಒಂದುಗೂಡಿಸುವ, ಹೃದಯ-ಹೃದಯಗಳಲ್ಲಿ ಬೆಸೆಯುವ ಭಾವಸೇತುವೆಯಾಗುತ್ತದೆ.

ಜಯದೇವಿತಾಯಿ ಲಿಗಾಡೆ
1974ರ ಮಂಡ್ಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೆ

'ಉಸಿರೇ ಉಸಿರೇ' ಟ್ರೈಲರ್ ಅನಾವರಣ

ಸಿ.ಎಂ. ವಿಜಯ್ ನಿರ್ದೇಶನದ ಹಾಗೂ ಬಿಗ್‌ಬಾಸ್ ಖ್ಯಾತಿಯ ರಾಜೀವ್ ಹನು ನಾಯಕನಾಗಿ ನಟಿಸಿರುವ 'ಉಸಿರೇ ಉಸಿರೇ' ಚಿತ್ರದ ಟ್ರೈಲರ್ ಅನ್ನು ಇತ್ತೀಚೆಗೆ ನಟ ಕಿಚ್ಚ ಸುದೀಪ್ ಅನಾವರಣಗೊಳಿಸಿದರು.

'ಟ್ರೈಲರ್ ಚೆನ್ನಾಗಿದೆ. ದೇವರಾಜ್, ತಾರಾ, ಬ್ರಹ್ಮಾನಂದಂ, ಅಲಿ ಮುಂತಾದ ಹಿರಿಯ ಕಲಾವಿದರು ಈ ಚಿತ್ರದಲ್ಲಿ ನಟಿಸಿದ್ದಾರೆ. ನಾನು ಕೂಡ ಈ ಚಿತ್ರದಲ್ಲಿ ಅಭಿನಯಿಸಿದ್ದೇನೆ' ಎಂದು ಸುದೀಪ್ ಹೇಳಿದರು. ರಾಜೀವ್‌ಗೆ ಜೋಡಿಯಾಗಿ ಶ್ರೀಜಿತ ಘೋಶ್ ನಟಿಸಿದ್ದು, ಪ್ರದೀಪ್ ಯಾದವ್ ಈ ಸಿನಿಮಾವನ್ನು ನಿರ್ಮಾಣ ಮಾಡಿದ್ದಾರೆ. ಅಲಿ, ಬ್ರಹ್ಮಾನಂದಂ, ಸಾಧುಕೋಕಿಲ ಹಾಗೂ ಮಂಜು ಪಾವಗಡ ಅವರ ಕಾಂಬಿನೇಷನ್‌ನಲ್ಲಿ ಚಿತ್ರದ ಹಾಸ್ಯ ದೃಶ್ಯಗಳು ಚೆನ್ನಾಗಿ ಮೂಡಿಬಂದಿದೆ ಎಂದಿದೆ ಚಿತ್ರತಂಡ.

'ಮೊದಲ ಬಾರಿಗೆ ಖ್ಯಾತ ನಟರಾದ ಬ್ರಹ್ಮಾನಂದಂ ಹಾಗೂ ಅಲಿ ಅವರು ಕನ್ನಡ ಚಿತ್ರವೊಂದರಲ್ಲಿ ಒಟ್ಟಾಗಿ ಅಭಿನಯಿಸಿದ್ದಾರೆ. ಸದ್ಯದಲ್ಲೇ ಚಿತ್ರದ ಬಿಡುಗಡೆ ದಿನಾಂಕವನ್ನು ತಿಳಿಸುವುದಾಗಿ' ಪ್ರದೀಪ್ ಯಾದವ್ ಹೇಳಿದರು.



ಶ್ರೀಜಿತ ಘೋಶ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಸವಾಲು ಸಾವಿರ, ಪರಿಹಾರದ ದಾರಿ ದೂರ...

ಒಂದನೇ ಪುಟದಿಂದ...

ಆಲಮಟ್ಟಿ, ಲಿಂಗನಮಕ್ಕಿ ಹಾಗೂ ಕಬಿನಿಗಳು 50 ವರ್ಷದ ಆಸುಪಾಸಿನಲ್ಲಿವೆ. ಮುಂದಿನ 25 ವರ್ಷ ಅಣೆಕಟ್ಟೆಗಳು ಸಮಸ್ಯೆಗೆ ಒಳಗಾಗಲಿದ್ದು, ಅದನ್ನು ಪರಿಹರಿಸಲು ತಕ್ಕ ಸಿದ್ಧತೆ ಆಗಬೇಕಾಗಿದೆ. ಅಣೆಕಟ್ಟೆಗಳಲ್ಲಿ ತುಂಬಿರುವ ಹೂಳಿನಿಂದಾಗಿ ನೀರಿನ ಸಂಗ್ರಹ ಸಾಮರ್ಥ್ಯ ಇಳಿಕೆಯಾಗುತ್ತಲೇ ಇದ್ದು, ಆ ಹೂಳನ್ನು ತೆಗೆಯುವುದಕ್ಕೆ ಆಗುವ ವೆಚ್ಚ ನಿರ್ವಹಣೆ ಹಾಗೂ ತೆಗೆದ ಮೇಲೆ ಅದನ್ನು ಎಲ್ಲಿ ಬಿಸಾಕುವುದು ಎಂಬುದು ಗಂಭೀರವಾದ ಸಮಸ್ಯೆಯಾಗಿದೆ. ಈ ಕಾಲದಲ್ಲಿ ಎದುರಿಸಲೇಬೇಕಾದ ಸಮಸ್ಯೆ ಇದಾಗಿದೆ.

ಉತ್ತರ ಕರ್ನಾಟಕ ಭಾಗದಲ್ಲಿ ಕಟ್ಟಿದ ಅಣೆಕಟ್ಟುಗಳಿಂದ ಕರಿಮಣ್ಣಿನ ಭೂಮಿಗೆ ನೀರಾವರಿ ಒದಗಿಸಿದ್ದೇವೆ. ನಿರಂತರವಾಗಿ ನೀರಾವರಿಗೆ ಒಳಗಾದ ಈ ಕರಿಮಣ್ಣಿನ ಭೂಮಿ ಜೌಗು ಭೂಮಿಯಾಗಲಿದ್ದು, ಕ್ಷಾರತೆಗೂ ಒಳಗಾಗುತ್ತದೆ. ಸಹಜವಾಗಿಯೇ ಫಲವತ್ತತೆ ಕಡಿಮೆಯಾಗಿ, ಇಳುವರಿಯ ಮೇಲೆ ಪರಿಣಾಮ ಬೀರುತ್ತದೆ. ಇದನ್ನು ನಿಭಾಯಿಸುವುದು ಹೇಗೆ? ಇದಕ್ಕೆ ಪರಿಹಾರವೇನು ಎಂಬುದು ಪ್ರಶ್ನೆಯಾಗಿಯೇ ಉಳಿಯುತ್ತದೆ.

ಹಳೆ ಮೈಸೂರು ಭಾಗದಲ್ಲಿ ಕಾವೇರಿ ನೀರೇ ಪ್ರಧಾನ. ಮಳೆ ಅನಿಶ್ಚಿತತೆಯಿಂದಾಗಿ ನೀರಿನ ಕೊರತೆ, ಹೂಳು ತುಂಬಿರುವುದರಿಂದ ಸಂಗ್ರಹ ಸಾಮರ್ಥ್ಯ ಕುಸಿತವಾಗಿದೆ. ಈ ಭಾಗದಲ್ಲಿ ನೀರಿನ ಮಿತ ಬಳಕೆ ಮಾಡದೇ ಇದ್ದರೆ, ರೈತ ಸಂಕುಲ ಸಂಕಷ್ಟಕ್ಕೆ ಸಿಲುಕಲಿದೆ. ಕಬ್ಬು, ಭತ್ತ ಬೆಳೆಯುವ ಪ್ರದೇಶವನ್ನು ಕಡಿಮೆ ಮಾಡಿ, ಸಿರಿಧಾನ್ಯ ಬೆಳೆಯುವಂತೆ ಉತ್ತೇಜಿಸಬೇಕಿದೆ. ಈ ಭಾಗದ ಬೆಳೆ ಪದ್ಧತಿ ಬಹಳ ಕಾಲ ನಡೆಯುವುದಿಲ್ಲ; ಅದನ್ನು ಬದಲಾವಣೆ ಮಾಡಲೇಬೇಕಿದೆ. ಇದಕ್ಕೆ ರೈತರ ಮನಃಪರಿವರ್ತನೆ ಹಾಗೂ ಆಡಳಿತಾತ್ಮಕ ಕ್ರಮ ಎರಡೂ ಆಗಬೇಕಿದೆ.

ಮಾಹಿತಿ ತಂತ್ರಜ್ಞಾನದ ಜತೆಗೆ ಈಗ ಪರಿಚಿತವಾಗುತ್ತಿರುವ ಕೃತಕ ಬುದ್ಧಿಮತ್ತೆಯ(ಎಐ) ಪರಿಣಾಮ ಮುಂದಿನ ದಿನಗಳಲ್ಲಿ ಯಾವ ರೀತಿ ಇರುತ್ತದೆ ಎಂದು ಹೇಳಲಾಗದು. ಅದು ಕೆಲವರಿಗೆ ಅನುಕೂಲ ಮಾಡಿಕೊಡಬಹುದು; ಮತ್ತೂ ಕೆಲವರಿಗೆ ಅನನೂಕೂಲವನ್ನೂ ಮಾಡಬಹುದು. ಮಾನವ ಸಂಪನ್ಮೂಲ ಆಧಾರಿತ ಉದ್ದಿಮೆಗಳ ಉದ್ಯೋಗಗಳ ಮೇಲೆ ಪರಿಣಾಮವನ್ನಂತೂ ಬೀರಲಿದೆ. 25 ವರ್ಷಗಳಲ್ಲಿ ಎಲ್ಲ ಕ್ಷೇತ್ರಗಳ ಮೇಲೂ ಎಐ ದೊಡ್ಡಮಟ್ಟದ ಪ್ರಭಾವ-ಪರಿಣಾಮ ಬೀರುತ್ತದೆ. ಇದರಿಂದ ಸಹಾಯಧನ ಅಥವಾ 'ಭಾಗ್ಯ'ಗಳ ಪದ್ಧತಿಯೇ ಬದಲಾಗಬಹುದು.

ಕೃಷಿಯನ್ನೇ ಅವಲಂಬಿಸುವ ಜನಸಮುದಾಯದಕ್ಕೆ ಜಾಗತಿಕ ತಾಪಮಾನ, ಮಳೆಯ ಕೊರತೆಯಿಂದ ಉದ್ಯೋಗಕ್ಕೆ ಕುತ್ತು ಬಂದರೆ, ಐಟಿ, ಎಐ ಮತ್ತು ರೊಬೋಟಿಕ್ ತಂತ್ರಜ್ಞಾನಗಳಿಂದ ಮುಂದಿನ 25 ವರ್ಷಗಳಲ್ಲಿ ವೈಟ್ ಕಾಲರ್ ಉದ್ಯೋಗಗಳು ಕಡಿತವಾಗಲಿವೆ. ಆವಾಗ ಪರಿಸ್ಥಿತಿಯನ್ನು ಹೇಗೆ ಎದುರಿಸುವುದು? ಮಾನವ ಸಂಪನ್ಮೂಲವನ್ನೇ ಆಶ್ರಯಿಸಿದ ಸಿನಿಮಾ, ಟಿ.ವಿ, ಮನರಂಜನೆ ಕ್ಷೇತ್ರಗಳು, ಮದುವೆ-ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಡುವ ಕಲಾವಿದರು, ಆರ್ಕೆಸ್ಟ್ರಾ ತಂಡಗಳು, ಪೇಂಟಿಂಗ್ (ಚಿತ್ರಕಲೆ), ಸಂಗೀತ ಕ್ಷೇತ್ರಗಳ ಮೇಲೆ ಎಐ ಮತ್ತು ರೊಬೋಟಿಕ್ ಆಟೋಮೇಷನ್ ಪರಿಣಾಮ ಬೀರಲಿದೆ. ನಿರುದ್ಯೋಗ ಪ್ರಮಾಣ ಹೆಚ್ಚಾಗಿ, ಈಗ ನೀಡುತ್ತಿರುವ ಸಹಾಯಧನ ಅಥವಾ ವಿವಿಧ ಭಾಗ್ಯಗಳ ವಿಧಾನವೇ (ಕ್ಯಾರೆಕ್ಟರ್) ಬದಲಾಗಲಿದೆ. ಈಗ ನೀಡುತ್ತಿರುವ 'ಭಾಗ್ಯ'ಗಳ ಸ್ವರೂಪವೇ ಮರುಪರಿಶೀಲನೆಗೆ ಒಳಗಾಗಬೇಕಾಗುತ್ತದೆ.

ಇದಕ್ಕೆ ಪರಿಹಾರವನ್ನು ಕಂಡುಕೊಳ್ಳಬೇಕೆಂದರೆ ನಮ್ಮ ಶಿಕ್ಷಣ ವ್ಯವಸ್ಥೆಯನ್ನು ಇದಕ್ಕೆ ಪೂರಕವಾಗುವಂತೆ ತಯಾರು ಮಾಡಬೇಕಾಗಿದೆ. ಸವಾಲುಗಳನ್ನು ಮುಖಾಮುಖಿಯಾಗಿಸಲು ಅಗತ್ಯವಾದ ಶಿಕ್ಷಣ ಪದ್ಧತಿ, ಪಠ್ಯಕ್ರಮ, ಬೋಧನಾ ವಿಧಾನವನ್ನು ಪರಿಚಯಿಸಬೇಕು. ಹೊಸ ತಲೆಮಾರನ್ನು ಇದಕ್ಕೆ ಅಣಿಗೊಳಿಸಬೇಕಾದ ತುರ್ತು ಇದೆ.

ಕರ್ನಾಟಕವು ಎಷ್ಟೊಂದು ಚೆಲುವನ್ನು ಹೊಂದಿದ ನಾಡಾಗಿತ್ತು. ಅಭಿವೃದ್ಧಿಯ ವೇಗಕ್ಕೆ ಬಿದ್ದು ಚೆಲುವನ್ನು ಸೂರೆಗೊಂಡು, ಪರಿಸರವನ್ನು ನಾಶ ಮಾಡಿದ್ದೇವೆ. ಇಲ್ಲೀತನಕದ ಅಭಿವೃದ್ಧಿ ಪರಿಕಲ್ಪನೆ ಮುಂದೆ ನಡೆಯುವುದಿಲ್ಲ. ಅದು ಬದಲಾಗಬೇಕಿದೆ. ರಸ್ತೆ ಅಗಲೀಕರಣಕ್ಕಿಂತ ರಸ್ತೆಯ ಪಕ್ಕ ಎಷ್ಟು ಗಿಡ ನೆಟ್ಟು ಮರ ಬೆಳೆಸಿದ್ದೇವೆ ಎಂಬುದು ಆದ್ಯತೆಯಾಗಬೇಕಿದೆ. ಅಭಿವೃದ್ಧಿಯ ಕಲ್ಪನೆ ಬದಲು ಮಾಡಿಕೊಳ್ಳದೇ ಇದ್ದರೆ, ಭವಿಷ್ಯದ ಸವಾಲುಗಳನ್ನು ಎದುರಿಸುವುದು, ಅದಕ್ಕೆ ಪರಿಹಾರ ಹುಡುಕುವುದು ಕಷ್ಟವಾಗಬಹುದು. ಕರ್ನಾಟಕ ಎಂದು ನಾಮಕರಣ ಮಾಡಿ 50 ವರ್ಷದ ಸಂಭ್ರಮದ ಆಚರಣೆಯ ಜತೆಗೆ ಭವಿಷ್ಯದ ಕರ್ನಾಟಕವನ್ನು ರೂಪಿಸಲು, ನೆಮ್ಮದಿಯ ಬಾಳ್ವೆಗೆ ಬೇಕಾದ ನೆಲವನ್ನು ಹದಗೊಳಿಸಲು ಕಾಲಮಿತಿ ಯೋಜನೆ ರೂಪಿಸುವತ್ತ ಎಲ್ಲರೂ ಕಾರ್ಯಪ್ರವೃತ್ತರಾಗಬೇಕಾಗಿದೆ. ನನಗೆ ಸಿಕ್ಕಿದ ಅಲ್ಪಸಮಯದಲ್ಲಿ ಭವಿಷ್ಯದ ಸವಾಲು ಹಾಗೂ ಅದನ್ನು ಎದುರುಗೊಳ್ಳಲು ಬೇಕಾದ ಉಪಕ್ರಮಗಳ ಹೊಳಹಿನ ರೇಖೆಗಳಷ್ಟೇ ಇವು. ಇದನ್ನು ಪರಿಪೂರ್ಣ ಎನ್ನಲಾರೆ.

ಭ್ರಷ್ಟಾಚಾರದ ಪರಿಣಾಮ ಏನಾಗಬಹುದು?

ಭ್ರಷ್ಟಾಚಾರದ ಕ್ಯುಮಿಲೇಟಿವ್ ಎಫೆಕ್ಟ್ ಅನ್ನು ಇನ್ನು 10 ವರ್ಷಗಳಲ್ಲಿ ಹೇಗೆ ನೋಡುತ್ತೇವೆ ಎಂಬುದು ಮುಖ್ಯ. ಭ್ರಷ್ಟಾಚಾರ ವಿರುದ್ಧದ ದೊಡ್ಡ ಆಂದೋಲನವೇ ಶುರುವಾಗಬಹುದು. ಒಂದು ಸಮೀಕ್ಷೆ ಪ್ರಕಾರ, ಯುವ ಸಮುದಾಯ ಮತದಾನದತ್ತ ಹೆಚ್ಚಿನ ಆಸಕ್ತಿಯನ್ನೇ ತೋರುತ್ತಿಲ್ಲ. ವ್ಯವಸ್ಥೆಯಲ್ಲಿನ ಭ್ರಷ್ಟಾಚಾರದ ಕಾರಣಕ್ಕೆ ಜನರು ಅದರಲ್ಲೂ ಯುವ ಸಮೂಹಕ್ಕೆ ವ್ಯವಸ್ಥೆಯ ಮೇಲೆಯೇ ವಿಶ್ವಾಸ ಹೊರಟುಹೋಗಿದೆ. ಪೊಲೀಸ್ ಮತ್ತು ನ್ಯಾಯಾಂಗದಲ್ಲಿ ಇತ್ಯರ್ಥವಾಗದೇ ಬಾಕಿ ಇರುವ ಪ್ರಕರಣಗಳ ಸಂಖ್ಯೆ ದೊಡ್ಡ ಮಟ್ಟದಲ್ಲಿದೆ. ಒಂದು ಪ್ರಕರಣದ ಇತ್ಯರ್ಥಕ್ಕೆ ಹತ್ತಾರು ವರ್ಷಗಳು ತೆಗೆದುಕೊಂಡರೆ ಜನರಿಗೆ ಈ ವ್ಯವಸ್ಥೆಯ ಮೇಲೆ ವಿಶ್ವಾಸ ಹೊರಟು ಹೋಗಿ, ಸಮಸ್ಯೆಗಳ ಪರಿಹಾರಕ್ಕೆ ನ್ಯಾಯಯುತವಲ್ಲದ ಮಾರ್ಗಗಳ ಮೊರೆ ಹೋಗುವ ಸಾಧ್ಯತೆಯೂ ಇದೆ.

ಎಲ್ಲ ಕಾರಣಗಳಿಂದ ಹೆಚ್ಚುತ್ತಿರುವ ನಿರುದ್ಯೋಗವು ವಿವಿಧ ರೀತಿಯ ಸಮಸ್ಯೆಗಳನ್ನು ಹುಟ್ಟುಹಾಕಬಹುದು. ಇದನ್ನು ಸಮರ್ಥವಾಗಿ ನಿಭಾಯಿಸದಿದ್ದರೆ ಕಾನೂನು ಮತ್ತು ಸುವ್ಯವಸ್ಥೆಯ ಮೇಲೆ ದುಷ್ಪರಿಣಾಮ ಆಗದು ಎಂದು ಹೇಳಲಾಗದು.


ಬಸವದರ್ಶನ

ನಾಡು ಮತ್ತು ದೇಶ ಕಟ್ಟಲು ಗಾಂಧೀಜಿಯವರು ನೈತಿಕ ಆಧಾರಸ್ತಂಭವಾದರೆ, ಅಂಬೇಡ್ಕರ್ ಅವರು ವಾಸ್ತವಿಕತೆಯ ನೆಲೆಗಟ್ಟು ಹಾಕಿಕೊಟ್ಟವರು. ಹೀಗಾಗಿ, 20ನೇ ಶತಮಾನದ ಪೂರ್ವಾರ್ಧ ಗಾಂಧೀಜಿಯವರದ್ದಾದರೆ, ಉತ್ತರಾರ್ಧ ಅಂಬೇಡ್ಕರ್ ಅವರದ್ದಾಗಿತ್ತು. ಈ ಇಬ್ಬರ ಚಿಂತನೆಗಳ ಬೆಳಕಿನ ಜತೆಗೆ ಮುಂದಿನ 25 ವರ್ಷಗಳಲ್ಲಿ ನಮ್ಮನ್ನು ಬೆಳಕಿನ ಕಡೆಗೆ ಮುನ್ನಡೆಸುವ ಕೈದೀವಿಗೆಯು ರವೀಂದ್ರನಾಥ ಟ್ಯಾಗೋರರ ಬರಹಗಳಲ್ಲಿದೆ. ಅದು ಹೆಚ್ಚು ಪ್ರಸ್ತುತವಾಗಲಿದೆ.

ಭಾರತೀಯ ಸಂಸ್ಕೃತಿಗೆ ಕರ್ನಾಟಕವೇ ದೊಡ್ಡ ಮಟ್ಟದ ಕೊಡುಗೆಯನ್ನು ಕೊಟ್ಟಿದೆ; ಅದೆಂದರೆ ಬಸವದರ್ಶನ. ಮುಂದಿನ 25 ವರ್ಷಗಳಲ್ಲಿ ಬೆಳಕಿನ ದಾರಿ ಹುಡುಕುತ್ತಾ ಬಸವಣ್ಣನವರ ಕಡೆಗೆ ಕರ್ನಾಟಕ ಹೋದರೆ ಸಮಾಜಕ್ಕೆ ಒಳಿತಾಗುತ್ತದೆ.

ಲೇಖಕ: ನಿವೃತ್ತ ಹೆಚ್ಚುವರಿ ಮುಖ್ಯಕಾರ್ಯದರ್ಶಿ, ಕರ್ನಾಟಕ ಸರ್ಕಾರ. ನಿರೂಪಣೆ: ವೈ.ಗ.ಜಗದೀಶ್

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ನವೆಂಬರ್ 1, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಕೃಷ್ಣ ಚತುರ್ಥಿ ಗಂ. 21-20 ನಕ್ಷತ್ರ: ಮೃಗಶಿರಾ ಗಂ. 28-36 ಯೋಗ: ಪರಿಘ ಗಂ 14-06 ಕರಣ: ಬವ ಗಂ. 09-20, ತುಲಾ ಮಾಸದ 15 ನೇ ದಿನ, ಮಳೆನಕ್ಷತ್ರ: ಸ್ವಾತಿ 3. ರಾಹುಕಾಲ : ಮಧ್ಯಾಹ್ನ 12-00 - 01-30, ಸೂರ್ಯೋದಯ : 06-28 ಸೂರ್ಯಾಸ್ತ : 06-00
ಮುಸ್ಲಿಂ ದಿನಾಂಕ : 16 ರಬಿಯುಸ್ಸಾನಿ
ದಿನ ವಿಶೇಷ : ಕನ್ನಡ ರಾಜ್ಯೋತ್ಸವ ದಿನ, ಸಂಕಷ್ಟಹರ ಚತುರ್ಥಿ (ಚಂದ್ರೋದಯ: ರಾತ್ರಿ 8-54), ಅದೃಷ್ಟ ಸಂಖ್ಯೆ : 4, 11

ಮೇಷ: ಕಾನೂನು ಸಂಬಂಧಿ ವಿಷಯಗಳ ಅಧ್ಯಯನದಲ್ಲಿ ಆಸಕ್ತಿ ಹೆಚ್ಚಲಿದೆ. ಈಶ್ವರನ ಅನುಗ್ರಹವಿದ್ದು, ತೊಂದರೆಗಳನ್ನು ನಿವಾರಿಸಿ ವೃತ್ತಿರಂಗದಲ್ಲಿ ಉತ್ತಮ ರೀತಿಯಲ್ಲಿ ಮುಂದುವರಿಯಲು ನೆರವಾಗುತ್ತದೆ.

ವೃಷಭ: ಭರವಸೆಯ ಮಾತುಗಳು ಸಹೋದ್ಯೋಗಿಯೊಬ್ಬರಿಗೆ ಆತ್ಮಸ್ಥೈರ್ಯ ತಂದುಕೊಡುವುದು. ಸಂಪಾದನೆಯನ್ನು ನೋಡಿದ ಕೆಲವರು ಮತ್ಸರ ಪಡುವಂತಾಗುತ್ತದೆ. ರಾಜಕೀಯ ರಂಗದಲ್ಲಿ ಜನಪ್ರಿಯತೆ ಪಡೆಯುವಿರಿ.

ಮಿಥುನ: ರಿಯಲ್ ಎಸ್ಟೇಟ್ ವ್ಯವಹಾರಸ್ಥರಿಗೆ ಕಾರ್ಯ ಸಾಧನೆಗೆ ಅನುಕೂಲಕರ ವಾತಾವರಣ ಸಿಗುವುದು. ಹಿಂದೆಂದೂ ಮಾಡದ ಕೆಲಸಗಳನ್ನು ಈಗ ಮಾಡಬೇಕಾಗುವುದು. ಅಧ್ಯಾಪಕರಿಗೆ ಹೆಚ್ಚಿನ ಕೆಲಸಗಳು ಇರಲಿವೆ.

ಕರ್ಕಾಟಕ: ತೆಗೆದುಕೊಳ್ಳುವ ನಿರ್ಧಾರವು ಘರ್ಷಣೆ ಉಂಟಾಗುವುದಕ್ಕೆ ಮೂಲಕಾರಣವಾಗುತ್ತದೆ. ಕುಟುಂಬದಲ್ಲಿ ಸೌಖ್ಯವಿದ್ದು ಮನರಂಜನೆಯಿಂದ ಸಮಯವನ್ನು ಅನುಭವಿಸುವಿರಿ. ಹಣದ ವಿಚಾರದಲ್ಲಿ ಬಿಗಿ ನಿಲುವು ಉತ್ತಮ.

ಸಿಂಹ: ಸಾಮಾಜಿಕ ವಲಯದಲ್ಲಿ ಬರುವ ಅವಕಾಶಗಳನ್ನು ಸದುಪಯೋಗ ಪಡೆದುಕೊಳ್ಳುವುದು ನಿಮ್ಮ ವಿವೇಚನೆಗೆ ಬಿಟ್ಟ ವಿಚಾರ. ನೈತಿಕ ಜವಾಬ್ದಾರಿಗಳ ಕಡೆಗೆ ಹೆಚ್ಚಿನ ಗಮನವಿರಲಿ.

ಕನ್ಯಾ: ಧ್ಯಾನ ಹಾಗೂ ಯೋಗದ ಕಡೆ ಗಮನ ಹರಿಸಿ. ಇದು ಆರೋಗ್ಯದ ಲವಲವಿಕೆಗೆ ಬಹಳ ಸಹಾಯವಾಗಲಿದೆ. ಕ್ಷಣಿಕ ಸುಖಕ್ಕಾಗಿ ಇನ್ನೊಬ್ಬರ ಒತ್ತಾಯಕ್ಕಾಗಿ ಅಧಿಕ ಮಟ್ಟದ ಹಣ ವ್ಯಯ ಮಾಡುವುದು ಸರಿಯಲ್ಲ.

ತುಲಾ: ದಾಯಾದಿಗಳ ಮಧ್ಯೆ ನೀವಂದುಕೊಂಡಷ್ಟು ಪರಿಸ್ಥಿತಿ ಕೆಟ್ಟದಾಗಿ ಇರುವುದಿಲ್ಲ. ಕೆಲಸ ಕಾರ್ಯಗಳು ಯಾವುದೇ ಆತಂಕವಿಲ್ಲದೆ ನಡೆಯುವುದು. ಎಲ್ಲಾ ಕೆಲಸಗಳೂ ತ್ವರಿತ ಗತಿಯಲ್ಲಿ ಸಾಗುವುದು.

ವೃಶ್ಚಿಕ: ಪ್ರಯಾಣವು ಪೂರ್ವನಿಯೋಜಿತ ರೀತಿಯಲ್ಲಿ ನಡೆಯುವುದು ಕಷ್ಟಕರ. ವಾಹನದ ಬಿಡಿ ಭಾಗಗಳ ಮಾರಾಟಗಾರರಿಗೆ ಲಾಭ ಉಂಟಾಗುವುದು. ಮೇಲಧಿಕಾರಿಗಳಿಂದ ಪ್ರಶಂಸೆಯ ನುಡಿ ಕೇಳುವಂತಾಗಲಿದೆ.

ಧನು: ಜಾಹೀರಾತುಗಳ ಮೂಲಕ ವಹಿವಾಟು ಹೆಚ್ಚಿಸಿಕೊಳ್ಳುವ ಪ್ರಯತ್ನ ಫಲ ಕೊಡಲಿದೆ. ಬಹಳ ದಿನದ ನಂತರದ ಹಳೆಯ ಮಿತ್ರನೊಬ್ಬನ ಭೇಟಿ ಮನಸ್ಸಿಗೆ ಮುದ ತರುವುದು. ಶ್ರೀಮಂತ ಜೀವನ ಮನಸ್ಸು ಹಂಬಲಿಸಲಿದೆ.

ಮಕರ: ನಿಮ್ಮಂತೆಯೆ ಇತರರೂ ಸ್ವಾತಂತ್ರ್ಯ ಹಾಗೂ ಸಂತೋಷವಾಗಿರಬೇಕೆಂಬ ಮನೋಭಾವದಿಂದಾಗಿ ಹೆಚ್ಚಿನ ಗೌರವವನ್ನು ಪಡೆದುಕೊಳ್ಳುವಿರಿ. ತಾಯಿ ಜಗನ್ಮಾತೆ ದುರ್ಗಾಪರಮೇಶ್ವರಿಯ ಆರಾಧನೆ ಶುಭ ತರಲಿದೆ.

ಕುಂಭ: ಕಷ್ಟಗಳನ್ನು ಯಾರಲ್ಲಿಯೂ ಹೇಳಿಕೊಳ್ಳಬೇಡಿ. ಸಸಾರಕ್ಕೆ ಒಳಗಾಗುವ ಸನ್ನಿವೇಶಗಳಿರುವುದು. ಗೋವಿನ ಉತ್ಪನ್ನಗಳ ಮಾರಾಟಗಾರರಿಗೆ ಲಾಭ ಬರುವುದು. ತಾಯಿಯ ಆರೋಗ್ಯ ಸುಧಾರಿಸುವುದು.

ಮೀನ: ಮಕ್ಕಳ ಹೊಸ ವ್ಯವಹಾರದಲ್ಲಿ ತಂದೆತಾಯಿಯ ಆಶೀರ್ವಾದ, ಆರ್ಥಿಕ ಸಹಕಾರ ದೊರೆಯಲಿದೆ. ಕೆಲಸದ ಮುಕ್ತಾಯದ ಸಮಯದಲ್ಲಿ ಆಯಾಸವಾಗುವುದು. ಸಂಬಂಧಿಕರಲ್ಲಿ ಹಣದ ವ್ಯವಹಾರ ನಡೆಸಬೇಡಿ.

ಮರಳಿ ಮಣ್ಣಿಗೆ



ನುಡಿ ಬೆಳಗು

ಕಲೀಮ್ ಉಲ್ಲಾ, ಕನ್ನಡ ಉಪನ್ಯಾಸಕ

ಅನೇಕರಿಗೆ ಅಂತಿಮ ಕಾಲದಲ್ಲಿ ಯಾಕೆ ತಮ್ಮೂರಿನ ಮಣ್ಣಿನ ನೆನಪಾಗುತ್ತದೆ? ಹುಟ್ಟಿದೂರನ್ನು ಬಿಟ್ಟು ಎಲ್ಲೆಲ್ಲೋ ಬಾಳಿ ಬದುಕಿ ನಲಿಯುವ ಜನ ಕೊನೆಗಾಲದಲ್ಲಿ ಯಾಕೆ ಮರಳಿ ಮಣ್ಣಿಗೆ ಬರಲು ಇಚ್ಛಿಸುತ್ತಾರೆ? ಅನೇಕ ಕಾರಣಗಳಿಂದ ಊರು ತೊರೆಯುವ ಜನ ಒಳಗೊಳಗೇ ಯಾಕೆ ತಮ್ಮ ಮನೆ, ತೋಟ, ಗದ್ದೆ, ಕೆರೆ, ಅಂಗಳ, ಶಾಲೆ, ಊಟ, ಹಬ್ಬ, ಜಾತ್ರೆ, ಅವ್ವ, ಅಪ್ಪ, ಗೆಳೆಯರು ಎಲ್ಲವನ್ನೂ ಸ್ಮರಿಸುತ್ತಲೇ ಇರುತ್ತಾರೆ?

ಕೆಲವರು ನಮಗೆ ಆ ಸ್ಮೃತಿಗಳೇ ಇಲ್ಲ. ನಾವೆಲ್ಲವನ್ನೂ ನಿವಾಳಿಸಿ ಬಿಸಾಡಿ ಬಂದಿದ್ದೇವೆ ಎಂದು ದೊಡ್ಡಸ್ತಿಕೆಯಿಂದ ಹೇಳಲೂಬಹುದು. ಪ್ರಾಯಶಃ ಅದು ಯವ್ವನದ, ದುಡಿಮೆಯ ಬಿಗಿವಯಸ್ಸು ಆಗಿದ್ದಿರಬಹುದು. ಸುಖದ, ಶ್ರೀಮಂತಿಕೆಯ ಅಧಿಕಾರದ ಅಮಲೂ ಇದ್ದೀತು. ಇದೇ ಜನ ವಯಸ್ಸು ಮಾಗಿದ ಕಾಲಕ್ಕೆ ಜನ್ಮ ಕೊಟ್ಟು ಬೆಳೆಸಿದ ಹಳ್ಳಿಯನ್ನೋ, ಸಣ್ಣ ಊರನ್ನೋ ನೆನೆದು ಏಕೆ ಬಿಕ್ಕಳಿಸುತ್ತಾರೆ?

ಮರ ಎಷ್ಟೇ ಎತ್ತರಕ್ಕೆ ಬೆಳೆದರೂ ಅದರ ಬೇರುಗಳು ಧರೆಯ ಆಳದಲ್ಲಿ ಕಾಣದಂತೆ ಇರುತ್ತವೆ. ಆಗಸದ ಕಡೆ ಮುಖ ಮಾಡಿ ನಲಿಯುವ ಚಿಗುರು ಕೂಡ ಒಣಗಿದ ಮೇಲೆ ಮತ್ತೆ ಮರದ ಬುಡಕ್ಕೆ ಬೀಳಲೇಬೇಕು. ಅದು ಮಾಗಿ ಗೊಬ್ಬರವಾಗಿ ಮತ್ತೆ ಬೇರಿಗೆ ತಾಗಿ ಮರ ಹತ್ತಿ ನಡೆದು ಚಿಗುರಾಗಬೇಕು. ಇದು ಪ್ರಕೃತಿಯ ನಿಯಮ. ಮನುಷ್ಯನಿಗೂ ಈ ಕರ್ಮ ತಪ್ಪಿದ್ದಲ್ಲ. ಹುಟ್ಟಿದ ನೆಲದ ಸೊಗಡು ಎಲ್ಲಿದ್ದರೂ ಬಿಡುವುದಿಲ್ಲ. ಮೊದಲ ಮಳೆಯ ಇಳೆಯ ಸ್ಪರ್ಶ ಸುಗಂಧದಂತೆ ಅದು ಸೆಳೆಯದೇ ಬಿಡುವುದಿಲ್ಲ.

ಹಳ್ಳಿಯ ಜನ ತಾವು ಉತ್ತು ಬಿತ್ತಿ ಬೆಳೆ ತೆಗೆದ ಜಮೀನಿನ ಮಡಿಲಿನಲ್ಲಿ ಮಲಗಲು ಬಯಸುತ್ತಾರೆ. ಆ ಧಾತ್ರಿಯ ಮಣ್ಣಾಗಿ ಮತ್ತೆ ಅಲ್ಲಿನ ಬೆಳೆಗಳಲ್ಲಿ, ಮರಗಳಲ್ಲಿ, ಹೂವು ಹಣ್ಣುಗಳಲ್ಲಿ ಅರಳಲು ಇಚ್ಛಿಸುತ್ತಾರೆ. ಈ ಬಯಕೆಯೂ ಸೋಜಿಗ ಎನಿಸುತ್ತದೆ. ತಮ್ಮ ಸಮಾಧಿ ಇರುವ ಕಾರಣಕ್ಕಾದರೂ ಮಕ್ಕಳು ಆಸ್ತಿಯನ್ನು ಮಾರಲಾರರು ಎಂಬ ದೂರದ ಆಸೆಯೂ ಇದರಲ್ಲಿ ಇದ್ದೀತು. ಇಲ್ಲವೇ ತನಗೆ ಬದುಕು ಕೊಟ್ಟ ಭೂತಾಯಿಯ ಮಡಿಲೇ ಮಿಗಿಲು ಎನಿಸಿಯೂ ಇರಬಹುದು. ಈ ನೆಲದ ವ್ಯಾಮೋಹವೇ ಅಂತಹದ್ದು. ವಿವರಿಸಲು ಸಾಧ್ಯವಾಗದಂತದ್ದು. ಅನೇಕರು ತಾವು ಈ ಜಗತ್ತು ತೊರೆದ ಮೇಲೆ ಮಂದಿ ಬಾಯಾಗ ಇರಬೇಕು ಎಂದು ಬಯಸುತ್ತಾರೆ. ಆದರೆ ಅದು ಸಾಧ್ಯವಾಗುವುದು ನಾಲ್ಕು ಜನರಿಗೆ ಪರೋಪಕಾರಿಯಾಗಿ ಬದುಕಿದಾಗ ಮಾತ್ರ.


ಬದುಕಿದ್ದಾಗ ನಾವು ಗಟ್ಟಿ ಶಿಲೆಯಂತೆ ಇರುತ್ತೇವೆ. ವಸಂತ ಮಾಸ ಬಂದರೂ ಕಲ್ಲಿನಿಂದ ಚಿಗುರು ಹುಟ್ಟುವುದಿಲ್ಲ ಉಸಿರು ಇರುವಾಗ ಮಣ್ಣಿನ ಗುಣದಂತೆ ಬದುಕಬೇಕು. ಆಗ ಅದರಿಂದ ಬಣ್ಣಬಣ್ಣದ ಹೂವುಗಳು ಅರಳಬಹುದು. ಎಲ್ಲರನ್ನೂ ಸ್ವಾಗತಿಸುವ ವಸುಂಧರೆ ಮರಳಿ ಮಣ್ಣಿಗೆ ಬರುವ ಯಾರನ್ನೂ ನಿರಾಕರಿಸುವುದಿಲ್ಲ. ನಮ್ಮ ಮೋಹನ ಮುರಳಿಯ ಕರೆ ಬರುವ ಮೊದಲೇ ನಾವು ಮಣ್ಣಿನ ಗುಣದ ಮನುಷ್ಯರಾಗಬೇಕು. ಅನೇಕರ ತುಟಿಯ ನಗು, ಮನಗಳ ಸಂತಸ, ಕೆಲವಾದರೂ ಬದುಕುಗಳ ಹಿತದ ಭಾಗವಾಗಬೇಕು. ಆಗ ಮಾತ್ರ ನಾವು ಸತ್ತ ಮೇಲೂ ಬಾಳಬಲ್ಲೆವು. ❖

ಪದಬಂಧ 5487

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಆಗಮಗಳನ್ನು ತಿಳಿದವನು (4)
3.ಕೊಂಬೆಯಿಂದ ಕೊಂಬೆಗೆ ಓಡಾಡುವ ಪ್ರಾಣಿ (4)
5.ರಸಿಕ ತಲೆಯಲ್ಲಿರುವ ಮರಳು (3)
7.ಮರ್ಯಾದೆಯುಳ್ಳ ಆದಾಯ (4)
9.ವರ್ಣಮಾಲೆಯಲ್ಲಿ ಸ್ವತಂತ್ರವಾಗಿ ಉಚ್ಚರಿಸುವ ವರ್ಣ (2)
10.ವರ್ಣನೆಯಲ್ಲಿರುವ ಅಕ್ಷರ (2)
11.ಅರಣ್ಯದಿಂದ ಬಂದಿರುವ ಬೇಡ (4)
13.ಸಂತನಿಂದ ಮುಂದುವರೆದ ಪೀಳಿಗೆ (3)
16.ಕೊನೆಗೆ ಗ್ರಹ ಬಡಿದದ್ದಕ್ಕೇ ಈ ಕೃಪೆ! (4)
17.ಬಹಳ ಭೇದಿಯಾಗುವ ಒಂದು ರೋಗ (4)

ಮೇಲಿಂದ ಕೆಳಕ್ಕೆ
1.ಆಲದ ಮರದ ಬಳಿಯಿರುವ ಸೋಮಾರಿ (3)
2.ಎಳೆಮಾವಿನ ಕಾಯಿಯನ್ನ ನೋಡಿದಾಗ ಈ ಸ್ಪಂದನ! (3)
3.ಅಪ್ಪಟ ಸಸ್ಯಾಹಾರ ಇದು (4)
4.ಅಕ್ಕರಾಸ್ತೆಯಿಂದ ನಡೆದು ಹೋಗುವ ದಾರಿ (2)
6.ಮಧುರವಾದ ಧ್ವನಿ (4)
7.ಚನ್ನಾಗಿ ಮಾತನಾಡುವವನು (3)
8.ಅದೇ ತಾನೆ ಹುಟ್ಟಿದುದು (4)
12.ಚಕ್ರವಿದ್ದಾಗ ಬಿಕ್ಕಟ್ಟಿನ ಪರಿಸ್ಥಿತಿಯೇ? (4)
13.ಜೊತೆಯಲ್ಲಿ ಇರುವ ವ್ಯಕ್ತಿ (3)
14.ಇಲ್ಲಿ ಕತ್ತಲೆ ಆವರಿಸಿದೆ (3)
15.ಮಾವನ ಮಡದಿ ಏಕೋ ತಿರುಗಿದ್ದಾಳಲ್ಲ? (2)



5486ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಶಾರ್ದೂಲ 2.ಪರಂಪರೆ
4.ಮಾನವೀಯ
6.ಸಂಪದ 7.ಕಸ
9.ನಿಷ್ಕಾಮ 11.ರಕಂ
13.ಆಲೋಲ 14.ಕಡಿವಾಣ
16.ಮಕಮಲ್ಲು 17.ಸಮೃದ್ಧ

ಮೇಲಿಂದ ಕೆಳಕ್ಕೆ:
1.ಶಾಖಮಾಪಕ
2.ಪರೆ 3.ಪರೋಪಕಾರ
5.ಯವನಿ 8.ಸಮಾಲೋಚಕ
10.ಮಣಕ 12.ಕಂಕಣಬದ್ಧ
15.ಜೊಲ್ಲು

ಸುಡೊಕು 5873


	7	6		4				9
5			6		9			2
2		4		7		3		
7	8						5	
			4	9		6		7
6		5		8			2	
		7	2				9	5
	5				7			
9				5		2		4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5872 ಸುಡೊಕು

2	3	9	8	5	7	1	6	4
8	6	4	1	3	2	7	5	9
5	1	7	4	9	6	2	8	3
7	9	8	2	4	5	6	3	1
4	5	1	6	8	3	9	2	7
3	2	6	9	7	1	5	4	8
6	7	2	3	1	4	8	9	5
9	4	5	7	6	8	3	1	2
1	8	3	5	2	9	4	7	6



ಮಾನವನೇ 'ಆಗಲಿರುವ' ರೋಬೋಟ್

ನೇಸರ ಕಾಡನಕುಪ್ಪೆ



ಈಗ ಎಲ್ಲೆಡೆಯೂ ಕೃತಕ ಬುದ್ಧಿಮತ್ತೆಯದೇ ಮಾತು. ಅದರಲ್ಲೂ ಮಾನವ ಬುದ್ಧಿಮತ್ತೆ ಎಲ್ಲೆಲ್ಲಿ ಬಳಕೆಯಲ್ಲಿದೆಯೋ ಅಲ್ಲೆಲ್ಲಾ ಕೃತಕ ಬುದ್ಧಿಮತ್ತೆಯನ್ನು ಅಳವಡಿಸಿಕೊಳ್ಳಬಹುದು ಎಂಬ ವಿಚಾರವು ಕೇವಲ ಕಾಗದದಲ್ಲಿ ಸಿದ್ಧಾಂತದ ಸ್ವರೂಪದಲ್ಲಿ ಇರದೇ ಪ್ರಾಯೋಗಿಕವಾಗಿ ಜಾರಿಗೊಳ್ಳುತ್ತಿದೆ. ಉದಾಹರಣೆಯಾಗಿ, 'ಚಾಟ್ ಜಿಪಿಟಿ' ಹಾಗೂ ಗೂಗಲ್‌ನ 'ಬಾರ್ಡ್' ಮಾದರಿಯ ಕೃತಕ ಬುದ್ಧಿಮತ್ತೆ ವೇದಿಕೆಗಳು ಈಗಾಗಲೇ ಉತ್ತಮ ಪ್ರಮಾಣದಲ್ಲಿ ಬಳಕೆಯಲ್ಲಿವೆ. ಈಗ ಈ ವೇದಿಕೆಗಳನ್ನೂ ಮೀರಿ 'ಹ್ಯೂಮನಾಯ್ಡ್ ಆ್ಯಂಡ್ರಾಯ್ಡ್'ಗಳನ್ನು (ಮಾನವಸ್ವರೂಪಿ ರೋಬೋಟ್) ಹೊರಬಿಡುವ ಸಿದ್ಧತೆ ಜೋರಾಗಿ ನಡೆದಿದೆ. ಅಮೆರಿಕದ ಕಾರ್ನೆಲ್ ವಿಶ್ವವಿದ್ಯಾನಿಲಯದ ವರ್ಚುಯಲ್ ರಿಯಾಲಿಟಿ ವಿಜ್ಞಾನಿಗಳು ಹೊಸ ಬಗೆಯ ರೋಬೋಟ್ ಒಂದನ್ನು ಕಂಡುಹಿಡಿದಿದ್ದಾರೆ. ಯಥಾವತ್ ಮಾನವರಂತೆಯೇ ಮುಖಭಾವ, ದೇಹದ ಚಲನ–ವಲನವನ್ನು ಅಭಿವ್ಯಕ್ತಿಸುವುದು ಈ ರೋಬೋಟ್ ವಿಶೇಷತೆ.

ಈ ತಂತ್ರಜ್ಞಾನ ಬಹಳ ಸರಳವಾಗಿ ಅರ್ಥ ಮಾಡಿಕೊಳ್ಳುವಂತಿದೆ. ನೋಟದಲ್ಲಿ ನಿಮ್ಮನ್ನೇ ಹೋಲುವ ರೋಬೋಟ್ ಒಂದಿದೆ ಎಂದು ಭಾವಿಸೋಣ. ಆ ರೋಬೋಟ್ ತನ್ನಲ್ಲಿ ಕೆಲವು ಸಂವೇದಕಗಳನ್ನು ಹೊಂದಿರುತ್ತದೆ. ನಿಮ್ಮ ಬಳಿ ಆ ರೋಬೋಟ್‌ನ ಜೊತೆ ಸಂಪರ್ಕದಲ್ಲಿರಲು ಬ್ಲೂಟೂತ್ ಇತ್ಯಾದಿ ತಂತ್ರಜ್ಞಾನವುಳ್ಳ ಕೆಲವು ಸಂಪರ್ಕ ಸಾಧನಗಳಿರುತ್ತವೆ. ಈ ಸಾಧನಗಳು ನಿಮ್ಮ ದೇಹ ಹಾಗೂ ಮನಸ್ಸಿನ ಜೊತೆಗೂ ಸಂಪರ್ಕ ಹೊಂದಿರುತ್ತವೆ. ಅಲ್ಲದೇ, ನೀವಿರುವ ಜಾಗ ಹಾಗೂ ರೋಬೋಟ್ ಇರುವ ಜಾಗದ ನಡುವೆ ಹಲವು ಕಿಲೋಮೀಟರ್‌ಗಳ ಅಂತರವಿರುತ್ತದೆ. ನೀವು ಅತಿ ದೂರದಲ್ಲಿ ಕುಳಿತು ಮಾತನಾಡಿದರೂ, ಮುಖಭಾವದಲ್ಲಿ ಬದಲಾವಣೆಗಳಾದರೂ, ದೇಹಭಾಷೆಯಲ್ಲಿ ಬದಲಾವಣೆಗಳಾದರೂ ಇನ್ನೊಂದು ತುದಿಯಲ್ಲಿ ಕುಳಿತಿರುವ ರೋಬೋಟ್ ನಿಮ್ಮನ್ನೇ ಸಂಪೂರ್ಣವಾಗಿ ಅನುಕರಿಸುತ್ತದೆ. ಆ ಅನುಕರಣೆಯು ಸಂಪೂರ್ಣ ನಿಮ್ಮನ್ನೇ ಹೋಲುತ್ತಿರುತ್ತದೆ.

ಅಂದರೆ, ಇದು ರೋಬೋಟ್ ಹಾಗೂ ಮನುಷ್ಯ ಸಂಬಂಧದ ಬಗೆಗಿನ ವಿಷಯ. ಈಗಿನ 'ಚಾಟ್ ಜಿಪಿಟಿ' ಹಾಗೂ 'ಬಾರ್ಡ್'ನಂತೆಯೇ ಈ ರೋಬೋಟ್‌ಗಳು ಮಾನವನಿಗೆ ವಿವಿಧ ಹಂತಗಳಲ್ಲಿ ಜೀವನ ನಡೆಸಲು ಸಹಾಯ ಮಾಡುತ್ತವೆ. ವ್ಯಕ್ತಿಯೊಬ್ಬ ದೈಹಿಕವಾಗಿ ಒಂದು ಸ್ಥಳಕ್ಕೆ ಹೋಗಲಾಗದೇ ಇದ್ದರೆ, ತನ್ನ ಬದಲಾಗಿ ತನ್ನನ್ನೇ ಹೋಲುವ ರೋಬೋಟ್ ಒಂದನ್ನು ತನ್ನ ಪ್ರತಿನಿಧಿಯಾಗಿ ಕಳುಹಿಸಬಹುದು. ಈಗಾಗಲೇ ಚಾಲ್ತಿಯಲ್ಲಿರುವ 'ವರ್ಚುಯಲ್ ರಿಯಾಲಿಟಿ' ಕನ್ನಡಕಗಳನ್ನು ಧರಿಸಿದರೆ, ರೋಬೋಟ್ ಕ್ಯಾಮೆರಾದ ಮೂಲಕ ರೋಬೋಟ್ ಎದುರಿನ ದೃಶ್ಯವನ್ನು ವೀಕ್ಷಿಸಲು ಸಾಧ್ಯವಾಗುತ್ತದೆ. ಅಲ್ಲದೇ, ವರ್ಚುಯಲ್ ರಿಯಾಲಿಟಿ ಕನ್ನಡಕವು ವ್ಯಕ್ತಿಗೆ ಸ್ವತಃ ತಾನೇ ಭಾಗವಹಿಸುವಂತೆ ನೈಜತೆಯನ್ನೂ ನೀಡುತ್ತದೆ. ಈ ಕನ್ನಡಕದಲ್ಲಿ ನೋಡಿಕೊಂಡು ವ್ಯಕ್ತಿಯು ಏನನ್ನೇ ಮಾತನಾಡಿದರೂ ದೂರದಲ್ಲಿರುವ ರೋಬೋಟ್ ಆ ವ್ಯಕ್ತಿಯ ಧ್ವನಿಯಲ್ಲಿ ಆ ವ್ಯಕ್ತಿಯಂತೆಯೇ ಯಥಾವತ್ತಾಗಿ ಮಾತನಾಡುತ್ತದೆ. ಅಲ್ಲದೇ, ರೋಬೋಟ್‌ನ ಮುಖದಲ್ಲಿರುವ ಪರದೆಯಲ್ಲಿ ನಿಮ್ಮ ಮುಖದ ದೃಶ್ಯವೂ ಮೂಡುವ ಕಾರಣ, ಇತರರಿಗೆ ಸಹಜತೆಯನ್ನೂ ಸೃಷ್ಟಿಸುತ್ತದೆ.

ಇವೆಲ್ಲವನ್ನೂ ನಾವು ಈಗಾಗಲೇ ಕೆಲವು ವಿಜ್ಞಾನ ಸಿನೆಮಾಗಳಲ್ಲಿ ನೋಡಿದ್ದೇವೆ. ಈ ಕಲ್ಪನೆಯು ನಿಜವಾಗುವ ದಿನಗಳು ಈಗ ಹತ್ತಿರವಾಗುತ್ತಿವೆ ಎಂದು ಕಾರ್ನೆಲ್ ವಿಶ್ವವಿದ್ಯಾನಿಲಯದ ರೋಬೋಟಿಕ್ ವಿಜ್ಞಾನಿ ಮೋಸ್ ಸಕಾಶಿಟ ಹೇಳಿದ್ದಾರೆ. 'ಭವಿಷ್ಯದ ರೋಬೋಟ್‌ಗಳಿಗೆ ಪ್ಲಾಸ್ಟಿಕ್, ಫೈಬರ್ ಅಥವಾ ಲೋಹದ ದೇಹ ಇರುವುದಿಲ್ಲ. ಬದಲಿಗೆ ಕೃತಕ ರಕ್ತ, ಮಾಂಸ, ಚರ್ಮಗಳಿಂದ ತಯಾರಾದ ದೇಹವೇ ಇರಲಿದೆ. ಅಲ್ಲದೇ, ಆ ರೋಬೋಟ್‌ಗಳು ಬೇರೆಡೆ ಇರುವ ವ್ಯಕ್ತಿಗೆ ಸಂಪರ್ಕ ಹೊಂದಿರುತ್ತವೆ. ಹಾಗಾಗಿ, ವ್ಯಕ್ತಿಯೊಬ್ಬ ರೋಬೋಟ್ ಮೂಲಕ ತನ್ನನ್ನು ತಾನು ಅಭಿವ್ಯಕ್ತಿಪಡಿಸುವ ಸಾಧ್ಯತೆ ತೀರಾ ದೂರ ಉಳಿದಿಲ್ಲ' ಎಂದು ಮೋಸ್ ಭವಿಷ್ಯ ನುಡಿದಿದ್ದಾರೆ.

ಈಗಾಗಲೇ ಸಂಶೋಧಿಸಿರುವ ರೋಬೋಟ್‌ಗೆ ವಿಜ್ಞಾನಿಗಳು 'ವಿ–ರಾಕ್ಸಿ' ಎಂದು ಹೆಸರಿಟ್ಟಿದ್ದಾರೆ. ಸದ್ಯಕ್ಕೆ ಈ ರೋಬೋಟ್ ಫೈಬರ್ ಹಾಗೂ ಲೋಹದಿಂದಲೇ ನಿರ್ಮಿಸಲ್ಪಟ್ಟಿದೆ. ರೋಬೋಟ್ ಮುಖದಲ್ಲಿರುವ ಪರದೆಯಲ್ಲಿ ಮನುಷ್ಯನ ಮುಖ ಪ್ರದರ್ಶನಗೊಳ್ಳುತ್ತದೆ. ಅಲ್ಲದೇ, ರೋಬೋಟ್‌ನ ಸ್ಪೀಕರ್‌ನಲ್ಲಿ ಮನುಷ್ಯನ ಧ್ವನಿಯೇ ಬರುತ್ತದೆ. ಫೈಬರ್, ಮಾಂಸ ಹಾಗೂ ಚರ್ಮಗಳನ್ನು ರೋಬೋಟ್‌ಗೆ ನೀಡಲು ಕೆಲವು ಪ್ರಮುಖ ಸಿದ್ಧತೆಗಳು ಆಗಬೇಕಿವೆ. ರಕ್ತ, ಮಾಂಸ, ಸ್ನಾಯುಗಳ ಸ್ಥಾನವನ್ನು ಕೆಲವು ರಾಸಾಯನಿಕಗಳು ಪಡೆಯುವುದು ಸುಲಭವಲ್ಲ. ಏಕೆಂದರೆ, ಅದು ನೈಜತೆಗೆ ಹತ್ತಿರ ಇರಬೇಕು. ಇಲ್ಲವಾದಲ್ಲಿ ಮಾನವನು ರೋಬೋಟ್ ಜೊತೆಗೆ ಸ್ನೇಹಯುತವಾಗಿ ಸಂಪರ್ಕ ಬೆಳೆಸದೇ ಭಯ ಹಾಗೂ ಎಚ್ಚರಿಕೆ ಅದರ ಸ್ಥಾನವನ್ನು ತುಂಬುತ್ತವೆ ಎಂದು ಮೋಸ್ ಹೇಳಿದ್ದಾರೆ.

ಎಲ್ಲೆಲ್ಲಿ ಇದರ ಬಳಕೆ?

ನಿತ್ಯದ ಜೀವನದಿಂದ ಹಿಡಿದು ಅತಿ ಕ್ಲಿಷ್ಟಕರ ವಾತಾವರಣಗಳಲ್ಲಿ ಕಾರ್ಯನಿರ್ವಹಿಸುವ ಸಂದರ್ಭಗಳಲ್ಲಿ ಈ ರೋಬೋಟ್ ಕೆಲಸಕ್ಕೆ ಬರಬಹುದು ಎಂದು ವಿಜ್ಞಾನಿಗಳು ಹೇಳಿದ್ದಾರೆ. ನಾಗರಿಕಜೀವನದಲ್ಲಿ, ಅಂದರೆ, ಕಚೇರಿಯ ಕೆಲಸಗಳಲ್ಲಿ ಕಾನೂನು ಅನುಮತಿ ನೀಡಿದರೆ, ಮಾನವನ ಬದಲಿಗೆ ರೋಬೋಟ್‌ಗಳೇ ಪ್ರತಿನಿಧಿಸಬಹುದು. ಕ್ಲಿಷ್ಟಕರ ಸನ್ನಿವೇಶಗಳಲ್ಲಿ ಅಂದರೆ, ಮಾನವನ ಆರೋಗ್ಯದ ಮೇಲೆ ಅಡ್ಡಪರಿಣಾಮ ಬೀರುವ, ಅಂದರೆ ಪ್ರಯೋಗಾಲಯಗಳಲ್ಲಿ, ಕಾರ್ಖಾನೆಗಳಲ್ಲಿ, ಗಣಿಗಳಲ್ಲಿ ರೋಬೋಟ್ ದಣಿವಿಲ್ಲದೇ ಮನುಷ್ಯನನ್ನು ಪ್ರತಿನಿಧಿಸಬಲ್ಲದು. ಅಲ್ಲದೇ, ಬಾಹ್ಯಾಕಾಶ ಸಂಶೋಧನೆಗೂ ಇದು ಮಹತ್ವದ ಕಾಣಿಕೆ ನೀಡಲಿದೆ. ಅಂದರೆ, ಗಗನಯಾತ್ರಿಗಳಾಗಿ ಮಾನವರೇ ಹೋಗುವ ಬದಲು ಗಗನಯಾತ್ರಿಗಳ ಪ್ರತಿನಿಧಿಗಳಾಗಿ ರೋಬೋಟ್‌ಗಳು ಬಾಹ್ಯಾಕಾಶಕ್ಕೆ ಹೋಗಬಹುದು. ಮಾನವರು ಭೂಮಿಯ ಮೇಲೇ ಕುಳಿತು ರೋಬೋಟ್‌ನ ಮೂಲಕ ಯಾವ ಕೆಲಸವನ್ನು ಬೇಕಾದರೂ ಮಾಡಿಸಿಕೊಳ್ಳಬಹುದು.

ಈ ತಂತ್ರಜ್ಞಾನವು ಅತಿ ಮೂಲಸ್ವರೂಪದಲ್ಲಷ್ಟೆ ಈಗ ಜಾರಿಯಾಗಿದೆ. ಮೋಸ್ ಅವರ ಪ್ರಕಾರ ಕನಿಷ್ಠವೆಂದರೂ ಹತ್ತು ವರ್ಷಗಳಲ್ಲಿ ಮಾನವನನ್ನೇ ಸಂಪೂರ್ಣವಾಗಿ ದೈಹಿಕವಾಗಿ ಹೋಲುವ ರೋಬೋಟ್‌ಗಳು ನಮ್ಮ ನಡುವೆ ಇರಲಿವೆ. ಅಂದು ಮಾನವನ ಬಹುತೇಕ ಎಲ್ಲ ಕಾರ್ಯಗಳೂ ರೋಬೋಟ್‌ಗಳ ಮೂಲಕವೇ ನಡೆಸುವ ಸಾಧ್ಯತೆ ಬೆಳೆದಿರುತ್ತದೆ ಎಂದು ವಿಜ್ಞಾನಿಗಳು ಹೇಳಿದ್ದಾರೆ. ❖

ಐಫೋನ್ ಆಂಡ್ರಾಯ್ಡ್ ಫೋನ್‌ಗಳಲ್ಲಿ ಕನ್ನಡ

ಅವಿನಾಶ್ ಬಿ.

ಅಂತರ್ಜಾಲದ ಸಂಪರ್ಕವಿರುವ ಸಾಮಾಜಿಕ ಮಾಧ್ಯಮಗಳಲ್ಲಿ ಅಥವಾ ಎಸ್‌ಎಂಎಸ್ ಕಳುಹಿಸುವಾಗ ಈಗಲೂ ಕನ್ನಡಲಿಪಿ ಬಳಕೆಯ ಬಗ್ಗೆ ಬಹುತೇಕರಿಗೆ ಅದೇನೋ 'ರಾಕೆಟ್ ಸೈನ್ಸ್' ಎಂಬ ಉಪೇಕ್ಷೆಯ ಭಾವನೆ ಇದೆ. ಈ ಕಾರಣಕ್ಕಾಗಿಯೇ ಕನ್ನಡವನ್ನು ಆಂಗ್ಲಲಿಪಿಯಲ್ಲಿಯೇ ಟೈಪ್ ಮಾಡಿ ಸಂದೇಶ ಕಳುಹಿಸುವವರು ಈಗಲೂ ಇದ್ದಾರೆ. ಇದನ್ನು 'ಕಂಗ್ಲಿಷ್' ಎಂದು ಕರೆಯಲಾಗುತ್ತದೆಯಾದರೂ, ಓದುವವರಿಗಂತೂ ಬಲುದೊಡ್ಡ ಹಿಂಸೆ. ಏಕೆಂದರೆ ಕನ್ನಡವನ್ನು ಸುಲಭವಾಗಿ ಬೆರಳಚ್ಚು ಮಾಡಲು ಸಾಕಷ್ಟು ತಂತ್ರಾಂಶಗಳು ಈಗಂತೂ ಧಂಡಿಯಾಗಿ ಲಭ್ಯ ಇವೆ.

ನಾವೆಲ್ಲ ಪ್ರತಿದಿನ ಬಳಸುವ ಮೊಬೈಲ್ ಫೋನ್‌ಗಳ ತಯಾರಕರೇ ಭಾರತದಲ್ಲಿ ಭಾಷಾ ಬಳಕೆದಾರರ ಪ್ರಗತಿಯನ್ನು ಮನದಟ್ಟು ಮಾಡಿಕೊಂಡು, ಕನ್ನಡ ಸಹಿತ ಭಾರತೀಯ ಭಾಷೆಗಳ ಕೀಬೋರ್ಡ್‌ಗಳನ್ನು ಅಳವಡಿಸಿಯೇ ಕೊಡುತ್ತಾರೆ. ಅದರ ಹೊರತಾಗಿ, ಇಂಗ್ಲಿಷಿನಲ್ಲಿ ಟೈಪ್ ಮಾಡಿದ್ದನ್ನು ಕನ್ನಡದಲ್ಲಿ ಮೂಡಿಸಬಲ್ಲ ಹಲವಾರು ಖಾಸಗಿ ಆ್ಯಪ್‌ಗಳು ಕೂಡ ಸಾಕಷ್ಟು ಲಭ್ಯ ಇವೆ. ಆಂಡ್ರಾಯ್ಡ್ ಫೋನ್‌ಗಳಲ್ಲಂತೂ ಜಸ್ಟ್ ಕನ್ನಡ, ಪದ ಕನ್ನಡ, ಗೂಗಲ್‌ನ ಜಿಬೋರ್ಡ್, ಸ್ವರಚಕ್ರ, ಎನಿಸಾಫ್ಟ್, ಪಾಣಿನಿ, ಬ್ರಾಹ್ಮೀ, ಸ್ಪರ್ಶ್, ಮಲ್ಟಿಲಿಂಗ್, ಇಂಡಿಕ್ ಕೀಬೋರ್ಡ್ ಮೊದಲಾದ ಸಾಕಷ್ಟು ಕೀಲಿಮಣೆ ಆ್ಯಪ್‌ಗಳಿವೆ.

ಅಲ್ಲದೆ, ಇವುಗಳಲ್ಲಿ ಟೈಪಿಂಗ್ ಮಾಡಲು ನಮಗೆ ಹೆಚ್ಚು ಅನುಕೂಲವಿರುವ ಲೇಔಟ್ ಆಯ್ಕೆ ಮಾಡಿಕೊಳ್ಳುವುದಕ್ಕೂ ಅವಕಾಶಗಳಿವೆ. ಮುಖ್ಯವಾಗಿ ಹಿಂದಿನಿಂದ ಚಾಲ್ತಿಯಲ್ಲಿರುವ ಇನ್‌ಸ್ಕ್ರಿಪ್ಟ್ ಲೇಔಟ್ (ಕಡಿಮೆ ಕೀ ಬಳಕೆಯಿಂದ ವೇಗದ ಟೈಪಿಂಗ್ ಸಾಧ್ಯ), ಈಗ ಜನಸಾಮಾನ್ಯರಲ್ಲಿ ಹೆಚ್ಚು ಬಳಕೆಯಲ್ಲಿರುವ ಟ್ರಾನ್ಸ್‌ಲಿಟರೇಶನ್ (ಲಿಪ್ಯಂತರ) ಎಂದರೆ, ಇಂಗ್ಲಿಷ್ ಕೀಬೋರ್ಡಿನಲ್ಲಿ ಟೈಪ್ ಮಾಡಿದ್ದನ್ನು ಕನ್ನಡದ ಲಿಪಿಗೆ ಪರಿವರ್ತಿಸುವ 'ಧ್ವನ್ಯಾತ್ಮಕ' (Phonetic) ಲೇ–ಔಟ್.

ಆಂಡ್ರಾಯ್ಡ್ ಫೋನ್‌ಗಳಲ್ಲಿ ಈ ಎಲ್ಲ ಮಾದರಿಯ ಕೀಬೋರ್ಡ್‌ಗಳನ್ನು ಕನ್ನಡದ ಟೆಕೀ ಮನಸ್ಸುಗಳು ಅದಾಗಲೇ ಜನರಿಗೆ ಉಚಿತವಾಗಿ ನೀಡಿವೆ. ಆದರೆ, ಆ್ಯಪಲ್ ಕಂಪನಿಯ ಐಒಎಸ್ ಇರುವ ಐಫೋನ್, ಐಪ್ಯಾಡ್ (ಟ್ಯಾಬ್ಲೆಟ್) ಮತ್ತು ಮ್ಯಾಕ್ (ಕಂಪ್ಯೂಟರು)ಗಳಲ್ಲಿ ಕನ್ನಡ ಟೈಪ್ ಮಾಡುವುದಕ್ಕೆ ಇತ್ತೀಚಿನವರೆಗೂ ಸಮಸ್ಯೆಯಿತ್ತು. ಇತ್ತೀಚೆಗೆ ಬಿಡುಗಡೆಯಾದ ಹೊಸ ಐಒಎಸ್ 17ರಲ್ಲಿ (ಕಾರ್ಯಾಚರಣಾ ವ್ಯವಸ್ಥೆಯ ಹೊಸ ಆವೃತ್ತಿ) ಈ ಸಮಸ್ಯೆ ನಿವಾರಣೆಯಾಗಿದೆ. 2017ರಲ್ಲಿ ಬಿಡುಗಡೆಯಾದ ಐಒಎಸ್ 11 ಕಾರ್ಯಾಚರಣಾ ವ್ಯವಸ್ಥೆಯಲ್ಲಿ ಕನ್ನಡ ಇನ್‌ಸ್ಕ್ರಿಪ್ಟ್ ವಿನ್ಯಾಸದ ಕೀಬೋರ್ಡ್ ಅಂತರ್-ನಿರ್ಮಿತವಾಗಿ ಲಭಿಸಿದ್ದರೆ, ಮೊನ್ನೆ ಸೆಪ್ಟೆಂಬರ್ ತಿಂಗಳಲ್ಲಿ ಬಿಡುಗಡೆಯಾದ ಹೊಸ ಐಒಎಸ್ 17 ಆವೃತ್ತಿಯಲ್ಲಿ ಟ್ರಾನ್ಸ್‌ಲಿಟರೇಶನ್ (ಲಿಪ್ಯಂತರ) ಲೇಔಟ್ ಇರುವ ಕೀಲಿಮಣೆಯನ್ನೂ ಒದಗಿಸಿರುವುದು ಕನ್ನಡಿಗರಿಗೆ ಖುಷಿ ತಂದಿದೆ. ಬಹುಶಃ ಇದರ ಪ್ರಚಾರ ಆಗಿದ್ದು ಕಡಿಮೆ. ಇದು ಅಂತರ್-ನಿರ್ಮಿತವಾಗಿಯೇ ಬಂದಿದೆ. ಇದನ್ನು ಹಲವು ದಿನಗಳಿಂದ ಬಳಸಿದ್ದು, ಬಳಕೆಗೆ ಸುಲಭ ಎಂಬುದು ಅರಿವಿಗೆ ಬಂದಿದೆ. ಕನ್ನಡ ಟೈಪಿಂಗ್ ಸಾಧ್ಯವಿಲ್ಲ ಎಂಬ ಕಾರಣಕ್ಕಾಗಿಯೇ ಐಫೋನ್ ಬಳಕೆದಾರರು ಹೆಚ್ಚಾಗಿ ಕಂಗ್ಲಿಷನ್ನೇ ಬಳಸುತ್ತಿದ್ದರು. ಈಗ ಅದರ ಅಗತ್ಯವಿಲ್ಲ.

ಇದನ್ನು ಎನೇಬಲ್ ಮಾಡಲು ಹೀಗೆ ಮಾಡಿ: ಸೆಟ್ಟಿಂಗ್ಸ್‌ನಲ್ಲಿ ಜನರಲ್ > ಕೀಬೋರ್ಡ್ > ಕೀಬೋರ್ಡ್ಸ್ ಎಂಬುದನ್ನು ಆಯ್ಕೆ ಮಾಡಿಕೊಳ್ಳಿ. ಅಲ್ಲಿಯೇ ಹೊಸ ಕೀಬೋರ್ಡ್ ಸೇರಿಸಿಕೊಳ್ಳುವ ಬಟನ್ ಕಾಣಿಸುತ್ತದೆ. ಅದನ್ನು ಒತ್ತಿ ಕನ್ನಡ ಸರ್ಚ್ ಮಾಡಿದಾಗ, ಎರಡು ಕೀಲಿಮಣೆ ವಿನ್ಯಾಸಗಳ ಆಯ್ಕೆ ಗೋಚರಿಸುತ್ತದೆ. 'ಟ್ರಾನ್ಸ್‌ಲಿಟರೇಶನ್' ಅಥವಾ 'ಕನ್ನಡ-ಸ್ಟ್ಯಾಂಡರ್ಡ್' (ಇದು ಇನ್‌ಸ್ಕ್ರಿಪ್ಟ್ ಲೇಔಟ್ ಹೊಂದಿರುತ್ತದೆ). ಟ್ರಾನ್ಸ್‌ಲಿಟರೇಶನ್ ಆಯ್ಕೆ ಮಾಡಿಕೊಂಡು, ಕನ್ನಡದಲ್ಲಿ ಟೈಪ್ ಮಾಡಿಕೊಳ್ಳಬೇಕಿದ್ದರೆ ಆನ್‌ಸ್ಕ್ರೀನ್ ಕೀಬೋರ್ಡ್‌ನ ಕೆಳ ಎಡ ಭಾಗದಲ್ಲಿ ಕಾಣಿಸುವ ಗ್ಲೋಬ್ (ಭೂಗೋಳ) ಬಟನ್ ಒತ್ತಿದರಾಯಿತು. ಇಂಗ್ಲಿಷಲ್ಲಿ ಟೈಪ್ ಮಾಡಬೇಕಾದರೆ ಮರಳಿ ಗ್ಲೋಬ್ ಬಟನ್ ಒತ್ತಿದರಾಯಿತು.

ಇದಕ್ಕೆ ಹೊರತಾಗಿ ಐಫೋನ್‌ಗಳಲ್ಲಿ ಕನ್ನಡ ಟೈಪಿಂಗ್ ಸುಲಭವಾಗಿಸುವ ಸಾಕಷ್ಟು ಖಾಸಗಿ ಕೀಬೋರ್ಡ್‌ಗಳೂ ಇವೆ. ಜನಪ್ರಿಯವಾಗಿರುವ ಜಸ್ಟ್ ಕನ್ನಡ ಈಗ ಮರಳಿ ಆ್ಯಪ್ ಸ್ಟೋರ್‌ನಲ್ಲಿ ಸೇರಿಕೊಂಡಿದೆ. ಪದ ಕನ್ನಡವೂ ಇದೆ. ಇದಲ್ಲದೆ, 'ತೇಜಸ್ವಿ' ಕನ್ನಡ ಎಂಬ ಕೀಬೋರ್ಡ್ ಚೆನ್ನಾಗಿದೆ. ಇಂಡಿಕ್ ಕೀಬೋರ್ಡ್, ಸಂಗಮ್, ದೇಶ್ ಕನ್ನಡ - ಇವುಗಳನ್ನು ಕೂಡ ಐಫೋನ್ ಬಳಕೆದಾರರು ಕನ್ನಡ ಟೈಪಿಂಗ್ ಮಾಡಲು ಉಪಯೋಗಿಸುತ್ತಿದ್ದಾರೆ.

ಹೆಚ್ಚಿನ ಆ್ಯಪ್‌ಗಳು ಇಂಗ್ಲಿಷಿನ QWERTY ಕೀಬೋರ್ಡ್ ವಿನ್ಯಾಸ ಶೈಲಿಯನ್ನೇ ಅನುಸರಿಸುವ ಕೆ.ಪಿ. ರಾವ್ (ನುಡಿ/ಕ.ಗ.ಪ) ಎಂಬ ಫೋನೆಟಿಕ್ (ಧ್ವನ್ಯಾತ್ಮಕ) ಮಾದರಿಯಲ್ಲಿ ಟೈಪಿಂಗ್‌ಗೆ ಅನುಕೂಲ ಮಾಡಿಕೊಡುತ್ತವೆ. ಮತ್ತೆ ಕೆಲವು ಹಿಂದಿನಿಂದಲೂ ಬಳಕೆಯಲ್ಲಿರುವ 'ಇನ್‌ಸ್ಕ್ರಿಪ್ಟ್' (inscript) ಮಾದರಿಯ ಕೀಬೋರ್ಡ್ ವಿನ್ಯಾಸದಲ್ಲಿರುತ್ತವೆ. ನಿಮಗೆ ಟೈಪ್ ಮಾಡಲು ಯಾವುದು ಅನುಕೂಲವೋ ಅದನ್ನು ಪ್ರಯತ್ನಿಸಬಹುದು. ಈಗಿನ ಹೆಚ್ಚಿನ ಆ್ಯಪ್‌ಗಳು ನಾವು ಟೈಪ್ ಮಾಡುತ್ತಿರುವಂತೆಯೇ ಹಲವಾರು ಪದಗಳನ್ನು ಅಲ್ಲೇ ತೋರಿಸುತ್ತವೆ (ಊಹಾತ್ಮಕ ಪದ-ಸಲಹೆ). ನಾವು ಟೈಪ್ ಮಾಡಬೇಕೆಂದಿರುವವನ್ನು ಆಯ್ಕೆ ಮಾಡಿಕೊಂಡರೆ, ಬರವಣಿಗೆ ವೇಗವಾಗುತ್ತದೆ.

ಒಟ್ಟಿನಲ್ಲಿ ಸ್ಮಾರ್ಟ್‌ಫೋನ್‌ಗಳಲ್ಲಿ ಕನ್ನಡ ಟೈಪ್ ಮಾಡುವುದು ತೀರಾ ಸುಲಭ. ಇನ್ನಂತೂ ನೆಪ ಹೇಳುವಂತೆಯೇ ಇಲ್ಲ. ಕಂಗ್ಲಿಷ್ ಬಿಟ್ಟು ಕನ್ನಡದಲ್ಲೇ ಟೈಪ್ ಮಾಡುತ್ತೇನೆಂದು ಈ ಕನ್ನಡ ರಾಜ್ಯೋತ್ಸವ ದಿನದಿಂದಲೇ ಶುರು ಹಚ್ಚಿಕೊಳ್ಳೋಣ. ❖



ಆ್ಯಪಲ್ ಐಫೋನ್‌ನಲ್ಲಿರುವ ಕನ್ನಡ ಇನ್‌ಸ್ಕ್ರಿಪ್ಟ್ ಹಾಗೂ ಟ್ರಾನ್ಸ್‌ಲಿಟರೇಶನ್ ಕೀಬೋರ್ಡ್

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಸಮಾಜ ವಿಜ್ಞಾನ : ಇತಿಹಾಸ

ಅಧ್ಯಾಯ:1 ಭಾರತಕ್ಕೆ ಯುರೋಪಿಯನ್ನರ ಆಗಮನ

ಬಿಟ್ಟ ಸ್ಥಳ ತುಂಬಿರಿ

18) ಸಲಾಬತ್ ಜಂಗನನ್ನು ಹೈದರಾಬಾದಿನ ನಿಜಾಮನಾಗಿ ಮಾಡಿ ಅವನ ರಕ್ಷಣೆಗಾಗಿ ಆಸ್ಥಾನದಲ್ಲಿ ಫ್ರೆಂಚರು ತಮ್ಮ ಸೈನ್ಯಸಹಿತ .... ಎಂಬ ಅಧಿಕಾರಿಯನ್ನು ನೇಮಿಸಿದ್ದರು

ಉತ್ತರ:- 'ಬುಸ್ಸಿ'

19) ಎರಡನೆಯ ಕಾರ್ನಾಟಿಕ್ ಯುದ್ಧವು .... ಒಪ್ಪಂದದೊಂದಿಗೆ ಮುಕ್ತಾಯವಾಯಿತು.

ಉತ್ತರ:- ಪಾಂಡಿಚೇರಿ

20) ಫ್ರೆಂಚರ................ಯು 1760ರಲ್ಲಿ ವಾಂಡಿವಾಷ್ ಕೋಟೆಗೆ ಮುತ್ತಿಗೆ ಹಾಕಲು ಪ್ರಯತ್ನಿಸಿದನು.

ಉತ್ತರ:- ಕೌಂಟ್- ಡಿ- ಲಾಲಿ

21) 1763ರಲ್ಲಿ ನಡೆದ 'ಪ್ಯಾರಿಸ್ ಒಪ್ಪಂದ'ದ ಪ್ರಕಾರ ಮೂರನೆಯ ಕಾರ್ನಾಟಿಕ್ ಯುದ್ಧ ಮುಕ್ತಾಯವಾಯಿತು ಮತ್ತು ಫ್ರೆಂಚರಿಗೆ ....ಯನ್ನು ಹಿಂತಿರುಗಿಸಲಾಯಿತು

ಉತ್ತರ:- ಪಾಂಡಿಚೇರಿ

22) ಸಿರಾಜ-ಉದ್-ದೌಲ್‌ನು ಫೋರ್ಟ್ .... ಯನ್ನು ಗೆದ್ದು ಕೆಲವರನ್ನು ಸೆರೆಹಿಡಿದನು. ಸಿರಾಜನು ಆಕ್ರಮಣದಲ್ಲಿ ಸೆರೆ ಸಿಕ್ಕಿದ 146 ಬ್ರಿಟಿಷರನ್ನು ಚಿಕ್ಕ ಕೊಠಡಿಯೊಂದರಲ್ಲಿ ಬಂಧಿಸಿಟ್ಟನು. ಅವರಲ್ಲಿ 123 ಮಂದಿ ಅಸುನೀಗಿದರು

ಉತ್ತರ:- ವಿಲಿಯಂ ಕೋಟೆ

23) ಯಾವುದೇ ತೆರಿಗೆ ಇಲ್ಲದೆ, ಸರಕುಗಳ ಆಮದು ಮತ್ತು ರಫ್ತು ಮಾಡಲು ಹಾಗೂ ಸರಕುಗಳ ಸಾಗಣೆ ಮಾಡಲು ಬೇಕಾದ ಪರವಾನಗಿ ಪತ್ರವೇ.........................

ಉತ್ತರ:- ದಸ್ತಕ್

24) 1757ರ .... ವಿಜಯದಿಂದಾಗಿ ಬಂಗಾಳದ ನವಾಬನ ಮೇಲೆ ಹಿಡಿತವನ್ನು ಸಾಧಿಸಿದನು. ಇದರಿಂದ ಅಪಾರ ಸಂಪತ್ತನ್ನು ಕ್ಲೈವನು ಸಂಪಾದಿಸಿದ್ದಲ್ಲದೇ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಗೂ ಲಾಭವನ್ನು ತಂದುಕೊಟ್ಟನು

ಉತ್ತರ:- ಪ್ಲಾಸಿ ಕದನದ

25) ಸಿರಾಜನು ಕೋಲ್ಕತ್ತಾದ ಮೇಲೆ ನಡೆಸಿದ ಆಕ್ರಮಣಕ್ಕೆ ಯುದ್ಧ ಪರಿಹಾರವಾಗಿ ಮೀರ್ ಜಾಫರನು ಕಂಪನಿಗೆ .... ರೂಪಾಯಿಗಳನ್ನು ನೀಡಿದನು.

ಉತ್ತರ:- ಹದಿನೇಳು ಕೋಟಿ ಎಪ್ಪತ್ತು ಲಕ್ಷ

26) ಯುವ ನವಾಬನಾದ ಸಿರಾಜ್-ಉದ್-ದೌಲನಿಗೂ ಮತ್ತು ಬ್ರಿಟಿಷರಿಗೂ 1757ರಲ್ಲಿ ಇತಿಹಾಸ ಪ್ರಸಿದ್ಧ ....ಕದನ ನಡೆಯಿತು.

ಉತ್ತರ:- ಪ್ಲಾಸಿ

27) ದಸ್ತಕ್‌ಗಳನ್ನು ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಯ .... ತಮ್ಮ ಖಾಸಗಿ ವ್ಯಾಪಾರ-ವ್ಯವಹಾರಕ್ಕಾಗಿ ದುರುಪಯೋಗಪಡಿಸಿಕೊಳ್ಳ ತೊಡಗಿದರು

ಉತ್ತರ:- ನೌಕರರು

28) ಈಸ್ಟ್ ಇಂಡಿಯಾ ಕಂಪನಿಗೆ ಬಂಗಾಳದ ಮೇಲಿನ 'ದಿವಾನಿ' ಹಕ್ಕನ್ನು .... ನೀಡಿದನು.

ಉತ್ತರ:- ಎರಡನೇ ಷಾ ಆಲಂ

29) ಷಾ ಆಲಂ ವಾರ್ಷಿಕ .... ರೂಪಾಯಿಗಳನ್ನು ಪಡೆದು ಬಂಗಾಳದ ಮೇಲಿನ ತನ್ನ ಹಕ್ಕನ್ನೆಲ್ಲ ಬಿಟ್ಟುಕೊಡಬೇಕಾಯಿತು

ಉತ್ತರ:- 26 ಲಕ್ಷ

30) ಔದ್‌ನ ನವಾಬನಾದ .... ಕಂಪನಿಗೆ ಯುದ್ಧನಷ್ಟ ಪರಿಹಾರವಾಗಿ 50 ಲಕ್ಷ ರೂಪಾಯಿಗಳನ್ನು ಕೊಡಬೇಕಾಯಿತು.

ಉತ್ತರ:- ಷುಜಾ-ಉದ್-ದೌಲನು

31) ಮೀರ್ ಖಾಸಿಮನು ಮೊಘಲ್ ದೊರೆ ಎರಡನೇ ಷಾ ಆಲಂ ಮತ್ತು ಔದ್‌ನ ನವಾಬ ಷುಜಾ-ಉದ್-ದೌಲರೊಂದಿಗೆ ಒಪ್ಪಂದ ಮಾಡಿಕೊಂಡನು. ಹೀಗಾಗಿ ಮೀರ್ ಖಾಸಿಂ ನೇತೃತ್ವದ ಮೂರೂ ಸಂಯುಕ್ತ ಸೇನೆಗಳು ಹೆಕ್ಟರ್ ಮನ್ರೋ ನೇತೃತ್ವದ ಬ್ರಿಟಿಷ್ ಸೇನೆಯನ್ನು ....ರಲ್ಲಿ ಬಕ್ಸರ್ ಎಂಬಲ್ಲಿ ಮುಖಾಮುಖಿಯಾದವು.

ಉತ್ತರ:- 1764

32) ಬ್ರಿಟಿಷರು ಮೀರ್ ಜಾಫರ್ ಅಸಮರ್ಥನೆಂದು ಬಿಂಬಿಸಿ ಅವನನ್ನು ನವಾಬ ಸ್ಥಾನದಿಂದ ಪದಚ್ಯುತಗೊಳಿಸಿ ಅವನ ಅಳಿಯನಾದ .... ನನ್ನು ಬಂಗಾಳದ ನವಾಬನೆಂದು ನೇಮಿಸಿದರು

ಉತ್ತರ:- ಮೀರ್ ಖಾಸಿಂ

****

ಅಧ್ಯಾಯ-2 ಬ್ರಿಟಿಷ್ ಆಳ್ವಿಕೆಯ ವಿಸ್ತರಣೆ

ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿ.

1. ಮೊದಲನೇ ಆಂಗ್ಲೋ-ಮರಾಠ ಯುದ್ಧದ ಅಂತ್ಯದಲ್ಲಿ ಮರಾಠರು ಮತ್ತು ಬ್ರಿಟಿಷರ ಮಧ್ಯ _______________ ಒಪ್ಪಂದ ಆಯಿತು.

2. ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೆ ತಂದವನು _____________ .

3. ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯನ್ನು _______________ ರಲ್ಲಿ ಜಾರಿಗೆ ತರಲಾಯಿತು.

4. ದತ್ತು ಮಕ್ಕಳಿಗೆ ಹಕ್ಕಿಲ್ಲವೆಂಬ ನೀತಿಯನ್ನು ಜಾರಿಗೆ ತಂದವನು _______________

ಉತ್ತರ:- 1) ಸಾಲ್‌ಬಾಯ್ ಒಪ್ಪಂದವನ್ನು 2) ವೆಲ್ಲೆಸ್ಲಿ 3) 1848 4) ಡಾಲ್‌ಹೌಸಿ

ಹೆಚ್ಚಿನ ಪ್ರಶ್ನೆಗಳು

5) ಬಕ್ಸಾರ್ ಕದನದಲ್ಲಿ ಸೋತು ಬ್ರಿಟಿಷರ ಆಶ್ರಯದಲ್ಲಿದ್ದ ಮೊಘಲ್ ಚಕ್ರವರ್ತಿ ಎರಡನೇ ಷಾ ಆಲಂನನ್ನು ....ರು ಕರೆತಂದು ಮತ್ತೆ ದೆಹಲಿಯ ಸಿಂಹಾಸನದಲ್ಲಿ ಕುಳ್ಳಿರಿಸಿದರು

ಉತ್ತರ:- ಮರಾಠ

6) ಸಹಾಯಕ ಸೈನ್ಯ ಪದ್ಧತಿಯ ನಿಬಂಧನೆಗೆ ಒಳಗಾದ ಮೊದಲ ರಾಜ್ಯ...............................

ಉತ್ತರ:- ಹೈದರಾಬಾದ್

7) ಮರಾಠ ಮನೆತನಗಳ ನಾಯಕರ ನಡುವಿನ ಸಂಘರ್ಷವೇ .... ಯುದ್ಧಕ್ಕೆ ಕಾರಣವಾಯಿತು

ಉತ್ತರ:- ಎರಡನೇ ಆಂಗ್ಲೋ-ಮರಾಠ ಯುದ್ಧ

8) ಪೇಶ್ವೆಯು ....ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿದನು. ಪೇಶ್ವೆಯು ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿದ್ದನು

ಉತ್ತರ:- ಬೆಸ್ಸಿನ್

9) 1839ರಲ್ಲಿ ರಣಜಿತ್ ಸಿಂಗನು ಮರಣ ಹೊಂದಿದ ನಂತರ ಪಂಜಾಬಿನಲ್ಲಿ ರಾಜಕೀಯ ಅರಾಜಕತೆ ತಲೆ ಎತ್ತಿತು. ....ರ 'ನಿರಂತರ ಮೈತ್ರಿ ಒಪ್ಪಂದ'ವನ್ನು ಉಲ್ಲಂಘಿಸಿ ಪಂಜಾಬನ್ನು ಆಕ್ರಮಿಸಲು ಬ್ರಿಟಿಷರು ಸಂಚು ರೂಪಿಸಿದರು.


ಉತ್ತರ:- 1809

10) 1780ರಲ್ಲಿ ಜನಿಸಿದ ರಣಜಿತ್ ಸಿಂಗನು ಸಿಖ್‌ರ 12 ಮಿಸ್ಲ್ (ಒಕ್ಕೂಟ)ಗಳಲ್ಲಿ ಒಂದಾದ ....ಮಿಸ್ಲ್‌ನ ನಾಯಕ ಮಹಾಸಿಂಗ್‌ನ ಮಗ.

ಉತ್ತರ:- ಸುಖರ್ ಚಾಕೀಯಾ

11) ರಣಜಿತ್ ಸಿಂಗನು .... ನಲ್ಲಿ ಫಿರಂಗಿಗಳನ್ನು ತಯಾರಿಸಲು ಎರಕ ಹೊಯ್ಯುವ ಕಾರ್ಖಾನೆಯನ್ನು ತೆರೆದನು.

ಉತ್ತರ:- ಲಾಹೋರ್



ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

II PUC BIOLOGY

REPRODUCTION

Human Reproduction

Multiple Choice questions:- ***(….Contd)***

32. Fertilizins are emitted by
A) Immature eggs B) Mature eggs
C) Sperms D) Polar bodies

33. During cleavage, what is true about cells?
A) Nucleocytoplasmic ratio remains unchanged
B) Size does not increase
C) There is less consumption of oxygen
D) The division is like meiosis.

34. Eye lens is formed from
A) Ectoderm B) Mesoderm
C) Endoderm
D) Ectoderm and mesoderm

35. Extrusion of second polar body from egg nucleus occurs
A) After entry of sperm before completion of fertilization
B) After completion of fertilization
C) Before entry of sperm
D) Without any relation of sperm entry

36. Termination of gastrulation is indicated by
A) Obliteration of blastocoels
B) Obliteration of archenteron
C) Closure of blastopore
D) Closure of neural tube

37. Which one is primary sex organ?
A) Scrotum B) penis
C) Testis D) Prostate

38. At the end of first meiotic division, male germ cell differentiates into
A) Secondary spermatocyte
B) Primary spermatocyte
C) Spermatogonium
D) spermatid

39. Extra-embryonic membranes of the mammalian embryo are divided from
A) Inner cell mass B) Trophoblast
C) Formative cells
D) Follicle cells

40. What is true about cleavage in fertilized egg of humans?
A) Meroblastic
B) Starts when egg reaches uterus
C) Starts in fallopian tubes
D) It is identical to normal mitosis

41. Which one is produced by mesoderm?
A) Heart and notochord
B) Heart and brain
C) Spinal cord and notochord
D) Brain and notochord

42. In a mammalian sperm, spirally arranged mitochondria around an axial filament occurs in
A) Middle B) Head
C) End piece of tail
D) Principal piece of tail

43. First step in activation of ovum during process of fertilization is
A) Formation of fertilization membrane
B) Fertilizin - antifertilizin reaction
C) Penetration of sperm in ovum
D) Formation of fertilization cone

44. A mature sperm has
A) A pair of flagella
B) A nucleus, an acrosome and a centriole
C) A nucleus, an acrosome, a pair of centrioles
D) A nucleus, an acrosome, a pair of centriole and a tail

45. Ovulation occurs under the influence of
A) LH B) FSH
C) Estrogen D) Progesterone

46. Somatic chromosome number is 40. What shall be chromosome number in the cells of seminiferous tubules?
A) 40 B) 20
C) 10 D) 40 and 20

47. In 28 day human ovarian cycle, ovulation occurs on
A) Day 1 B) Day 5
C) Day 14 D) Day 28

48. Part of sperm involved in penetrating egg membrane is
A) Tail ,,B) Acrosome
C) Allosome D) Autosome

49. Yellow corpus luteum occurs in a mammal in
A) Heart to initiate heart beat
B) Skin to function as pain receptor
C) Brain and connects cerebral hemispheres
D) Ovary for secretion of progesterone

50. Which one develops from endodermis?
A) Nervous system, urinary bladdery & eye
B) Liver, connective tissue and heart
C) Thymus, spinal cord and brain
D) Lever, pancreas and thymus/thyroid.

51. Fertilization is fusion of
A) Diploid spermatozoan with diploid ovum to form diploid zygote
B) Haploid spermatozoan with diploid ovum to form diploid zygote
C) Diploid spermatozoan with haploid ovum to form diploid zygote
D) Haploid spermatozoan with haploid ovum to form diploid zygote.

52. Prostate gland is present
A) On ureter B) On kidney
C) On testis D) around urethra

53. Prostate gland produces a secretion for
A) Attracting sperms
B) Stimulating sperm activity
C) Inhibiting sperm activity
D) None of the above

54. Corpus luteum develops from
A) Oocyte B) Nephrostome
C) Graafian follicle D) None of these


55. Germinal epithelium of ovary has
A) cuboidal cells B) columnar cells
C) squamous cells D) stratified cells

(Contd……..)


FINANCE BONANZA
Upto ₹12,500 ಕ್ಯಾಶ್ ಬ್ಯಾಕ್*
CASH BACK BONANZA
Upto ₹26,000 ಕ್ಯಾಶ್ ಬ್ಯಾಕ್*
AXIS BANK
SBI card
HDFC BANK
YES BANK
AMERICAN EXPRESS
FEDERAL BANK
IndusInd Bank
ಕನ್ನಡ ರಾಜ್ಯೋತ್ಸವ
SALE
ಸ್ಕ್ರಾಚ್ ಮಾಡಿ ಗೆಲ್ಲಿರಿ* ಭರವಸೆಯ
ಚಿನ್ನ ಮತ್ತು ಬೆಳ್ಳಿ ನಾಣ್ಯಗಳು
ಇಂದು ಮಾತ್ರ
ಮಳಿಗೆಗಳು 10AM – 10PM ವರೆಗು ತೆರೆದಿರುತ್ತದೆ
ಗಿರಿಯಾಸ್®
ಗೃಹಬಳಕೆ ವಸ್ತುಗಳ ವ್ಯಾಪಾರಿಗಳು
1971 ರಿಂದ
ಉಚಿತ*
FIRE-BOLTT
SMART CALLING WATCH WORTH ₹20000
EXCHANGE DHAMAKA
Upto ₹25,000
OFF ON EXCHANGE OF OLD TELEVISION, HOME APPLIANCES, LAPTOP & MOBILES*
FINANCE POWERED BY Groww
0% EMI
2,000 Cash Back
MIN PRODUCT VALUE ₹10,000
PAY JUST ₹1 TAKE HOME*
1 EMI FREE
ASSURED GIFTS ON ALL LG PRODUCTS*
BT SPEAKER
INDUCTION COOKER
STEAM IRON
KETTLE
DRY IRON
AU SMALL FINANCE BANK
7.5% INSTANT CASHBACK ON CC EMI* MIN SWIPE ₹15000 MAX CASH BACK UPTO ₹7500
YES BANK
7.5% INSTANT CASHBACK ON CC EMI* MIN SWIPE ₹15000 MAX CASH BACK UPTO ₹2500
HDFC BANK FESTIVE TREATS
10% INSTANT DISCOUNT ON CC & DC EMI* MIN SWIPE ₹20,000 MAX CASH BACK UPTO ₹2500
one card
5% INSTANT CASHBACK ON CC EMI* MIN SWIPE ₹15000 MAX CASH BACK UPTO ₹7500
DBS BANK
7.5% INSTANT CASHBACK ON CC EMI* MIN SWIPE ₹15000 MAX CASH BACK UPTO ₹3000
5% INSTANT CASHBACK ON FULL SWIPE* MIN SWIPE ₹15000 MAX CASH BACK UPTO ₹1500
LG 77 4K SMART OLED OLED77B3PSA
ಇ.ಎಮ್.ಐ ₹4,999
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
SAMSUNG 77 OLED 4K SMART TV 77S90C
ಇ.ಎಮ್.ಐ ₹6,990
ಉಚಿತ: ₹63,900 ಮೌಲ್ಯದ SAMSUNG SOUNDBAR
BIG SCREEN FESTIVAL
86 4K SMART TV ₹1,42,490* ಇ.ಎಮ್.ಐ ₹11,874
75 4K SMART TV ₹62,890* ಇ.ಎಮ್.ಐ ₹5,241
(PRICE AFTER CASH BACK)
SONY 65 4K ULTRA HD SMART OLED 65A80L
ಇ.ಎಮ್.ಐ ₹6,500
Haier 55 QLED SMART GOOGLE TV WITH FAR-FIELD & LOCAL DIMMING
ಇ.ಎಮ್.ಐ ₹2,994
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
Redmi 12 5G 6/128
OFFER PRICE ₹11,500* (PRICE AFTER CASH BACK)
ಇ.ಎಮ್.ಐ ₹1,917
OPPO F23-8/256 5G
OFFER PRICE ₹18,999* (PRICE AFTER CASH BACK)
ಇ.ಎಮ್.ಐ ₹1,584
vivo V29E 8/128 5G
OFFER PRICE ₹22,799* (PRICE AFTER CASH BACK)
ಇ.ಎಮ್.ಐ ₹3,799
iPhone 15
OFFER PRICE ₹74,990* (PRICE AFTER CASH BACK)
ಇ.ಎಮ್.ಐ ₹3,125
70% OFF ON DAMAGE PROTECTION
SAMSUNG Galaxy A54 | A34 5G
ಇ.ಎಮ್.ಐ ₹3,555*
ಇ.ಎಮ್.ಐ ₹2,555*
Galaxy A54 5G ₹41,999 ₹31,999*
Galaxy A34 5G ₹34,499 ₹22,999*
(PRICE INCLUDING CASH BACK*)
Lenovo Slim 1
Ryzen 3 7320
8GB, 512GB,
15.6 FHD
Win11 MSO 21
OFFER PRICE ₹33,990* (PRICE AFTER CASH BACK)
ಇ.ಎಮ್.ಐ ₹2,833
ಉಚಿತ: METAL BT SMART WATCH WORTH ₹7999
5% CASH BACK UPTO ₹5000 + PAY ₹1499 AND GET 1 YRS ADDITIONAL WARRANTY + DAMAGE PROTECTION WORTH ₹7999
HOT DEAL
i5-1035G1
8GB, 1TB HDD+ 256 GB SSD,
14" FHD, FINGER PRINT READER,
WIN 10 HOME
OFFER PRICE ₹34,290* (PRICE AFTER CASH BACK)
ಉಚಿತ: METAL BT SMART WATCH WORTH ₹7999
Lenovo Slim 3
Ryzen 5 7520U
8GB, 512GB SSD,
15.6" FHD, Backlit,
Win 11 MSO 21
OFFER PRICE ₹40,990* (PRICE AFTER CASH BACK)
ಇ.ಎಮ್.ಐ ₹3,416
ಉಚಿತ: METAL BT SMART WATCH WORTH ₹7999
5% CASH BACK UPTO ₹5000 + PAY ₹1499 AND GET 1 YRS ADDITIONAL WARRANTY + DAMAGE PROTECTION WORTH ₹7999
hp Victus Gaming 15
RYZEN 5 5600H,
16GB, 512GB SSD,
RADEON RX6500M 4GB GFX,
15.6 FHD, WIN 11
OFFER PRICE ₹51,990* (PRICE AFTER CASH BACK)
ಇ.ಎಮ್.ಐ ₹4,333
ಉಚಿತ: METAL BT SMART WATCH WORTH ₹7999 + PAY RS. 2499 AND GET GOODIES WORTH ₹10999
DELL Inspiron 15 3520
12th Gen i5-1235U,
16GB DDR4 /512GB SSD,
15.6" FHD/Win 11 + MSO 21,
WIN 11 MSO 21
OFFER PRICE ₹54,190* (PRICE AFTER CASH BACK)
ಇ.ಎಮ್.ಐ ₹4,516
ಉಚಿತ: METAL BT SMART WATCH WORTH ₹7999+UPTO ₹5000 CASHBACK + PAY ₹2499 AND GET GOODIES WORTH ₹12199
LG 635 Ltr SIDE BY SIDE L257CPZX
ಇ.ಎಮ್.ಐ ₹4,999
ಉಚಿತ: FIRE-BOLTT SMART CALLING WATCH WORTH ₹20000
SAMSUNG 653 Ltrs WI-FI ENABLED SMARTTHINGS SIDE BY SIDE INVERTER RS76CG8113SLHL
ಇ.ಎಮ್.ಐ ₹3,990
ಉಚಿತ: SAMSUNG 10 KG TOP LOADING WASHING MACHINE WORTH ₹32500
Godrej 564 Ltr SIDE BY SIDE
ಇ.ಎಮ್.ಐ ₹2,525*
ಉಚಿತ: FIRE-BOLTT SMART CALLING WATCH WORTH ₹20000
BOSCH 8 KG FRONT LOAD WASHING MACHINE
ಇ.ಎಮ್.ಐ ₹3,574
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
IFB 8 KG FRONT LOAD WASHING MACHINE
ಇ.ಎಮ್.ಐ ₹3,141
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
LG 14 PLACE DISHWASHER WITH INVERTER DIRECT DRIVE DFB532FP
ಇ.ಎಮ್.ಐ ₹2,999
Whirlpool 29Ltrs CONVECTION MICROWAVE OVEN
ಇ.ಎಮ್.ಐ ₹1,371
EUREKA FORBES WATER PURIFIERS:AQUAGUARD SUPERIO RO+UV+MTDS+SS +
Butterfly PRESSURE COOKERS:FRIENDLY COMBO PACK IB (2,3 & 5 LTR)
OFFER PRICE: ₹19,990
COMBI MRP: ₹31,249
KAFF CHIMNEYS:MAX BF 60 +
GAS STOVES:CTE584B+
NON STICK COOKWARE: ASPA 4 Pc SET
OFFER PRICE: ₹14,990
COMBI MRP: ₹27,970
Prestige GAS STOVES:SVACHH DUO / NEO 3 BURNER
PRESSURE COOKER:SS POPULAR 3 LTR
Butterfly
NON STICK COOKWARE:RAPID OMNI TAWA 250MM
OFFER PRICE: ₹8,790
COMBI MRP: ₹14,360
AVAILABLE RANGE OF Yale DIGITAL LOCK, CAMERAS &
LUMINOUS INVERTERS, BATTERIES
JBL SOUND BAR MK2
2.1 CHANNEL, (300W) BUILT-IN DOLBY DIGITAL, BLUETOOTH, HDMI &OPTICAL CONNECTIVITY, SOUNDBAR WITH 6.5" DOWN-FIRING WIRELESS SUBWOOFER,
PRICE ₹20,800*
MRP: ₹34,999
(PRICE AFTER CASH BACK)
EMI ₹1,733
LG SAMSUNG SONY Panasonic Haier IFB Godrej LLOYD Whirlpool BOSCH PHILIPS hp acer DELL Lenovo ASUS vivo oppo ONEPLUS mi iPhone JBL
BLUE STAR HAFELE Symphony HAVELLS USHA DAIKIN GENERAL Prestige VOLTAS VOLTAS·beko Butterfly Preethi VIJAYALAKSHMI ULTRA EUREKA FORBES pureit Livpure FABER KENSTAR Pigeon BAJAJ Crompton MAHARAJA WHITELINE V-GUARD ZEBRONICS KAFF
GIRIAS® THE CONSUMER DURABLE PEOPLE Since 1971
ಚನ್ನಪಟ್ಟಣ 9035023186 | ಹಿರಿಯೂರು 9035023185 | ತಿಪಟೂರು 90362 89548 | ಉತ್ತರಹಳ್ಳಿ 90362 89563 | ಹೊಸಕೋಟೆ 90362 89545 | ಕುಣಿಗಲ್ 90362 89546 | ಮಾದನಾಯಕನಹಳ್ಳಿ 90362 89550 | ಗೌರಿಬಿದನೂರು 90354 99244 | ಮಾಗಡಿರಸ್ತೆ 90362 89557 | ಹೆಸರಘಟ್ಟ ಮುಖ್ಯ ರಸ್ತೆ 90362 89551 | ಕೆಆರ್ ಪುರಂ 9019929881| ಅಂದ್ರಹಳ್ಳಿ 95918 35070 | ಚಿಕ್ಕಜಾಲ 95918 32080 | ಅತ್ತಿಬೆಲೆ 99009 77747 | ಹೆಬ್ಬಗೋಡಿ 90350 50023 | ಭಾರ್ತಿಯಾ ಮಾಲ್ 70900 00981 | ಮಂತ್ರಿ ಮಾಲ್ 95919 25353 | ಕೆಂಗೇರಿ 99009 77712 | ಸಹಕಾರನಗರ 90199 29882 | ದೊಡ್ಡಬಳ್ಳಾಪುರ 77602 12888 | ಎಲೆಕ್ಟ್ರಾನಿಕ್‌ಸಿಟಿ 9591103536 | ಕನಕಪುರ ಮುಖ್ಯ ರಸ್ತೆ 90082 20739 | ಜಾಲಹಳ್ಳಿ ಕ್ರಾಸ್ 9008220804 | ಆರ್.ಟಿ.ನಗರ 91080 65665 | ಬನಶಂಕರಿ 9035499199 | ಬನ್ನೇರುಘಟ್ಟ ರೋಡ್ 9035422500 | ಬಸವನಗುಡಿ 90354 99244 | ಗಾಂಧಿನಗರ 9035499311 | ಹೊಸೂರು ರಸ್ತೆ 9035499022 | ಹೆಚ್‌ಆರ್‌ಬಿಆರ್ ಲೇಔಟ್ 90354 99177 | ಇಂದಿರಾನಗರ 9035499255 | ಜಯನಗರ 90354 99077 | ಜೆ.ಪಿ.ನಗರ 9606922698 | ಕತ್ರಿಗುಪ್ಪೆ 9035499288 | ಕೋರಮಂಗಲ 90354 11200 | ಮಲ್ಲೇಶ್ವರಂ 41411663| ಮತ್ತಿಕೆರೆ 90352 22377 | ಮಾರತ್‌ಹಳ್ಳಿ 90354 99011 | ಮೈಸೂರು ರಸ್ತೆ 90354 99188 | ನಾಗರಭಾವಿ 90354 99191 | ನೆಲಮಂಗಲ 9606922798 | ರಾಜಾಜಿನಗರ 9035499144 | ಸದಾಶಿವನಗರ 9035499088 | ವಿಜಯನಗರ 96069 22795 | ಯಲಹಂಕ 9036001315 | ರಾಮನಗರ 9606922697 | ತುಮಕೂರು 90082 18009 | ಕೋಲಾರ 90082 20791 | ಚಿಕ್ಕಬಳ್ಳಾಪುರ 9591561669 | ಹೊಸೂರು 04344 243633
STORE LOCATOR
Terms & conditions apply. Finance at the sole discretion of the Finance company. Upto 26000 Cashback & 1 EMI off on selected brands and models. Cash Back / vouchers will be credited to the customer bank account / BFL wallet after clearing 3 EMI. Upto Rs.12,500 Bajaj cash back / vouchers valid only in selected cities & valid only on Selected models & Brands. EMI offers the above products based on 9,12,18,24 & fixed emi schemes. Price after Cash Back is valid on selected Bank CC & DB cards EMI Purchase only. Exchange offer valid on MRP and Product as to be in good working condition. Free smart watch valid on 20000 & above Purchase on select models & brands. GOLD/SILVER scratch card valid on 25000 & above Purchase on select models & brands.
147 ಮೆಗಾ ಸ್ಟೋರ್ಸ್. ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು.
SHOP ONLINE @ www.giriasindia.com
"like" us on facebook HTTPS://WWW.FACEBOOK.COM/GIRIAS.INDIA
WE SUPPORT ROUND TABLE INDIA LADIES CIRCLE INDIA


ಅದಿತಿ ಅಶೋಕ್


ಸುಬ್ಬು ಹೊಲೆಯಾರ್


ಮಿಮಿಕ್ರಿ ದಯಾನಂದ್


ನ್ಯಾಯಮೂರ್ತಿ ಗೋಪಾಲಗೌಡ

ವಿತರಕನಿಗೆ ಒಲಿದ ಪ್ರಶಸ್ತಿ

ಪ್ರಜಾವಾಣಿ ವಾರ್ತೆ


ಜವರಪ್ಪ

ಮೈಸೂರು: 'ಪ್ರಜಾವಾಣಿ ಹಾಗೂ ಡೆಕ್ಕನ್ ಹೆರಾಲ್ಡ್ ನನಗೆ ಅದೃಷ್ಟ ತಂದುಕೊಟ್ಟಿದೆ. ಈ ಪತ್ರಿಕೆಗಳಿಂದ ನನ್ನನ್ನು ಇತ್ತೀಚೆಗಷ್ಟೆ ಸನ್ಮಾನಿಸಲಾಗಿತ್ತು. ಈಗ ನನ್ನನ್ನು ಪ್ರತಿಷ್ಠಿತ ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆ ಮಾಡಿರುವುದಕ್ಕೆ ಬಹಳ ಖುಷಿಯೊಂದಿಗೆ ಹೆಮ್ಮೆಯೂ ಆಗುತ್ತಿದೆ' ಎಂದು ಇಲ್ಲಿನ ಪತ್ರಿಕಾ ವಿತರಕರಾದ ಜವರಪ್ಪ ಸಂತಸ ಹಂಚಿಕೊಂಡರು.

ರಾಜ್ಯದ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಪತ್ರಿಕಾ ವಿತರಕರನ್ನು ರಾಜ್ಯೋತ್ಸವ ಪ್ರಶಸ್ತಿಗೆ ಪರಿಗಣಿಸಿ ಗೌರವಿಸಲಾಗಿದೆ.

ಮಾಧ್ಯಮ ಕ್ಷೇತ್ರದ ಅವಿಭಾಜ್ಯ ಅಂಗವಾಗಿರುವ ಪತ್ರಿಕಾ ವಿತರಕ ಸಮುದಾಯದಿಂದ ಮೈಸೂರಿನ ಜವರಪ್ಪ ಅವರಿಗೆ ಪ್ರಶಸ್ತಿ ನೀಡಲಾಗಿದೆ. ಈ ಶ್ರಮಿಕರ ಕಾರ್ಯ ಕ್ಷಮತೆ ಮತ್ತು ಶ್ರಮವನ್ನು ರಾಜ್ಯ ಸರ್ಕಾರ ಮತ್ತು ಆಯ್ಕೆ ಸಮಿತಿ ಗುರುತಿಸಿದೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಜವರಪ್ಪ, 'ಸರ್ಕಾರವು ದಾಖಲೆ ಬರೆದಿದ್ದು, ಅದು ನನ್ನ ಹೆಸರಿನಲ್ಲಿ ಆಗಿದೆ ಎನ್ನುವುದು ಖುಷಿ. ನಾನು ಇದನ್ನು ನಿರೀಕ್ಷಿಸಿರಲಿಲ್ಲ. ನನ್ನ ಶ್ರಮ ಗುರುತಿಸಿದ್ದಕ್ಕಾಗಿ ಸರ್ಕಾರಕ್ಕೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ' ಎಂದರು.

68 ಸಾಧಕರಿಗೆ ಈ ಬಾರಿಯ ರಾಜ್ಯೋತ್ಸವ ಪ್ರಶಸ್ತಿ ಗರಿ

ಒಂದನೇ ಪುಟದಿಂದ


ಈ ಪೈಕಿ 176 ಮಂದಿಯ ಪಟ್ಟಿ ತಯಾರಿಸಲಾಯಿತು. ಅಂತಿಮವಾಗಿ 68 ಮಂದಿ ಸಾಧಕರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಯಿತು. ಈ ಬಾರಿ ಯಾವುದೇ ಪ್ರಭಾವಗಳಿಗೆ ಮಣಿಯಲಿಲ್ಲ. ಅರ್ಜಿ ಸಲ್ಲಿಸದ 5 ರಿಂದ 6 ಮಂದಿಯನ್ನು ಆಯ್ಕೆ ಮಾಡಲಾಗಿದೆ ಎಂದರು.


'ಅರ್ಜಿ ಕರೆದು ಪ್ರಶಸ್ತಿ ನೀಡುವ ಪರಿಪಾಟವನ್ನು ನಿಲ್ಲಿಸುವ ಬಗ್ಗೆ ಪರಿಶೀಲನೆ ನಡೆಸಲಾಗುವುದು' ಎಂದು ಅವರು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಶತಾಯುಷಿಗಳಾದ ರೂಪ್ಲಾ ನಾಯಕ್ ಮತ್ತು ಹುಸೇನಾಬಿ ಬುಡೆನ್ ಸಾಬ್ ಸಿದ್ದಿ, ಹಕ್ಕಿಪಿಕ್ಕಿ ಜನಾಂಗದ ಶಿವಂಗಿ ಶಣ್ಮರಿ, ಮಂಗಳಮುಖಿ ನರಸಪ್ಪಾ ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ಇದೇ ಮೊದಲ ಬಾರಿಗೆ ಪತ್ರಿಕಾ ವಿತರಕರೊಬ್ಬರನ್ನು (ಮೈಸೂರಿನ ಜವರಪ್ಪ) ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಒಟ್ಟು 13 ಮಹಿಳೆಯರು ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ ಎಂದು ತಂಗಡಗಿ ಹೇಳಿದರು.

ಕೊಪ್ಪಳ ಜಿಲ್ಲೆಯ ಹಂದ್ರಾಳದ ಹುಚ್ಚಮ್ಮ ಬಸಪ್ಪ ಚೌದ್ರಿ ತಮ್ಮ ಎರಡು ಎಕರೆ ಭೂಮಿಯನ್ನು ಶಾಲೆಗಾಗಿ ದಾನ ಮಾಡಿದರು. ಪತಿಯನ್ನು ಕಳೆದುಕೊಂಡ ಮತ್ತು ಮಕ್ಕಳಿಲ್ಲದ ಈಕೆ ಶಾಲೆಯಲ್ಲಿ ಬಿಸಿಯೂಟ ತಯಾರಿಸುವ ಕೆಲಸ ಮಾಡುತ್ತಿದ್ದರು. ಶಾಲಾ ಮಕ್ಕಳ ಅಭ್ಯುದಯಕ್ಕಾಗಿ ಭೂಮಿಯನ್ನು ದಾನ ಮಾಡಿರುವುದು ದೊಡ್ಡ ಆದರ್ಶ. ಅಲ್ಲಿ ಹಲವು ಶ್ರೀಮಂತರು ಇದ್ದರೂ ಯಾರೂ ಇಂತಹ ಕೆಲಸಕ್ಕೆ ಮುಂದಾಗಿಲ್ಲ ಎಂದು ಸಚಿವರು ತಿಳಿಸಿದರು.

ಮಾರ್ಥಾ ಜಾಕಿಮೋವಿಚ್ ಪೋಲೆಂಡ್ ದೇಶದಲ್ಲಿ ಜನಿಸಿದವರು. ಕರ್ನಾಟಕ ಕಂಡ ಶ್ರೇಷ್ಠ ಕಲಾ ವಿಮರ್ಶಕಿ. ಇವರ ಅಪ್ಪ-ಅಮ್ಮ ಇಬ್ಬರೂ ಕಲಾ ಇತಿಹಾಸಕಾರರು. 1984ರಲ್ಲಿ ಇವರು ಬೆಂಗಳೂರಿಗೆ ಬಂದು ನೆಲೆಸಿದ ಬಳಿಕ 'ಡೆಕ್ಕನ್ ಹೆರಾಲ್ಡ್', 'ದಿ ಹಿಂದೂ' ಮತ್ತು 'ಟೈಮ್ಸ್ ಆಫ್ ಡೆಕ್ಕನ್' ಪತ್ರಿಕೆಗಳಲ್ಲಿ ಮೂರು ದಶಕಗಳಿಗೂ ಹೆಚ್ಚು ಕಲಾ ವಿಮರ್ಶೆಗಳನ್ನು ಬರೆದಿದ್ದಾರೆ. ಇವರು ಕರ್ನಾಟಕ ಲಲಿತಕಲಾ ಅಕಾಡೆಮಿಯ ಗೌರವ ಪ್ರಶಸ್ತಿಗೂ ಪಾತ್ರರಾಗಿದ್ದಾರೆ ಎಂದರು.


ನಿಜಗುಣಾನಂದ ಸ್ವಾಮೀಜಿ


ಸಿದ್ದಪ್ಪ ದಳವಾಯಿ

ರಾಜ್ಯೋತ್ಸವ ಪ್ರಶಸ್ತಿ ಪಟ್ಟಿ

ಸಂಗೀತ
- ಡಾ.ನಯನ ಎಸ್. ಮೋರೆ (ಬೆಂಗಳೂರು)
- ನೀಲಾ ಎಂ. ಕೊಡ್ಲಿ (ಧಾರವಾಡ)
- ಶಬ್ಬೀರ್ ಅಹಮದ್ (ಬೆಂಗಳೂರು)
- ಡಾ.ಎಸ್.ಬಾಳೇಶ ಭಜಂತ್ರಿ (ಬೆಳಗಾವಿ)

ಚಲನಚಿತ್ರ
- ಡಿಂಗ್ರಿ ನಾಗರಾಜ (ಬೆಂಗಳೂರು)
- ಬಿ.ಜನಾರ್ದನ (ಬ್ಯಾಂಕ್ ಜನಾರ್ದನ) (ಬೆಂಗಳೂರು)

ರಂಗಭೂಮಿ
- ಎ.ಜಿ. ಚಿದಂಬರ ರಾವ್ ಜಂಬೆ (ಶಿವಮೊಗ್ಗ)
- ಪಿ. ಗಂಗಾಧರ ಸ್ವಾಮಿ (ಮೈಸೂರು)
- ಹೆಚ್.ಬಿ. ಸರೋಜಮ್ಮ (ಧಾರವಾಡ)
- ತಯ್ಯಬಖಾನ್ ಎಂ ಇನಾಮದಾರ (ಬಾಗಲಕೋಟೆ)
- ಡಾ. ವಿಶ್ವನಾಥ್ ವಂಶಾಕೃತ ಮಠ (ಬಾಗಲಕೋಟೆ)
- ಪಿ. ತಿಪ್ಪೇಸ್ವಾಮಿ (ಚಿತ್ರದುರ್ಗ)

ಶಿಲ್ಪಕಲೆ/ಚಿತ್ರಕಲೆ/ಕರಕುಶಲ
- ಟಿ. ಶಿವಶಂಕರ್ (ದಾವಣಗೆರೆ)
- ಕಾಳಪ್ಪ ವಿಶ್ವಕರ್ಮ (ರಾಯಚೂರು)
- ಮಾರ್ಥಾ ಜಾಕಿಮೋವಿಚ್ (ಬೆಂಗಳೂರು)
- ಪಿ. ಗೌರಯ್ಯ (ಮೈಸೂರು)

ಯಕ್ಷಗಾನ / ಬಯಲಾಟ
- ಅರ್ಗೋಡು ಮೋಹನದಾಸ್ ಶೆಣೈ (ಉಡುಪಿ)
- ಕೆ. ಲೀಲಾವತಿ ಬೈಪಾಡಿತ್ತಾಯ (ದಕ್ಷಿಣ ಕನ್ನಡ)
- ಕೇಶಪ್ಪ ಶಿಳ್ಳೆಕ್ಯಾತರ (ಕೊಪ್ಪಳ)
- ದಳವಾಯಿ ಸಿದ್ದಪ್ಪ (ಹಂದಿಜೋಗಿ) (ವಿಜಯನಗರ)

ಜಾನಪದ
- ಹುಸೇನಾಬಿ ಬುಡೆನ್ ಸಾಬ್ ಸಿದ್ದಿ (ಉತ್ತರ ಕನ್ನಡ)
- ಶಿವಂಗಿ ಶಣ್ಮರಿ (ದಾವಣಗೆರೆ)
- ಮಹದೇವು (ಮೈಸೂರು)
- ನರಸಪ್ಪಾ (ಬೀದರ್)
- ಶಕುಂತಲಾ ದೇವಲಾನಾಯಕ (ಕಲಬುರಗಿ)
- ಎಚ್. ಕೆ.ಕಾರಮಂಚಪ್ಪ (ಬಳ್ಳಾರಿ)
- ಡಾ ಶಂಭು ಬಳಿಗಾರ (ಗದಗ)
- ವಿಭೂತಿ ಗುಂಡಪ್ಪ (ಕೊಪ್ಪಳ)
- ಚೌಡಮ್ಮ (ಚಿಕ್ಕಮಗಳೂರು)

ಸಮಾಜಸೇವೆ
- ಹುಚ್ಚಮ್ಮ ಬಸಪ್ಪ ಚೌದ್ರಿ (ಕೊಪ್ಪಳ)
- ಚಾಮರಾಡಿ ಹಸನಬ್ಬ (ದಕ್ಷಿಣ ಕನ್ನಡ)
- ಕೆ.ರೂಪ್ಲಾ ನಾಯಕ್ (ದಾವಣಗೆರೆ)
- ನಿಜಗುಣಾನಂದ ಸ್ವಾಮೀಜಿ, ನಿಷ್ಕಲಮಂಟಪ (ಬೆಳಗಾವಿ)
- ನಾಗರಾಜು. ಜಿ (ಬೆಂಗಳೂರು)

ಆಡಳಿತ
- ಜಿ.ವಿ ಬಲರಾಮ್ (ತುಮಕೂರು)

ವೈದ್ಯಕೀಯ
- ಡಾ.ಸಿ.ರಾಮಚಂದ್ರ (ಬೆಂಗಳೂರು)
- ಡಾ.ಪ್ರಶಾಂತ್ ಶೆಟ್ಟಿ (ದಕ್ಷಿಣ ಕನ್ನಡ)

ಸಾಹಿತ್ಯ
- ಪ್ರೊ. ಸಿ. ನಾಗಣ್ಣ (ಚಾಮರಾಜನಗರ)
- ಸುಬ್ಬು ಹೊಲೆಯಾರ್ (ಎಚ್.ಕೆ.ಸುಬ್ಬಯ್ಯ) (ಹಾಸನ)
- ಸತೀಶ ಕುಲಕರ್ಣಿ (ಹಾವೇರಿ)
- ಲಕ್ಷ್ಮೀಪತಿ ಕೋಲಾರ (ಕೋಲಾರ)
- ಪರಪ್ಪ ಗುರುಪಾದಪ್ಪ ಸಿದ್ದಾಪುರ (ವಿಜಯನಗರ)
- ಡಾ. ಕೆ. ಷರೀಫಾ (ಬೆಂಗಳೂರು)

ಶಿಕ್ಷಣ
- ರಾಮಪ್ಪ (ರಾಮಣ್ಣ) ಹವಳೆ (ರಾಯಚೂರು)
- ಕೆ. ಚಂದ್ರಶೇಖರ್ (ಕೋಲಾರ)
- ಕೆ.ಟಿ.ಚಂದ್ರು (ಮಂಡ್ಯ)

ಕ್ರೀಡೆ
- ದಿವ್ಯ ಟಿ.ಎಸ್. (ಕೋಲಾರ)
- ಅದಿತಿ ಅಶೋಕ್ (ಬೆಂಗಳೂರು)
- ಅಶೋಕ್ ಗದಿಗೆಪ್ಪ ಏಣಗಿ (ಧಾರವಾಡ)

ನ್ಯಾಯಾಂಗ
- ನ್ಯಾ. ವಿ. ಗೋಪಾಲಗೌಡ (ಚಿಕ್ಕಬಳ್ಳಾಪುರ)

ಕೃಷಿ-ಪರಿಸರ
- ಸೋಮನಾಥರೆಡ್ಡಿ ಪೂರ್ಮಾ (ಕಲಬುರಗಿ)
- ದ್ಯಾವನಗೌಡ ಟಿ. ಪಾಟೀಲ (ಧಾರವಾಡ)
- ಶಿವರೆಡ್ಡಿ ಹನುಮರೆಡ್ಡಿ ವಾಸನ (ಬಾಗಲಕೋಟೆ)

ಸಂಕೀರ್ಣ
- ಎ.ಎಂ ಮದರಿ (ವಿಜಯಪುರ)
- ಹಾಜಿ ಅಬ್ದುಲ್ಲಾ ಪರ್ಕಳ (ಉಡುಪಿ)
- ಮಿಮಿಕ್ರಿ ದಯಾನಂದ್ (ಮೈಸೂರು)
- ಡಾ. ಕಜ್ಜಿದಾನೆ ವಸಂತ ಭಾರದ್ವಾಜ್ (ಮೈಸೂರು)
- ಲೆ. ಜ. ಕೋದಂಡ ಪೂವಯ್ಯ ಕಾರ್ಯಪ್ಪ (ಕೊಡಗು)

ಮಾಧ್ಯಮ
- ದಿನೇಶ್ ಅಮೀನ್‌ಮಟ್ಟು (ದಕ್ಷಿಣ ಕನ್ನಡ)
- ಜವರಪ್ಪ (ಮೈಸೂರು)
- ಮಾಯಾ ಶರ್ಮಾ (ಬೆಂಗಳೂರು)
- ರಫೀ ಭಂಡಾರಿ (ವಿಜಯಪುರ)

ವಿಜ್ಞಾನ/ ತಂತ್ರಜ್ಞಾನ
- ಎಸ್. ಸೋಮನಾಥನ್ ಶ್ರೀಧರ್ ಪಣಿಕರ್ (ಬೆಂಗಳೂರು)
- ಪ್ರೊ. ಗೋಪಾಲನ್ ಜಗದೀಶ್ (ಚಾಮರಾಜನಗರ)

ಹೊರನಾಡು/ ಹೊರದೇಶ
- ಸೀತಾರಾಮ ಅಯ್ಯಂಗಾರ್
- ದೀಪಕ್ ಶೆಟ್ಟಿ
- ಶಶಿಕಿರಣ್ ಶೆಟ್ಟಿ

ಸ್ವಾತಂತ್ರ್ಯ ಹೋರಾಟಗಾರ
- ಪುಟ್ಟಸ್ವಾಮಿಗೌಡ (ರಾಮನಗರ)


ಸಂಘ ಸಂಸ್ಥೆಗಳು
- ಕರ್ನಾಟಕ ಸಂಘ (ಶಿವಮೊಗ್ಗ)
- ಬಿ.ಎನ್. ಶ್ರೀರಾಮ ಪುಸ್ತಕ ಪ್ರಕಾಶನ (ಮೈಸೂರು)
- ಮಿಥಿಕ್ ಸೊಸೈಟಿ (ಬೆಂಗಳೂರು)
- ಕರ್ನಾಟಕ ಸಾಹಿತ್ಯ ಸಂಘ (ಯಾದಗಿರಿ)
- ಮೌಲಾನಾ ಆಜಾದ್ ಶಿಕ್ಷಣ ಮತ್ತು ಸಮಾಜ ಕಲ್ಯಾಣ ಸಾಂಸ್ಕೃತಿಕ ಸಂಘ (ದಾವಣಗೆರೆ)
- ಮುಸ್ಲಿಂ ಶಿಕ್ಷಣ ಸಂಸ್ಥೆಗಳ ಒಕ್ಕೂಟ (ದಕ್ಷಿಣ ಕನ್ನಡ)
- ಸ್ನೇಹರಂಗ ಹವ್ಯಾಸಿ ಕಲಾ ಸಂಸ್ಥೆ (ಬಾಗಲಕೋಟೆ)
- ಚಿಣ್ಣರ ಬಿಂಬ (ಮುಂಬೈ)
- ಮಾರುತಿ ಜನಸೇವಾ ಸಂಘ (ದಕ್ಷಿಣ ಕನ್ನಡ)
- ವಿದ್ಯಾದಾನ ಸಮಿತಿ (ಗದಗ)

ಜೀವ ರಕ್ಷಕನ ಮುಡಿಗೆ ಪ್ರಶಸ್ತಿ

ಬೆಳ್ತಂಗಡಿ (ದಕ್ಷಿಣ ಕನ್ನಡ): ಅಪಾಯಕಾರಿಯಾದ ಚಾರ್ಮಾಡಿ ಘಾಟಿಯಲ್ಲಿ ಅಪಘಾತಗಳು ಸಂಭವಿಸಿದಾಗ ತಕ್ಷಣ ಸ್ಥಳಕ್ಕೆ ಧಾವಿಸಿ ಹಲವರನ್ನು ರಕ್ಷಿಸಿದ ಚಾರ್ಮಾಡಿ ಹಸನಬ್ಬ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ಒಲಿದಿದೆ.

'ಸಮಾಜ ಸೇವೆ ನಿಲ್ಲಿಸಬೇಡ, ಪ್ರಾಣ ರಕ್ಷಣೆಗಿಂತ ಮಿಗಿಲಾದ ಪುಣ್ಯದ ಕೆಲಸ ಬೇರೊಂದಿಲ್ಲ' ಎಂದು ತಾಯಿ ಹರಸಿದ ಮಾತಿಗೆ ವಿಧೇಯರಾಗಿ ಬದುಕುತ್ತಿರುವ ಹಸನಬ್ಬ, ಚಾರ್ಮಾಡಿಯಲ್ಲಿ ಹೋಟೆಲ್ ನಡೆಸುತ್ತಿದ್ದಾರೆ. ಹೆದ್ದಾರಿಯಲ್ಲಿ ಅಪಘಾತ, ಮತ್ತಿತರ ತುರ್ತು ಸಂದರ್ಭದಲ್ಲಿ ಸಹಾಯಹಸ್ತ ಚಾಚುತ್ತಾರೆ. ಘಾಟಿಯಲ್ಲಿ ಅಪಘಾತ ಸಂಭವಿಸಿದರೆ ಗಾಯಾಳುಗಳನ್ನು ಆಸ್ಪತ್ರೆಗೆ ಸಾಗಿಸುತ್ತಾರೆ. 1985ರಿಂದ ಈವರೆಗೆ 1,000ಕ್ಕೂ ಹೆಚ್ಚು ಜನರನ್ನು ರಕ್ಷಿಸಿದ್ದಾರೆ.

ಷೇರುಪೇಟೆ ವಹಿವಾಟು
238



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,140
ಇಂದಿನ ಅಂತ್ಯ	19,079
▼	61
ದಿನದ ಕನಿಷ್ಠ	19,056

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹565
12 ಮೊಟ್ಟೆಗೆ ₹73
ಮೈಸೂರು
100 ಮೊಟ್ಟೆಗೆ ₹570

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1550 (1560)
ಸೋಯಾ (ರಿಫೈನ್ಡ್)	₹915 (920)
ಸೂರ್ಯಕಾಂತಿ (ರಿಫೈನ್ಡ್)	₹915 (915)
ಪಾಮೋಲಿನ್	₹814 (818)

ಮುಂಬೈ ಧಾರಣೆ

ಶೇಂಗಾ
31-10-2023

ಜಾವಾ 70/80(ಹೊಸ)	10900-11000
ಜಾವಾ 80/90(ಹೊಸ)	10300-10400
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10500-10600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1560 (1570)
ಒಂದು ವಾರದ ಡೆಲಿವರಿ	1555 (1565)
ಸೋಯಾ ಕಚ್ಚಾ	860 (865)
ಪಾಮ್ ವಾರದ ಡೆಲಿವರಿ	816 (822)
ಸೂರ್ಯಕಾಂತಿ ಎಣ್ಣೆ ಕಚ್ಚಾ	850 (855)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)
ಅಪರಂಜಿ ಚಿನ್ನ 10ಗ್ರಾಂ 61,100 (61,100)
ಬೆಳ್ಳಿ ಕೆ.ಜಿ 72,150 (72,400)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಚಿನ್ನದ ಗಟ್ಟಿ, ನಾಣ್ಯಕ್ಕೆ ಹೆಚ್ಚು ಬೇಡಿಕೆ

2023ರ 3ನೇ ತ್ರೈಮಾಸಿಕದಲ್ಲಿ ಚಿನ್ನದ ಬೇಡಿಕೆ ಶೇ 10ರಷ್ಟು ಹೆಚ್ಚಳ: ಡಬ್ಲ್ಯುಜಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನದ ಗಟ್ಟಿ ಮತ್ತು ನಾಣ್ಯಗಳ ಮೇಲಿನ ಹೂಡಿಕೆಯು ಶೇ 20ರಷ್ಟು ಹೆಚ್ಚಾಗಿ 54.5 ಟನ್‌ಗಳಿಗೆ ಏರಿಕೆ ಕಂಡಿದೆ. 2015ರ ಬಳಿಕ ತ್ರೈಮಾಸಿಕವೊಂದರಲ್ಲಿ ಬಂದಿರುವ ಗರಿಷ್ಠ ಬೇಡಿಕೆ ಇದಾಗಿದೆ ಎಂದು ವಿಶ್ವ ಚಿನ್ನ ಸಮಿತಿಯು (ಡಬ್ಲ್ಯುಜಿಸಿ) ತಿಳಿಸಿದೆ.

ಮಂಗಳವಾರ ವರ್ಚುವಲ್ ಸುದ್ದಿಗೋಷ್ಠಿ ನಡೆಸಿದ ಡಬ್ಲ್ಯುಜಿಸಿಯ ಭಾರತದ ಸಿಇಒ ಸೋಮಸುಂದರಂ ಪಿ.ಆರ್. ಅವರು, ಕಳೆದ ವರ್ಷದ ಮೂರನೇ ತ್ರೈಮಾಸಿಕದಲ್ಲಿ 45.4 ಟನ್‌ನಷ್ಟು ಚಿನ್ನದ ಗಟ್ಟಿ ಮತ್ತು ನಾಣ್ಯಗಳಿಗೆ ಬೇಡಿಕೆ ಇತ್ತು ಎಂದು ಮಾಹಿತಿ ನೀಡಿದರು.

ಚಿನ್ನದ ಬೇಡಿಕೆ (ಟನ್‌ಗಳಲ್ಲಿ)

ಬೇಡಿಕೆ	2022 ಜುಲೈ -ಸೆಪ್ಟೆಂಬರ್	2023 ಜುಲೈ -ಸೆಪ್ಟೆಂಬರ್
ಚಿನ್ನಾಭರಣ	146.2	155.7
ಹೂಡಿಕೆ	45.4	54.5

ಭಾರತದಲ್ಲಿ ಚಿನ್ನದ ಬೇಡಿಕೆಯು 2023ರ ಮೂರನೇ ತ್ರೈಮಾಸಿಕದಲ್ಲಿ ಶೇ 10ರಷ್ಟು ಹೆಚ್ಚಾಗಿ 210 ಟನ್‌ಗಳಿಗೆ ತಲುಪಿದೆ. ಚಿನ್ನದ ದರ ತುಸು ಇಳಿಕೆ ಕಂಡಿರುವುದು ಮತ್ತು ದಕ್ಷಿಣ ಭಾರತದಲ್ಲಿ ಹಬ್ಬದ ಋತುವಿನಿಂದಾಗಿ ಈ ಪ್ರಮಾಣದ ಬೇಡಿಕೆ ಬಂದಿದೆ. 2022ರ ಮೂರನೇ ತ್ರೈಮಾಸಿಕದಲ್ಲಿ 191 ಟನ್‌ನಷ್ಟು ಚಿನ್ನಕ್ಕೆ ಬೇಡಿಕೆ ಬಂದಿತ್ತು ಎಂದು ಹೇಳಿದರು.

ಚಿನ್ನದ ಆಮದು



ಮರುಬಳಕೆ ಚಿನ್ನಕ್ಕೆ ಬೇಡಿಕೆಯು ಶೇ 20ರಷ್ಟು ಹೆಚ್ಚಾಗಿದ್ದು 19.3 ಟನ್‌ಗಳಷ್ಟಕ್ಕೆ ತಲುಪಿದೆ.

ಬೇಡಿಕೆಗೆ ಬೆಲೆ ಏರಿಕೆ ಅಡ್ಡಿ: ಹಬ್ಬದ ಋತು ಮತ್ತು ಮದುವೆ ಸಮಾರಂಭಗಳಿಂದಾಗಿ 2023ರ 4ನೇ ತ್ರೈಮಾಸಿಕದಲ್ಲಿ ಚಿನ್ನಾಭರಣ ಖರೀದಿ ಹೆಚ್ಚಾಗುವ ನಿರೀಕ್ಷೆ ಇದೆ. ಆದರೆ, ಜಾಗತಿಕ ಬಿಕ್ಕಟ್ಟು, ಹಣದುಬ್ಬರದಿಂದಾಗಿ ಚಿನ್ನದ ಬೆಲೆಯಲ್ಲಿ ತೀವ್ರ ಏರಿಕೆ ಆದರೆ ಆಗ ಬೇಡಿಕೆ ಮೇಲೆ ಪ್ರತಿಕೂಲ ಪರಿಣಾಮ ಆಗಲಿದೆ ಎಂದು ಸೋಮಸುಂದರಂ ಅಭಿಪ್ರಾಯಪಟ್ಟರು.

ಸಂಕ್ಷಿಪ್ತ ಸುದ್ದಿ

‘ರಿಲಯನ್ಸ್ ಎಸ್‌ಬಿಐ ಕಾರ್ಡ್’ ಬಿಡುಗಡೆ

ಬೆಂಗಳೂರು: ರಿಲಯನ್ಸ್ ರಿಟೇಲ್ ಕಂಪನಿಯು ಎಸ್‌ಬಿಐ ಕಾರ್ಡ್ ಜೊತೆಗೂಡಿ ‘ರಿಲಯನ್ಸ್ ಎಸ್‌ಬಿಐ ಕಾರ್ಡ್’ ಎನ್ನುವ ಕೊ–ಬ್ರ್ಯಾಂಡೆಡ್ ಕ್ರೆಡಿಟ್ ಕಾರ್ಡ್‌ಗಳನ್ನು ಬಿಡುಗಡೆ ಮಾಡಿದೆ.

ದಿನಸಿ, ಔಷಧ, ಎಲೆಕ್ಟ್ರಾನಿಕ್ಸ್ ಉಪಕರಣಗಳು, ಬಟ್ಟೆ ಹೀಗೆ ಎಲ್ಲ ರೀತಿಯ ಖರೀದಿ ವೇಳೆ ಈ ಕಾರ್ಡ್‌ಗಳನ್ನು ಬಳಸಿದರೆ ಉತ್ತಮ ರಿವಾರ್ಡ್ ಸಿಗಲಿದೆ ಎಂದು ಪ್ರಕಟಣೆ ತಿಳಿಸಿದೆ. ಮರುಬಳಕೆ ಮಾಡಬಹುದಾದ ಪ್ಲಾಸ್ಟಿಕ್ ಬಳಸಿ ಈ ಕಾರ್ಡ್ ಸಿದ್ಧಪಡಿಸಲಾಗಿದೆ. ರಿಲಯನ್ಸ್ ಎಸ್‌ಬಿಐ ಕಾರ್ಡ್ ಪ್ರೈಮ್‌ನ ವಾರ್ಷಿಕ ನವೀಕರಣ ಶುಲ್ಕ ₹2,999ರ ಜೊತೆಗೆ ತೆರಿಗೆ ಅನ್ವಿಸಲಿದೆ. ರಿಲಯನ್ಸ್ ಕಾರ್ಡ್‌ನ ಶುಲ್ಕ ₹499ರ ಜತೆಗೆ ತೆರಿಗೆ ಇರುತ್ತದೆ.

ಏರ್‌ಟೆಲ್ ಲಾಭ ಶೇ 37ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಭಾರ್ತಿ ಏರ್‌ಟೆಲ್ ಕಂಪನಿಯ ನಿವ್ವಳ ಲಾಭವು ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇ 37.5 ರಷ್ಟು ಇಳಿಕೆ ಕಂಡು ₹1,341 ಕೋಟಿಗೆ ತಲುಪಿದೆ. ನಿವ್ವಳ ಆದಾಯ ಶೇ 44.2 ರಷ್ಟು ಹೆಚ್ಚಾಗಿ ₹2,960 ಕೋಟಿಯಷ್ಟು ಆಗಿದೆ ಎಂದು ಕಂಪನಿ ತಿಳಿಸಿದೆ.

ಹೊಸ ಮ್ಯಾಕ್‌ಬುಕ್ ಪ್ರೊ: ನ.7ರಿಂದ ಲಭ್ಯ

ನವದೆಹಲಿ (ಪಿಟಿಐ): ಎಂ3 ಚಿಪ್‌ಸೆಟ್ ಹೊಂದಿರುವ ಆ್ಯಪಲ್‌ನ ಹೊಸ ಮ್ಯಾಕ್‌ಬುಕ್ ಪ್ರೊ ಲ್ಯಾಪ್‌ಟಾಪ್ ನವೆಂಬರ್ 7ರಿಂದ ಭಾರತವನ್ನೂ ಒಳಗೊಂಡು 27 ದೇಶಗಳಲ್ಲಿ ಖರೀದಿಗೆ ಲಭ್ಯವಾಗಲಿವೆ ಎಂದು ಕಂಪನಿಯು ತಿಳಿಸಿದೆ. 14 ಇಂಚಿನ ಲ್ಯಾಪ್‌ಟಾಪ್ ಬೆಲೆ ₹1.69 ಲಕ್ಷದಿಂದ ಆರಂಭ ಆಗಲಿದೆ ಎಂದು ಕಂಪನಿ ತಿಳಿಸಿದೆ.

ಐಒಸಿಗೆ ₹12,967 ಕೋಟಿ ಲಾಭ

ನವದೆಹಲಿ (ಪಿಟಿಐ): ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿ), ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹12,967 ಕೋಟಿಯಷ್ಟು ಲಾಭ ಗಳಿಸಿದೆ. 2022ರ ಜುಲೈ–ಸೆಪ್ಟೆಂಬರ್ ಅವಧಿಯಲ್ಲಿ ₹272 ಕೋಟಿಯಷ್ಟು ನಷ್ಟ ಆಗಿತ್ತು ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ಕಚ್ಚಾ ತೈಲ ದರ ಇಳಿಕೆಗೆ ಅನುಗುಣವಾಗಿ ಪೆಟ್ರೋಲ್ ಮತ್ತು ಡೀಸೆಲ್ ದರ ಹೆಚ್ಚಳ ಮಾಡದೇ ಇರುವುದರಿಂದ ಕಂಪನಿಗೆ ಈ ಪ್ರಮಾಣದ ಲಾಭ ಆಗಿದೆ. ಆದರೆ, ಕಳೆದ ವರ್ಷ ಕಚ್ಚಾ ತೈಲ ದರ ಗರಿಷ್ಠ ಮಟ್ಟದಲ್ಲಿ ಇದ್ದಾಗ ಇಂಧನ ದರ ಹೆಚ್ಚಿಸಿರಲಿಲ್ಲ. ಹೀಗಾಗಿ ಆಗ ಆಗಿದ್ದ ನಷ್ಟವನ್ನು ತುಂಬಿಕೊಳ್ಳಲಾಗಿದೆ ಎಂದು ಕಂಪನಿಯು ತಿಳಿಸಿದೆ.

2022ರ ಏಪ್ರಿಲ್–ಮಾರ್ಚ್ ಅವಧಿಯಲ್ಲಿ ಕಂಪನಿಯು ₹2,265 ಕೋಟಿಯಷ್ಟು ನಷ್ಟ ಅನುಭವಿಸಿತ್ತು. 2023ರ ಏಪ್ರಿಲ್–ಮಾರ್ಚ್ ಅವಧಿಯಲ್ಲಿ ದಾಖಲೆಯ ₹26,718 ಕೋಟಿಯಷ್ಟು ಲಾಭ ಗಳಿಸಿದೆ. ಇದು 2021–22ರಲ್ಲಿ ಕಂಡಿದ್ದ ₹24,184 ಕೋಟಿ ಲಾಭಕ್ಕಿಂತಲೂ ಹೆಚ್ಚಿನದ್ದಾಗಿದೆ. ಕಂಪನಿ ವರಮಾನವು ₹2.28 ಲಕ್ಷ ಕೋಟಿಯಿಂದ ₹2.02 ಲಕ್ಷ ಕೋಟಿಗೆ ಇಳಿಕೆ ಕಂಡಿದೆ.

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4 ₹148.50
ಆರ್‌ಎಸ್‌ಎಸ್-5 ₹143
ಗುಡ್ ಲಾಟ್ ₹132
(ಪ್ರತಿ ಕೆ.ಜಿಗೆ)

ಮುದ್ರಮನೆ ಕಾಫಿ



(50 ಕೆಜಿಗೆ)

ಎಪಿ	₹10800
ಎಸಿ	₹6440
ಆರ್‌ಪಿ	₹9800
ಆರ್‌ಸಿ	₹5960

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ	
ಕೋಕ	15000-27500
ಹೊಸತು	27500-36500
ಹಳತು	43500-48500
ಚನ್ನಗಿರಿ	
ರಾಶಿ	45609-47800
ಚಿತ್ರದುರ್ಗ	
ಅಪಿ	46619-47029
ಬೆಟ್ಟೆ	36249-36679
ಕೆಂಪುಗೋಟು	30209-30610
ರಾಶಿ	46139-46569
ಹೊನ್ನಾವರ	
ಹಳೆಚಾಲಿ	37000-39000
ಹೊಸಚಾಲಿ	25000-34000
ಕಾರ್ಕಳ	
ಹಳತು	30000-48500
ಪುತ್ತೂರು	
ಕೋಕ	11000-25000
ಹೊಸತು	34000-43500
ಸಾಗರ	
ಬಿಳಿಗೋಟು	31129-31929
ಚಾಲಿ	36299-38699
ಕೋಕ	28989-33989
ರಾಶಿ	40000-47229
ಶಿವಮೊಗ್ಗ	
ಬೆಟ್ಟೆ	38509-53439
ಗೊರಬಾಲು	18000-38199
ಹೊಸತು	43300-46499
ರಾಶಿ	38839-48799
ಸರಕು	40159-83736
ಸಿದ್ದಾಪುರ	
ಬಿಳಿಗೋಟು	31699-34699
ಚಾಲಿ	37409-40339
ಕೋಕ	30670-33899
ಕೆಂಪುಗೋಟು	31899-33339
ರಾಶಿ	44099-46359
ತಟ್ಟಿಬೆಟ್ಟೆ	37649-41419
ಶಿರಸಿ	
ಬೆಟ್ಟೆ	36561-46099
ಬಿಳಿಗೋಟು	21218-36200
ಚಾಲಿ	36709-41671
ಕೆಂಪುಗೋಟು	26029-37121
ರಾಶಿ	45018-47608
ಯಲ್ಲಾಪುರ	
ಅಪಿ	57165-57165
ಬಿಳಿಗೋಟು	24899-36738
ಚಾಲಿ	36986-41299
ಕೋಕ	18212-32560
ಕೆಂಪುಗೋಟು	26099-35721
ರಾಶಿ	45050-54699
ತಟ್ಟಿಬೆಟ್ಟೆ	36969-44567

8 ವಲಯಗಳ ಬೆಳವಣಿಗೆ ಸೆಪ್ಟೆಂಬರ್‌ನಲ್ಲಿ ಶೇ 8.1

ಮೂಲಸೌಕರ್ಯ: 4 ತಿಂಗಳ ಕನಿಷ್ಠ

ನವದೆಹಲಿ (ಪಿಟಿಐ): ದೇಶದ ಪ್ರಮುಖ 8 ಮೂಲಸೌಕರ್ಯ ವಲಯಗಳ ಬೆಳವಣಿಗೆಯು ಸೆಪ್ಟೆಂಬರ್‌ನಲ್ಲಿ ಶೇ 8.1ಕ್ಕೆ ಇಳಿಕೆ ಕಾಣುವ ಮೂಲಕ ನಾಲ್ಕು ತಿಂಗಳ ಕನಿಷ್ಠ ಮಟ್ಟಕ್ಕೆ ತಲುಪಿದೆ.

ಮೇ ತಿಂಗಳಿನಲ್ಲಿ ವಲಯಗಳ ಬೆಳವಣಿಗೆಯು ಶೇ 5.2ರಷ್ಟು ಕನಿಷ್ಠ ಮಟ್ಟದಲ್ಲಿ ದಾಖಲಾಗಿತ್ತು. 2022ರ ಸೆಪ್ಟೆಂಬರ್‌ನಲ್ಲಿ ಈ ವಲಯಗಳು ಶೇ 8.3ರಷ್ಟು ಬೆಳವಣಿಗೆ ಕಂಡಿದ್ದವು.


ಸಂಸ್ಕರಣಾ ಉತ್ಪನ್ನಗಳು, ರಸಗೊಬ್ಬರ, ಸಿಮೆಂಟ್ ಮತ್ತು ವಿದ್ಯುತ್ ವಲಯಗಳ ಉತ್ಪಾದನೆಯು ಇಳಿಕೆ ಕಂಡಿರುವುದರಿಂದ ವಲಯದ ಒಟ್ಟಾರೆ ಬೆಳವಣಿಗೆ ಪ್ರಮಾಣ ತಗ್ಗಿದೆ ಎಂದು ಸರ್ಕಾರ ತಿಳಿಸಿದೆ. ಇದೇ ವರ್ಷದ ಆಗಸ್ಟ್‌ನಲ್ಲಿ 8 ವಲಯಗಳ ಬೆಳವಣಿಗೆಯು ಶೇ 12.5ರಷ್ಟು ಆಗಿತ್ತು.



ಸಿಮೆಂಟ್ ತಯಾರಿಕೆಯು ಆರು ತಿಂಗಳ ಕನಿಷ್ಠ ಮಟ್ಟಕ್ಕೆ (ಶೇ 4.7) ಇಳಿಕೆ ಕಂಡಿದೆ. ಕೈಗಾರಿಕಾ ಉತ್ಪಾದನೆ ಸೂಚ್ಯಂಕದ (ಐಐಪಿ) ಬೆಳವಣಿಗೆಯು ಸೆಪ್ಟೆಂಬರ್‌ನಲ್ಲಿ ಕಡಿಮೆ ಆಗುವ ಸಾಧ್ಯತೆ ಇದೆ ಎಂದು ಐಸಿಆರ್‌ಎ ಲಿಮಿಟೆಡ್‌ನ ಮುಖ್ಯ ಆರ್ಥಿಕ ತಜ್ಞೆ ಅದಿತಿ ನಾಯರ್ ಹೇಳಿದ್ದಾರೆ.

ಈ ಎಂಟು ಕೈಗಾರಿಕೆಗಳು ಐಐಪಿಗೆ ಶೇ 40.27ರಷ್ಟು ಕೊಡುಗೆ ನೀಡುತ್ತಿವೆ. ಈ ವಲಯಗಳ ಬೆಳವಣಿಗೆಯು ಕಳೆದ ವರ್ಷದ ಏಪ್ರಿಲ್–ಸೆಪ್ಟೆಂಬರ್‌ನಲ್ಲಿ ಶೇ 9.8ರಷ್ಟು ಇದ್ದಿದ್ದು, ಈ ವರ್ಷದ ಏಪ್ರಿಲ್–ಸೆಪ್ಟೆಂಬರ್ ಅವಧಿಯಲ್ಲಿ ಶೇ 7.8ಕ್ಕೆ ಇಳಿಕೆ ಆಗಿದೆ.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ರಂಗನಾಥ್, ಆರ್. ಟಿ. ನಗರ, ಬೆಂಗಳೂರು

● **ಪ್ರಶ್ನೆ: ನಾನು ಖಾಸಗಿ ಕಂಪನಿಯೊಂದರಲ್ಲಿ ಉದ್ಯೋಗ ಮಾಡುತ್ತಿದ್ದೇನೆ. ನನ್ನ ಮಗಳು ಎಂಜಿನಿಯರಿಂಗ್ ಪದವಿಯ ಕೊನೆಯ ಹಂತದಲ್ಲಿದ್ದಾಳೆ. ಆಕೆಗೆ ಮುಂದೆ ಎಂ.ಟೆಕ್ ಕಲಿಯುವ ಆಸಕ್ತಿ ಇದೆ. ಇಂತಹ ಉನ್ನತ ಶಿಕ್ಷಣಕ್ಕಾಗಿ ತುಂಬಾ ಮೊತ್ತ ಬೇಕಾಗುತ್ತದೆ. ಹೀಗಾಗಿ ಅಗತ್ಯವಿರುವ ಸಾಲ ಪಡೆದು ಓದಿಸುವ ನಿರೀಕ್ಷೆಯಲ್ಲಿದ್ದೇನೆ. ನನ್ನ ಮಾಸಿಕ ಆದಾಯ ₹66,000. ನಾನು ತೆರಿಗೆದಾರನಾಗಿದ್ದೇನೆ. ನನ್ನ ಪ್ರಶ್ನೆ ಏನೆಂದರೆ, ಆದಾಯ ತೆರಿಗೆಯಡಿ ಶಿಕ್ಷಣಕ್ಕೆ ಪಡೆದ ಸಾಲಕ್ಕೆ ವಿನಾಯಿತಿ ಇದೆ ಎಂದು ತಿಳಿದಿದ್ದೇನೆ. ಸಾಲ ಪಡೆದು ಓದಿಸುವ ಕಾರಣ ಪಾವತಿಸುವ ಇಎಂಐಗೆ ತೆರಿಗೆ ವಿನಾಯಿತಿ ಸಿಗುತ್ತದೆಯೇ? ಇಂತಹ ಸಾಲವನ್ನು ಯಾವ ರೀತಿ ಪಡೆಯಬೇಕು?**

ಉತ್ತರ: ಶಿಕ್ಷಣಕ್ಕೆ ಸಂಬಂಧಿಸಿ ಪಡೆದ ಸಾಲಗಳಿಗೆ ಆದಾಯ ತೆರಿಗೆಯಡಿ ಕೆಲವು ರಿಯಾಯಿತಿಗಳಿವೆ. ಸೆಕ್ಷನ್ 80ಇ ಅಡಿ, ಯಾವುದೇ ವ್ಯಕ್ತಿ ತನ್ನ ಸ್ವಂತ ಶಿಕ್ಷಣಕ್ಕೆ ಅಥವಾ ತನ್ನ ಮಕ್ಕಳ, ಪತಿ-ಪತ್ನಿಯ ಉನ್ನತ ಶಿಕ್ಷಣಕ್ಕೆ ಪಡೆದ ಸಾಲದ ಬಡ್ಡಿ ಪಾವತಿಗೆ ಸಂಬಂಧಿಸಿ ಈ ರಿಯಾಯಿತಿ ಪಡೆದುಕೊಳ್ಳಬಹುದು. ಸಾಲವನ್ನು ಹಣಕಾಸು ಸಂಸ್ಥೆ, ಬ್ಯಾಂಕ್ ಅಥವಾ ಮಾನ್ಯತೆ ಪಡೆದ ದತ್ತಿ ಸಂಸ್ಥೆಗಳಿಂದ ಪಡೆಯಬಹುದು. ಉನ್ನತ ಶಿಕ್ಷಣ ಯಾವುದೇ ವಿಭಾಗದಲ್ಲಾಗಿರಬಹುದು. ಆದರೆ ಅದು ಕೇಂದ್ರ ಸರ್ಕಾರ, ರಾಜ್ಯ ಸರಕಾರ ಅಥವಾ ಸ್ಥಳೀಯ ಆಡಳಿತ ಪ್ರಾಧಿಕಾರದಿಂದ ಮಾನ್ಯತೆ ಪಡೆದಿರಬೇಕು. ಸಾಲ ಪಡೆದು 8 ವರ್ಷಗಳ ತನಕ ಪಾವತಿಸುವ ಬಡ್ಡಿಗೆ ತೆರಿಗೆ ರಿಯಾಯಿತಿ ಇದೆ. ಒಂದು ವೇಳೆ, 8 ವರ್ಷಗಳ ಅವಧಿ ಮುಗಿದ ಬಳಿಕವೂ ಸಾಲದ ಮರುಪಾವತಿ ಮುಂದುವರಿದರೆ ಆ ವರ್ಷದಿಂದ ಪಾವತಿಸುವ ಬಡ್ಡಿಗೆ ತೆರಿಗೆ ರಿಯಾಯಿತಿ ಇರುವುದಿಲ್ಲ.

ಸೆಕ್ಷನ್ 80ಇ ಅಡಿ ತೆರಿಗೆ ಕಡಿತವನ್ನು ಪಡೆಯಲು ಬಯಸುವ ವ್ಯಕ್ತಿಯು ಸಾಲವನ್ನು ತೆಗೆದುಕೊಂಡ ಹಣಕಾಸು ಸಂಸ್ಥೆ ಅಥವಾ ಯಾವುದೇ ಅನುಮೋದಿತ ದತ್ತಿ ಸಂಸ್ಥೆಯಿಂದ ಸಾಲ ಪಡೆದುದಕ್ಕೆ ದಾಖಲೆಗಳನ್ನು ಹೊಂದಿರಬೇಕು. ಪ್ರತಿ ವರ್ಷ ಆಯಾ ಹಣಕಾಸು ವರ್ಷಕ್ಕೆ ಸಂಬಂಧಿಸಿ ಪಾವತಿಸಿದ ಶಿಕ್ಷಣ ಸಾಲದ ಅಸಲು ಮೊತ್ತ ಮತ್ತು ಬಡ್ಡಿ ಮೊತ್ತವನ್ನು ಪ್ರತ್ಯೇಕವಾಗಿ ದೃಢೀಕರಿಸಿದ ವಿವರವನ್ನೂ ಹೊಂದಿರಬೇಕು. ಇದರ ಆಧಾರದಲ್ಲಿ ಸಾಲದ ಬಡ್ಡಿ ಮೊತ್ತಕ್ಕೆ ವಿನಾಯಿತಿ ಪಡೆಯಬಹುದು. ಹೀಗಾಗಿ ಪಾವತಿಸುವ ಸಂಪೂರ್ಣ ಇಎಂಐ ಗೆ ವಿನಾಯಿತಿ ಸಿಗುವುದಿಲ್ಲ.

ನೀವು ಸಾಲದ ಬಗ್ಗೆ ಅಗತ್ಯ ದಾಖಲೆಗಳೊಂದಿಗೆ ಯಾವುದೇ ಸ್ಥಳೀಯ ಬ್ಯಾಂಕ್‌ಗಳಲ್ಲಿ ವಿಚಾರಿಸಿಕೊಳ್ಳಬಹುದು. ಇಲ್ಲಿ ನೀವು ಗಮನಿಸಬೇಕಾದ ಬಹು ಮುಖ್ಯ ಅಂಶವೆಂದರೆ, ನೀವು ಈ ರಿಯಾಯಿತಿ ಪಡೆಯಲು ಹಳೆಯ ತೆರಿಗೆ ಪದ್ಧತಿ ಆಯ್ಕೆ ಮಾಡಿಕೊಂಡರಷ್ಟೇ ಸಾಧ್ಯ. ಹೀಗಾಗಿ ಎರಡೂ ವಿಧಾನದ ಮೂಲಕ ತೆರಿಗೆ ಲೆಕ್ಕ ಹಾಕಿ ತುಲನೆ ಮಾಡಿಕೊಳ್ಳಿ. ನಿಮಗೆ ಕೆಲವೊಮ್ಮೆ ಸೆಕ್ಷನ್ 80ಇ ಇದರಡಿ ತೆರಿಗೆ ರಿಯಾಯಿತಿ ಇಲ್ಲದೆಯೂ ಹೊಸ ಪದ್ಧತಿ ಸೂಕ್ತವಾಗಲೂಬಹುದು. ಈ ಬಗ್ಗೆ ಪರಾಮರ್ಶಿಸಿ ತೆರಿಗೆ ಲೆಕ್ಕ ಹಾಕಿ.

ವಿನಯ್, ಹುಬ್ಬಳ್ಳಿ

● **ಪ್ರಶ್ನೆ: ನನ್ನ ಸಿಬಿಲ್ ಸ್ಕೋರ್ ಚೆನ್ನಾಗಿದ್ದು (750 +) ಯಾವುದೇ ವೈಯಕ್ತಿಕ ಸಾಲಗಳಿಲ್ಲ. ಆದರೆ ಎರಡು ವರ್ಷ ಹಿಂದೆ ನನ್ನ ತಂದೆ ಮನೆ ಸಾಲ ಪಡೆದಿದ್ದು ಅದಕ್ಕೆ ನಾನು ನಾಮಿನಿ ಆಗಿದ್ದೆ. ನಾನು ಈಗ ಕೃಷಿ ಭೂಮಿ ಖರೀದಿಸಬೇಕೆಂದಿದ್ದೇನೆ. ಇದಕ್ಕಾಗಿ ಬ್ಯಾಂಕ್ ಸಾಲ ಪಡೆಯಬೇಕೆಂದಿದ್ದೇನೆ. ನಾನು ಈಗಾಗಲೇ ಒಂದು ಸಾಲಕ್ಕೆ ನಾಮಿನಿ ಆಗಿರುವುದರಿಂದ ಅದನ್ನೂ ಪರಿಗಣಿಸುತ್ತಾರೆಯೇ? ನಾನು ಕೃಷಿ ಭೂಮಿ ಖರೀದಿಸಲು ಯಾವ ಸ್ಕೀಂ ಉತ್ತಮ ಹಾಗೂ ಕಡಿಮೆ ಬಡ್ಡಿಗೆ ಯಾವ ಬ್ಯಾಂಕಿನಿಂದ ಸಾಲ ಪಡೆಯಬಹುದು. ನಾವು ಈವರೆಗೆ ಯಾವುದೇ ಕೃಷಿ ಭೂಮಿ ಹೊಂದಿಲ್ಲ. ನಾನು ಬೆಂಗಳೂರಿನ ಒಂದು ಎಂಎನ್‌ಸಿ ಕಂಪನಿಯಲ್ಲಿ ಉದ್ಯೋಗ ಮಾಡುತ್ತಿದ್ದೇನೆ. ನನ್ನ ತಿಂಗಳ ಸಂಬಳ ₹70 ಸಾವಿರ. ಈಗ ನಾನು ಬ್ಯಾಂಕ್ ಸಾಲ ಪಡೆದು ₹25 ಲಕ್ಷ ಬೆಲೆಯೊಳಗಿನ ಎರಡು ಎಕರೆ ಭೂಮಿಯನ್ನು ಖರೀದಿಸಬೇಕೆಂದಿದ್ದೇನೆ.**

ಉತ್ತರ: ಸಾಮಾನ್ಯವಾಗಿ ಸಿಬಿಲ್ ಶ್ರೇಯಾಂಕವನ್ನು ಬ್ಯಾಂಕ್‌ಗಳು ತಮ್ಮ ಗ್ರಾಹಕರ ಆರ್ಥಿಕ ಕ್ಷಮತೆಯ ಮಾನದಂಡವಾಗಿ ಪರಿಗಣಿಸಿ ತಮ್ಮ ಸಾಲ ನೀಡುವ ನೀತಿಯ ಭಾಗವಾಗಿ ಗಣನೆಗೆ ತೆಗೆದುಕೊಳ್ಳುತ್ತವೆ. ಉತ್ತಮ ಶ್ರೇಯಾಂಕ ಹೊಂದಿದ್ದರೆ ಒಂದಷ್ಟು ಬಡ್ಡಿ ದರದಲ್ಲಿ ರಿಯಾಯಿತಿ, ಹೆಚ್ಚಿನ ಸಾಲದ ಮೊತ್ತ ಪಡೆಯುವ ಸಾಧ್ಯತೆ... ಇತ್ಯಾದಿ ಇರುತ್ತದೆ. ಆದರೆ ಇದುವೇ ಏಕೈಕ ಅಂಶವಲ್ಲ. ಅಲ್ಲಿ ಗ್ರಾಹಕರ ಆದಾಯ, ಉದ್ಯೋಗ ಹಾಗೂ ಅವರು ನೀಡುವ ಸಾಲಕ್ಕೆ ಇರುವ ಭದ್ರತೆಯನ್ನು ನೋಡಿಕೊಂಡು ಸಾಲ ನೀಡುತ್ತವೆ. ಹೀಗಾಗಿ ನಿಮ್ಮ ವಿಚಾರದಲ್ಲಿ ಕೇವಲ ಸಾಲ ಪಾತ್ರಕ್ಕೆ ಜಾಮೀನು ಅರ್ಜಿ ಸಲ್ಲಿಸಿದ ಮಾತ್ರಕ್ಕೆ ಯಾವುದೇ ಸಾಲ ಸಿಗದಿರುವ ಪ್ರಮೇಯ ಇರಲಾರದು.

ಇನ್ನು ನೀವು ಕೃಷಿ ಭೂಮಿ ಖರೀದಿ ಮಾಡುವ ಬಗ್ಗೆ ಹೇಳುವುದಾದರೆ, ಕಳೆದ ಕೆಲವು ವರ್ಷಗಳ ಹಿಂದೆ ಕೃಷಿಯ ಹಿನ್ನೆಲೆ ಇಲ್ಲದ ವ್ಯಕ್ತಿಗಳು ಕೃಷಿ ಭೂಮಿ ಖರೀದಿಸಲು ಇದ್ದ ಅನೇಕ ನಿಬಂಧನೆಗಳನ್ನು ಸರ್ಕಾರವು ಕರ್ನಾಟಕ ಭೂಸುಧಾರಣೆ ಕಾನೂನು ತಿದ್ದುಪಡಿ ಮಾಡುವ ಮೂಲಕ ತೊಡೆದು ಹಾಕಿದೆ. ಹೀಗಾಗಿ ಪ್ರಸ್ತುತ ಅಂತಹ ನಿರ್ದಿಷ್ಟ ತಡೆಗಳು ಇದ್ದಂತಿಲ್ಲ. ಈ ವಿಚಾರದಲ್ಲಿ ಇನ್ನೂ ಮುಂದುವರಿದು ಹೆಚ್ಚಿನ ಮಾಹಿತಿಗಾಗಿ ಅಧಿಕೃತ ಕಾನೂನು ಸಲಹೆಯನ್ನು ಪಡೆದುಕೊಳ್ಳಿ. ಕೃಷಿ ಭೂಮಿ ಖರೀದಿಗಾಗಿ ಕೆಲವು ರಾಷ್ಟ್ರೀಕೃತ ಬ್ಯಾಂಕ್‌ಗಳು ಸಾಲ ಕೊಡುತ್ತವೆ. ಆದರೆ, ಸಾಲದ ಅರ್ಹತೆ ಪಡೆಯಲು ಈಗಾಗಲೇ ಕೃಷಿಕರಾಗಿ ಅನುಭವ ಹಾಗೂ ಒಂದಷ್ಟು ಕೃಷಿ ಭೂಮಿ ಹೊಂದಿರುವ ದಾಖಲೆ ಕೊಡುವಂತೆ ಕೇಳಬಹುದು. ಹೀಗಾಗಿ ನೀವು ಖುದ್ದಾಗಿ ಸಮೀಪದ ಬ್ಯಾಂಕ್‌ಗಳನ್ನು ಸಂಪರ್ಕಿಸಿ ಅಧಿಕೃತ ಮಾಹಿತಿ ಪಡೆದುಕೊಳ್ಳಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001. ಇ–ಮೇಲ್: businessdesk@prajavani.co.in

ಉದ್ಯೋಗ ವಾಣಿ

ಚಾಲನೆ ವೇಳೆ ಮೊಬೈಲ್ ಬಳಕೆ: 3,395 ಮಂದಿ ಬಲಿ

ನವದೆಹಲಿ: ವಾಹನ ಚಾಲನೆ ಮಾಡುವ ವೇಳೆ ಮೊಬೈಲ್ ಬಳಕೆ ಮಾಡಿದ ಕಾರಣದಿಂದಾಗಿ ಕಳೆದ ವರ್ಷ ಸಂಭವಿಸಿದ ರಸ್ತೆ ಅಪಘಾತ ಪ್ರಕರಣಗಳಲ್ಲಿ ಒಟ್ಟಾರೆ 3,395 ಮಂದಿ ಮೃತಪಟ್ಟಿದ್ದಾರೆ ಎಂದು ಕೇಂದ್ರ ರಸ್ತೆ ಸಾರಿಗೆ ಸಚಿವಾಲಯ ತಿಳಿಸಿದೆ.

ಕೇಂದ್ರ ರಸ್ತೆ ಮತ್ತು ಸಾರಿಗೆ ಸಚಿವಾಲಯವು ಭಾರತದಲ್ಲಿ ರಸ್ತೆ ಅಪಘಾತಗಳು–2022 ವರದಿಯನ್ನು ಸಿದ್ಧಪಡಿಸಿದೆ. ಈ ಪ್ರಕಾರ ವಾಹನ ಚಾಲನೆ ವೇಳೆ ಮೊಬೈಲ್ ಬಳಕೆ ಮಾಡಿದ್ದರಿಂದಾಗಿ 7,558 ಅಪಘಾತ ಪ್ರಕರಣಗಳು ಸಂಭವಿಸಿದ್ದು, 6,255 ಮಂದಿ ಗಾಯಗೊಂಡಿದ್ದಾರೆ. 2021ರಲ್ಲಿ ಸಂಭವಿಸಿದ ಅಪಘಾತಗಳಿಗೆ ಹೋಲಿಸಿದರೆ, 2022ರಲ್ಲಿ ಮೊಬೈಲ್ ಬಳಕೆಯಿಂದ ಆದ ಅಪಘಾತ ಪ್ರಕರಣಗಳ ಸಂಖ್ಯೆ ಶೇ 15.7ರಷ್ಟು ಹೆಚ್ಚಾಗಿದ್ದು, ಸಾವಿನ ಸಂಖ್ಯೆಯು 13.8ರಷ್ಟು ಹೆಚ್ಚಳವಾಗಿದೆ ಎಂದು ಉಲ್ಲೇಖಿಸಲಾಗಿದೆ.

2021ರಲ್ಲಿ ವಾಹನಗಳ ಚಾಲನೆ ವೇಳೆ ಮೊಬೈಲ್ ಬಳಕೆಯಿಂದ 6,530 ರಸ್ತೆ ಅಪಘಾತಗಳು ಸಂಭವಿಸಿದ್ದು, 2,982 ಮಂದಿ ಬಲಿಯಾಗಿದ್ದು, 5,394 ಮಂದಿ ಗಾಯಗೊಂಡಿದ್ದರು.

ಈ ವರದಿ ಪ್ರಕಾರ 2022ರಲ್ಲಿ ಭಾರತದಲ್ಲಿ ರಸ್ತೆ ಅಪಘಾತ ಪ್ರಕರಣಗಳು ಶೇ 12ರಷ್ಟು ಹೆಚ್ಚಳವಾಗಿವೆ. ಪ್ರತಿ ಗಂಟೆಗೆ 53 ರಸ್ತೆ ಅಪಘಾತಗಳು ಸಂಭವಿಸುತ್ತಿದ್ದು, ಪ್ರತಿ ಗಂಟೆಗೆ 19 ಮಂದಿ ಸಾವನ್ನಪ್ಪುತ್ತಿದ್ದಾರೆ. ದ್ವಿಚಕ್ರ ವಾಹನ ಸವಾರರು ಹೆಲ್ಮೆಟ್ ಧರಿಸದೆ ವಾಹನ ಚಾಲನೆ ಮಾಡಿದ್ದರಿಂದಾಗಿ ಸಂಭವಿಸಿದ ಅಪಘಾತಗಳಲ್ಲಿ ಒಟ್ಟು 50,029 ಮಂದಿ ಬಲಿಯಾಗಿದ್ದು, ಇದರಲ್ಲಿ 35,692 ಮಂದಿ ಚಾಲನೆ ಮಾಡುತ್ತಿದ್ದವರಾದರೆ, 14,337 ಮಂದಿ ಹಿಂಬದಿ ಸವಾರರಾಗಿದ್ದಾರೆ. ಸೀಟ್ ಬೆಲ್ಟ್ ಧರಿಸದ ಕಾರಣ 16,715 ಮಂದಿ ಬಲಿಯಾಗಿದ್ದಾರೆ. ಮದ್ಯಸೇವನೆ ಮಾಡಿ ವಾಹನ ಚಾಲನೆ ಮಾಡಿದ್ದರಿಂದಾಗಿ 10,080 ಅಪಘಾತಗಳು ಸಂಭವಿಸಿದ್ದು, 4201 ಮಂದಿ ಮೃತಪಟ್ಟಿದ್ದಾರೆ, 8809 ಮಂದಿ ಗಾಯಗೊಂಡಿದ್ದಾರೆ ಎಂದು ಈ ವರದಿಯಲ್ಲಿ ತಿಳಿಸಲಾಗಿದೆ.

ಅತಿಹೆಚ್ಚು ರಸ್ತೆ ಅಪಘಾತಗಳು ಸಂಭವಿಸುವ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕ ಮೂರನೇ ಸ್ಥಾನದಲ್ಲಿದೆ. ಕರ್ನಾಟಕದಲ್ಲಿ 39,762 ರಸ್ತೆ ಅಪಘಾತಗಳು ಸಂಭವಿಸಿದ್ದು, 11,702 ಮಂದಿ ಮೃತಪಟ್ಟಿದ್ದಾರೆ. 2021ರಲ್ಲಿ ನಡೆದ 34,647 ಅಪಘಾತ ಪ್ರಕರಣಗಳಲ್ಲಿ 10,038 ಮಂದಿ ಬಲಿಯಾಗಿದ್ದರು ಎಂದು ವರದಿಯಲ್ಲಿ ತಿಳಿಸಲಾಗಿದೆ.

8 ಲಕ್ಷ ನಾಗರಿಕರು ಪಲಾಯನ

ದೇರ್ ಅಲ್–ಬಲಾ (ಎಪಿ): ಗಾಜಾದ ಉತ್ತರ ಭಾಗವನ್ನು ಕೇಂದ್ರವಾಗಿ ಇರಿಸಿಕೊಂಡು ಇಸ್ರೇಲ್ ಸೇನೆಯು ಹಮಾಸ್ ಬಂಡುಕೋರರ ಜೊತೆ ಮಂಗಳವಾರ ಸಂಘರ್ಷ ನಡೆಸಿತು. ಅಲ್ಲಿನ ಭೂಗತ ಕೇಂದ್ರಗಳನ್ನು ಗುರಿಯಾಗಿಸಿದೆ. ಗಾಜಾದ ಉತ್ತರ ಭಾಗದಿಂದ ಅಂದಾಜು ಎಂಟು ಲಕ್ಷ ಪ್ಯಾಲೆಸ್ಟೀನ್ ನಾಗರಿಕರು ದಕ್ಷಿಣಕ್ಕೆ ಪಲಾಯನ ಮಾಡಿದ್ದಾರೆ ಎನ್ನಲಾಗಿದೆ.

ಕದನ ವಿರಾಮ ಘೋಷಿಸಬೇಕು ಎಂಬ ಆಗ್ರಹಗಳನ್ನು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ತಿರಸ್ಕರಿಸಿದ್ದಾರೆ. ಯುದ್ಧ ಶುರುವಾದ ನಂತರದಲ್ಲಿ ವಿಶ್ವಸಂಸ್ಥೆಯ ನೆರವು ಏಜೆನ್ಸಿಯ 64 ಸಿಬ್ಬಂದಿ ಮೃತಪಟ್ಟಿದ್ದಾರೆ.

'ವಿಶ್ವದ ಯಾವುದೇ ಸಮರದಲ್ಲಿ ಇಷ್ಟು ಕಡಿಮೆ ಅವಧಿಯಲ್ಲಿ ಇಷ್ಟೊಂದು ಸಂಖ್ಯೆಯಲ್ಲಿ ವಿಶ್ವಸಂಸ್ಥೆಯ ನೆರವು ಸಿಬ್ಬಂದಿ ಮೃತಪಟ್ಟಿರುವುದು ಇದೇ ಮೊದಲು' ಎಂದು ಸಂಸ್ಥೆಯ ಪ್ರತಿನಿಧಿ ಜೂಲಿಯೆಟ್ ತೌಮಾ ಹೇಳಿದ್ದಾರೆ.

ವೆಸ್ಟ್ ಬ್ಯಾಂಕ್‌ನಲ್ಲಿ ಇಸ್ರೇಲ್ ಸೇನೆಯು ಹಮಾಸ್ ಅಧಿಕಾರಿಯೊಬ್ಬರ ಮನೆಯನ್ನು ಧ್ವಂಸಗೊಳಿಸಿದೆ. 'ನಾವು ಹಮಾಸ್ ಕಮಾಂಡರ್‌ಗಳನ್ನು ಹುಡುಕುತ್ತಿದ್ದೇವೆ. ಅವರ ಮೂಲಸೌಕರ್ಯದ ಮೇಲೆ ದಾಳಿ ನಡೆಸುತ್ತಿದ್ದೇವೆ' ಎಂದು ಇಸ್ರೇಲ್ ಮಿಲಿಟರಿ ವಕ್ತಾರರು ತಿಳಿಸಿದ್ದಾರೆ.

ಯುದ್ಧದಲ್ಲಿ ಮಡಿದ ಪ್ಯಾಲೆಸ್ಟೀನ್ ನಾಗರಿಕರ ಸಂಖ್ಯೆಯು 8,300ಕ್ಕೂ ಹೆಚ್ಚು. ಮಡಿದವರಲ್ಲಿ ಮಹಿಳೆಯರು ಮತ್ತು ಮಕ್ಕಳ ಸಂಖ್ಯೆ ಹೆಚ್ಚಿದೆ ಎಂದು ಗಾಜಾ ಆರೋಗ್ಯ ಸಚಿವಾಲಯ ಹೇಳಿದೆ. ಇಸ್ರೇಲ್‌ನಲ್ಲಿ 1,400ಕ್ಕೂ ಹೆಚ್ಚು ಮಂದಿ ಪ್ರಾಣ ತೆತ್ತಿದ್ದಾರೆ. ಗಾಜಾದಲ್ಲಿ ಎರಡು ಆಸ್ಪತ್ರೆಗಳಿಗೆ ಹಾನಿಯಾಗಿದೆ, ಒಂದು ಅಂಬುಲೆನ್ಸ್ ನಾಶವಾಗಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ತಿಳಿಸಿದೆ.

ಇಸ್ರೇಲ್ ಮೇಲೆ ಡ್ರೋನ್ ದಾಳಿ: ಇರಾನ್ ಬೆಂಬಲ ಹೊಂದಿರುವ ಹುತಿ ಬಂಡುಕೋರರು ಇಸ್ರೇಲ್ ಗುರಿಯಾಗಿಸಿಕೊಂಡು ಮಂಗಳವಾರ ಡ್ರೋನ್ ದಾಳಿ ನಡೆಸಿದ್ದಾರೆ.

ಕದನ ವಿರಾಮಕ್ಕೆ ಒಪ್ಪಿಗೆ ಸೂಚಿಸುವುದು ಅಂದರೆ ಹಮಾಸ್ ಎದುರು ಇಸ್ರೇಲ್ ಶರಣಾಗುವುದಕ್ಕೆ ಸಮ. ಅದು ಸಾಧ್ಯವಿಲ್ಲ.

ಬೆಂಜಮಿನ್ ನೆತನ್ಯಾಹು, ಇಸ್ರೇಲ್ ಪ್ರಧಾನಿ

ಕದನ ವಿರಾಮ: ಬೈಡನ್ ಮೇಲೆ ಒತ್ತಡ

ವಾಷಿಂಗ್ಟನ್ (ರಾಯಿಟರ್ಸ್): 'ಇಸ್ರೇಲ್–ಹಮಾಸ್ ನಡುವೆ ಕದನ ವಿರಾಮ ಘೋಷಣೆಗೆ ತಕ್ಷಣ ಕ್ರಮ ಕೈಗೊಳ್ಳದೆ ಇದ್ದರೆ ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರಿಗೆ 2024ರ ಚುನಾವಣೆಯಲ್ಲಿ ಮತ ಮತ್ತು ದೇಣಿಗೆ ನೀಡದಂತೆ ಲಕ್ಷಾಂತರ ಮಂದಿ ಮುಸ್ಲಿಂ ಮತದಾರರ ಮನವೊಲಿಸುವ ಕೆಲಸ ಮಾಡಲಾಗುವುದು' ಎಂದು ಅಮೆರಿಕದ ಮುಸ್ಲಿಮರು ಹಾಗೂ ಡೆಮಾಕ್ರಟಿಕ್ ಪಕ್ಷದ ಕೆಲವು ಕಾರ್ಯಕರ್ತರು ಹೇಳಿದ್ದಾರೆ.

ಕದನ ವಿರಾಮವನ್ನು ತಕ್ಷಣ ಘೋಷಿಸುವಂತೆ ಮಾಡಲು ಬೈಡನ್ ಅವರು ಇಸ್ರೇಲ್ ಮೇಲೆ ತಾವು ಹೊಂದಿರುವ ಪ್ರಭಾವವನ್ನು ಬಳಸಬೇಕು ಎಂದು ರಾಷ್ಟ್ರೀಯ ಮುಸ್ಲಿಂ ಪ್ರಜಾಸತ್ತಾತ್ಮಕ ಮಂಡಳಿ ಆಗ್ರಹಿಸಿದೆ. ಅಮೆರಿಕದ ಅಧ್ಯಕ್ಷೀಯ ಚುನಾವಣೆಯ ಮೇಲೆ ಭಾರಿ ಪ್ರಭಾವ ಬೀರುವ ಮಿಷಿಗನ್, ಒಹಿಯೊ, ಪೆನ್ಸಿಲ್ವೇನಿಯಾ ರಾಜ್ಯಗಳ ಡೆಮಾಕ್ರಟಿಕ್ ಪಕ್ಷದ ನಾಯಕರೂ ಈ ಸಂಘಟನೆಯಲ್ಲಿ ಇದ್ದಾರೆ.

ಮಕ್ಕಳ ಪಾಲಿನ ಮಸಣ

ಜಿನೀವಾ (ಎಎಫ್‌ಪಿ): ಗಾಜಾ ಪಟ್ಟಿಯು ಈಗ ಸಾವಿರಾರು ಮಕ್ಕಳ ಪಾಲಿನ ಮಸಣವಾಗಿ ಪರಿವರ್ತನೆ ಆಗಿದೆ ಎಂದು ವಿಶ್ವಸಂಸ್ಥೆ ಮಂಗಳವಾರ ಹೇಳಿದೆ. ನಿರ್ಜಲೀಕರಣದಿಂದಾಗಿ ಇನ್ನಷ್ಟು ಮಕ್ಕಳು ಸಾಯುವ ಅಪಾಯ ಇದೆ ಎಂದು ಎಚ್ಚರಿಸಿದೆ. 'ಮಕ್ಕಳು ಮೃತಪಟ್ಟ ವರದಿಗಳ ವಿಚಾರದಲ್ಲಿ ನಮ್ಮ ಭೀತಿಯು ಹದಿನೈದು ದಿನಗಳ ಅವಧಿಯಲ್ಲಿ ನಿಜವಾಗಿಬಿಟ್ಟಿದೆ. ಡಜನ್‌ಗಳ ಸಂಖ್ಯೆಯಲ್ಲಿ ಮಕ್ಕಳು ಮೃತಪಟ್ಟಿದ್ದರು, ನಂತರ ಅದು ನೂರರ ಗಡಿ ದಾಟಿತು. ಈಗ ಅದು ಸಾವಿರಗಳ ಸಂಖ್ಯೆಯನ್ನು ದಾಟಿದೆ' ಎಂದು ಯುನಿಸೆಫ್‌ನ ವಕ್ತಾರ ಜೇಮ್ಸ್ ಎಲ್ಡರ್ ಹೇಳಿದ್ದಾರೆ.

ವರದಿಗಳ ಪ್ರಕಾರ 3,450ಕ್ಕೂ ಹೆಚ್ಚು ಮಕ್ಕಳು ಹತರಾಗಿದ್ದಾರೆ. ಈ ಸಂಖ್ಯೆಯು ಪ್ರತಿದಿನವೂ ಹೆಚ್ಚಾಗುತ್ತಿದೆ. ಗಾಜಾ ಪ್ರದೇಶವು ಮಕ್ಕಳ ಪಾಲಿನ ಮಸಣ ಆಗಿಬಿಟ್ಟಿದೆ. ಇನ್ನುಳಿದವರ ಪಾಲಿಗೆ ಇದು ನರಕವಾಗಿದೆ ಎಂದು ಅವರು ಹೇಳಿದ್ದಾರೆ. ಗಾಜಾ ಪಟ್ಟಿಯಲ್ಲಿ ಇರುವ ಮಕ್ಕಳು ನಿರ್ಜಲೀಕರಣದ ಸಮಸ್ಯೆ ಎದುರಿಸುತ್ತಿದ್ದಾರೆ. 'ಧ್ವಂಸಗೊಂಡ ಕಟ್ಟಡಗಳ ಅವಶೇಷಗಳ ಅಡಿಯಲ್ಲಿ ಮಕ್ಕಳು ಸಿಲುಕಿಕೊಂಡಿದ್ದಾರೆ ಎಂಬುದನ್ನು ಯೋಚಿಸುವುದಕ್ಕೂ ಕಷ್ಟವಾಗುತ್ತದೆ. ಆದರೆ ಅವರನ್ನು ಹೊರಗೆ ತರಲು ಇರುವ ಅವಕಾಶಗಳು ಬಹಳ ಕಡಿಮೆ' ಎಂದು ವಿಶ್ವಸಂಸ್ಥೆಯ ಪ್ರತಿನಿಧಿ ಜೆನ್ಸ್ ಲಾರ್ಕ್ ಹೇಳಿದ್ದಾರೆ.

ಸುದ್ದಿ 2 ನಿಮಿಷ

ನಾಯ್ಡುಗೆ ಮಧ್ಯಂತರ ಜಾಮೀನು

ಅಮರಾವತಿ (ಪಿಟಿಐ): ಆಂಧ್ರಪ್ರದೇಶದ ಕೌಶಲ ಅಭಿವೃದ್ಧಿ ನಿಗಮದ ಅವ್ಯವಹಾರ ಪ್ರಕರಣದಲ್ಲಿ ಬಂಧನದಲ್ಲಿರುವ ಟಿಡಿಪಿ ಮುಖ್ಯಸ್ಥ ಎನ್. ಚಂದ್ರಬಾಬು ನಾಯ್ಡು ಅವರಿಗೆ ಹೈಕೋರ್ಟ್ ನಾಲ್ಕು ವಾರಗಳ ಕಾಲ ಮಧ್ಯಂತರ ಜಾಮೀನು ಮಂಜೂರು ಮಾಡಿದೆ.

ಅರ್ಜಿ ವಿಚಾರಣೆ ವೇಳೆ ನಾಯ್ಡು ಪರ ವಕೀಲರು, 'ನಾಯ್ಡು ಅವರು ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆಗೆ ಒಳಗಾಗಬೇಕಿದೆ. ಆರೋಗ್ಯ ದೃಷ್ಟಿಯಿಂದ ಅವರಿಗೆ ಮಧ್ಯಂತರ ಜಾಮೀನು ಮಂಜೂರು ಮಾಡಬೇಕು' ಎಂದು ಮನವಿ ಮಾಡಿದರು.

ಬಳಿಕ ನ್ಯಾಯಪೀಠವು, 'ಅರ್ಜಿದಾರರ ಆರೋಗ್ಯ ಮತ್ತು ಮಾನವೀಯ ದೃಷ್ಟಿಯಿಂದ ತಾತ್ಕಾಲಿಕ ಜಾಮೀನು ಮಂಜೂರು ಮಾಡಲಾಗುತ್ತಿದೆ' ಎಂದು ತಿಳಿಸಿತು.

'ಇದೇ ವೇಳೆ, ನವೆಂಬರ್ 28ರಂದು ಅಥವಾ ಅದಕ್ಕೂ ಮುಂಚೆ ಕೇಂದ್ರ ಕಾರಾಗೃಹದ ವರಿಷ್ಠಾಧಿಕಾರಿ ಎದುರು ಹಾಜರಾಗಬೇಕು. ಯಾವ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲಾಯಿತು ಎಂಬ ಬಗ್ಗೆ ಮುಚ್ಚಿದ ಲಕೋಟೆಯಲ್ಲಿ ವರಿಷ್ಠಾಧಿಕಾರಿಗೆ ಮಾಹಿತಿ ಸಲ್ಲಿಸಬೇಕು' ಎಂದು ನಿರ್ದೇಶನ ನೀಡಿತು.



ಇದೇ ಸಂದರ್ಭದಲ್ಲಿ ಜಾಮೀನು ಕೋರಿರುವ ಅರ್ಜಿ ವಿಚಾರಣೆಯನ್ನು ನವೆಂಬರ್ 10ಕ್ಕೆ ಮುಂದೂಡಿತು.

ನಾಯ್ಡು ಅವರನ್ನು ಸೆ.9ರಂದು ಬಂಧಿಸಲಾಗಿತ್ತು.

₹400 ಕೋಟಿಗೆ ಬೇಡಿಕೆ ಅಂಬಾನಿಗೆ 3ನೇ ಬೆದರಿಕೆ ಪತ್ರ

ಮುಂಬೈ (ಪಿಟಿಐ): 'ರಿಲಯನ್ಸ್ ಇಂಡಸ್ಟ್ರೀಸ್ ಮುಖ್ಯಸ್ಥ ಮುಕೇಶ್ ಅಂಬಾನಿ ಅವರಿಗೆ ಅಪರಿಚಿತ ವ್ಯಕ್ತಿಯೊಬ್ಬರು ಇ–ಮೇಲ್ ಮೂಲಕ ಬೆದರಿಕೆಯ ಪತ್ರವನ್ನು ರವಾನಿಸಿದ್ದು ₹400 ಕೋಟಿ ನೀಡುವಂತೆ ಬೇಡಿಕೆ ಇಟ್ಟಿದ್ದಾನೆ' ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

ಇದು ಅಂಬಾನಿ ಅವರಿಗೆ ಬಂದಿರುವ ಮೂರನೇ ಬೆದರಿಕೆ ಪತ್ರ. ಈ ಮೊದಲು ಶುಕ್ರವಾರ ಮತ್ತು ಶನಿವಾರ ಕ್ರಮವಾಗಿ ₹20 ಕೋಟಿ ಮತ್ತು ₹200 ಕೋಟಿ ನೀಡಬೇಕು ಎಂದು ಬೆದರಿಕೆ ಪತ್ರಗಳು ಬಂದಿದ್ದವು. ಸೋಮವಾರ ₹400 ಕೋಟಿಗೆ ಬೇಡಿಕೆ ಇಟ್ಟಿರುವ ಬೆದರಿಕೆ ಪತ್ರ ಮುಕೇಶ್ ಅಂಬಾನಿ ಅವರ ಕಂಪನಿಗೆ ಬಂದಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದರು.

ಇ–ಮೇಲ್ ಅನ್ನು ಯಾರು ಕಳುಹಿಸಿರಬಹುದು ಎಂಬ ಬಗ್ಗೆ ಮುಂಬೈನ ಅಪರಾಧ ಘಟಕದ ಪೊಲೀಸರು ಮತ್ತು ಸೈಬರ್ ತಂಡ ಶೋಧ ನಡೆಸುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಅಂಬಾನಿ ಮತ್ತು ಅವರ ಕುಟುಂಬಸ್ಥರಿಗೆ ಕೊಲೆ ಮಾಡುವುದಾಗಿ ಬೆದರಿಕೆಯ ಕರೆ ಮಾಡುತ್ತಿದ್ದ ಬಿಹಾರದ ದರ್ಭಾಂಗ ಮೂಲದ ವ್ಯಕ್ತಿಯನ್ನು ಕಳೆದ ವರ್ಷ ಮುಂಬೈ ಪೊಲೀಸರು ಬಂಧಿಸಿದ್ದರು. ಮುಂಬೈನಲ್ಲಿರುವ ಸರ್ ಎಚ್.ಎನ್. ರಿಲಯನ್ಸ್ ಫೌಂಡೇಷನ್ ಆಸ್ಪತ್ರೆಯನ್ನು ಧ್ವಂಸಗೊಳಿಸುವುದಾಗಿಯೂ ಆರೋಪಿ ಬೆದರಿಕೆಯೊಡ್ಡಿದ್ದ.

ಮರಾಠ ಮೀಸಲಾತಿ: ರಾಜಭವನ ಮುಂಭಾಗ ಶಾಸಕರ ಪ್ರತಿಭಟನೆ

'ಕುಂಬಿ'ಗಳಿಗೆ ಜಾತಿ ಪ್ರಮಾಣ ಪತ್ರ: ಅಸ್ತು

ಮುಂಬೈ (ಪಿಟಿಐ): ನಿಜಾಮರ ಕಾಲದ ದಾಖಲೆಗಳಲ್ಲಿ 'ಕುಂಬಿ' ಎಂದು ಉಲ್ಲೇಖಿಸಿರುವ ಮರಾಠವಾಡ ಪ್ರದೇಶದಲ್ಲಿರುವ ಮರಾಠ ಸಮುದಾಯಕ್ಕೆ ಸೇರಿದ ಈ ಉಪ ವರ್ಗಕ್ಕೆ ಜಾತಿ ಪ್ರಮಾಣ ಪತ್ರ ನೀಡಲು ಮಹಾರಾಷ್ಟ್ರ ಸರ್ಕಾರ ನಿರ್ಧರಿಸಿದೆ.

ಮರಾಠರಿಗೆ ಉದ್ಯೋಗ ಮತ್ತು ಶಿಕ್ಷಣದಲ್ಲಿ ಇತರ ಹಿಂದುಳಿದ ವರ್ಗಗಳ (ಒಬಿಸಿ) ಕೋಟಾದಡಿ ಮೀಸಲಾತಿ ಸೌಲಭ್ಯ ಕಲ್ಪಿಸುವಂತೆ ಆಗ್ರಹಿಸಿ ಮುಖಂಡ ಮನೋಜ್ ಜಾರಂಗೆ ನಡೆಸುತ್ತಿರುವ ಹೋರಾಟವು ಹಿಂಸಾ ಸ್ವರೂಪ ಪಡೆದಿದೆ. ಇದರಿಂದ ಎಚ್ಚೆತ್ತುಕೊಂಡಿರುವ ಸರ್ಕಾರವು ಈ ನಿರ್ಧಾರ ಕೈಗೊಂಡಿದೆ.

ಜಾತಿ ಪ್ರಮಾಣ ಪತ್ರ ನೀಡುವುದಕ್ಕೆ ಸಂಬಂಧಿಸಿದಂತೆ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಸಂದೀಪ್ ಶಿಂದೆ ಅಧ್ಯಕ್ಷತೆಯಲ್ಲಿ ರಚಿಸಿದ್ದ ಸಮಿತಿಯ ಮೊದಲ ವರದಿಯನ್ನು ಸರ್ಕಾರ ಅಂಗೀಕರಿಸಿದೆ.

'ಜಾತಿ ಪ್ರಮಾಣ ಪತ್ರಗಳನ್ನು ವಿತರಿಸುವ ಪ್ರಕ್ರಿಯೆ ಆರಂಭಗೊಂಡಿದೆ' ಎಂದು ಮುಖ್ಯಮಂತ್ರಿ ಕಚೇರಿ ತಿಳಿಸಿದೆ.

ಮೀಸಲಾತಿ ಬಿಕ್ಕಟ್ಟಿಗೆ ಪರಿಹಾರ ಹುಡುಕುವ ಸಂಬಂಧ ವಿಧಾನಸಭೆಯ ವಿಶೇಷ ಅಧಿವೇಶನ ಕರೆಯುವಂತೆ ಆಗ್ರಹಿಸಿ ರಾಜಭವನದ ಮುಂಭಾಗ ಮೂವರು ಶಾಸಕರು ಪ್ರತಿಭಟನೆ ನಡೆಸಿದರು.

ರಾಜ್ಯಭವನ ಮುಂಭಾಗ ಶಾಸಕರ ಪ್ರತಿಭಟನೆ: ಅಜಿತ್ ಪವಾರ್ ಬಣಕ್ಕೆ ಸೇರಿದ ಶಾಸಕರಾದ ನೀಲೇಶ್ ಲಂಕೆ, ರಾಜು ನವಘರೆ ಹಾಗೂ ಶಿವಸೇನಾ (ಯುಬಿಟಿ) ಶಾಸಕ ಕೈಲಾಸ್ ಪಾಟೀಲ್ ಇದಕ್ಕೂ ಮೊದಲು ರಾಜ್ಯ ಸಚಿವಾಲಯದ ಬಳಿ ಇರುವ ಮಹಾತ್ಮ ಗಾಂಧಿ ಪ್ರತಿಮೆ ಮುಂಭಾಗ ಪ್ರತಿಭಟನೆ ನಡೆಸಿದ್ದರು.



ಮರಾಠ ಸಮುದಾಯಕ್ಕೆ ಮೀಸಲಾತಿ ಕಲ್ಪಿಸುವಂತೆ ಆಗ್ರಹಿಸಿ ಮಹಾರಾಷ್ಟ್ರದ ಮುಂಬೈನ ರಾಜಭವನದ ಮುಂಭಾಗ ಮಂಗಳವಾರ ಶಾಸಕರು ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

ರಾಜಭವನದ ಆಹ್ವಾನದ ಮೇಲೆ ಒಳಕ್ಕೆ ತೆರಳಿದ ಶಾಸಕರು, ರಾಜ್ಯಪಾಲ ರಮೇಶ್ ಬೈಸ್ ಅವರೊಟ್ಟಿಗೆ ಚರ್ಚಿಸಿದರು.

ಕರ್ಫ್ಯೂ ಜಾರಿ: ಮೀಸಲಾತಿ ಹೋರಾಟವು ಹಿಂಸಾಚಾರಕ್ಕೆ ತಿರುಗಿರುವುದರಿಂದ ಮಹಾರಾಷ್ಟ್ರದ ಧಾರಶಿವ ಹಾಗೂ ಬೀಡ್ ಜಿಲ್ಲೆಗಳಲ್ಲಿ ಸೋಮವಾರದಿಂದಲೇ ಕರ್ಫ್ಯೂ ಜಾರಿಗೊಳಿಸಲಾಗಿದೆ. ಧಾರಶಿವ ಜಿಲ್ಲೆಯ ಒಮೆರ್ಗಾ ತಾಲ್ಲೂಕಿನಲ್ಲಿ ಕೆಎಸ್ಆರ್‌ಟಿಸಿ ಬಸ್‌ಗೆ ಬೆಂಕಿ ಹಚ್ಚಲಾಗಿದೆ.

ಪುಣೆಯ ಮುಂಬೈ–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಪ್ರತಿಭಟನಕಾರರು ಟೈರ್‌ಗಳಿಗೆ ಬೆಂಕಿ ಹಚ್ಚಿದ್ದರಿಂದ ವಾಹನಗಳ ಸಂಚಾರಕ್ಕೆ ಕೆಲಕಾಲ ಅಡ್ಡಿಯಾಯಿತು.

ಅಸಮರ್ಪಕ ಮೀಸಲಾತಿಗೆ ಒಪ್ಪಿಗೆ ಇಲ್ಲ: ಜಾರಂಗೆ

ಛತ್ರಪತಿ ಸಂಭಾಜಿನಗರ (ಪಿಟಿಐ): 'ಅಸಮರ್ಪಕವಾಗಿ ಮೀಸಲಾತಿ ಜಾರಿಗೊಳಿಸುವ ಸರ್ಕಾರದ ನಿಲುವನ್ನು ಮರಾಠ ಸಮುದಾಯವು ಒಪ್ಪಿಕೊಳ್ಳುವುದಿಲ್ಲ. ಈ ವಿಷಯಕ್ಕೆ ಸಂಬಂಧಿಸಿದಂತೆ ವಿಶೇಷ ಅಧಿವೇಶನ ಕರೆದು ನಿರ್ಣಯ ಅಂಗೀಕರಿಸಬೇಕು' ಎಂದು ಮನೋಜ್ ಜಾರಂಗೆ ಹೇಳಿದ್ದಾರೆ.

ಮೀಸಲಾತಿಗೆ ಒತ್ತಾಯಿಸಿ ಜಾಲ್ನಾ ಜಿಲ್ಲೆಯಲ್ಲಿರುವ ತನ್ನ ಹುಟ್ಟೂರು ಅಂತರವಾಲಿ ಸಾರ್ತಿ ಗ್ರಾಮದಲ್ಲಿ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹ ನಡೆಸುತ್ತಿರುವ ಅವರು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

'ನಮ್ಮ ನಿರ್ಧಾರದ ಬಗ್ಗೆ ಮುಖ್ಯಮಂತ್ರಿಗೆ ಮನವರಿಕೆ ಮಾಡಿಕೊಟ್ಟಿದ್ದೇವೆ. ಕೆಲವು ಉಪ ವರ್ಗಗಳಿಗೆ ಮೀಸಲಾತಿ ನೀಡುವುದಕ್ಕೆ ನಮ್ಮ ಒಪ್ಪಿಗೆ ಇಲ್ಲ. ಮಹಾರಾಷ್ಟ್ರದಲ್ಲಿರುವ ಇಡೀ ಮರಾಠ ಸಮುದಾಯಕ್ಕೆ ಮೀಸಲಾತಿ ಕಲ್ಪಿಸಬೇಕೆಂಬುದು ನಮ್ಮ ಬೇಡಿಕೆಯಾಗಿದೆ. 'ಸಮುದಾಯವು ಶಾಂತಿಯುತವಾಗಿ ಹೋರಾಟ ನಡೆಸುತ್ತಿದೆ' ಎಂದು ಹೇಳಿದರು.

ವೈದ್ಯರಿಗೆ ವಿಶಿಷ್ಟ ಗುರುತಿನ ಸಂಖ್ಯೆ ನೀಡಲು ಸಿದ್ಧತೆ

ನವದೆಹಲಿ (ಪಿಟಿಐ): ಮುಂದಿನ ವರ್ಷದ ಅಂತ್ಯದೊಳಗೆ ದೇಶದ ಎಲ್ಲಾ ವೈದ್ಯರಿಗೂ ವಿಶಿಷ್ಟ ಗುರುತಿನ ಸಂಖ್ಯೆ (ಯುಐಡಿ) ನೀಡಲು ರಾಷ್ಟ್ರೀಯ ವೈದ್ಯಕೀಯ ಆಯೋಗ (ಎನ್‌ಎಂಸಿ) ಮುಂದಾಗಿದೆ.

ಭಾರತದಲ್ಲಿ ವೈದ್ಯ ವೃತ್ತಿಯನ್ನು ಕೇಂದ್ರೀಕೃತಗೊಳಿಸುವುದು ಆಯೋಗದ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ ರಾಷ್ಟ್ರೀಯ ವೈದ್ಯಕೀಯ ನೋಂದಣಿ (ಎನ್‌ಎಂಆರ್) ರಚನೆಗೆ ಸಿದ್ಧತೆ ನಡೆಸಿದೆ ಎಂದು ಮಂಗಳವಾರ ಅಧಿಕಾರಿಗಳು ತಿಳಿಸಿದ್ದಾರೆ.

'ಮುಂದಿನ ಆರು ತಿಂಗಳಲ್ಲಿ ಈ ಪ್ರಾಯೋಗಿಕ ಯೋಜನೆಗೆ ಚಾಲನೆ ಸಿಗಲಿದೆ. 2024ರ ಅಂತ್ಯದಲ್ಲಿ ವೈದ್ಯರಿಗೆ ವಿಶಿಷ್ಟ ಗುರುತಿನ ಸಂಖ್ಯೆ ನೀಡಲಾಗುತ್ತದೆ' ಎಂದು ಆಯೋಗದ ನೀತಿ ನಿಯಮಗಳ ಮತ್ತು ವೈದ್ಯಕೀಯ ನೋಂದಣಿ ಮಂಡಳಿಯ ಸದಸ್ಯ ಡಾ.ಯೋಗೇಂದ್ರ ಮಲಿಕ್ ತಿಳಿಸಿದ್ದಾರೆ.

ಹಾಲಿ ಇರುವ ಭಾರತೀಯ ವೈದ್ಯಕೀಯ ನೋಂದಣಿ (ಐಎಂಆರ್) ಬದಲಿಗೆ ಎನ್‌ಎಂಆರ್ ಅಸ್ತಿತ್ವಕ್ಕೆ ಬರಲಿದೆ. ವೈದ್ಯರಿಗೆ ನೀಡುವ ಯುಐಡಿ, ನೋಂದಣಿ ಸಂಖ್ಯೆ, ಹೆಸರು, ಕೆಲಸ ನಿರ್ವಹಿಸುವ ಸ್ಥಳ, ವಿದ್ಯಾರ್ಹತೆ, ಕಾರ್ಯ ನಿರ್ವಹಿಸುವ ಸಂಸ್ಥೆಗಳು ಅಥವಾ ವಿಶ್ವವಿದ್ಯಾಲಯಗಳು ಸೇರಿದಂತೆ ಅಗತ್ಯ ಮಾಹಿತಿಯು ರಾಷ್ಟ್ರೀಯ ವೈದ್ಯಕೀಯ ನೋಂದಣಿಯಲ್ಲಿ ಇರಲಿವೆ. ಈ ಮಾಹಿತಿಯು ಆಯೋಗದ ವೆಬ್‌ಸೈಟ್‌ನಲ್ಲಿ ಸಾರ್ವಜನಿಕರ ವೀಕ್ಷಣೆಗೂ ಲಭಿಸಲಿದೆ.

'ಪ್ರಸ್ತುತ ಸುಮಾರು 14 ಲಕ್ಷ ವೈದ್ಯರು ಐಎಂಆರ್‌ನಲ್ಲಿ ನೋಂದಾಯಿಸಿಕೊಂಡಿದ್ದಾರೆ. ಅವರ ಎಲ್ಲಾ ಮಾಹಿತಿಯನ್ನು ಎನ್‌ಎಂಆರ್‌ಗೆ ವರ್ಗಾಯಿಸಲಾಗುತ್ತದೆ. ಹಾಗಾಗಿ, ಆತಂಕಪಡುವ ಅಗತ್ಯವಿಲ್ಲ' ಎಂದು ಮಲಿಕ್ ಹೇಳಿದ್ದಾರೆ.

ಚುನಾವಣಾ ಬಾಂಡ್ ಮೂಲಕ ದೇಣಿಗೆ

'ದಾಖಲೆ ನಿರ್ವಹಣೆ ಮುಂದುವರಿಸಿ'

ಪ್ರಜಾವಾಣಿ ವಾರ್ತೆ

ನವದೆಹಲಿ: ಚುನಾವಣೆ ಬಾಂಡ್‌ಗಳ ಮೂಲಕ ರಾಜಕೀಯ ಪಕ್ಷಗಳು ಹಣ ಸ್ವೀಕರಿಸಿರುವುದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಕಾಪಾಡುವುದನ್ನು ಮುಂದುವರಿಸಬೇಕು. ಈ ಕುರಿತು 2019ರಲ್ಲಿ ನೀಡಿದ್ದ ಮಧ್ಯಂತರ ಆದೇಶ ಸೀಮಿತ ಅವಧಿಗೆ ಮಾತ್ರ ಅನ್ವಯವಾಗುವುದಿಲ್ಲ ಎಂದು ಚುನಾವಣಾ ಆಯೋಗಕ್ಕೆ ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ.

ಚುನಾವಣಾ ಬಾಂಡ್ ಯೋಜನೆ ಸಿಂಧುತ್ವ ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಐವರು ಸದಸ್ಯರ ಸಂವಿಧಾನ ಪೀಠ ನಡೆಸಿತು.

'ಮಧ್ಯಂತರ ಆದೇಶದ ಅನುಸಾರ ಸಲ್ಲಿಸಿರುವ ದತ್ತಾಂಶದ ವಿವರಗಳು ನಿಮ್ಮ ಬಳಿ ಇವೆಯೇ' ಎಂದು ಚುನಾವಣಾ ಪರ ಹಾಜರಿದ್ದ ವಕೀಲ ಅಮಿತ್ ಶರ್ಮಾ ಅವರನ್ನು ನ್ಯಾಯಪೀಠ ಪ್ರಶ್ನಿಸಿತು.

'ವಿಷಯಕ್ಕೆ ಸಂಬಂಧಿಸಿ 2019ರಲ್ಲಿ ಸಲ್ಲಿಸಿದ್ದ ಮುಚ್ಚಿದ ಲಕೋಟೆ ಮಾತ್ರ ನಮ್ಮ ಬಳಿ ಇದೆ' ಎಂದು ವಕೀಲ ಶರ್ಮಾ ಪ್ರತಿಕ್ರಿಯಿಸಿದರು.

ಆಗ, 'ಲಕೋಟೆಯನ್ನು ಕಾದಿಡಿ. ಸೂಕ್ತ ಸಮಯದಲ್ಲಿ ಅದರಲ್ಲಿರುವ ದಾಖಲೆಗಳನ್ನು ಪರಿಶೀಲಿಸಲಾಗುವುದು' ಎಂದು ನ್ಯಾಯಮೂರ್ತಿಗಳಾದ



ಸಂಜೀವ್ ಖನ್ನಾ, ಬಿ.ಆರ್.ಗವಾಯಿ, ಜೆ.ಬಿ.ಪಾರ್ದೀವಾಲಾ ಹಾಗೂ ಮನೋಜ್ ಮಿಶ್ರಾ ಅವರೂ ಇದ್ದ ನ್ಯಾಯಪೀಠ ಶರ್ಮಾ ಅವರಿಗೆ ಹೇಳಿತು.

'2019ರ ಚುನಾವಣೆಗೆ ಸಂಬಂಧಿಸಿದ ಮಾಹಿತಿ ಇದೆ. ನ್ಯಾಯಾಲಯ ನೀಡಿದ್ದ ಮಧ್ಯಂತರ ಆದೇಶಕ್ಕೆ ಸಂಬಂಧಿಸಿದ ದತ್ತಾಂಶ ನಮ್ಮ ಬಳಿ ಇದೆ' ಎಂದು ಶರ್ಮಾ ಸ್ಪಷ್ಟಪಡಿಸಿದರು.

ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ ಎಂಬ ಎನ್‌ಜಿಒ ಪರ ಹಾಜರಿದ್ದ ವಕೀಲ ಪ್ರಶಾಂತ ಭೂಷಣ್, 'ಮಧ್ಯಂತರ ಆದೇಶವು ನಿರಂತರವಾಗಿ ಅನ್ವಯವಾಗುತ್ತದೆ. ರಾಜಕೀಯ ಪಕ್ಷಗಳು ಸ್ವೀಕರಿಸಿದ ಹಣ ಕುರಿತ ಮಾಹಿತಿಯನ್ನು ಸಂಗ್ರಹಿಸುವುದನ್ನು ಮುಂದುವರಿಸಬೇಕು ಎಂಬುದಾಗಿ ಸುಪ್ರೀಂ ಕೋರ್ಟ್ ಈಗಾಗಲೇ ಸ್ಪಷ್ಟಪಡಿಸಿದೆ' ಎಂದರು.

ಅರ್ಜಿದಾರರೊಬ್ಬರ ಪರ ಹಿರಿಯ ವಕೀಲ ಕಪಿಲ್ ಸಿಬಲ್ ಹಾಗೂ ಕೇಂದ್ರ ಸರ್ಕಾರದ ಪರ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ವಾದ ಮಂಡಿಸಿದರು.

ಐಫೋನ್ ಹ್ಯಾಕ್: ಆಕ್ರೋಶ

ಒಂದನೇ ಪುಟದಿಂದ

'ನನಗೂ ಈ ಕುರಿತು ಸಂದೇಶಗಳು ಬಂದಿವೆ. ಹಕ್ಕುಬಾಧ್ಯತಾ ಸಮಿತಿಯಿಂದ ತನಿಖೆ ನಡೆಸುವಂತೆ ಕೋರಿ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರಿಗೆ ಪತ್ರ ಬರೆಯುವೆ' ಎಂದು ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ಹೇಳಿದ್ದಾರೆ.

'ಮೋದಿ ಅವರನ್ನು ಟೀಕಿಸುವ ಗೀಳು ಇರುವವರು ಈಗ ಗೊಂದಲ ಸೃಷ್ಟಿಸುವ ಕಾರ್ಯದಲ್ಲಿ ತೊಡಗಿದ್ದಾರೆ' ಎಂದು ಹೇಳುವ ಮೂಲಕ ವಿರೋಧ ಪಕ್ಷಗಳಿಗೆ ಬಿಜೆಪಿ ತಿರುಗೇಟು ನೀಡಿದ್ದಾರೆ.

ಆ್ಯಪಲ್ ಪ್ರತಿಕ್ರಿಯೆ: ಈ ಕುರಿತು ಆ್ಯಪಲ್ ಕಂಪನಿಯೂ ಪ್ರತಿಕ್ರಿಯೆ ನೀಡಿದೆ. 'ಸರ್ಕಾರಿ ಪ್ರಾಯೋಜಿತ ದಾಳಿಕೋರ'ರು ಎಂಬುದಾಗಿ ತಾನು ಹೇಳಿರುವುದು ನಿರ್ದಿಷ್ಟವಾಗಿ ಯಾರ ಬಗ್ಗೆಯೂ ನೀಡಿದ ಸೂಚನೆಯಲ್ಲ' ಎಂದಿದೆ.

'ಕಂಪನಿಯು ಬೆದರಿಕೆ ಕುರಿತು ತನ್ನ ಬಳಕೆದಾರರಿಗೆ ನೀಡುವ ಕೆಲವು ಸೂಚನೆಗಳು ದೋಷಪೂರಿತ ಎಚ್ಚರಿಕೆಗಳಾಗಿರುತ್ತವೆ. ಇಲ್ಲವೇ, ಕೆಲ ದಾಳಿಗಳನ್ನು ಪತ್ತೆ ಹಚ್ಚಲು ಆಗುವುದಿಲ್ಲ' ಎಂದಿದೆ.

'ಯಾವ ಕಾರಣಗಳಿಂದಾಗಿ ನಾವು ಬೆದರಿಕೆ ಕುರಿತ ಸೂಚನೆಗಳನ್ನು ನೀಡುತ್ತೇವೆ ಎಂಬ ಬಗ್ಗೆ ಮಾಹಿತಿ ನೀಡಲು ಸಾಧ್ಯವಿಲ್ಲ. ಈ ಬಗ್ಗೆ ನೀಡುವ ಮಾಹಿತಿಯು 'ಸರ್ಕಾರಿ ಪ್ರಾಯೋಜಿತ ದಾಳಿಕೋರ'ರು ತಮ್ಮ ವರ್ತನೆಯನ್ನು ಬದಲಾಯಿಸಿಕೊಳ್ಳಲು ನೆರವಾಗುತ್ತದೆ. ಅಲ್ಲದೇ, ಭವಿಷ್ಯದಲ್ಲಿ ತಾವು ನಡೆಸುವ ದಾಳಿಗಳನ್ನು ಪತ್ತೆಯಾಗದಂತೆ ನೋಡಿಕೊಳ್ಳಲು ಬೇಕಾದ ತಂತ್ರಗಳನ್ನು ದಾಳಿಕೋರರು ಅಳವಡಿಸಿಕೊಳ್ಳಬಹುದು' ಎಂದೂ ಕಂಪನಿ ಹೇಳಿದೆ.

ಯಾರಿಗೆಲ್ಲ ಎಚ್ಚರಿಕೆ ಸಂದೇಶ: ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮುಖಂಡ ಕೆ.ಸಿ.ವೇಣುಗೋಪಾಲ್, ಸಿಪಿಎಂನ ಸೀತಾರಾಮ್ ಯೆಚೂರಿ, ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್, ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ಅವರಿಗೆ ಐಫೋನ್‌ನಲ್ಲಿನ ಮಾಹಿತಿಯನ್ನು ಕಳುವು ಮಾಡಲು ಯತ್ನಿಸಲಾಗುತ್ತಿರುವ ಕುರಿತು ಆ್ಯಪಲ್ ಕಂಪನಿಯು ಎಚ್ಚರಿಕೆ ಸಂದೇಶ ರವಾನಿಸಿದೆ.

ಅಸಾದುದ್ದೀನ್ ಒವೈಸಿ (ಎಐಎಂಐಎಂ), ರಾಘವ ಛಡ್ಡಾ (ಎಎಪಿ), ಪ್ರಿಯಾಂಕಾ ಚತುರ್ವೇದಿ (ಶಿವಸೇನಾ–ಯುಬಿಟಿ), ಟಿ.ಎಸ್.ಸಿಂಗ್ ದೇವ್, ಪವನ್ ಖೇರಾ, ಎ.ರೇವಂತ ರೆಡ್ಡಿ, ಸುಪ್ರಿಯಾ ಶ್ರೀನಾತೆ (ಕಾಂಗ್ರೆಸ್), ಕೆ.ಟಿ.ರಾಮ ರಾವ್ (ಬಿಆರ್‌ಎಸ್) ಅವರಿಗೂ ಸಂದೇಶ ಕಳುಹಿಸಲಾಗಿದೆ.

ಪತ್ರಕರ್ತರಾದ ಸಿದ್ಧಾರ್ಥ ವರದರಾಜನ್, ಶ್ರೀರಾಮ್ ಕರ್ರಿ, ರವಿ ನಾಯರ್ ಹಾಗೂ ರೇವತಿ, ಆಬ್ಸರ್ವರ್ ರಿಸರ್ಚ್ ಫೌಂಡೇಷನ್ ಅಧ್ಯಕ್ಷ ಸಮೀರ್ ಸರನ್ ಅವರಿಗೂ ಈ ರೀತಿಯ ಸಂದೇಶವನ್ನು ಆ್ಯಪಲ್ ಕಂಪನಿ ರವಾನಿಸಿದೆ.

'ಅಬಕಾರಿ ನೀತಿ ಪ್ರಕರಣ ಕೇಜ್ರಿವಾಲ್ ಬಂಧನ ಸಾಧ್ಯತೆ'

ನವದೆಹಲಿ (ಪಿಟಿಐ): ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರನ್ನು ಜಾರಿ ನಿರ್ದೇಶನಾಲಯವು (ಇ.ಡಿ) ನವೆಂಬರ್ 2ರಂದು ಬಂಧಿಸುವ ಸಾಧ್ಯತೆಯಿದೆ. ಈ ಮೂಲಕ ಪಕ್ಷವನ್ನು ನಿರ್ನಾಮ ಮಾಡಲು ಬಿಜೆಪಿ ಯತ್ನಿಸುತ್ತಿದೆ ಎಂದು ಎಎಪಿ ದೂರಿದೆ.

ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದಂತೆ ನವೆಂಬರ್ 2ರಂದು ವಿಚಾರಣೆಗೆ ಹಾಜರಾಗುವಂತೆ ಅರವಿಂದ್ ಕೇಜ್ರಿವಾಲ್ ಅವರಿಗೆ ಇ.ಡಿ ಸಮನ್ಸ್ ಜಾರಿ ಮಾಡಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ದೆಹಲಿ ಸರ್ಕಾರದ ಸಚಿವೆ ಆತಿಶಿ, 'ಚುನಾವಣೆಗಳಲ್ಲಿ ಎಎಪಿಯನ್ನು ಸೋಲಿಸಲು ಸಾಧ್ಯವಿಲ್ಲ ಎಂಬುದನ್ನು ಅರಿತಿರುವ ಬಿಜೆಪಿಯು, ಈ ರೀತಿಯ ತಂತ್ರವನ್ನು ಅನುಸರಿಸುತ್ತಿದೆ. ಕೇಜ್ರಿವಾಲ್ ಅವರನ್ನು ಬಂಧಿಸಲಾಗುತ್ತದೆ ಎಂದು ವರದಿಗಳು ಹೇಳುತ್ತಿವೆ. ಅವರ ಬಂಧನವಾದರೆ, ಅದು ಭ್ರಷ್ಟಾಚಾರದ ಕಾರಣಕ್ಕೆ ಅಲ್ಲ, ಅವರು ಬಿಜೆಪಿ ವಿರುದ್ಧ ಮಾತನಾಡಿದ್ದಕ್ಕಾಗಿ ಅಷ್ಟೇ' ಎಂದರು.

'ದೆಹಲಿ ವಿಧಾನಸಭೆ ಚುನಾವಣೆಯಲ್ಲಿ ಎಎಪಿಯು ಬಿಜೆಪಿಯನ್ನು ಎರಡು ಸಲ ಸೋಲಿಸಿದೆ. ಅಲ್ಲದೆ, ಎಂ.ಸಿ.ಡಿ ಚುನಾವಣೆಯಲ್ಲೂ ಎಎಪಿ ಎದುರು ಬಿಜೆಪಿ ಪರಾಭವಗೊಂಡಿದೆ. ಎಎಪಿಯ ರಾಷ್ಟ್ರೀಯ ಸಂಚಾಲಕ ಅರವಿಂದ್ ಕೇಜ್ರಿವಾಲ್ ಅವರ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಭಯವಿದೆ. ಎಎಪಿಯನ್ನು ಸೋಲಿಸಲು ಸಾಧ್ಯವಿಲ್ಲ ಎಂಬುದು ಬಿಜೆಪಿಗೆ ಗೊತ್ತಿದೆ' ಎಂದರು.


ಕೊಚ್ಚಿ ಸ್ಫೋಟ, ಹಮಾಸ್ ನಾಯಕರ ಭಾಷಣ ಕುರಿತ ಹೇಳಿಕೆ

ಸಚಿವ ರಾಜೀವ್ ವಿರುದ್ಧ ಪ್ರಕರಣ

ಕೊಚ್ಚಿ (ಪಿಟಿಐ): ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಖಾತೆ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಅವರ ಹೇಳಿಕೆಯೊಂದು ಸಮಾಜದ ವಿವಿಧ ಸಮುದಾಯಗಳ ನಡುವೆ ದ್ವೇಷವನ್ನು ಹುಟ್ಟಿಸುವಂಥದ್ದು ಎಂಬ ಆರೋಪದ ಅಡಿಯಲ್ಲಿ ಅವರ ವಿರುದ್ಧ ಕೇರಳದಲ್ಲಿ ಪ್ರಕರಣ ದಾಖಲಾಗಿದೆ. ಈ ಕ್ರಮವನ್ನು ಬಿಜೆಪಿ ಖಂಡಿಸಿದೆ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮತ್ತು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಹಮಾಸ್ ಸಂಘಟನೆಯನ್ನು ಓಲೈಸುತ್ತಿದ್ದಾರೆ ಎಂಬುದನ್ನು ತೋರಿಸಿಕೊಟ್ಟ ಕಾರಣಕ್ಕೆ ಈ ಪ್ರಕರಣ ದಾಖಲಿಸಲಾಗಿದೆ ಎಂದು ರಾಜೀವ್ ಅವರು ಪ್ರತಿಕ್ರಿಯಿಸಿದ್ದಾರೆ.

ರಾಹುಲ್ ಮತ್ತು ವಿಜಯನ್ ಅವರು



ರಾಜೀವ್ ಚಂದ್ರಶೇಖರ್

ಜೊತೆಯಾಗಿ ಈ ಪ್ರಕರಣ ದಾಖಲಿಸಿದ್ದಾರೆ ಎಂದು ರಾಜೀವ್ ದೂರಿದ್ದಾರೆ. ಅಲ್ಲದೆ, ಇಬ್ಬರೂ ಮುಖಂಡರು ಎಸ್‌ಡಿಪಿಐ, ಪಿಎಫ್‌ಐ ಮತ್ತು ಹಮಾಸ್‌ನಂತಹ 'ವಿಷಕಾರಿ, ತೀವ್ರಗಾಮಿ, ಹಿಂಸಾತ್ಮಕ ಕೃತ್ಯಗಳಲ್ಲಿ ತೊಡಗಿಕೊಳ್ಳುವ ಸಂಘಟನೆಗಳನ್ನು ನಾಚಿಕೆಬಿಟ್ಟು ಓಲೈಸುತ್ತಿದ್ದಾರೆ' ಎಂದು ಕಿಡಿಕಾರಿದ್ದಾರೆ.

ರಾಜೀವ್ ವಿರುದ್ಧದ ಕ್ರಮವು ತೀವ್ರಗಾಮಿ ಚಿಂತನೆಗಳನ್ನು ಹೊಂದಿರುವ ವಿಭಜನಕಾರಿ ಶಕ್ತಿಗಳಿಗೆ ಸಹಾಯ ಮಾಡುವ ಮತ್ತು ಅವುಗಳನ್ನು ಉತ್ತೇಜಿಸುವ ಉದ್ದೇಶ ಹೊಂದಿದೆ ಎಂದು ಕೇರಳ ಬಿಜೆಪಿ ಘಟಕದ ಅಧ್ಯಕ್ಷ ಕೆ. ಸುರೇಂದ್ರನ್ ಹೇಳಿದ್ದಾರೆ.

ಕೊಚ್ಚಿಯಲ್ಲಿ ನಡೆದ ಬಾಂಬ್ ಸ್ಫೋಟ ಹಾಗೂ ಮಲಪ್ಪುರಂ ಜಿಲ್ಲೆಯಲ್ಲಿ ಈಚೆಗೆ ಇಸ್ಲಾಮಿಕ್ ಸಂಘಟನೆಯೊಂದು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಹಮಾಸ್ ಸಂಘಟನೆಯ ನಾಯಕರು ವರ್ಚುವಲ್ ಆಗಿ ಭಾಷಣ ಮಾಡಿದ್ದರು ಎಂಬ ವಿಚಾರವಾಗಿ ರಾಜೀವ್ ಅವರು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಬರೆದಿದ್ದರು. ಇದಕ್ಕೆ ಸಂಬಂಧಿಸಿದಂತೆ ಕೇರಳ ಪೊಲೀಸರು ತಾವಾಗಿಯೇ ಎಫ್‌ಐಆರ್ ದಾಖಲಿಸಿದ್ದಾರೆ. ಕೇರಳದಲ್ಲಿ ಕೋಮು ಸೌಹಾರ್ದವನ್ನು ಹಾಳುಮಾಡುವ ಹಾಗೂ ಹಿಂಸಾಚಾರಕ್ಕೆ ಪ್ರಚೋದನೆ ನೀಡುವ ಉದ್ದೇಶದಿಂದ ರಾಜೀವ್ ಅವರು ಸಾಮಾಜಿಕ ಜಾಲತಾಣಗಳ ಮೂಲಕ ಹೇಳಿಕೆ ನೀಡಿದ್ದಾರೆ ಎಂದು ಎಫ್‌ಐಆರ್‌ನಲ್ಲಿ ಹೇಳಲಾಗಿದೆ.

ಭ್ರಷ್ಟಾಚಾರದ ಆರೋಪ ಎದುರಿಸುತ್ತಿರುವ, ಅಪಕೀರ್ತಿ ಪಡೆದಿರುವ ಮುಖ್ಯಮಂತ್ರಿ (ಮತ್ತು ಗೃಹಮಂತ್ರಿ) ಪಿಣರಾಯಿ ವಿಜಯನ್ ಅವರದ್ದು ಕೊಳಕು, ನಾಚಿಕೆಯಿಲ್ಲದ ಓಲೈಕೆ ರಾಜಕಾರಣ. ಅವರು ದೆಹಲಿಯಲ್ಲಿ ಕುಳಿತು ಇಸ್ರೇಲ್ ವಿರುದ್ಧ ಪ್ರತಿಭಟಿಸುತ್ತಿದ್ದಾರೆ. ಭಯೋತ್ಪಾದಕ ಹಮಾಸ್ ಕೇರಳದಲ್ಲಿ ಜಿಹಾದ್‌ಗೆ ಮುಕ್ತವಾಗಿ ಕರೆ ನೀಡುತ್ತಿದ್ದು, ಅದು ಅಮಾಯಕ ಕ್ರೈಸ್ತರ ಮೇಲೆ ದಾಳಿ ಮತ್ತು ಬಾಂಬ್ ಸ್ಫೋಟಗಳಿಗೆ ಕಾರಣವಾಗುತ್ತಿದೆ' ಎಂದು ರಾಜೀವ್ ಅವರು ಪೋಸ್ಟ್ ಮಾಡಿದ್ದರು. ಇದಾದ ನಂತರದಲ್ಲಿ ವಿಜಯನ್ ಹಾಗೂ ರಾಜೀವ್ ನಡುವೆ ಮಾತಿನ ಸಮರ ನಡೆದಿತ್ತು.

ಪೊಲೀಸ್ ಅಧಿಕಾರಿ ಗುಂಡೇಟಿಗೆ ಬಲಿ

ಗುವಾಹಟಿ: ಶಸ್ತ್ರಸಜ್ಜಿತ ಕುಕಿ ಸಮುದಾಯಕ್ಕೆ ಸೇರಿದ ಕಿಡಿಗೇಡಿಗಳು ನಡೆಸಿದ ಗುಂಡಿನ ದಾಳಿಯಲ್ಲಿ ಮಣಿಪುರಕ್ಕೆ ಹೊಂದಿಕೊಂಡಿರುವ ಮ್ಯಾನ್ಮಾರ್ ಗಡಿ ಪ್ರದೇಶದಲ್ಲಿರುವ ಮೋರೆ ಪಟ್ಟಣದ ವಿಭಾಗೀಯ ಪೊಲೀಸ್ ಅಧಿಕಾರಿಯೊಬ್ಬರು ಮಂಗಳವಾರ ಮೃತಪಟ್ಟಿದ್ದಾರೆ.

ಮೈತೇಯಿ ಸಮುದಾಯಕ್ಕೆ ಸೇರಿದ ಚಿಂಗ್ತಮ್ ಆನಂದ್ ಕುಮಾರ್ ಮೃತಪಟ್ಟವರು. ಘಟನೆಯ ಸುದ್ದಿ ತಿಳಿದು ಇಂಫಾಲ್‌ನಿಂದ ಮೋರೆಗೆ ತೆರಳುತ್ತಿದ್ದ ಪೊಲೀಸರ ತಂಡದ ಮೇಲೂ ಶಸ್ತ್ರಸಜ್ಜಿತ ಕಿಡಿಗೇಡಿಗಳು ಗುಂಡಿನ ದಾಳಿ ನಡೆಸಿದ್ದು, ಇಬ್ಬರು ಪೊಲೀಸರು ಗಾಯಗೊಂಡಿದ್ದಾರೆ.

ಮೋರೆಯಲ್ಲಿ ಹೊಸದಾಗಿ ನಿರ್ಮಿಸಿದ್ದ ಹೆಲಿಪ್ಯಾಡ್ ಪರಿಶೀಲಿಸಲು ಆನಂದ್ ನೇತೃತ್ವದಡಿ ತೆರಳಿದ್ದ ಪೊಲೀಸ್ ತಂಡದ ಮೇಲೆ ಕಿಡಿಗೇಡಿಗಳು ಮರೆಯಲ್ಲಿ ನಿಂತು ಗುಂಡಿನ ದಾಳಿ ನಡೆಸಿರಬಹುದು.

ಮಿಜೋರಾಂ ವಿಧಾನಸಭಾ ಚುನಾವಣೆ: ಸರಣಿ ಗೆಲುವಿನಿಂದ ಆತ್ಮವಿಶ್ವಾಸ ಹೆಚ್ಚಿಸಿಕೊಂಡ ಝೆಡ್‌ಪಿಎಂ

ಎಂಎನ್‌ಎಫ್, ಕಾಂಗ್ರೆಸ್‌ಗೆ ಸವಾಲು?

ಪ್ರಜಾವಾಣಿ ವಾರ್ತೆ

ಗುವಾಹಟಿ: ಧಾರ್ಮಿಕ ಅಲ್ಪಸಂಖ್ಯಾತರ ಹಕ್ಕುಗಳನ್ನು ಕಾಪಾಡುವ ಉದ್ದೇಶದಿಂದ ಮಿಜೋರಾಂನ ಆರು ಪ್ರಾದೇಶಿಕ ಪಕ್ಷಗಳು ವಿಲೀನಗೊಂಡು ರಚನೆಯಾದ ಪಕ್ಷವೇ ಝೋರಂ ಪೀಪಲ್ಸ್ ಮೂವ್‌ಮೆಂಟ್ (ಝೆಡ್‌ಪಿಎಂ). 2018ರ ಮಿಜೋರಾಂ ವಿಧಾನಸಭೆ ಚುನಾವಣೆಯಲ್ಲಿ ಪಕ್ಷೇತರರ ಬೆಂಬಲದೊಂದಿಗೆ ಝೆಡ್‌ಪಿಎಂ ಎಂಟು ಸ್ಥಾನಗಳನ್ನು ಗೆದ್ದು ರಾಜ್ಯದಲ್ಲಿ ಹೊಸ ಅಲೆ ಎಬ್ಬಿಸಿತ್ತು. ಅಲ್ಲಿಂದ ಈಚೆಗೆ ಬಲ ಹೆಚ್ಚಿಸಿಕೊಳ್ಳುತ್ತಿರುವ ಝೆಡ್‌ಪಿಎಂ ಈ ಬಾರಿಯ ಚುನಾವಣೆಯಲ್ಲಿ ಆಡಳಿತಾರೂಢ ಪಕ್ಷ ಎಂಎನ್‌ಎಫ್ ಮತ್ತು ಕಾಂಗ್ರೆಸ್‌ಗೆ ಪ್ರಬಲ ಸವಾಲು ಒಡ್ಡಿದೆ.

2018ರ ಮಿಜೋರಾಂ ವಿಧಾನಸಭೆ ಚುನಾವಣೆಯಲ್ಲಿ ರಾಜ್ಯದ ಮುಖ್ಯಮಂತ್ರಿ ಝೋರಾಮ್‌ಥಂಗಾ ನೇತೃತ್ವದ ಮಿಜೋ ನ್ಯಾಷನಲ್ ಫ್ರಂಟ್ (ಎಂಎನ್‌ಎಫ್) ಕಾಂಗ್ರೆಸ್‌ಅನ್ನು ಮಣಿಸಿ

ಮುಖ್ಯಾಂಶಗಳು

- ಎಲ್ಲಾ ಕ್ಷೇತ್ರಗಳಲ್ಲಿ ಝೆಡ್‌ಪಿಎಂ ಸ್ಪರ್ಧೆ
- ಕಾಂಗ್ರೆಸ್ ನಮಗೆ ಎದುರಾಳಿಯಲ್ಲ: ಝೆಡ್‌ಪಿಎಂ
- ಎಂಎನ್‌ಎಫ್ ಹಿಡಿತದ ಕ್ಷೇತ್ರಗಳಲ್ಲೂ ಲಾಲ್ದುಹೋಮಾ ಪ್ರಭಾವ

ಅಧಿಕಾರಕ್ಕೆ ಮರಳಿತು. 40 ಸದಸ್ಯ ಬಲದ ವಿಧಾನಸಭೆಯಲ್ಲಿ ಕೇವಲ ಐದು ಶಾಸಕರನ್ನು ಹೊಂದಿದ್ದ ಕಾಂಗ್ರೆಸ್ ಮೂರನೇ ಸ್ಥಾನಕ್ಕೆ ಕುಸಿಯಿತು. ಮಾಜಿ ಐಪಿಎಸ್ ಅಧಿಕಾರಿ, ರಾಜಕಾರಣಿ ಲಾಲ್ದುಹೋಮಾ (74) ನೇತೃತ್ವದ ಝೆಡ್‌ಪಿಎಂ ವಿರೋಧ ಪಕ್ಷವಾಗಿ ಹೊರಹೊಮ್ಮಿತು. ತಾನು ಇನ್ನಿಲ್ಲದಂತೆ ಸೋಲು ಅನುಭವಿಸಲು ಝೆಡ್‌ಪಿಎಂ ಕಾರಣ. ಎಂಎನ್‌ಎಫ್ ವಿರೋಧಿ ಮತಗಳನ್ನು ಝೆಡ್‌ಪಿಎಂ ವಿಭಜಿಸಿತು

ಲಾಲ್ದುಹೋಮಾ ಯಾರು?

ಲಾಲ್ದುಹೋಮಾ ಅವರು ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರ ಭದ್ರತಾ ಉಸ್ತುವಾರಿ ಹುದ್ದೆಯಲ್ಲಿದ್ದರು. 1984ರಲ್ಲಿ ಐಪಿಎಸ್ ಹುದ್ದೆಗೆ ರಾಜೀನಾಮೆ ನೀಡಿದ್ದ ಅವರು ಕಾಂಗ್ರೆಸ್ ಸೇರ್ಪಡೆಯಾದರು. ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದರು. 1986ರಲ್ಲಿ ಮಿಜೋ ಒಪ್ಪಂದ ಏರ್ಪಟ್ಟ ಬಳಿಕ ಕಾಂಗ್ರೆಸ್ ತೊರೆದು ಎಂಎನ್‌ಎಫ್ ಸೇರಿದರು. ಎಂಎನ್‌ಎಫ್ ತೊರೆದು ಝೋರಂ ನ್ಯಾಷನಲಿಸ್ಟ್ ಪಕ್ಷವನ್ನು ಕಟ್ಟಿದ ಅವರು 2003ರ ಮಿಜೋರಾಂ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದರು.

2013ರ ಚುನಾವಣೆಯಲ್ಲಿ ಕಾಂಗ್ರೆಸ್ ಗೆದ್ದು ರಾಜ್ಯದಲ್ಲಿ ಎರಡನೇ ಬಾರಿಗೆ ಅಧಿಕಾರ ರಚಿಸಿತು. 2018ರ ಚುನಾವಣೆ ವೇಳೆಗೆ ಲಾಲ್ದುಹೋಮಾ ಅವರು ಝೆಡ್‌ಪಿಎಂ ರಚಿಸಿದರು.

ಎಂದು ಕಾಂಗ್ರೆಸ್ ದೂಷಿಸಿತ್ತು.

ಈ ವರ್ಷ ಏಪ್ರಿಲ್‌ನಲ್ಲಿ ನಡೆದ ಲುಂಗ್ಲೇಯಿ ನಗರಾಡಳಿತದ ಚುನಾವಣೆಯಲ್ಲಿ ಝೆಡ್‌ಪಿಎಂ ಗೆಲುವು ಸಾಧಿಸಿತು. ಬಳಿಕ, ಎಂಎನ್‌ಎಫ್ ಬಿಗಿ ಹಿಡಿತದಲ್ಲಿದ್ದ ಪೂರ್ವ ಐಜ್ವಾಲ್‌ನ ಗ್ರಾಮ ಪಂಚಾಯತಿ ಚುನಾವಣೆಯಲ್ಲೂ ಝೆಡ್‌ಪಿಎಂ ಗೆದ್ದಿತು. ಸರಣಿ ಗೆಲುವಿನಿಂದ ಆತ್ಮವಿಶ್ವಾಸ ಹೆಚ್ಚಿಸಿಕೊಂಡಿರುವ ಝೆಡ್‌ಪಿಎಂ ನವೆಂಬರ್‌ನಲ್ಲಿ ನಡೆಯಲಿರುವ ಚುನಾವಣೆಯಲ್ಲಿ ಉತ್ತಮ ಪ್ರದರ್ಶನ ನೀಡುವ ವಿಶ್ವಾಸ ಹೊಂದಿದೆ ಎಲ್ಲಾ 40 ಕ್ಷೇತ್ರಗಳಲ್ಲೂ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ.

'ಕಾಂಗ್ರೆಸ್ ಈಗ ಪ್ರಬಲ ಎದುರಾಳಿಯಾಗಿ ಉಳಿದಿಲ್ಲ. ನಮ್ಮ ಹೋರಾಟ ಎಂಎನ್‌ಎಫ್ ವಿರುದ್ಧ.



ಮಣಿಪುರ ಹಿಂಸಾಚಾರವು ಲಾಭವಾಗಿ ಪರಿಣಮಿಸುತ್ತದೆ ಎಂದು ಎಂಎನ್‌ಎಫ್ ಭಾವಿಸಿದೆ. ಆದರೆ, ಎಲ್ಲಾ ಪಕ್ಷಗಳು ಜೋ– ಕುಕಿ ಸಮುದಾಯಗಳ ಜೊತೆ ನಿಂತಿರುವುದರಿಂದ ಅದು ಸಾಧ್ಯವಿಲ್ಲ

ಲಾಲ್ದುಹೋಮಾ, ಝೆಡ್‌ಪಿಎಂ ಮುಖ್ಯಸ್ಥ

ನಾವು ಭ್ರಷ್ಟಾಚಾರ ಆರೋಪಗಳಿಂದ ದೂರವಿರುವ ಮತ್ತು ಮಿಜೋ ರಾಷ್ಟ್ರೀಯತೆ ಕುರಿತು ಬದ್ಧತೆ ಇರುವ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದೇವೆ' ಎಂದು ಲಾಲ್ದುಹೋಮಾ ತಿಳಿಸಿದ್ದಾರೆ.

2018ರಿಂದ ಈಚೆಗೆ ರಾಜ್ಯದಲ್ಲಿ ತಾನು ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳು ಮತ್ತು ಸಂಘರ್ಷಪೀಡಿತ ಮ್ಯಾನ್ಮಾರ್ ದೇಶ ಮತ್ತು ಮಣಿಪುರದಿಂದ ಬಂದು ಆಶ್ರಯ ಪಡೆದಿರುವ ಚಿನ್ ಮತ್ತು ಕುಕಿ ಸಮುದಾಯಗಳ ಬೆಂಬಲದಿಂದ ಈ ಬಾರಿಯೂ ಅಧಿಕಾರಕ್ಕೆ ಮರಳುವ ವಿಶ್ವಾಸವನ್ನು ಎಂಎನ್‌ಎಫ್ ಹೊಂದಿದೆ.

ನೌಕಾಪಡೆಯ ಮಾಜಿ ಸಿಬ್ಬಂದಿ ಟಿಬಿಸಿ ಲಾಲ್‌ವೆನ್‌ಛುಂಗ ಅವರು 2018ರ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಹೀನಾಯವಾಗಿ ಸೋತಿದ್ದರು. ಎಂಎನ್‌ಎಫ್‌ಗೆ ಪ್ರಬಲ ವಿರೋಧಿಯಾಗಿ ಬೆಳೆಯುತ್ತಿರುವ ಏಕೈಕ ಪಕ್ಷ ಎಂದರೆ ಝೆಡ್‌ಪಿಎಂ ಎಂದು ಮನಗಂಡ ಅವರು ಝೆಡ್‌ಪಿಎಂ ಸೇರ್ಪಡೆಯಾದರು. ಪಕ್ಷವು ಅವರನ್ನು ಪೂರ್ವ ಐಜ್ವಾಲ್– 1 ಕ್ಷೇತ್ರದಿಂದ ಈ ಬಾರಿ ಕಣಕ್ಕಿಳಿಸಿದೆ.

'36 ವರ್ಷಗಳ ಕಾಲ ಎಂಎನ್‌ಎಫ್ ಮತ್ತು ಕಾಂಗ್ರೆಸ್ ಸರ್ಕಾರಗಳ ದುರಾಡಳಿತದ ಕುರಿತು ಮಿಜೋರಾಂನಾದ್ಯಂತ ಜನರು ಅಸಮಾಧಾನಗೊಂಡಿದ್ದಾರೆ. ಬದಲಾವಣೆ ಗಾಳಿ ಬೀಸುತ್ತಿದೆ' ಎಂದು ಲಾಲ್‌ವೆನ್‌ಛುಂಗ ಅವರು 'ಪ್ರಜಾವಾಣಿ'ಗೆ ಹೇಳಿದ್ದಾರೆ.

ಪೈಲಟ್ – ಸಾರಾ ವಿಚ್ಛೇದನ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜಸ್ಥಾನ ಕಾಂಗ್ರೆಸ್ ಶಾಸಕ ಸಚಿನ್ ಪೈಲಟ್ ಮತ್ತು ಪತ್ನಿ ಸಾರಾ ಅಬ್ದುಲ್ಲಾ ವಿಚ್ಛೇದನ ಪಡೆದುಕೊಂಡಿದ್ದಾರೆ. ಈ ವಿಷಯ ನಾಮಪತ್ರ ಸಲ್ಲಿಕೆ ವೇಳೆ ಮೊದಲ ಬಾರಿಗೆ ಬಹಿರಂಗವಾಗಿದೆ ಎಂದು ಮಾಧ್ಯಮ ಸಂಸ್ಥೆ 'ಇಂಡಿಯಾ ಟುಡೆ' ವರದಿ ಮಾಡಿದೆ.

ರಾಜಸ್ಥಾನ ವಿಧಾನಸಭೆ ಚುನಾವಣೆಯಲ್ಲಿ ಟೋಂಕ್ ಕ್ಷೇತ್ರದಿಂದ ಕಣಕ್ಕಿಳಿದಿರುವ ಸಚಿನ್ ಪೈಲಟ್ ಮಂಗಳವಾರ ನಾಮಪತ್ರ ಸಲ್ಲಿಸಿದರು. ಅಫಿಡವಿಟ್‌ನಲ್ಲಿರುವ ವಿವಾಹದ ಮಾಹಿತಿ ಕುರಿತ ಕಾಲಂನಲ್ಲಿ 'ವಿಚ್ಛೇದಿತ' ಎಂದು ಅವರು ನಮೂದಿಸಿದ್ದಾರೆ.

ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಫಾರೂಖ್ ಅಬ್ದುಲ್ಲಾ ಅವರ ಮಗಳು ಸಾರಾ ಅಬ್ದುಲ್ಲಾ ಅವರನ್ನು 2004ರಲ್ಲಿ ಸಚಿನ್ ಪೈಲಟ್ ಮದುವೆಯಾಗಿದ್ದರು. ಅವರಿಗೆ ಆರಣ್ ಮತ್ತು ವಿಹಾನ್ ಎಂಬ ಇಬ್ಬರು ಗಂಡು ಮಕ್ಕಳಿದ್ದಾರೆ. ಮಕ್ಕಳಿಬ್ಬರೂ ತಮ್ಮ ಜತೆಗಿದ್ದಾರೆ ಎಂದು ನಮೂದಿಸಿದ್ದಾರೆ.

ಕಳೆದ ಐದು ವರ್ಷಗಳಲ್ಲಿ ಸಚಿನ್ ಅವರ ಸಂಪತ್ತು ದುಪ್ಪಟ್ಟಾಗಿರುವ ಕುರಿತೂ ಇದರಲ್ಲಿ ಮಾಹಿತಿ ಇದೆ.



ಸಚಿನ್ ಪೈಲಟ್



ಸಾರಾ ಅಬ್ದುಲ್ಲಾ

'ಮರೆತಿದ್ದೇನೆ, ಮನ್ನಿಸಿದ್ದೇನೆ'

ರಾಜಸ್ಥಾನ ಕಾಂಗ್ರೆಸ್‌ಅನ್ನು ಈ ಹಿಂದೆ ಬಾಧಿಸಿದ ಘಟನೆಗಳನ್ನು ಮರೆತಿದ್ದೇನೆ ಮತ್ತು ಮನ್ನಿಸಿದ್ದೇನೆ. ಚುನಾವಣೆಯಲ್ಲಿ ಒಗ್ಗಟ್ಟಿನಿಂದ ಹೋರಾಡುವ ನಿರ್ಧಾರ ಮಾಡಿದ್ದೇನೆ' ಎಂದು ಎಂದು ನಾಮಪತ್ರ ಸಲ್ಲಿಕೆ ಬಳಿಕ ಹೇಳಿದ್ದಾರೆ. 'ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ನಾಯಕ ರಾಹುಲ್ ಗಾಂಧಿ ಏನು ಹೇಳಿದ್ದಾರೋ ಅದರ ಪ್ರಕಾರವೇ ನಾನು ನಡೆದುಕೊಳ್ಳುತ್ತಿದ್ದೇನೆ. ಬಿಜೆಪಿ ಎದುರು ಕಾಂಗ್ರೆಸ್ ಗೆಲ್ಲುವಂತೆ ನೋಡಿಕೊಳ್ಳುವ ಸಮಯವಿದು' ಎಂದು ಹೇಳಿದ್ದಾರೆ.

2018ರಲ್ಲಿ ಅವರ ಒಟ್ಟು ಆಸ್ತಿ ಮೌಲ್ಯ ₹3.8 ಕೋಟಿ ಇತ್ತು. 2023ಕ್ಕೆ ₹7.5 ಕೋಟಿಗೆ ಏರಿಕೆ ಆಗಿದೆ.

ತೆಲಂಗಾಣ: ಟಿಡಿಪಿ ಪಯಣ ಅಂತ್ಯ?

• ಎಸ್.ಎನ್.ವಿ. ಸುಧೀರ್

ಹೈದರಾಬಾದ್: 'ಆಂಧ್ರದ ಪಕ್ಷ' ಎಂಬ ಹಣೆಪಟ್ಟಿ ಹೊತ್ತಿರುವ ತೆಲುಗು ದೇಶಂ ಪಕ್ಷದ (ಟಿಡಿಪಿ) ಪಾಲಿಗೆ ತೆಲಂಗಾಣದಲ್ಲಿ ಅಂತ್ಯ ಎದುರಾಗಿರುವಂತಿದೆ. ತೆಲಂಗಾಣ ವಿಧಾನಸಭೆಗೆ ನಡೆಯಲಿರುವ ಚುನಾವಣೆಯಿಂದ ದೂರ ಉಳಿಯಲು ಟಿಡಿಪಿ ನಿರ್ಧರಿಸಿದೆ. ಹೀಗಾಗಿ, ತೆಲಂಗಾಣದಲ್ಲಿ ಬಾಗಿಲು ಬಂದ್ ಮಾಡಿರುವ 'ಆಂಧ್ರದ ಪಕ್ಷಗಳ' ಸಾಲಿಗೆ ಟಿಡಿಪಿ ಕೂಡ ಸೇರಿದೆ.

ಟಿಡಿಪಿ ಜನ್ಮತಾಳಿದ್ದು 1980ರ ದಶಕದಲ್ಲಿ, ಅವಿಭಜಿತ ಆಂಧ್ರಪ್ರದೇಶದ ರಾಜಧಾನಿ ಹೈದರಾಬಾದ್‌ನಲ್ಲಿ. ತೆಲಂಗಾಣದಲ್ಲಿ ತನ್ನ ಚಟುವಟಿಕೆಗಳನ್ನು ಸ್ಥಗಿತಗೊಳಿಸುತ್ತಿರುವುದಾಗಿ ಟಿಡಿಪಿ ಹೇಳಿಲ್ಲ. ಆದರೆ ಮಹತ್ವದ ಈ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸದಿರುವ ತೀರ್ಮಾನವು ಪಕ್ಷದ ಪಾಲಿಗೆ ವಿನಾಶವನ್ನಲ್ಲದೆ ಮತ್ತೇನನ್ನೂ ತರುವಂತೆ ಕಾಣುತ್ತಿಲ್ಲ.

ಖ್ಯಾತ ನಟ ಎನ್.ಟಿ. ರಾಮರಾವ್ ಅವರು 1982ರ ಮಾರ್ಚ್ 29ರಂದು ಈ ಪಕ್ಷಕ್ಕೆ ಚಾಲನೆ ನೀಡಿದ್ದರು. 'ತೆಲುಗರ ಆತ್ಮಗೌರವ' ಮತ್ತು 'ತೆಲುಗಿನ ಹೆಮ್ಮೆ' ಎಂಬುದು ಈ ಪಕ್ಷದ ನೆಲೆಗಟ್ಟಾಗಿತ್ತು. 2014ರಲ್ಲಿ

ಬಿಆರ್‌ಎಸ್‌ನತ್ತ ಕಾಂಗ್ರೆಸ್ ನಾಯಕರು

ಹೈದರಾಬಾದ್ (ಪಿಟಿಐ): ತೆಲಂಗಾಣ ಕಾಂಗ್ರೆಸ್‌ನಲ್ಲಿ ಟಿಕೆಟ್ ಹಂಚಿಕೆ ವಿಚಾರದಲ್ಲಿ ಅಸಮಾಧಾನ ಭುಗಿಲೆದ್ದಿದ್ದು, ಟಿಕೆಟ್ ವಂಚಿತರು ಕಾಂಗ್ರೆಸ್ ತೊರೆದು ಸಾಮೂಹಿಕವಾಗಿ ಬಿಆರ್‌ಎಸ್ ಕದ ತಟ್ಟುತ್ತಿರುವ ಬೆಳವಣಿಗೆ ನಡೆಯುತ್ತಿದೆ.

ಮೂರನೇ ಬಾರಿಗೆ ರಾಜ್ಯದಲ್ಲಿ ಗದ್ದುಗೆಗೇರುವ ನಿಟ್ಟಿನ ಪ್ರಯತ್ನ ನಡೆಸಿರುವ ಬಿಆರ್‌ಎಸ್ ಟಿಕೆಟ್ ವಂಚಿತ ಕಾಂಗ್ರೆಸ್ ಮುಖಂಡರನ್ನು ಅತ್ಯಂತ ಉತ್ಸಾಹದಿಂದ ತನ್ನತ್ತ ಸೆಳೆಯುತ್ತಿದೆ.

ಗೆಲ್ಲುವ ಸಾಮರ್ಥ್ಯವೇ ಟಿಕೆಟ್ ಹಂಚಿಕೆಗೆ ಪ್ರಮುಖ ಮಾನದಂಡ ಎಂದು ಕಾಂಗ್ರೆಸ್ ಈ ಬೆಳವಣಿಗೆ ಕುರಿತು ಪ್ರತಿಕ್ರಿಯಿಸಿದೆ.

ಮಾಜಿ ಸಚಿವ ನಾಗಮ್ ಜನಾರ್ಧನ ರೆಡ್ಡಿ, ಮಾಜಿ ಶಾಸಕ ಎರ್ರಾ ಶೇಖರ್, ಪ್ರದೇಶ ಕಾಂಗ್ರೆಸ್ ಸಮಿತಿಯ ಮಾಜಿ ಅಧ್ಯಕ್ಷ ಪೊನ್ನಾಲ ಲಕ್ಷ್ಮಯ್ಯ ಅವರು ಕಾಂಗ್ರೆಸ್ ತೊರೆದು ಬಿಆರ್‌ಎಸ್ ಸೇರ್ಪಡೆಯಾದವರಲ್ಲಿ ಪ್ರಮುಖರು.

ಅಕ್ಟೋಬರ್ 27ರಂದು 45 ಅಭ್ಯರ್ಥಿಗಳ ಎರಡನೇ ಪಟ್ಟಿಯನ್ನು ಕಾಂಗ್ರೆಸ್ ಬಿಡುಗಡೆ ಮಾಡಿತು.

ರಾಜ್ಯದ ವಿಭಜನೆ ಆದ ನಂತರದಲ್ಲಿ, ತೆಲುಗು ಭಾಷಿಕ ತೆಲಂಗಾಣ ಹಾಗೂ ಆಂಧ್ರಪ್ರದೇಶದಲ್ಲಿ ಪಕ್ಷವನ್ನು ಸಕ್ರಿಯವಾಗಿ ಇರಿಸುವ ಯತ್ನವನ್ನು ಪಕ್ಷದ ನಾಯಕ ಎನ್. ಚಂದ್ರಬಾಬು ನಾಯ್ಡು ಅವರು ನಡೆಸಿದ್ದರು. ಆದರೆ ಅವರ ಪ್ರಮುಖ ಗಮನ ಇದ್ದಿದ್ದು ಆಂಧ್ರಪ್ರದೇಶದ ಕಡೆ.

2018ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಟಿಡಿಪಿ, ಕಾಂಗ್ರೆಸ್ ಜೊತೆ ಮೈತ್ರಿ ಮಾಡಿಕೊಂಡಿತ್ತು. ಆಗ ಎರಡು ಸ್ಥಾನಗಳಲ್ಲಿ ಮಾತ್ರ ಗೆಲುವು ಕಂಡಿತ್ತು, ಶೇಕಡ 3.5ರಷ್ಟು ಮತಗಳನ್ನು ಪಡೆದುಕೊಂಡಿತ್ತು.

ರಾಜ್ಯದ ವಿಭಜನೆಯ ನಂತರದಲ್ಲಿ, ತೆಲಂಗಾಣದಲ್ಲಿ ಪಕ್ಷದ ಚಟುವಟಿಕೆ ಕೊನೆಗೊಳಿಸಿ, ಆಂಧ್ರಪ್ರದೇಶದ ಮೇಲೆ ಮಾತ್ರ ಗಮನಹರಿಸಲು ವೈಎಸ್‌ಆರ್‌ಸಿಪಿ ತೀರ್ಮಾನಿಸಿತು. ವಿಭಜನೆಯ ಹತ್ತು ವರ್ಷಗಳ ನಂತರವೂ ಟಿಡಿಪಿಗೆ ತೆಲಂಗಾಣದ ಕೆಲವು ಕಡೆಗಳಲ್ಲಿ ಸಕ್ರಿಯ

'ಚುನಾವಣೆಯಲ್ಲಿ ಸ್ಪರ್ಧಿಸದೆ ಇರುವ ತೀರ್ಮಾನವು ಯಾವ ಪಕ್ಷಕ್ಕೂ ಒಳ್ಳೆಯದಲ್ಲ. ಇದು ಪಕ್ಷದ ಕಾರ್ಯಕರ್ತರು, ನಾಯಕರ ಸ್ಥೈರ್ಯ ಕುಗ್ಗಿಸುತ್ತದೆ.

ತೆಲಕಪಲ್ಲಿ ರವಿ ರಾಜಕೀಯ ವಿಶ್ಲೇಷಕ

ಕಾರ್ಯಕರ್ತರು ಇದ್ದಾರೆ. ಹೀಗಿದ್ದರೂ ಅದು ಚುನಾವಣೆಯಲ್ಲಿ ಸ್ಪರ್ಧಿಸದಿರುವ ತೀರ್ಮಾನ ಕೈಗೊಂಡಿದೆ.

ಚುನಾವಣೆಯಲ್ಲಿ ಸ್ಪರ್ಧಿಸದಿರುವ ತೀರ್ಮಾನಕ್ಕೆ ಅತೃಪ್ತಿ ವ್ಯಕ್ತಪಡಿಸಿ ಪಕ್ಷದ ತೆಲಂಗಾಣ ಘಟಕದ ಅಧ್ಯಕ್ಷರಾಗಿದ್ದ ಕಸಾನಿ ಜ್ಞಾನೇಶ್ವರ್ ಅವರು ಪಕ್ಷ ತೊರೆದಿದ್ದಾರೆ. 'ನಾನು ನಾಯ್ಡು ಅವರನ್ನು ಜೈಲಿನಲ್ಲಿ ಭೇಟಿ ಮಾಡಿದ್ದಾಗ, ಚುನಾವಣೆಯಲ್ಲಿ ಸ್ಪರ್ಧೆ ಇಲ್ಲ ಎಂಬ ತೀರ್ಮಾನ ತಿಳಿಸಿದರು. ಅದನ್ನು ಕೇಳಿ ಆಘಾತವಾಗಿತ್ತು. ನಾಯ್ಡು ಅವರ ಸಂದೇಶವನ್ನು ಕಾರ್ಯಕರ್ತರಿಗೆ ತಿಳಿಸಿದೆ. ಅವರೂ ಬೇಸರ ವ್ಯಕ್ತಪಡಿಸಿದರು. ನಾನು ನನ್ನ ರಾಜೀನಾಮೆ ಪತ್ರವನ್ನು ಪಕ್ಷದ ನಾಯಕರಿಗೆ ಕಳುಹಿಸಿದೆ. ಆದರೆ ಅದಕ್ಕೆ ಅವರು ಪ್ರತಿಕ್ರಿಯೆಯನ್ನೂ ನೀಡಿಲ್ಲ. ತೆಲಂಗಾಣದಲ್ಲಿ ಪಕ್ಷದ ವಿಚಾರವಾಗಿ ಅವರು ಗಂಭೀರವಾಗಿ ಇಲ್ಲ ಅನಿಸುತ್ತದೆ' ಎಂದು ಜ್ಞಾನೇಶ್ವರ್ ಹೇಳಿದರು.

ಚುನಾವಣಾ ಕಣದಲ್ಲಿ

- **ನಗದು, ಅಕ್ರಮ ಮದ್ಯ ವಶಕ್ಕೆ:** ಛತ್ತೀಸಗಢದಲ್ಲಿ ನಗದು, ಅಕ್ರಮ ಮದ್ಯ ಸೇರಿದಂತೆ ಈವರೆಗೆ ₹ 38.34 ಕೋಟಿಗೂ ಹೆಚ್ಚಿನ ಮೊತ್ತದ ವಸ್ತುಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ. ₹ 10.11 ಕೋಟಿ ನಗದು, ₹ 90.87 ಮೌಲ್ಯದ 30,840 ಲೀಟರ್ ಅಕ್ರಮ ಮದ್ಯ, ₹14.8 ಕೋಟಿ ಮೌಲ್ಯದ 184 ಕೆಜಿ ಆಭರಣಗಳನ್ನು ವಶಪಡಿಸಿಕೊಳ್ಳಲಾಗಿದೆ.
- **ಸಮೀಕ್ಷೆಗೆ ಅಂಕುಶ:** ನವೆಂಬರ್ 7ರ ಬೆಳಿಗ್ಗೆ 7 ಗಂಟೆಯಿಂದ ನವೆಂಬರ್ 30ರ ಸಂಜೆ 6.30ರವರೆಗೆ ಮತದಾನೋತ್ತರ ಸಮೀಕ್ಷೆಗಳನ್ನು ನಡೆಸುವಂತಿಲ್ಲ, ಅವುಗಳ ಫಲಿತಾಂಶ ಪ್ರಕಟಿಸುವಂತಿಲ್ಲ, ಅವುಗಳನ್ನು ಪ್ರಚುರಪಡಿಸುವಂತೆಯೂ ಇಲ್ಲ ಎಂದು ಕೇಂದ್ರ ಚುನಾವಣಾ ಆಯೋಗ ಮಂಗಳವಾರ ಅಧಿಸೂಚನೆ ಹೊರಡಿಸಿದೆ. ಇದರ ಉಲ್ಲಂಘಿಸುವುದು ಶಿಕ್ಷಾರ್ಹ ಅಪರಾಧ ಎಂದು ಹೇಳಿದೆ.
- **4ನೇ ಪಟ್ಟಿ:** ರಾಜಸ್ಥಾನ ವಿಧಾನಸಭೆ ಚುನಾವಣೆಗೆ 56 ಅಭ್ಯರ್ಥಿಗಳ 4ನೇ ಪಟ್ಟಿಯನ್ನು ಕಾಂಗ್ರೆಸ್ ಮಂಗಳವಾರ ಬಿಡುಗಡೆ ಮಾಡಿದೆ. ಪಕ್ಷದ ರಾಷ್ಟ್ರೀಯ ವಕ್ತಾರ ಗೌರವ್ ವಲ್ಲಭ್ ಅವರಿಗೆ ಉದಯಪುರದಿಂದ ಮತ್ತು ಬಿಜೆಪಿಯಿಂದ ಕಾಂಗ್ರೆಸ್‌ಗೆ ಸೇರಿದ್ದ ಮಾನ್ವೇಂದ್ರ ಸಿಂಗ್ ಅವರಿಗೆ ಸಿವಾನಾದಿಂದ ಟಿಕೆಟ್ ನೀಡಿದೆ. ನ. 25ರಂದು ನಡೆಯುವ ಚುನಾವಣೆಗೆ ಪಕ್ಷವು ಈವರೆಗೆ 151 ಅಭ್ಯರ್ಥಿಗಳ ಹೆಸರು ಪ್ರಕಟಿಸಿದೆ.
- **'ಸ್ವಾಭಿಮಾನದ ಹೋರಾಟ':** ರಾಜಸ್ಥಾನದ ವಿಧಾನಸಭಾ ಚುನಾವಣೆಯಲ್ಲಿ ಚಿತ್ತೋಡಗಢದಿಂದ ಸ್ಪರ್ಧಿಸಲು ಟಿಕೆಟ್ ಸಿಗದ ಕಾರಣ ಬಂಡಾಯವೆದ್ದಿರುವ ಬಿಜೆಪಿ ಶಾಸಕ ಚಂದ್ರಭಾನ್ ಸಿಂಗ್ ಆಕ್ಯಾ, ಇದು ಸ್ವಾಭಿಮಾನದ ಹೋರಾಟ, ಸ್ವತಂತ್ರ ಅಭ್ಯರ್ಥಿಯಾಗಿ ಕಣಕ್ಕಿಳಿಯುವುದಾಗಿ ಹೇಳಿದ್ದಾರೆ. ಇಲ್ಲಿ ಭೈರೋನ್ ಸಿಂಗ್ ಶೆಖಾವತ್ ಅವರ ಅಳಿಯ ನರಪತ್ ಸಿಂಗ್ ರಾಜವಿ ಅವರಿಗೆ ಟಿಕೆಟ್ ನೀಡಲಾಗಿದೆ.
- **ಬಿಜೆಪಿಗೆ ಸೇರ್ಪಡೆ:** ಛತ್ತೀಸಗಢ ವಿಧಾನಸಭೆಗೆ ಸ್ಪರ್ಧಿಸಲು ಟಿಕೆಟ್ ಸಿಗದ ಕಾರಣ ಕಾಂಗ್ರೆಸ್ ಶಾಸಕ ಚಿಂತಾಮಣಿ ಮಹಾರಾಜ್ ಅವರು ಪಕ್ಷ ತೊರೆದು ಬಿಜೆಪಿ ಸೇರಿದ್ದಾರೆ. ಟಿಕೆಟ್ ಸಿಗದಿದ್ದಕ್ಕೆ ಆಡಳಿತಾರೂಢ ಪಕ್ಷದಲ್ಲಿ ಬಂಡೆದ್ದ ಮೂರನೇ ಶಾಸಕರಾಗಿದ್ದಾರೆ.
- **ಆಶ್ವಾಸನೆ:** ಮಧ್ಯಪ್ರದೇಶದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ, ಜಾತಿ ಗಣತಿ ನಡೆಸಲಾಗುವುದು ಮತ್ತು ಹಿಂದುಳಿದ ವರ್ಗಗಳ ಒಟ್ಟಾರೆ ಅಭಿವೃದ್ಧಿಗಾಗಿ 'ಸಮಾನ ಅವಕಾಶಗಳ ಆಯೋಗ' ರಚಿಸಲಾಗುವುದು ಎಂದು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಕಮಲ್‌ನಾಥ್ 'ಎಕ್ಸ್'ನಲ್ಲಿ ಆಶ್ವಾಸನೆ ನೀಡಿದ್ದಾರೆ.
- **ನೇಮಕ:** ರಾಜಸ್ಥಾನದಲ್ಲಿ ಪಕ್ಷವು ಭರವಸೆ ನೀಡಿರುವ ಏಳು ಗ್ಯಾರಂಟಿಗಳ ಪ್ರಚಾರಕ್ಕಾಗಿ ಏಳು ಉಸ್ತುವಾರಿಗಳನ್ನು ಮತ್ತು ಮೂವರು ಸಂಯೋಜಕರನ್ನು ಕಾಂಗ್ರೆಸ್ ನೇಮಕ ಮಾಡಿದೆ.
- **ಶುಲ್ಕ ಮನ್ನಾ ಭರವಸೆ:** ಮಧ್ಯಪ್ರದೇಶದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಸರ್ಕಾರಿ ಉದ್ಯೋಗ ನೇಮಕಾತಿ ಪರೀಕ್ಷೆಗಳ ಶುಲ್ಕ ಮನ್ನಾ ಮಾಡುವುದಾಗಿ ಪಕ್ಷದ ನಾಯಕ ಪ್ರದೀಪ್ ಜೈನ್ ಆದಿತ್ಯ ಹೇಳಿದ್ದಾರೆ.
- **ಅಭ್ಯರ್ಥಿಗಳ ನಾಮಪತ್ರ:** ಮಧ್ಯಪ್ರದೇಶದಲ್ಲಿ 230 ಸ್ಥಾನಗಳಿಗಾಗಿ ನವೆಂಬರ್ 17ರಂದು ನಡೆಯಲಿರುವ ವಿಧಾನಸಭಾ ಚುನಾವಣೆಗೆ 3,832 ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ.

ನುಡಿ–ಕಿಡಿ



'ಜೈ– ವೀರೂ' (ಕಮಲ್‌ನಾಥ್– ದಿಗ್ವಿಜಯಸಿಂಗ್) ಅವರನ್ನು ದೆಹಲಿಗೆ ಕರೆಸಿಕೊಳ್ಳಲಾಗಿದೆ. ಇವರಿಬ್ಬರ ಭಿನ್ನಾಭಿಪ್ರಾಯದ ಬಗ್ಗೆ ಬಿಜೆಪಿ ಗೊಂದಲ ಮೂಡಿಸುತ್ತಿದೆ ಎಂದು ಕಾಂಗ್ರೆಸ್ ನಾಯಕರು ಹೇಳುತ್ತಿದ್ದಾರೆ. ಆದರೆ ಸುಲಿಗೆ ಮಾಡಿದ್ದನ್ನು ಹಂಚಿಕೊಳ್ಳಲು ಇವರಿಬ್ಬರು ಕಚ್ಚಾಡುತ್ತಿದ್ದಾರೆ.

ಶಿವರಾಜ್ ಸಿಂಗ್ ಚೌಹಾಣ್, ಮಧ್ಯಪ್ರದೇಶ ಮುಖ್ಯಮಂತ್ರಿ



ತೆಲಂಗಾಣದ ಕಾಳೇಶ್ವರಂ ಯೋಜನೆಯಲ್ಲಿ ಬಿಆರ್‌ಎಸ್ ಮತ್ತು ಬಿಜೆಪಿ ಪಕ್ಷಗಳು ₹1 ಲಕ್ಷ ಕೋಟಿ ಕಬಳಿಸಿವೆ. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಆ ಹಣವನ್ನು ಕಕ್ಕಿಸಿ ಬಡವರಿಗೆ ಹಂಚುತ್ತದೆ

ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ



ಬಾಂಗ್ಲಾ ಎದುರು ಜಯಿಸಿದ ಪಾಕಿಸ್ತಾನ • ಟೂರ್ನಿಯಿಂದ ಶಕೀಬ್ ಬಳಗ ನಿರ್ಗಮನ • ಶಫೀಕ್ ಅರ್ಧಶತಕ

ಶಹೀನ್, ಜಮಾನ್ ಆಟಕ್ಕೆ ಗೆಲುವು

ಕೋಲ್ಕತ್ತ (ಪಿಟಿಐ): ಶಹೀನ್ ಶಾ ಅಫ್ರಿದಿ ಅಮೋಘ ಬೌಲಿಂಗ್ ಮತ್ತು ಫಕಾರ್ ಜಮಾನ್ ಬ್ಯಾಟಿಂಗ್ ನೆರವಿನಿಂದ ಪಾಕಿಸ್ತಾನ ತಂಡವು ಬಾಂಗ್ಲಾದೇಶ ವಿರುದ್ಧದ ಪಂದ್ಯದಲ್ಲಿ ಜಯಿಸಿತು.

ಈಡನ್ ಗಾರ್ಡನ್ಸ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಪಾಕ್ ಎದುರು 7 ವಿಕೆಟ್‌ಗಳಿಂದ ಸೋತ ಬಾಂಗ್ಲಾದೇಶ ತಂಡವು ಸೆಮಿಫೈನಲ್ ಹಾದಿಯಿಂದ ಹೊರಬಿತ್ತು.

ಪಾಕ್ ತಂಡಕ್ಕೆ ಇನ್ನೂ ಸಣ್ಣ ಅವಕಾಶವೊಂದು ಇದೆ. ಈ ಗೆಲುವಿನೊಂದಿಗೆ ಅಂಕಪಟ್ಟಿಯಲ್ಲಿ ಐದನೇ ಸ್ಥಾನಕ್ಕೇರಿದೆ. ಟೂರ್ನಿಯಲ್ಲಿ ಒಟ್ಟು ಏಳು ಪಂದ್ಯ ಆಡಿದೆ. ಮೊದಲ ಎರಡರಲ್ಲಿ ಜಯಿಸಿತ್ತು. ನಂತರ ನಾಲ್ಕರಲ್ಲಿ ಸತತ ಸೋಲು ಅನುಭವಿಸಿತ್ತು. ಇದೀಗ ಸೋಲಿನ ಸರಪಳಿ ತುಂಡಾಗಿದೆ.

ಟಾಸ್ ಗೆದ್ದ ಬಾಂಗ್ಲಾದೇಶ ತಂಡ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಪಾಕ್ ವೇಗಿ ಅಫ್ರಿದಿ (23ಕ್ಕೆ3) ಮತ್ತು ಮೊಹಮ್ಮದ್ ವಾಸೀಂ ಜೂನಿಯರ್ (31ಕ್ಕೆ3) ಅವರ ಬೌಲಿಂಗ್ ಮುಂದೆ ಬಾಂಗ್ಲಾ ತಂಡಕ್ಕೆ ದೊಡ್ಡ ಮೊತ್ತ ಗಳಿಸಲು ಸಾಧ್ಯವಾಗಲಿಲ್ಲ. ಆರಂಭಿಕ ಲಿಟನ್ ದಾಸ್ (45 ರನ್), ಮಧ್ಯಮಕ್ರಮಾಂಕದಲ್ಲಿ ಮೆಹಮುದುಲ್ಲಾ (56; 70ಎ) ಹಾಗೂ ನಾಯಕ ಶಕೀಬ್ ಅಲ್ ಹಸನ್ (43; 64ಎ) ಅವರ ಬ್ಯಾಟಿಂಗ್‌ನಿಂದಾಗಿ 45.1 ಓವರ್‌ಗಳಲ್ಲಿ 204 ರನ್ ಗಳಿಸಿತು.





ಪಾಕಿಸ್ತಾನ ತಂಡದ ವೇಗಿ ಶಹೀನ್ ಶಾ ಅಫ್ರಿದಿ ಸಂಭ್ರಮ (ಎಡ) ಅರ್ಧಶತಕ ಗಳಿಸಿದ ಫಕಾರ್ ಜಮಾನ್ ಆಟ –ಎಎಫ್‌ಪಿ/ಪಿಟಿಐ ಚಿತ್ರ

ಇದಕ್ಕುತ್ತರವಾಗಿ ಪಾಕ್ ತಂಡವು 32.3 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 205 ರನ್ ಗಳಿಸಿತು.

ಪಾಕ್ ತಂಡಕ್ಕೆ ಅಬ್ದುಲ್ಲಾ ಶಫೀಕ್ (68; 69ಎ, 4X9, 6X2) ಮತ್ತು ಜಮಾನ್ (81; 74ಎ, 4X3, 6X7) ಮೊದಲ ವಿಕೆಟ್ ಜೊತೆಯಾಟದಲ್ಲಿ 128 ರನ್ ಸೇರಿಸಿದರು.

ಪಾಕ್ ಆಟಗಾರ ಶಫೀಕ್ ಅವರು ಟೂರ್ನಿಯಲ್ಲಿ ನಾಲ್ಕನೇ ಅರ್ಧಶತಕ ಗಳಿಸಿದರು. ಇದರೊಂದಿಗೆ ಮಿಸ್ಬಾ ಉಲ್ ಹಕ್ ಹಾಗೂ ಬಾಬರ್ ಆಜಂ ಅವರ ವಿಶ್ವಕಪ್ ಅರ್ಧಶತಕಗಳ ಸಾಧನೆಯನ್ನು ಸರಿಗಟ್ಟಿದರು.

ನಂತರ 41 ರನ್‌ಗಳ ಅಂತರದಲ್ಲಿ ಮೂರು ವಿಕೆಟ್ ಕಳೆದುಕೊಂಡ ಪಾಕಿಸ್ತಾನ ತುಸು ಆತಂಕ ಎದುರಿಸಿತ್ತು. ಈ ಮೂರು ವಿಕೆಟ್‌ಗಳನ್ನೂ ಬಾಂಗ್ಲಾ ತಂಡದ ಆಫ್‌ಸ್ಪಿನ್ನರ್ ಮೆಹದಿ ಹಸನ್ ಮಿರಾಜ್ ಗಳಿಸಿದರು.

ಆದರೆ ಈ ಆತಂಕವನ್ನು ದೂರ ಮಾಡುವಲ್ಲಿ ಮೊಹಮ್ಮದ್ ರಿಜ್ವಾನ್ (ಅಜೇಯ 26; 21ಎ, 4X4) ಮತ್ತು ಇಫ್ತಿಕಾರ್ ಅಹಮದ್ (ಔಟಾಗದೆ 17; 15ಎ, 4X2) ಯಶಸ್ವಿಯಾದರು. ಇನಿಂಗ್ಸ್‌ನಲ್ಲಿ 105 ಎಸೆತಗಳು ಬಾಕಿಯಿದ್ದಾಗಲೇ ಪಾಕ್ ತಂಡಕ್ಕೆ ಗೆಲುವು ಒಲಿಯಿತು.

ಸಂಕ್ಷಿಪ್ತ ಸ್ಕೋರು: ಬಾಂಗ್ಲಾದೇಶ: 45.1 ಓವರ್‌ಗಳಲ್ಲಿ 204 (ಲಿಟನ್ ದಾಸ್ 45, ಮೆಹಮುದುಲ್ಲಾ 56, ಶಕೀಬ್ ಅಲ್ ಹಸನ್ 43, ಮೆಹದಿ ಹಸನ್ ಮಿರಾಜ್ 25, ಶಹೀನ್ ಅಫ್ರಿದಿ 23ಕ್ಕೆ3, ಮೊಹಮ್ಮದ್ ವಾಸೀಂ ಜೂನಿಯರ್ 31ಕ್ಕೆ3, ಹ್ಯಾರಿಸ್ ರವೂಫ್ 36ಕ್ಕೆ2) **ಪಾಕಿಸ್ತಾನ:** 32.3 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 205 (ಅಬ್ದುಲ್ಲಾ ಶಫೀಕ್ 68, ಫಕಾರ್ ಜಮಾನ್ 81, ಮೊಹಮ್ಮದ್ ರಿಜ್ವಾನ್ ಔಟಾಗದೆ 26, ಇಫ್ತಿಕಾರ್ ಅಹಮದ್ ಔಟಾಗದೆ 17, ಮೆಹದಿ ಹಸನ್ ಮಿರಾಜ್ 60ಕ್ಕೆ3) **ಫಲಿತಾಂಶ:** ಪಾಕಿಸ್ತಾನ ತಂಡಕ್ಕೆ 7 ವಿಕೆಟ್‌ಗಳ ಜಯ ಮತ್ತು 2 ಅಂಕ.

ಅಫ್ರಿದಿ 'ಶತಕ'

ಪಾಕಿಸ್ತಾನದ ಎಡಗೈ ವೇಗಿ ಶಹೀನ್ ಶಾ ಅಫ್ರಿದಿ ಅಂತರರಾಷ್ಟ್ರೀಯ ಏಕದಿನ ಕ್ರಿಕೆಟ್‌ನಲ್ಲಿ ವಿಕೆಟ್‌ಗಳ ಶತಕ ಸಾಧನೆ ಮಾಡಿದರು.
ಬಾಂಗ್ಲಾ ಎದುರಿನ ಪಂದ್ಯದಲ್ಲಿ ಅವರು ಮೂರು ವಿಕೆಟ್ ಗಳಿಸಿದರು. ಇದರೊಂದಿಗೆ ಅವರ ಖಾತೆಯಲ್ಲಿ ಈಗ ಒಟ್ಟು 102 ವಿಕೆಟ್‌ಗಳು ಇವೆ. 23 ವರ್ಷದ ಅವರು 51 ಪಂದ್ಯಗಳಲ್ಲಿ ಈ ಸಾಧನೆ ಮಾಡಿದ್ದಾರೆ.

ಪ್ಯಾಲೆಸ್ಟೀನ್ ಧ್ವಜ ಪ್ರದರ್ಶನ

ಪಾಕಿಸ್ತಾನ– ಬಾಂಗ್ಲಾ ಪಂದ್ಯದ ವೇಳೆ ಪ್ರೇಕ್ಷಕರ ಒಂದು ಗುಂಪು ಪ್ಯಾಲೆಸ್ಟೀನ್ ಧ್ವಜವನ್ನು ಪ್ರದರ್ಶಿಸಿದೆ. ಧ್ವಜ ಪ್ರದರ್ಶಿಸುವ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರದಾಡಿದೆ.

ಘಟನೆಗೆ ಸಂಬಂಧಿಸಿದಂತೆ ಕ್ರೀಡಾಂಗಣದ ಭದ್ರತಾ ಸಿಬ್ಬಂದಿ ನಾಲ್ವರನ್ನು ವಶಕ್ಕೆ ಪಡೆದಿರುವುದಾಗಿ ವರದಿಯಾಗಿದೆ. ಐಸಿಸಿ ಈ ಬಗ್ಗೆ ಅಧಿಕೃತವಾಗಿ ಯಾವುದೇ ಹೇಳಿಕೆ ನೀಡಿಲ್ಲ.

ವಿಶ್ವಕಪ್ ಕ್ರಿಕೆಟ್: ಪಾಯಿಂಟ್ ಪಟ್ಟಿ

ದೇಶ	ಪಂದ್ಯ	ಗೆಲುವು	ಸೋಲು	ಟೈ	ಪಾಯಿಂಟ್	ಎನ್‌ಆರ್‌ಆರ್
ಭಾರತ	6	6	0	0	12	1.405
ದಕ್ಷಿಣ ಆಫ್ರಿಕಾ	6	5	1	0	10	2.032
ನ್ಯೂಜಿಲೆಂಡ್	6	4	2	0	8	1.232
ಆಸ್ಟ್ರೇಲಿಯಾ	6	4	2	0	8	0.970
ಪಾಕಿಸ್ತಾನ	7	3	4	0	6	-0.024
ಅಫ್ಗಾನಿಸ್ತಾನ	6	3	3	0	6	-0.718
ಶ್ರೀಲಂಕಾ	6	2	4	0	4	-0.275
ನೆದರ್ಲೆಂಡ್ಸ್	6	2	4	0	4	-1.277
ಬಾಂಗ್ಲಾದೇಶ	7	1	6	0	2	-1.446
ಇಂಗ್ಲೆಂಡ್	6	1	5	0	2	-1.652



ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಭಾರತ ತಂಡದ ಸೂರ್ಯಕುಮಾರ್ ಯಾದವ್ ಮಂಗಳವಾರ ಬ್ಯಾಟಿಂಗ್ ಅಭ್ಯಾಸ ನಡೆಸಿದರು –ಪಿಟಿಐ ಚಿತ್ರ

ಪರಾಗ್ ಸತತ 7ನೇ ಅರ್ಧಶತಕ

ಮೊಹಾಲಿ (ಪಿಟಿಐ): ರಿಯಾನ್ ಪರಾಗ್ (ಅಜೇಯ 50) ಸತತ ಏಳನೇ ಅರ್ಧಶತಕದ ನೆರವಿನಿಂದ ಅಸ್ಸಾಂ ತಂಡ ಸೈಯ್ಯದ್ ಮುಷ್ತಾಕ್ ಅಲಿ ಟ್ರೋಫಿ ಟಿ20– ಕ್ರಿಕೆಟ್ ಟೂರ್ನಿಯಲ್ಲಿ ಮಂಗಳವಾರ ಬಂಗಾಳ ತಂಡವನ್ನು 8 ವಿಕೆಟ್‌ಗಳಿಂದ ಸುಲಭವಾಗಿ ಸೋಲಿಸಿ ಎಂಟರ ಘಟ್ಟ ತಲುಪಿತು.

ಅನುಭವಿ ವೇಗಿ ಭುವನೇಶ್ವರ ಕುಮಾರ್ (21ಕ್ಕೆ3) ಅವರ ಉತ್ತಮ ಬೌಲಿಂಗ್ ಮತ್ತು ನಿತೀಶ್ ರಾಣಾ ಅವರ ಬಿರುಸಿನ ಬ್ಯಾಟಿಂಗ್ (ಔಟಾಗದೇ 71) ನೆರವಿನಿಂದ ಉತ್ತರ ಪ್ರದೇಶ ತಂಡ ಇನ್ನೊಂದು ಪಂದ್ಯದಲ್ಲಿ 6 ವಿಕೆಟ್‌ಗಳಿಂದ ಗುಜರಾತ್ ತಂಡವನ್ನು ಸೋಲಿಸಿತು.

ಸ್ಕೋರುಗಳು: ಬಂಗಾಳ: 20 ಓವರುಗಳಲ್ಲಿ 8 ವಿಕೆಟ್‌ಗೆ 138 (ಕರಣ್ ಲಾಲ್ 24, ಆಕಾಶ್ ಸೇನ್‌ಗುಪ್ತಾ 29ಕ್ಕೆ3); ಅಸ್ಸಾಂ: 17.5 ಓವರುಗಳಲ್ಲಿ 2 ವಿಕೆಟ್‌ಗೆ 142 (ರಿಯಾನ್ ಪರಾಗ್ ಔಟಾಗದೇ 50, ಬಿಷಲ್ ರಾಯ್ ಔಟಾಗದೇ 45).

ಗುಜರಾತ್: 20 ಓವರುಗಳಲ್ಲಿ 8 ವಿಕೆಟ್‌ಗೆ 127 (ಸೌರವ್ ಚೌಹಾನ್ 32; ಭುವನೇಶ್ವರ ಕುಮಾರ್ 21ಕ್ಕೆ3, ಮೊಹ್ಸಿನ್ ಖಾನ್ 13ಕ್ಕೆ2); ಉತ್ತರ ಪ್ರದೇಶ: 18.4 ಓವರುಗಳಲ್ಲಿ 4 ವಿಕೆಟ್‌ಗೆ 130 (ನಿತೀಶ್ ರಾಣಾ ಔಟಾಗದೇ 71, ಸಮೀರ್ ರಿಜ್ವಿ 30; ರವಿ ಬಿಷ್ಣೋಯಿ 29ಕ್ಕೆ2).

ಬ್ಯಾಸ್ಕೆಟ್‌ಬಾಲ್ ಟೂರ್ನಿ ನ.3ರಿಂದ

ಬೆಂಗಳೂರು: ಕರ್ನಾಟಕ ರಾಜ್ಯ ಬ್ಯಾಸ್ಕೆಟ್‌ಬಾಲ್ ಸಂಸ್ಥೆಯ ಆಶ್ರಯದಲ್ಲಿ ನ.3ರಿಂದ 10ರವರೆಗೆ ನಗರದ ಕಂಠೀರವ ಕ್ರೀಡಾಂಗಣದಲ್ಲಿ ಪುರುಷರ ಮತ್ತು ಮಹಿಳೆಯರ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್ ಆಯೋಜಿಸಲಾಗಿದೆ.

ಟೂರ್ನಿಯಲ್ಲಿ ಸುಮಾರು 82 ಪುರುಷರ ತಂಡಗಳು ಮತ್ತು 40 ಮಹಿಳೆಯರ ತಂಡಗಳು ಪಾಲ್ಗೊಳ್ಳಲಿವೆ.

ತೆಂಡೂಲ್ಕರ್ ಪ್ರತಿಮೆ ಇಂದು ಲೋಕಾರ್ಪಣೆ

ಮುಂಬೈ (ಪಿಟಿಐ): ಇಲ್ಲಿನ ವಾಂಖೆಡೆ ಕ್ರೀಡಾಂಗಣದಲ್ಲಿ ನಿರ್ಮಿಸಲಾದ ಕ್ರಿಕೆಟ್ ದಿಗ್ಗಜ ಸಚಿನ್ ತೆಂಡೂಲ್ಕರ್ ಅವರ ಆಳೆತ್ತರದ ಪ್ರತಿಮೆಯ ಲೋಕಾರ್ಪಣೆ ಬುಧವಾರ ನಡೆಯಲಿದೆ.

ಗುರುವಾರ ಇಲ್ಲಿ ಭಾರತ ಮತ್ತು ಶ್ರೀಲಂಕಾ ಮಧ್ಯೆ ವಿಶ್ವಕಪ್ ಟೂರ್ನಿಯ ಪಂದ್ಯ ನಡೆಯಲಿದ್ದು, ಅದರ ಮುನ್ನಾ ದಿನ ಸಚಿನ್ ಅವರ ಪ್ರತಿಮೆಯನ್ನು ಲೋಕಾರ್ಪಣೆ ಮಾಡಲು ಸಿದ್ಧತೆ ನಡೆದಿದೆ.

ಏಪ್ರಿಲ್‌ನಲ್ಲಿ 50ನೇ ವರ್ಷಕ್ಕೆ ಪದಾರ್ಪಣೆ ಮಾಡಿದ ಸಚಿನ್ ಅವರ ಪ್ರತಿಮೆಯನ್ನು ವಾಂಖೆಡೆ ಕ್ರೀಡಾಂಗಣದೊಳಗೆ ಮುಂಬೈ ಕ್ರಿಕೆಟ್ ಸಂಸ್ಥೆ ನಿರ್ಮಿಸಿದೆ. ಬ್ಯಾಟ್ ಬೀಸುವ ಭಂಗಿಯಲ್ಲಿರುವ ಪ್ರತಿಮೆಗೆ ಮಂಗಳವಾರ ಅಂತಿಮ ಸ್ಪರ್ಶ ನೀಡಲಾಯಿತು.



ವಾಂಖೆಡೆ ಕ್ರೀಡಾಂಗಣದಲ್ಲಿ ನಿರ್ಮಿಸಲಾದ ಸಚಿನ್ ತೆಂಡೂಲ್ಕರ್ ಪ್ರತಿಮೆ –ಪಿಟಿಐ ಚಿತ್ರ

ಪ್ರತಿಮೆ ಲೋಕಾರ್ಪಣಾ ಸಮಾರಂಭದಲ್ಲಿ ಸಚಿನ್ ತೆಂಡೂಲ್ಕರ್ ಸೇರಿದಂತೆ ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂಧೆ, ಉಪ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್, ಬಿಸಿಸಿಐ ಕಾರ್ಯದರ್ಶಿ ಜಯ್ ಶಾ, ಖಜಾಂಚಿ ಆಶಿಶ್ ಶೆಲಾರ್, ಮುಂಬೈ ಕ್ರಿಕೆಟ್ ಸಂಸ್ಥೆ ಅಧ್ಯಕ್ಷ ಅಮೋಲ್ ಕಾಳೆ, ಕಾರ್ಯದರ್ಶಿ ಅಜಿಂಕ್ಯ ನಾಯ್ಕ್ ಭಾಗವಹಿಸಲಿದ್ದಾರೆ.

2013ರ ನವೆಂಬರ್‌ನಲ್ಲಿ ವೆಸ್ಟ್ ಇಂಡೀಸ್ ವಿರುದ್ಧದ ಎರಡು ಪಂದ್ಯಗಳ ಟೆಸ್ಟ್ ಸರಣಿಯಲ್ಲಿ ಸಚಿನ್ ಅವರು ತವರಿನ ಕ್ರೀಡಾಂಗಣದಲ್ಲಿ ಕೊನೆಯ ಬಾರಿ ಆಡಿದ್ದರು. ಅದಾದ 10 ವರ್ಷದ ಬಳಿಕ ಅವರ ಪ್ರತಿಮೆ ನಿರ್ಮಾಣವಾಗಿದೆ. ಅಹಮದ್ ನಗರದ ಕಲಾವಿದ ಪ್ರಮೋದ್ ಕಾಂಬ್ಳೆ ಈ ಪ್ರತಿಮೆಯನ್ನು ನಿರ್ಮಿಸಿದ್ದಾರೆ.

ಸೆಮಿಫೈನಲ್ ಸ್ಥಾನ ಗಟ್ಟಿಪಡಿಸಲು ಇತ್ತಂಡಗಳ ಮೇಲಾಟ

ದಕ್ಷಿಣ ಆಫ್ರಿಕಾಕ್ಕೆ ಇಂದು ಕಿವೀಸ್ ಸವಾಲು

ಪುಣೆ (ಪಿಟಿಐ): ಒಂದು ತಂಡ ಕೊನೆಯ ಎಸೆತದವರೆಗೆ ಬೆಳೆದ ರೋಚಕ ಪಂದ್ಯದಲ್ಲಿ ನಿರಾಸೆ ಅನುಭವಿಸಿದರೆ, ಇನ್ನೊಂದು ತಂಡ, ಕೊನೆಗಳಿಗೆಯಲ್ಲಿ ಹಾಗೂಹೀಗೂ ಗೆದ್ದು ನಿಟ್ಟುಸಿರು ಬಿಟ್ಟಿತ್ತು. ಸೆಮಿಫೈನಲ್ ರೇಸ್‌ನಲ್ಲಿರುವ ನ್ಯೂಜಿಲೆಂಡ್ ಮತ್ತು ದಕ್ಷಿಣ ಆಫ್ರಿಕಾ ತಂಡಗಳ ಕಥೆ ಇದು. ಬುಧವಾರ ಇಲ್ಲಿ ನಡೆಯಲಿರುವ ಏಕದಿನ ವಿಶ್ವಕಪ್ ಪಂದ್ಯದಲ್ಲಿ ಇವೆರಡು ತಂಡಗಳು ಮುಖಾಮುಖಿಯಾಗಲಿದ್ದು ಉತ್ತಮ ಹೋರಾಟ ನಿರೀಕ್ಷಿಸಲಾಗಿದೆ.

ಹಾಲಿ ವಿಶ್ವಕಪ್‌ನಲ್ಲಿ ಬಹುತೇಕ ಪಂದ್ಯಗಳು ಸಪ್ಪೆಯಾಗಿದ್ದ ಸಂದರ್ಭದಲ್ಲಿ, ಮೇಲಿನ ಎರಡು ಪಂದ್ಯಗಳು ಕ್ರಿಕೆಟ್ ಪ್ರೇಮಿಗಳನ್ನು ತುದಿಗಾಲಲ್ಲಿ ನಿಲ್ಲುವಂತೆ ಮಾಡಿದ್ದವು. ಕಳೆದ ವಾರ, ಚೆನ್ನೈನಲ್ಲಿ ದಕ್ಷಿಣ ಆಫ್ರಿಕಾ ರೋಚಕ ಪಂದ್ಯದಲ್ಲಿ ಒಂದು ವಿಕೆಟ್ ಅಂತರದಿಂದ ಪಾಕಿಸ್ತಾನ ತಂಡವನ್ನು ಸೋಲಿಸಿದರೆ, ಧರ್ಮಶಾಲಾದಲ್ಲಿ ಆಸ್ಟ್ರೇಲಿಯಾ ಎಸೆದಿದ್ದ 388 ರನ್ ಸವಾಲಿಗೆ ಸವ್ವಾಸೇರು ಎನ್ನುವಂತೆ ಆಡಿದ್ದ ನ್ಯೂಜಿಲೆಂಡ್ ಬರೇ ಐದು ರನ್‌ಗಳ ಅಂತರದಿಂದ ಸೋತಿತ್ತು.


ನ್ಯೂಜಿಲೆಂಡ್ 6 ಪಂದ್ಯಗಳಿಂದ 8 ಪಾಯಿಂಟ್ಸ್ ಸಂಗ್ರಹಿಸಿದೆ. ಸತತ ನಾಲ್ಕು ಗೆಲುವಿನ ನಂತರ ಅದು ಭಾರತ ಮತ್ತು ಆಸ್ಟ್ರೇಲಿಯಾ ವಿರುದ್ಧ ಸೋತಿದೆ. ಈಗ ಮತ್ತೊಂದು ಪಂದ್ಯದಲ್ಲಿ ಹಿನ್ನಡೆ ಕಂಡರೆ, ಅಫ್ಗಾನಿಸ್ತಾನ (6 ಪಾಯಿಂಟ್) ಮತ್ತು ಪಾಕಿಸ್ತಾನ (4 ಪಾಯಿಂಟ್) ತಂಡಗಳಿಗೆ ಕ್ಷೀಣ ಅವಕಾಶ ಒದಗಲಿದೆ.

ಇನ್ನೊಂದೆಡೆ ದಕ್ಷಿಣ ಆಫ್ರಿಕಾ 6 ಪಂದ್ಯಗಳಿಂದ 10 ಪಾಯಿಂಟ್ಸ್ ಗಳಿಸಿ ಪಾಯಿಂಟ್ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದೆ. ಬುಧವಾರದ ಪಂದ್ಯ ಗೆದ್ದರೆ ಅದರ ಸೆಮಿಫೈನಲ್ ಸ್ಥಾನ ಗಟ್ಟಿಯಾಗಲಿದೆ.

ಎರಡೂ ತಂಡಗಳು ಬ್ಯಾಟಿಂಗ್‌ನಲ್ಲಿ ಪ್ರಭಾವಶಾಲಿ ಪ್ರದರ್ಶನ ನೀಡಿವೆ. ಹೀಗಾಗಿ ಇದು ಬ್ಯಾಟರ್‌ಗಳ ಮೇಲಾಟವಾಗುವ ಸಾಧ್ಯತೆಯಿದೆ. ಆದರೆ ಗಹುಂಜೆಯಲ್ಲಿರುವ ಎಂಸಿಎ ಕ್ರೀಡಾಂಗಣದ ಪಿಚ್ ಬ್ಯಾಟರ್‌ಗಳ ಜೊತೆ ಸ್ಪಿನ್ನರ್‌ಗಳಿಗೂ ಸಾಕಷ್ಟು ನೆರವು ನೀಡುತ್ತಿದೆ. ಶ್ರೀಲಂಕಾ ವಿರುದ್ಧ ಅಫ್ಗಾನಿಸ್ತಾನದ ಸ್ಪಿನ್ನರ್‌ಗಳು ಮಿಂಚಿ ಏಳು ವಿಕೆಟ್ ಗೆಲುವು ಪಡೆದಿದ್ದನ್ನು ಮರೆಯುವಂತಿಲ್ಲ.

ದಕ್ಷಿಣ ಆಫ್ರಿಕಾದ ಅನುಭವಿ ಕ್ವಿಂಟನ್ ಡಿ ಕಾಕ್ ಮೂರು ಶತಕಗಳನ್ನು ಬಾರಿಸಿದ್ದು, 431 ರನ್‌ಗಳೊಡನೆ ಬ್ಯಾಟರ್‌ಗಳ ಯಾದಿಯಲ್ಲಿ ಅಗ್ರಸ್ಥಾನದಲ್ಲಿದ್ದಾರೆ.

ನ್ಯೂಜಿಲೆಂಡ್ ಕಡೆ ಎಡಗೈ ಬ್ಯಾಟರ್ ರಚಿನ್ ರವೀಂದ್ರ (406 ರನ್) ಅವರ ಮೇಲೆ ಎಲ್ಲರ ಗಮನ ನೆಟ್ಟಿದೆ. ಅವರೂ ಈ ವಿಶ್ವಕಪ್‌ನಲ್ಲಿ ರನ್ ಹರಿಸಿದ್ದಾರೆ. ಅವರು ಚೆಂಡನ್ನು ಬೌಂಡರಿಗಳಿಗೆ ಚಿಮ್ಮಿಸುವ ರೀತಿ (ಏರಿಯಲ್ ಹೊಡೆತ) ಆಕರ್ಷಕವಾಗಿದೆ.



ದಕ್ಷಿಣ ಆಫ್ರಿಕಾ ತಂಡದ ಕ್ವಿಂಟನ್ ಡಿ ಕಾಕ್

ನ್ಯೂಜಿಲೆಂಡ್ ತಂಡದ ರಚಿನ್ ರವೀಂದ್ರ

ಪಂದ್ಯ ಆರಂಭ: ಮಧ್ಯಾಹ್ನ 2.00
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ದಕ್ಷಿಣ ಆಫ್ರಿಕಾ ತಂಡದಲ್ಲಿ ಹೆನ್ರಿಚ್ ಕ್ಲಾಸೆನ್ ಅವರು ಬಿರುಸಿನ ಆಟವಾಡಿದರೆ, ನ್ಯೂಜಿಲೆಂಡ್‌ನಲ್ಲಿ ಜಿಮ್ಮಿ ನಿಶಾಮ್ ಅವರೂ ಅಂಥ ಆಟವಾಡಬಲ್ಲ ಸಮರ್ಥರು. ಧರ್ಮಶಾಲಾದಲ್ಲಿ ಅವರ ಆಟ ಆಸ್ಟ್ರೇಲಿಯಾಕ್ಕೆ ಬೆವರಿಳಿಸಿತ್ತು. ದಕ್ಷಿಣ ಆಫ್ರಿಕಾ ತಂಡದಲ್ಲಿ ಡೇವಿಡ್ ಮಿಲ್ಲರ್ ಅವರ ತೋಳ್ಬಲದ ಆಟ ಇದ್ದರೆ, ಕಿವೀಸ್ ಪರ ಡೇರಿಲ್ ಮಿಚೆಲ್ (322) ಇನಿಂಗ್ಸ್‌ಗೆ ವೇಗ ತುಂಬಬಲ್ಲರು.

ದಕ್ಷಿಣ ಆಫ್ರಿಕಾ ತಂಡ ಬೌಲಿಂಗ್‌ನಲ್ಲಿ ಕಗಿಸೊ ರಬಾಡ ಅವರಿಂದ ಹೆಚ್ಚಿನದನ್ನು ನಿರೀಕ್ಷಿಸುತ್ತಿದೆ. ಗಾಯಾಳಾದ ಕಾರಣ ಅವರು ಪಾಕ್ ವಿರುದ್ಧ ಪಂದ್ಯದಲ್ಲಿ ಆಡಿರಲಿಲ್ಲ. ಅವರ ಉಪಸ್ಥಿತಿ ಯುವ ಬೌಲರ್‌ಗಳಾದ ಜೆರಾಲ್ಡ್ ಕೊಯೆಟ್ಜಿ ಮತ್ತು ಮಾರ್ಕೊ ಜೆನ್ಸೆನ್ ಅವರಿಗೆ ಸ್ಫೂರ್ತಿ ತುಂಬಬಲ್ಲದು. ದಕ್ಷಿಣ ಆಫ್ರಿಕಕ್ಕೆ ಒಂದು ವಿಭಾಗದಲ್ಲಿ ಅನುಕೂಲವಿರುವುದು ಸ್ಪಿನ್‌ನಲ್ಲಿ. ಕೇಶವ ಮಹಾರಾಜ್ ಜೊತೆ ತಬ್ರೇಜ್ ಸಂಶಿ ಉತ್ತಮ ಪ್ರದರ್ಶನ ನೀಡುತ್ತಿದ್ದಾರೆ.

ನ್ಯೂಜಿಲೆಂಡ್ ಸ್ಪಿನ್ ವಿಭಾಗದಲ್ಲಿ ಮಿಚೆಲ್ ಸ್ಯಾಂಟನರ್ ಅವರಿಂದ ಉತ್ತಮ ಪ್ರದರ್ಶನ ನಿರೀಕ್ಷಿಸಿದೆ. ಗ್ಲೆನ್ ಫಿಲಿಪ್ಸ್ ಅವರೂ ಈ ವಿಭಾಗದಲ್ಲಿ ತಂಡಕ್ಕೆ ಬಲತುಂಬಬಲ್ಲರು.

ಮೆಸ್ಸಿಗೆ ಎಂಟನೇ 'ಬ್ಯಾಲನ್ ಡಿ ಒರ್'

ಪ್ಯಾರಿಸ್ (ಎಎಫ್‌ಪಿ): ಅರ್ಜೆಂಟೀನಾದ ಲಯೊನೆಲ್ ಮೆಸ್ಸಿ ಅವರು ವಿಶ್ವದ ಶ್ರೇಷ್ಠ ಫುಟ್‌ಬಾಲ್ ಆಟಗಾರನಿಗೆ ನೀಡುವ ಪ್ರತಿಷ್ಠಿತ 'ಬ್ಯಾಲನ್ ಡಿ ಒರ್' ಪ್ರಶಸ್ತಿಗೆ ದಾಖಲೆಯ ಎಂಟನೇ ಬಾರಿ ಭಾಜನರಾದರು.

ಪ್ಯಾರಿಸ್‌ನಲ್ಲಿ ಸೋಮವಾರ ರಾತ್ರಿ ನಡೆದ ವರ್ಣರಂಜಿತ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಮಹಿಳೆಯರ ವಿಭಾಗದಲ್ಲಿ ಈ ಗೌರವವನ್ನು ವಿಶ್ವಕಪ್ ವಿಜೇತ ಸ್ಪೇನ್ ತಂಡದ ಐತಾನ ಬೊನ್ಮತಿ ಪಡೆದರು.

ಫ್ರಾನ್ಸ್‌ನ ಕಿಲಿಯಾನ್ ಎಂಬಾಪೆ ಮತ್ತು ನಾರ್ವೆಯ ಎರ್ಲಿಂಗ್ ಹಾಲಾಂಡ್ ಅವರನ್ನು ಹಿಂದಿಕ್ಕುವಲ್ಲಿ ಮೆಸ್ಸಿ ಯಶಸ್ವಿಯಾದರು. ಕಳೆದ ವರ್ಷ ಕತಾರ್‌ನಲ್ಲಿ ನಡೆದಿದ್ದ ಫಿಫಾ ವಿಶ್ವಕಪ್ ಟೂರ್ನಿಯಲ್ಲಿ ಅರ್ಜೆಂಟೀನಾ ತಂಡ ಟ್ರೋಫಿ ಜಯಿಸುವಲ್ಲಿ ಮೆಸ್ಸಿ ನಿರ್ಣಾಯಕ ಪಾತ್ರ ವಹಿಸಿದ್ದರು. ಆದ್ದರಿಂದ ಅವರು ಬಾರಿ ಪ್ರಶಸ್ತಿ ಗೆಲ್ಲುವುದು ಬಹುತೇಕ ಖಚಿತವಾಗಿತ್ತು.

'ಈ ಪ್ರಶಸ್ತಿಯು ವಿಶ್ವಕಪ್ ಗೆದ್ದ ಅರ್ಜೆಟೀನಾ ತಂಡಕ್ಕೆ ದೊರೆತ ಉಡು ಗೊರೆಯಾಗಿದೆ' ಎಂದು ಮೆಸ್ಸಿ ಪ್ರತಿಕ್ರಿಯಿಸಿದರು. ತಮ್ಮ ಎಂಟನೇ ಟ್ರೋಫಿಯನ್ನು ಅವರು ಅರ್ಜೆಂಟೀನಾದ ದಿಗ್ಗಜ ಆಟಗಾರ ಡಿಯಾಗೊ ಮರಡೋನಾ ಅವರಿಗೆ ಅರ್ಪಿಸಿದರು.

36 ವರ್ಷದ ಮೆಸ್ಸಿ ಅವರಿಗೆ 2009 ರಿಂದ 2012ರ ವರೆಗೆ ಸತತ ನಾಲ್ಕು ವರ್ಷ ಈ ಪ್ರಶಸ್ತಿ ಒಲಿದಿತ್ತು. ಆ ಬಳಿಕ 2015, 2019 ಮತ್ತು 2021 ರಲ್ಲೂ ಜಯಿಸಿದ್ದರು. ಪೋರ್ಚುಗಲ್‌ನ ಕ್ರಿಸ್ಟಿಯಾನೊ ರೊನಾಲ್ಡೊ ಅವರು ಐದು ಸಲ ಈ ಪ್ರಶಸ್ತಿ ಜಯಿಸಿದ್ದಾರೆ. ಕಳೆದ ವರ್ಷ ಫ್ರಾನ್ಸ್‌ನ ಕರೀಂ ಬೆಂಜೆಮಾ ಅವರಿಗೆ ಗೌರವ ಲಭಿಸಿತ್ತು.

ಮಹಿಳೆಯರ ವಿಭಾಗದಲ್ಲಿ ಪ್ರಶಸ್ತಿ ಗೆದ್ದ ಸ್ಪೇನ್ ತಂಡದ ಮಿಡ್‌ಫೀಲ್ಡರ್ ಬೊನ್ಮತಿ ಅವರು ಫಿಫಾ ವಿಶ್ವಕಪ್ ಟೂರ್ನಿಯಲ್ಲಿ 'ಶ್ರೇಷ್ಠ ಆಟಗಾರ್ತಿ' ಎನಿಸಿ ಕೊಂಡಿದ್ದರು. 25 ವರ್ಷದ ಅವರು ಬಾರ್ಸಿಲೋನಾ ತಂಡ ಕಳೆದ ಋತು ವಿನಲ್ಲಿ ಚಾಂಪಿಯನ್ಸ್ ಲೀಗ್ ಟೂರ್ನಿ ಗೆಲ್ಲುವಲ್ಲೂ ಕೊಡುಗೆ ನೀಡಿದ್ದರು.



ಬ್ಯಾಲನ್ ಡಿ ಒರ್ ಪ್ರಶಸ್ತಿ ಸ್ವೀಕರಿಸಿದ ಲಯೊನೆಲ್ ಮೆಸ್ಸಿ ಅವರು ಪುತ್ರರೊಂದಿಗೆ ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ಮಹಿಳಾ ಹಾಕಿ: ಸೆಮಿಗೆ ಭಾರತ

ರಾಂಚಿ (ಪಿಟಿಐ): ಭಾರತ ಮಹಿಳಾ ತಂಡದವರು ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯಲ್ಲಿ ಸತತ ನಾಲ್ಕನೇ ಗೆಲುವಿನೊಂದಿಗೆ ಸೆಮಿಫೈನಲ್‌ಗೆ ಲಗ್ಗೆಯಿಟ್ಟರು.

ಮಂಗಳವಾರ ನಡೆದ ಪಂದ್ಯದಲ್ಲಿ ಭಾರತ 2–1 ಗೋಲುಗಳಿಂದ ಜಪಾನ್ ತಂಡವನ್ನು ಮಣಿಸಿತು. ನವನೀತ್ ಕೌರ್ (31ನೇ ನಿ.) ಮತ್ತು ಸಂಗೀತಾ ಕುಮಾರಿ (47) ಅವರು ಗೋಲು ಗಳಿಸಿ ಗೆಲುವಿಗೆ ಕಾರಣರಾದರು. ಜಪಾನ್ ತಂಡದ ಏಕೈಕ ಗೋಲನ್ನು ಕನಾ ಉರಾತ (37ನೇ ನಿ.) ತಂದಿತ್ತರು.

ಭಾರತ ತಂಡ ಗುರುವಾರ ನಡೆಯಲಿರುವ ಕೊನೆಯ ಲೀಗ್ ಪಂದ್ಯದಲ್ಲಿ ದಕ್ಷಿಣ ಕೊರಿಯಾ ತಂಡವನ್ನು ಎದುರಿಸಲಿದೆ.



ವಂದನಾ ಕಟಾರಿಯಾ

ವಂದನಾಗೆ 300ನೇ ಪಂದ್ಯ: ಭಾರತ ತಂಡದ ವಂದನಾ ಕಟಾರಿಯಾ ಅವರು ಈ ಹಣಾಹಣಿ ಮೂಲಕ 300 ಅಂತರರಾಷ್ಟ್ರೀಯ ಪಂದ್ಯಗಳನ್ನಾಡಿದ ಸಾಧನೆ ಮಾಡಿದರು.

ಟೇಬಲ್ ಟೆನಿಸ್ ಟೂರ್ನಿ ನ.7ರಿಂದ

ಬೆಂಗಳೂರು: ಬೆಂಗಳೂರು ಗ್ರಾಮಾಂತರ ಜಿಲ್ಲಾ ಟೇಬಲ್ ಟೆನಿಸ್ ಸಂಸ್ಥೆಯ ಆಶ್ರಯದಲ್ಲಿ ಡಾ.ಎಂ.ಎಸ್. ರಾಮಯ್ಯ ಸ್ಮಾರಕ 25ನೇ ವರ್ಷದ ಕರ್ನಾಟಕ ರಾಜ್ಯ ರ‍್ಯಾಂಕಿಂಗ್ ಟಿಟಿ ಟೂರ್ನಿಯನ್ನು ನ.7ರಿಂದ 11ರವರೆಗೆ ಬೆಂಗಳೂರಿನ ಮಲ್ಲೇಶ್ವರಂ ಸಂಸ್ಥೆಯಲ್ಲಿ ಆಯೋಜಿಸಲಾಗಿದೆ.

ಬಾಲಕ ಮತ್ತು ಬಾಲಕಿಯರ ಸಿಂಗಲ್ಸ್‌ನಲ್ಲಿ 11, 13, 15, 17, 19 ವರ್ಷದೊಳಗಿನವರ ವಿಭಾಗ, ಪುರುಷರ ಮತ್ತು ಮಹಿಳೆಯರ ವಿಭಾಗ ಹಾಗೂ ಎನ್‌ಎಂಎಸ್ ಸ್ಪರ್ಧೆಗಳು ನಡೆಯಲಿವೆ. ಮಾಹಿತಿಗೆ: +91 82177 96386.

ಐಎಸ್‌ಎಲ್: ಬಿಎಫ್‌ಸಿಗೆ ಸೋಲು

ಭುವನೇಶ್ವರ: ಎರಡು ಗೋಲುಗಳ ಮುನ್ನಡೆ ಅನುಭವಿಸಿದರೂ, ಪಂದ್ಯದ ಮೇಲಿನ ಹಿಡಿತ ಕೈಬಿಟ್ಟ ಬಿಎಫ್‌ಸಿ ತಂಡದವರು ಐಎಸ್‌ಎಲ್ ಫುಟ್‌ಬಾಲ್ ಟೂರ್ನಿಯಲ್ಲಿ 2–3 ರಿಂದ ಒಡಿಶಾ ಎಫ್‌ಸಿ ಕೈಯಲ್ಲಿ ಪರಾಭವಗೊಂಡರು.

ಕಳಿಂಗಾ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಸುನಿಲ್ ಚೆಟ್ರಿ ಅವರು 8ನೇ ನಿಮಿಷದಲ್ಲಿ ಬಿಎಫ್‌ಸಿಗೆ ಮೇಲುಗೈ ತಂದಿತ್ತರೆ, ರಯಾನ್ ವಿಲಿಯಮ್ಸ್ ಅವರು 18ನೇ ನಿಮಿಷದಲ್ಲಿ ಗೋಲು ಗಳಿಸಿ ಮುನ್ನಡೆಯನ್ನು 2–0ಗೆ ಹೆಚ್ಚಿಸಿದರು.

ಎರಡು ಗೋಲುಗಳ ಹಿನ್ನಡೆ ಅನುಭವಿಸಿದರೂ ಒಡಿಶಾ ತಂಡ ಪುಟಿದೆದ್ದು ನಿಂತಿತು.

ಲಾಲ್ತಾಂಗ ಖಾವ್ಲ್ರಿಂಗ್ ಅವರು 23ನೇ ನಿಮಿಷದಲ್ಲಿ ಚೆಂಡನ್ನು ಗುರಿ ಸೇರಿಸಿದರು. ವಿರಾಮಕ್ಕೆ ಕೆಲವೇ ಸೆಕೆಂಡುಗಳಿರುವಾಗ ಐಸಾಕ್ ವನ್‌ಲಾಲ್‌ರುವಾಫೆಲಾ (45 ನೇ ನಿ.) ಅವರು ಗೋಲು ಗಳಿಸಿ ಪಂದ್ಯವನ್ನು 2–2ರಲ್ಲಿ ಸಮಸ್ಥಿತಿಗೆ ತಂದರು.

60ನೇ ನಿಮಿಷದಲ್ಲಿ ಅಮೆಯ್ ಗಣೇಶ್ ರಣವಾಡೆ ಅವರು ಗೋಲು ಗಳಿಸಿ ಒಡಿಶಾ ತಂಡಕ್ಕೆ ಮೇಲುಗೈ ತಂದಿತ್ತರು. ಒಂದು ಗೋಲಿನ ಮುನ್ನಡೆಯನ್ನು ಕೊನೆಯವರೆಗೂ ಕಾಪಾಡಿಕೊಂಡ ತಂಡ, ಪೂರ್ಣ ಮೂರು ಪಾಯಿಂಟ್ಸ್ ಸಂಗ್ರಹಿಸಿತು.

ಫಿಡೆ ಗ್ರ್ಯಾಂಡ್ ಸ್ವಿಸ್ ಚೆಸ್: ನೀಮನ್ ವಿರುದ್ಧ ಜಯ

ಮುನ್ನಡೆ ಹಂಚಿಕೊಂಡ ವಿದಿತ್

ಐಲ್ ಆಫ್ ಮ್ಯಾನ್ (ಯುಕೆ), (ಪಿಟಿಐ): ಅಮೆರಿಕದ ಆಟಗಾರ ಹಾನ್ಸ್ ನೀಮನ್ ಅವರ ರಕ್ಷಣಾಕೋಟೆ ಧ್ವಂಸಗೊಳಿಸಿದ ಭಾರತದ ವಿದಿತ್ ಗುಜರಾತಿ ಫಿಡೆ ಗ್ರ್ಯಾಂಡ್ ಸ್ವಿಸ್ ಟೂರ್ನಿಯ ಆರನೇ ಸುತ್ತಿನ ನಂತರ ಇತರ ಏಳು ಆಟಗಾರರ ಜೊತೆ ಮುನ್ನಡೆ ಹಂಚಿಕೊಂಡಿದ್ದಾರೆ. ಈ ಎಂಟು ಮಂದಿ ಆಟಗಾರರು ತಲಾ ನಾಲ್ಕೂವರೆ ಅಂಕ ಸಂಗ್ರಹಿಸಿದ್ದು, ಇವರಲ್ಲಿ ಭಾರತದ ಇನ್ನೊಬ್ಬ ಗ್ರ್ಯಾಂಡ್‌ಮಾಸ್ಟರ್ ಅರ್ಜುನ್ ಇರಿಗೇಶಿ ಅವರೂ ಇದ್ದಾರೆ.

ಮೊದಲ ಸುತ್ತಿನಲ್ಲೇ ಸೋತಿದ್ದ ವಿದಿತ್‌ಗೆ ಇದು ನಂತರದ ಐದು ಸುತ್ತುಗಳಲ್ಲಿ ನಾಲ್ಕನೇ ಜಯ. ಮಂಗಳವಾರ ಕೌಶಲಪೂರ್ಣ ಆಟವಾಡಿದ ನಾಸಿಕ್‌ನ ಆಟಗಾರ ಆರನೇ ಬೋರ್ಡ್‌ನಲ್ಲಿ 53 ನಡೆಗಳಲ್ಲಿ ನೀಮನ್ ಮೇಲೆ ಜಯಗಳಿಸಿದರು. ಎರಡನೇ ಬೋರ್ಡ್‌ನಲ್ಲಿ ಆಡಿದ ಅರ್ಜುನ್, ಚೀನಾದ ಯು ಯಾಂಗ್ವಿ ಜೊತೆ 'ಡ್ರಾ' ಒಪ್ಪಂದಕ್ಕೆ ಸಹಿ ಮಾಡಿದರು.

ವಿದಿತ್, ಅರ್ಜುನ್ ಜೊತೆಗೆ ಅಮೆರಿಕದ ಫ್ಯಾಬಿಯಾನೊ ಕರುವಾನ, ನಕಾರು ಹಿಕಾಮುರಾ, ರಷ್ಯಾದ ಆ್ಯಂಡ್ರಿ ಇಸಿಪೆಂಕೊ, ಸರ್ಬಿಯಾದ ಅಲೆಕ್ಸಾಂಡರ್ ಪ್ರೆಡ್ಕೆ, ಉಜ್ಬೇಕಿಸ್ತಾನದ ಜಾವೊಖಿರ್ ಸಿಂದರೋವ್ ಮತ್ತು ಪೋಲೆಂಡ್‌ನ ರೆಡೊಸ್ಲಾವ್ ವೊಜ್ತಾಝೆಕ್ ಅವರೂ 4.5 ಪಾಯಿಂಟ್ಸ್ ಕಲೆಹಾಕಿದ್ದಾರೆ.



ವಿದಿತ್ ಗುಜರಾತಿ

ಅರವಿಂದ್ ಚಿದಂಬರಮ್, ಎಸ್.ಎಲ್.ನಾರಾಯಣನ್ ಮತ್ತು ನಿಹಾಲ್ ಸರಿನ್ ಅವರು ತಲಾ ಮೂರೂವರೆ ಅಂಕ ಸಂಗ್ರಹಿಸಿದ್ದಾರೆ. ಆರನೇ ಸುತ್ತಿನಲ್ಲಿ ಚಿದಂಬರಮ್, ತಮಗಿಂತ ಮೇಲಿನ ರ‍್ಯಾಂಕಿನ ನೊಡಿರ್ಬೆಕ್ ಅಬ್ದುಸತ್ತಾರೊವ್ (ಉಜ್ಬೇಕಿಸ್ತಾನ) ಅವರ ಜೊತೆ ಡ್ರಾ ಮಾಡಿಕೊಂಡರೆ, ಕೇರಳದ ಆಟಗಾರರಾದ ನಿಹಾಲ್ ಮತ್ತು ನಾರಾಯಣನ್ 'ಡ್ರಾ' ಒಪ್ಪಂದಕ್ಕೆ ಬಂದರು.

ಪ್ರಗ್ಗುಗೆ ಹಿನ್ನಡೆ: ಕಳೆದ ಕೆಲವು ತಿಂಗಳಿಂದ ಉತ್ತಮ ಪ್ರದರ್ಶನ ನೀಡಿದ್ದ ಪ್ರಜ್ಞಾನಂದ ಇಲ್ಲಿ ಒಂದೂ ಜಯ ಸಾಧಿಸಲು ಆಗಿಲ್ಲ. ಅವರೂ ಆಡಿದ ಆರೂ ಪಂದ್ಯಗಳು 'ಡ್ರಾ' ಆಗಿದ್ದು ಮೂರು ಪಾಯಿಂಟ್ಸ್ ಸಂಗ್ರಹಿಸಿದ್ದಾರೆ. ಆರನೇ ಸುತ್ತಿನಲ್ಲಿ ಅವರು ಶಾಂತ್ ಸರ್ಗ್ಸಿಯಾನ್ (ಅರ್ಮೇನಿಯಾ) ಜೊತೆ ಪಾಯಿಂಟ್ ಹಂಚಿಕೊಳ್ಳಲು ನಿರ್ಧರಿಸಿದರು.

ಪಿ.ಹರಿಕೃಷ್ಣ (3), ಸ್ವದೇಶದ ಅರ್ಯನ್ ಚೋಪ್ರಾ (3) ಜೊತೆ ಡ್ರಾ ಮಾಡಿಕೊಂಡರು. ಆದರೆ ಭಾರತದ ಅಗ್ರಮಾನ್ಯ ಆಟಗಾರ ಗುಕೇಶ್ (2) ಅವರ ನಿರಾಶಾದಾಯಕ ಪ್ರದರ್ಶನ ಮುಂದುವರಿಯಿತು. ಅವರು ತಮಗಿಂತ ಕೆಳಕ್ರಮಾಂಕದ ಅಯ್ದಿನ್ ಸುಲೆಮಾನ್ಲಿ (ಅಜರ್‌ಬೈಜಾನ್) ಅವರೆದುರು ಸೋಲೊಪ್ಪಬೇಕಾಯಿತು.

ಎರಡನೇ ಸ್ಥಾನದಲ್ಲಿ ವೈಶಾಲಿ: ಮಹಿಳಾ ವಿಭಾಗದಲ್ಲಿ ಆರ್.ವೈಶಾಲಿ ಯಶಸ್ಸಿನ ಓಟ ಮುಂದುವರಿಸಿದ್ದು, ಎರಡನೇ ಬೋರ್ಡ್‌ನಲ್ಲಿ ಅಗ್ರ ಶ್ರೇಯಾಂಕದ ಅಲೆಕ್ಸಾಂಡ್ರಾ ಗೊರ್ಯಾಚ್ಕಿನ್ಸ್ (ರಷ್ಯಾ) ಜೊತೆ 'ಡ್ರಾ' ಮಾಡಿಕೊಂಡರು. ವೈಶಾಲಿ ನಾಲ್ಕೂವರೆ ಅಂಕ ಸಂಗ್ರಹಿಸಿ ಎರಡನೇ ಸ್ಥಾನದಲ್ಲೇ ಮುಂದುವರಿದಿದ್ದಾರೆ.

ಉಕ್ರೇನ್‌ನ ಅನ್ನಾ ಮುಝಿಚುಕ್ (5) ಆರನೇ ಸುತ್ತಿನಲ್ಲಿ ನಿನ್ನೆಯವರೆಗೆ ಮುನ್ನಡೆಯಲ್ಲಿದ್ದ ಬಿಬಿಸಾರಾ ಅಸ್ಸಾಬುಯೇವಾ (ಕಜಕಸ್ತಾನ, 4.5) ಅವರನ್ನು ಸೋಲಿಸಿ ಅಗ್ರಸ್ಥಾನಕ್ಕೇರಿದರು.

ಭಾರತದ ಆಟಗಾರ್ತಿಯರಿದ್ದ ಇನ್ನೊಂದು ಪಂದ್ಯದಲ್ಲಿ ಡಿ.ಹಾರಿಕಾ (3.5) ಅವರು ಸ್ವದೇಶದ ಬಿ.ಸವಿತಾ ಶ್ರೀ (2.5) ಅವರನ್ನು ಸೋಲಿಸಿದರು.


LG
ಇಂಟರ್‌ನ್ಯಾಷನಲ್
India ka Celebration
Life's Good.
FESTIVE EXCLUSIVE OFFERS
WIN LG DREAM HOME PACKAGE Every Day*
OLED TV • Side-by-Side Refrigerator • Front Load Washing Machine • Water Purifier • Microwave Oven
GRAND PRIZE AUDI Q3*
*Image source: Audi
To participate in these offers, send an SMS <"First Name" "Last Name" GTM Code> to 7835073507
HOME APPLIANCES OFFERS
FREE* GLASS BOWL KIT (On Select Models of Microwave Oven)
FREE* Maintenance worth ₹4200* (Part of 1st Year Package) (On Select Models of Water Purifier)
HOME ENTERTAINMENT OFFERS
3 YEAR* WARRANTY (With Select LG TVs)
FREE* LG SMART CAM Worth ₹9990 (With Select LG TVs)
Up to 26%* CASHBACK Max ₹26000* ON SELECT CREDIT / DEBIT CARDS
OLED CIRCLE An exclusive alliance Get benefits up to ₹50000*
UP TO 30% OFF ON LG SOUNDBAR* (With Select LG TVs)
FIXED EMI Starting from ₹2999*
ADDITIONAL OFFERS
1 EMI Free / 0 Down Payment
THE KING OF SALE IS BACK
ಮೆಗಾ ಫೆಸ್ಟಿವಲ್ ಸೇಲ್
ಗೆಲ್ಲಿರಿ 8 ಕೋಟಿ ಮೌಲ್ಯದ ವರೆಗಿನ ಆಕರ್ಷಕ ಬಹುಮಾನಗಳು
ಗೆಲ್ಲಿರಿ 30 ಲಕ್ಷ ವರೆಗಿನ ಉಚಿತ ಶಾಪಿಂಗ್
ಗೆಲ್ಲಿರಿ 10 HYUNDAI AURA
ಗೆಲ್ಲಿರಿ 10 HYUNDAI GRAND i10 NIOS
Celebrate Diwali with irresistible offers from LG.
OLED C3 | 195(77) / 164(65) / 139(55)
LG OLED evo
• Self-Lit Pixels / α9 AI Processor 4K Gen6 / 120Hz
• Dolby Vision & Dolby Atmos
• NVIDIA G-Sync / AMD FreeSync / VRR / WiFi 6
20% CASHBACK ₹15000
EMI: ₹3,999*
UHD-UR9050 | 190(75) / 164(65) / 139(55) 108(43)
LG UHD AI ThinQ
• 4K Display / α5 AI Processor 4K Gen6
• Built-in Alexa / Apple Airplay & HomeKit / Works with Hey Google
10% CASHBACK ₹5000
EMI: ₹2,999*
Nano 80 | 164(65) / 139(55)
• Real 4K NanoCell / α5 AI Processor 4K Gen5
• AI Brightness Control, Local Dimming
• Built-in Google Assistant & Alexa
10% CASHBACK ₹7500
EMI: ₹2,999*
UHD-UR8040 | 190(75) / 177(70) / 164(65) 139(55) / 127(50) / 108(43)
LG UHD AI ThinQ
• 4K Display / α5 AI Processor 4K Gen6
• Built-in Alexa / Apple Airplay & HomeKit / Works with Hey Google
10% CASHBACK ₹5000
EMI: ₹3,999*
UHD-UR7790 | 108(43)
• 4K Display / α5 AI Processor 4K Gen6
• Built-in Alexa / Apple Airplay & HomeKit / Works with Hey Google
10% CASHBACK ₹3500
EMI: ₹999*
Presenting Wi-Fi Convertible Powered by AI ThinQ
NOW, CONVERT FREEZER TO FRIDGE FROM ANYWHERE!
BUY 1 LG SIDE-BY-SIDE REFRIGERATOR*
GET 1 DOUBLE DOOR REFRIGERATOR*
Worth ₹29499/-*
GL-B257EPZX
• Side-By-Side
• AI ThinQ
• DoorCooling+™
• Hygiene Fresh+™
• Smart Diagnosis™
• Multi Air Flow
• Express Freeze
• Easy Ice Maker (Door Mounted)
• Multi Digital Sensor
• Smart Inverter Compressor™
• Colour: Shiny Steel
EMI: ₹4,999*
20% CASHBACK ₹20000
Capacity: 655/650* Litres
GL-T342TPZY
• AI ThinQ™
• DoorCooling+™
• Convertible
• Digital Display
• Smart Inverter Compressor™
• Toughened Glass Shelves
• Lower Door Basket
• Auto Smart Connect™
• Rating: 3-Star*/2-Star^
• Colour: Shiny Steel
EMI: ₹2,999*
15% CASHBACK ₹7000
Capacity: 343*/322^ Litres
GL-T262TESX#
• AI ThinQ™
• DoorCooling+™
• Convertible
• Digital Display
• Smart Inverter Compressor™
• Toughened Glass Shelves
• Lower Door Basket
• Auto Smart Connect™
• Rating: 3-Star
• Colour: Ebony Sheen
EMI: ₹1,999*
15% CASHBACK ₹7000
Capacity: 246* Litres
NEW ARRIVAL
FHD1107STB 11 kg (Wash) 7 kg (Dry)
• AI DD®
• 6 Motion DD
• TurboWash 360°
• Steam+
• LG ThinQ™ (Wi-Fi)
• Smart Diagnosis
• 10-Year Warranty*
• RPM: Max. 1400
• Color: Black VCM
20% CASHBACK ₹12500
EMI: ₹6,299*
FHP1411Z9B 11 kg
• AI DD®
• 6 Motion DD
• TurboWash 360°
• Steam+
• LG ThinQ™ (Wi-Fi)
• Smart Diagnosis
• 10-Year Warranty*
• RPM: Max. 1400
• Color: Platinum Silver
20% CASHBACK ₹12000
EMI: ₹2,999*
FHV1409Z4M 9 kg
• AI DD®
• 6 Motion DD
• Steam™
• Smart Diagnosis
• 10-Year Warranty*
• RPM: Max. 1400
• Color: Middle Black
15% CASHBACK ₹9000
EMI: ₹3,999*
THD10SWP 10 kg
• AI DD®
• 6 Motion DD
• Direct Drive Motor
• TurboWash™
• LG ThinQ™ (Wi-Fi)
• Smart Diagnosis
• Color: Middle Black
15% CASHBACK ₹4500
EMI: ₹1,999*
T70AJMB1Z 7 kg
• Smart Inverter Motor
• Auto Tub Clean
• Jet Spray+
• TurboWash™
• Smart Diagnosis
• TurboDrum
• Soft Closing Door
• Color: Middle Black
5% CASHBACK ₹2500
EMI: ₹1,750*
*T & C Apply.
PRODUCT & SERVICE RELATED ENQUIRIES
+91 91084 44777
SERVICE/HELPLINE: 080-42 46 43 43 10AM TO 7PM
FOLLOW US!
FREE DELIVERY
FOR REFRIGERATORS, WASHING MACHINES, LED TV'S
Store Locator

ರಾಷ್ಟ್ರೀಯ ಕ್ರೀಡಾಕೂಟ: ಬೆಳ್ಳಿ ಜಯಿಸಿದ ಶ್ರೀಹರಿ, ಹಷಿಕಾ

ಈಜು: ಶಾನ್, ಲಕ್ಷ್ಯಾಗೆ ಚಿನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಶಾನ್ ಗಂಗೂಲಿ ಅವರು ಗೋವಾದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಕ್ರೀಡಾಕೂಟದ ಈಜು ಸ್ಪರ್ಧೆಯ ಪುರುಷರ 400 ಮೀ. ಮೆಡ್ಲೆಯಲ್ಲಿ ಕೂಟ ದಾಖಲೆಯೊಂದಿಗೆ ಚಿನ್ನ ಜಯಿಸಿದರು.

ಮಂಗಳವಾರ ನಡೆದ ಸ್ಪರ್ಧೆಯನ್ನು ಅವರು 4 ನಿ. 28.09 ಸೆ.ಗಳಲ್ಲಿ ಪೂರೈಸಿದರು. ಮಧ್ಯಪ್ರದೇಶದ ಅದ್ವೈತ್ ಪಾಗೆ ಮತ್ತು ಕೇರಳದ ಸಜನ್ ಪ್ರಕಾಶ್ ಅವರು ಕ್ರಮವಾಗಿ ಬೆಳ್ಳಿ ಹಾಗೂ ಕಂಚು ಪಡೆದರು.

ಮಹಿಳೆಯರ 400 ಮೀ. ಮೆಡ್ಲೆಯಲ್ಲಿ ಚಿನ್ನ ಹಾಗೂ ಬೆಳ್ಳಿ ಕರ್ನಾಟಕದ ಪಾಲಾಯಿತು. ಎಸ್.ಲಕ್ಷ್ಯಾ (5 ನಿ. 12.27 ಸೆ.) ಅಗ್ರಸ್ಥಾನ ಪಡೆದರೆ, ಹಷಿಕಾ ರಾಮಚಂದ್ರ (5 ನಿ. 13.42 ಸೆ.) ಎರಡನೆಯವರಾದರು.

ಶ್ರೀಹರಿಗೆ ಬೆಳ್ಳಿ: ಶ್ರೀಹರಿ ನಟರಾಜ್ ಅವರು ಪುರುಷರ 50 ಮೀ. ಫ್ರೀಸ್ಟೈಲ್ ಸ್ಪರ್ಧೆಯನ್ನು 22.91 ಸೆ.ಗಳೊಂದಿಗೆ ಪೂರೈಸಿ ಬೆಳ್ಳಿ ಜಯಿಸಿದರು. ಮಹಾರಾಷ್ಟ್ರದ ವೀರ್‌ಧವಳ್ ಖಾಡೆ (22.82 ಸೆ.) ಅವರ ಕೂಟ ದಾಖಲೆಯೊಂದಿಗೆ ಈ ಸ್ಪರ್ಧೆಯ ಚಿನ್ನ ಗೆದ್ದರು.


ಶಾನ್ ಗಂಗೂಲಿ


ಎಸ್.ಲಕ್ಷ್ಯಾ

ಟೆನಿಸ್ ಫೈನಲ್‌ಗೆ ಕರ್ನಾಟಕ: ಸೆಮಿಫೈನಲ್‌ನಲ್ಲಿ ಎರಡನೇ ಶ್ರೇಯಾಂಕದ ಉತ್ತರ ಪ್ರದೇಶ ತಂಡವನ್ನು 2–1 ರಿಂದ ಮಣಿಸಿದ ಕರ್ನಾಟಕದ ಪುರುಷರ ತಂಡದವರು ಟೆನಿಸ್ ಟೂರ್ನಿಯ ಫೈನಲ್ ಪ್ರವೇಶಿಸಿದರು.

ಸಿಂಗಲ್ಸ್‌ನಲ್ಲಿ ಆದಿಲ್ ಕಲ್ಯಾಣಪುರ್ 3–6, 3–6 ರಿಂದ ಸಿದ್ಧಾರ್ಥ್ ವಿಶ್ವಕರ್ಮ ಎದುರು ಪರಾಭವಗೊಂಡರು. ಆದರೆ ಎರಡನೇ ಸಿಂಗಲ್ಸ್‌ನಲ್ಲಿ ಎಸ್.ಡಿ.ಪ್ರಜ್ವಲ್ ದೇವ್ 6–4, 6–2 ರಿಂದ ಸಿದ್ಧಾರ್ಥ್ ರಾವತ್ ಅವರನ್ನು ಮಣಿಸಿ ಪಂದ್ಯವನ್ನು ಸಮಸ್ಥಿತಿಗೆ ತಂದರು. ನಿರ್ಣಾಯಕ ಡಬಲ್ಸ್‌ನಲ್ಲಿ ಪ್ರಜ್ವಲ್‌–ಆದಿಲ್ 6–3, 7–5 ರಿಂದ ವಿಶ್ವಕರ್ಮ–ರಾವತ್ ಅವರನ್ನು ಸೋಲಿಸಿದರು.

ಶ್ರೇಯಾಂಕರಹಿತ ಕರ್ನಾಟಕ ತಂಡ ಇದಕ್ಕೂ ಮುನ್ನ ಕ್ವಾರ್ಟರ್ ಫೈನಲ್‌ನಲ್ಲಿ 2–1 ರಿಂದ ಸರ್ವಿಸಸ್ ತಂಡಕ್ಕೆ ಆಘಾತ ನೀಡಿತ್ತು. ಮಹಿಳಾ ತಂಡದವರು ಕ್ವಾರ್ಟರ್ ಫೈನಲ್‌ಲ್ಲಿ ತಮಿಳುನಾಡು ಎದುರು ಸೋತು ಹೊರಬಿದ್ದರು.

ಭಾಸ್ಕರ್‌ಗೆ ಬಿಲಿಯರ್ಡ್ಸ್ ಚಿನ್ನ: ಕರ್ನಾಟಕದ ಭಾಸ್ಕರ್ ಬಾಲಚಂದ್ರ ಅವರು ಬಿಲಿಯರ್ಡ್ಸ್ ಫೈನಲ್‌ನಲ್ಲಿ 3–1 ರಿಂದ ಮಹಾರಾಷ್ಟ್ರದ ರೋಹನ್ ಅವರನ್ನು ಮಣಿಸಿ ಚಿನ್ನ ಜಯಿಸಿದರು. ಬಿಲಿಯರ್ಡ್ಸ್ ಮತ್ತು ಸ್ನೂಕರ್‌ಗೆ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಇದೇ ಮೊದಲ ಬಾರಿ ಅವಕಾಶ ಲಭಿಸಿದೆ.

ಮಹಿಳಾ ರಿಲೇ ತಂಡಕ್ಕೆ ಕಂಚು

ರಾಷ್ಟ್ರೀಯ ಕ್ರೀಡಾಕೂಟದ ಅಥ್ಲೆಟಿಕ್ಸ್‌ನಲ್ಲಿ ಕರ್ನಾಟಕದ 4X100 ಮಹಿಳಾ ರಿಲೇ ತಂಡದವರು ಕಂಚು ಜಯಿಸಿದರು. ಮೇಧಾ ಕಾಮತ್, ಎ.ಟಿ.ದಾನೇಶ್ವರಿ, ಸಿ.ಅಂಜಲಿ ಮತ್ತು ಎಸ್.ಎಸ್. ಸ್ನೇಹಾ ಅವರನ್ನೊಳಗೊಂಡ ತಂಡ 46.22 ಸೆ.ಗಳಲ್ಲಿ ಗುರಿ ತಲುಪಿತು. ಆಂಧ್ರ ಪ್ರದೇಶ (45.61 ಸೆ.) ಮತ್ತು ಕೇರಳ (46.02 ಸೆ.) ತಂಡಗಳು ಕ್ರಮವಾಗಿ ಚಿನ್ನ ಹಾಗೂ ಬೆಳ್ಳಿ ಜಯಿಸಿದವು.

ಯುನೈಟೆಡ್ ತಂಡಕ್ಕೆ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಶಾನ್ ಶಾಹಿ ಅವರ ಆಟದ ಬಲದಿಂದ ಸೌತ್ ಯುನೈಟೆಡ್ ಎಫ್‌ಸಿ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್ ಪಂದ್ಯದಲ್ಲಿ 3–2ರಿಂದ ಯಂಗ್ ಚಾಲೆಂಜರ್ಸ್ ಎಫ್‌ಸಿ ತಂಡವನ್ನು ಮಣಿಸಿತು.

ಮಂಗಳವಾರ ನಡೆದ ಪಂದ್ಯದಲ್ಲಿ ಇಶಾನ್ (60, 90 + 2ನೇ) ಎರಡು ಗೋಲು ಗಳಿಸಿ ಮಿಂಚಿದರು. ಯು.ಕೆ. ಸೂರ್ಯ (70ನೇ) ಯುನೈಟೆಡ್ ಪರ ಒಂದು ಗೋಲು ಗಳಿಸಿದರು. ಚಾಲೆಂಜರ್ಸ್‌ನ ಸೂರಜ್ (20ನೇ), ಲೆಟ್ಮಿನ್ಲುನ್ ಸಿಂಗ್ಸನ್ (53) ತಲಾ ಒಂದು ಬಾರಿ ಚೆಂಡನ್ನು ಗುರಿ ಸೇರಿಸಿದರು.

ಮತ್ತೊಂದು ಪಂದ್ಯದಲ್ಲಿ ಕೊಡಗು ಎಫ್‌ಸಿ ತಂಡವು 2–0ಯಿಂದ ಕಿಕ್‌ಸ್ಟಾರ್ಟ್ ಎಫ್‌ಸಿ ತಂಡವನ್ನು ಪರಾಭವಗೊಳಿಸಿತು. ಬಿಕ್ರಮ್ ಸರ್ಕಾರ್ (60ನೇ), ಅಲೆಕ್ಸ್ ಕೊಂತೌಜಮ್ (73ನೇ) ತಲಾ ಒಂದು ಗೋಲು ತಂದಿತ್ತು.

ಇಂದಿನ ಪಂದ್ಯಗಳು
ಎಎಸ್‌ಸಿ ಅಂಡ್ ಸೆಂಟರ್–ಎಚ್‌ಎಎಲ್ ಎಫ್‌ಸಿ (ಮ.1.30)
ಎಫ್‌ಸಿ ಅಗ್ನಿಪುತ್ರ– ಎಂಇಜಿ ಅಂಡ್ ಸೆಂಟರ್ ಎಫ್‌ಸಿ (ಮ.3.30)

ಚಳಿಗಾಲದ ರೇಸ್‌ಗಳು ನ.3ರಿಂದ

ಬೆಂಗಳೂರು: ಇಲ್ಲಿಯ ಬೆಂಗಳೂರು ರೇಸ್ ಕ್ಲಬ್‌ನಲ್ಲಿ ನ. 3ರಿಂದ ಚಳಗಾಲದ ರೇಸ್‌ಗಳು ಆರಂಭವಾಗಲಿವೆ.

‘ಮುಂದಿನ ವರ್ಷದ ಮಾರ್ಚ್ 16ರವರೆಗೆ ರೇಸ್‌ಗಳು ನಡೆಯಲಿವೆ. ಒಟ್ಟು 22 ರೇಸ್‌ಗಳು ಈ ಬಾರಿ ಇರುತ್ತವೆ. ಒಟ್ಟು ₹ 13.26 ಕೋಟಿ ಬಹುಮಾನಕ್ಕೆ ಮೀಸಲಾಗಿವೆ. ಇದರಲ್ಲಿ 118 ಸಾಮಾನ್ಯ ರೇಸ್‌ಗಳು ಹಾಗೂ 15 ಸ್ವೀಪ್‌ಸ್ಟೇಕ್ಸ್ ರೇಸ್‌ಗಳು ನಡೆಯಲಿವೆ’ ಎಂದು ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಬಿಟಿಸಿ ಅಧ್ಯಕ್ಷ ಅರವಿಂದ್ ರಾಘವನ್ ಹೇಳಿದರು.

ಈ ಅವಧಿಯಲ್ಲಿ ಸುಮಾರು 24 ಟ್ರೈನರ್‌ಗಳು ಹಾಗೂ 70 ಜಾಕಿಗಳು ಪಾಲ್ಗೊಳ್ಳುವ ನಿರೀಕ್ಷೆಯಿದೆ. ಸಂಪ್ರದಾಯದಂತೆ ಚಳಿಗಾಲದ ಪ್ರತಿಷ್ಠಿತ ಹಾಗೂ ಶ್ರೀಮಂತ ರೇಸ್ ಬೆಂಗಳೂರು ಡರ್ಬಿಯನ್ನು ಜನವರಿ 26ರಂದು ಏರ್ಪಡಿಸಲಾಗಿದೆ. ಸುಮಾರು ₹ 2 ಲಕ್ಷ ಮೌಲ್ಯದ ಟ್ರೋಫಿ ಸೇರಿದಂತೆ ಒಟ್ಟು ಬಹುಮಾನದ ಮೊತ್ತವು ₹ 1 ಕೋಟಿ ಇರಲಿದೆ.

ಪ್ರಮುಖ ರೇಸ್‌ಗಳಿಗಾಗಿ ಕೆಲವು ಪ್ರಾಯೋಜಕರೊಂದಿಗೆ ಮಾತುಕತೆ ನಡೆಸುತ್ತಿದೆ. ಪ್ರಾಯೋಕತ್ವ ದೊರಕುವ ಸಾಧ್ಯತೆಗಳ ಬಗ್ಗೆ ಆಶಾದಾಯಕವಾಗಿದ್ದೇವೆ ಎಂದೂ ಹೇಳಿದರು.

‘ಸಾಧನೆ ಗುರುತಿಸಿರುವುದು ಸಂತಸವಾಗಿದೆ’


ಅಶೋಕ ಏಣಗಿ

ಬೆಂಗಳೂರು: ‘ಸುಮಾರು ಮೂರು ದಶಕಗಳಿಂದ ಕುಸ್ತಿಯಲ್ಲಿ ನಾನು ಮಾಡಿರುವ ಸಾಧನೆಯನ್ನು ರಾಜ್ಯ ಸರ್ಕಾರವು ಗುರುತಿಸಿರುವುದು ಸಂತಸ ತಂದಿದೆ. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಗಳಿಸುವುದು ಹೆಮ್ಮೆಯ ವಿಷಯ’ ಎಂದು ಕುಸ್ತಿಪಟು ಅಶೋಕ ಏಣಗಿ ಹೇಳಿದ್ದಾರೆ.

ಅಶೋಕ್ ಅವರು ಧಾರವಾಡ ಸಮೀಪದ ಚಿಕ್ಕಮಲಿಗವಾಡ ಗ್ರಾಮದವರು. 1994ರಿಂದ 2014ರವರೆಗೆ ಜೂನಿಯರ್ ಮತ್ತು ಸೀನಿಯರ್ ಹಂತದ ರಾಜ್ಯ ಮತ್ತು ರಾಷ್ಟ್ರಮಟ್ಟ ಕುಸ್ತಿಗಳಲ್ಲಿ ಸ್ಪರ್ಧಿಸಿದವರು. ಅವರು ಈ ಅವಧಿಯಲ್ಲಿ ಫ್ರೀಸ್ಟೈಲ್ ಪುರುಷರ ವಿಭಾಗದ ವಿವಿಧ ತೂಕದ ವಿಭಾಗಗಳಲ್ಲಿ (35, 48, 58, 60, 66, 74 ಮತ್ತು 84 ಕೆಜಿ) ಸರ್ಧಿಸಿದ್ದರು.

ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಕುಸ್ತಿಯಲ್ಲಿ ಬೆಳ್ಳಿ ಪದಕ ಜಯಿಸಿದ್ದರು. ಕರ್ನಾಟಕ ಕುಮಾರ್, ಕಿತ್ತೂರು ಕುಮಾರ ಸೇರಿದಂತೆ ರಾಜ್ಯಮಟ್ಟದ ಪ್ರಶಸ್ತಿಗಳನ್ನು ಗಳಿಸಿದ್ದಾರೆ.

‘ಈಗ ಕೆಲವು ವರ್ಷಗಳಿಂದ ಧಾರವಾಡದ ಜ್ಯೋತಿ ತಾಲೀಮಿನ ಕರ್ನಾಟಕ ವ್ಯಾಯಾಮ ಶಾಲೆಯಲ್ಲಿ ಕುಸ್ತಿಪಟುಗಳಿಗೆ ತರಬೇತಿ ನೀಡುತ್ತಿದ್ದೇನೆ. ವಿವಿಧ ವಯೋಮಿತಿ 35 ಕುಸ್ತಿಪಟುಗಳು ನನ್ನ ಬಳಿ ತರಬೇತಿ ಪಡೆಯುತ್ತಿದ್ದಾರೆ’ ಎಂದು ಅಶೋಕ ‘ಪ್ರಜಾವಾಣಿ’ಗೆ ತಿಳಿಸಿದರು.

ಅದಿತಿ ಆಯ್ಕೆ: ಗಾಲ್ಫ್ ಸ್ಪರ್ಧಿ ಅದಿತಿ ಅಶೋಕ್ ಅವರೂ ತಮ್ಮ ಸಾಧನೆಗಾಗಿ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಮತ್ತಷ್ಟು ಸ್ಫೂರ್ತಿ ತುಂಬಿದೆ: ದಿವ್ಯಾ

ಕೋಲಾರ: ‘ನನಗಿನ್ನೂ 27 ವರ್ಷ. ಇಷ್ಟು ಚಿಕ್ಕ ವಯಸ್ಸಿನಲ್ಲೇ ಈ ಗೌರವ ಒಲಿದಿದೆ. ನನಗೆ ಮೊದಲ ಪ್ರಶಸ್ತಿ ಕೂಡ. ಮುಂದಿನ ಗುರಿ ಸಾಧನೆಗೆ ಮತ್ತಷ್ಟು ಸ್ಫೂರ್ತಿ ತುಂಬಿದೆ’ ಎಂದು ಶೂಟಿಂಗ್ ಸ್ಪರ್ಧಿ ದಿವ್ಯಾ ಟಿ.ಎಸ್. ತಿಳಿಸಿದರು.


ದಿವ್ಯಾ ಟಿ.ಎಸ್

ಕ್ರೀಡಾ ಕ್ಷೇತ್ರದಲ್ಲಿನ ಸಾಧನೆಗಾಗಿ 2023ನೇ ಸಾಲಿನ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನವಾಗಿರುವ ಅವರು ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನ ತಾಡಿಗೋಳ್ ಗ್ರಾಮದವರು. ಸದ್ಯ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.

ಚೀನಾದ ಹಾಂಗ್‌ಝೌನಲ್ಲಿ ಈಚೆಗೆ ಕೊನೆಗೊಂಡ ಏಷ್ಯನ್ ಕ್ರೀಡಾಕೂಟದಲ್ಲಿ ಅವರು ಬೆಳ್ಳಿ ಪದಕ ಗೆದ್ದಿದ್ದರು. 10 ಮೀಟರ್ ಏರ್ ಪಿಸ್ತೂಲ್ ಮಿಶ್ರ ತಂಡ ಸ್ಪರ್ಧೆಯಲ್ಲಿ ಸರಬ್ಜೋತ್ ಸಿಂಗ್ ಜೊತೆಗೂಡಿ ಈ ಸಾಧನೆ ಮಾಡಿದ್ದರು.

‘ಕ್ರೀಡಾಪಟುಗಳ ಸಾಧನೆ ಗುರುತಿಸುವುದು ಮುಖ್ಯ. ಏಕೆಂದರೆ ಯಾವುದೇ ಕ್ರೀಡಾಪಟುವಿನ ಸಾಧನೆ ಹಿಂದೆ ಬಹಳ ವರ್ಷಗಳ ಶ್ರಮವಿರುತ್ತದೆ. ಏಕಾಏಕಿ ಪದಕ ಗೆಲ್ಲಲು ಸಾಧ್ಯವಾಗುವುದಿಲ್ಲ. ಪ್ರಶಸ್ತಿಗೆ ನಾನು ಅರ್ಜಿ ಸಲ್ಲಿಸಿರಲಿಲ್ಲ. ಸರ್ಕಾರವೇ ಸಾಧನೆ ಗುರುತಿಸಿದ್ದು ಖುಷಿ ನೀಡಿದೆ’ ಎಂದು ‘ಪ್ರಜಾವಾಣಿ’ ಜೊತೆ ಸಂತಸ ಹಂಚಿಕೊಂಡರು.

ಮೇ ನಲ್ಲಿ ಬಾಕುವಿನಲ್ಲಿ (ಅಜರ್‌ಬೈಜಾನ್) ನಡೆದ ಐಎಸ್‌ಎಸ್‌ಎಫ್ ವಿಶ್ವಕಪ್‌ನ ಮಿಕ್ಸೆಡ್ 10 ಮೀ.ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಅವರು ಚಿನ್ನದ ಪದಕ ಜಯಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಒಲಿಂಪಿಕ್ಸ್‌ಗೆ ಶ್ರಿಯಾಂಕಾ ಅರ್ಹತೆ

ನವದೆಹಲಿ (ಪಿಟಿಐ): ಶ್ರಿಯಾಂಕಾ ಸದಂಗಿ, ಪ್ಯಾರಿಸ್ ಒಲಿಂಪಿಕ್ಸ್‌ಗೆ ಸ್ಥಾನ ಪಡೆದ ಭಾರತದ 13ನೇ ಶೂಟರ್ ಎನಿಸಿ ದರು. ಕೊರಿಯಾದ ಚಾಂಗ್ವಾನ್‌ನಲ್ಲಿ ನಡೆಯುತ್ತಿರುವ ಏಷ್ಯನ್ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಮಂಗಳವಾರ ಅವರು ಮಹಿಳೆಯರ 50 ಮೀ. ರೈಫಲ್ 3 ಪೊಷಿಷನ್ (3P) ಸ್ಪರ್ಧೆಯಲ್ಲಿ 4ನೇ ಸ್ಥಾನ ಗಳಿಸಿ ಅರ್ಹತೆ ಪಡೆದರು.

ನಿಂತು, ಮಂಡಿಯೂರಿ ಮತ್ತು ಬೋರಲು ಸ್ಥಿತಿಯಲ್ಲಿ ಗುರಿಯಿಡುವ ಈ ಸ್ಪರ್ಧೆಯಲ್ಲಿ ಅವರು 440.5 ಪಾಯಿಂಟ್ಸ್ ಸಂಗ್ರಹಿಸಿದರು. ಕೊರಿಯಾದ ಅನುಭವಿ ಸ್ಪರ್ಧಿ ಲೀ ಯುನ್ಸೆಯೊ ಚಿನ್ನ ಗೆದ್ದುಕೊಂಡರು. ಹಾಲಿ ಏರ್ ರೈಫಲ್ ವಿಶ್ವ ಚಾಂಪಿಯನ್ ಹಾನ್ ಜಿಯಾಯು (ಚೀನಾ) ಬೆಳ್ಳಿ ಗೆದ್ದುಕೊಂಡರೆ, ಅದೇ ದೇಶದ ಷಿಯಾಸಿಯು ಕಂಚಿನ ಪದಕ ಕೊರಳಿಗೇರಿಸಿಕೊಂಡರು.

ಚೆಸ್: ಅಶ್ಮಿತ್, ಅನುಜ್‌ಗೆ ಪ್ರಶಸ್ತಿ

ಬೆಂಗಳೂರು: ಅಶ್ಮಿತ್ ಆನಂದ್ ಮತ್ತು ಅನುಜ್ ಸರವಣನ್ ಅವರು ಚಾಂಪಿಯನ್ಸ್ ಚೆಸ್ ಅಕಾಡೆಮಿ ಆಯೋಜಿಸಿದ್ದ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ 16 ಮತ್ತು 10 ವರ್ಷದೊಳಗಿನವರ ವಿಭಾಗದಲ್ಲಿ ಪ್ರಶಸ್ತಿ ಗೆದ್ದರು.

ಭಾನುವಾರ ನಡೆದ ಟೂರ್ನಿಯಲ್ಲಿ 6ರಲ್ಲಿ 6 ಅಂಕ ಪಡೆದ ಅಶ್ಮಿತ್ ಚಾಂಪಿಯನ್, ಎನ್.ಎಚ್. ಗುಹಾನ್ (5) ರನ್ನರ್ ಅಪ್ ಆದರು. ಆರ್.ಕೆ. ಚಿಣ್ಮಯಿ, ಅನೂಜ್ ಸರವಣನ್, ಸುಚೇತ್ ರಾವ್ ತಲಾ 4 ಅಂಕ ಪಡೆದರು. ನಂತರ ಟೈಬ್ರೇಕರ್‌ನಲ್ಲಿ ಸ್ಥಾನ ನಿರ್ಧರಿಸಲಾಯಿತು. 10 ವರ್ಷದೊಳಗಿನವರ ವಿಭಾಗದಲ್ಲಿ ಅನುಜ್ (6) ಚಾಂಪಿಯನ್ ಆಗಿ ಹೊರಹೊಮ್ಮಿದರು. ವಿ.ವಿಹಾನ್ (5) ರನ್ನರ್ ಅಪ್ ಆದರು.

5ನೇ ಸ್ಥಾನಕ್ಕೆ ಕುಸಿದ ಸಾತ್ವಿಕ್– ಚಿರಾಗ್

ನವದೆಹಲಿ (ಪಿಟಿಐ): ಭಾರತದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಶೆಟ್ಟಿ ಜೋಡಿ ಬಿಡಬ್ಲ್ಯುಎಫ್ ವಿಶ್ವ ಡಬಲ್ಸ್ ರ್‍ಯಾಂಕಿಂಗ್‌ನಲ್ಲಿ ನಾಲ್ಕು ಕ್ರಮಾಂಕ ಕೆಳಕ್ಕೆ ಜಾರಿ ಐದನೇ ಸ್ಥಾನ ಪಡೆದಿದ್ದಾರೆ.

ಏಷ್ಯನ್ ಗೇಮ್ಸ್ ಬ್ಯಾಡ್ಮಿಂಟನ್‌ನ ಪುರುಷರ ಡಬಲ್ಸ್ ವಿಭಾಗದಲ್ಲಿ ಚಾಂಪಿಯನ್ ಆದ ಬಳಿಕ ಭಾರತದ ಜೋಡಿ ವಿಶ್ವ ರ್‍ಯಾಂಕಿಂಗ್‌ನಲ್ಲಿ ಅಗ್ರಸ್ಥಾನಕ್ಕೇರಿತ್ತು.